ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಮಂಗಳವಾರ, 12 ಮೇ 2026
ಸಂಪುಟ 16, ಸಂಚಿಕೆ 48, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital



ಕರ್ನಾಟಕದಲ್ಲಿ ಎಸ್ಐಆರ್ ಶೀಘ್ರ | ೦೭
ಸ್ಟಾಲಿನ್ ಭೇಟಿಯಾದ ಸಿಎಂ ವಿಜಯ್ | ೦೭
ಇಂದು ಅಸ್ಸಾಂ ಸಿಎಂ ಆಗಿ ಬಿಸ್ವಾ ಪ್ರಮಾಣ | ೦೭

ಶುಭ ದಿನ

ಕಲಿಯುಗಾಬ್ಧ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ : ದಶಮಿ, ನಕ್ಷತ್ರ: ಪೂರ್ವಾಭಾದ್ರೆ

ದಿನದ ಮಾತು

ಮನಸ್ಸಿಗೆ ಪ್ರಿಯವನ್ನುಂಟು ಮಾಡುವುದೇ ಸ್ವರ್ಗ. ಅದಕ್ಕೆ ವಿರುದ್ಧವಾದುದೇ ನರಕ.

▲ ಜಾತಕಮಾಲ

ಹಾರುವತಟ್ಟೆಗಳ ರಹಸ್ಯದ ಬಾಗಿಲು ತೆರೆದ ಅಮೆರಿಕ

ರಾಘವಾಂಕಣ

• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ರಾಜ್ಯ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಶೇ.1.5 ಹೆಚ್ಚಳ

• **ಬೆಂಗಳೂರು:** ರಾಜ್ಯ ಸರ್ಕಾರಿ ನೌಕರರು ಮತ್ತು ನಿವೃತ್ತ ವೇತನದಾರರಿಗೆ ರಾಜ್ಯ ಸರ್ಕಾರ ಸಿಹಿ ಸುದ್ದಿ ನೀಡಿದೆ. ತುಟ್ಟಿಭತ್ಯೆಯನ್ನು ಶೇ.1.5ರಷ್ಟು ಹೆಚ್ಚಿಸಿ ಸೋಮವಾರ ಆದೇಶ ಹೊರಡಿಸಿದೆ. ತುಟ್ಟಿ ಭತ್ಯೆ ದರಗಳನ್ನು ಪ್ರಸ್ತುತ ಮೂಲವೇತನದ ಶೇ.14.25ರಿಂದ ಶೇ.15.75ಕ್ಕೆ ಹೆಚ್ಚಿಸಲಾಗಿದೆ. 2024ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನವನ್ನು ಪಡೆಯುತ್ತಿರುವ ರಾಜ್ಯ ಸರ್ಕಾರಿ ನೌಕರರಿಗೆ 2026ರ ಜ.1ರಿಂದಲೇ ಜಾರಿಗೆ ಬರುವಂತೆ ತುಟ್ಟಿಭತ್ಯೆ ದರಗಳನ್ನು ಪರಿಷ್ಕರಿಸಿದೆ. ➡ಪುಟ ೪

ಪ್ರಧಾನಿ ಮೋದಿ ಭಾಷಣಕ್ಕೆ ಸಿಎಂ ಸಿದ್ದರಾಮಯ್ಯ ಕಿಡಿ

• **ಬೆಂಗಳೂರು:** ಭಾನುವಾರ ಬೆಂಗಳೂರಿಗೆ ಆಗಮಿಸಿದ್ದ ಪ್ರಧಾನಿ ಮೋದಿ ಅವರು ಬಿಜೆಪಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಭಾಷಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದು ಪ್ರಧಾನಮಂತ್ರಿ ಅವರು ರಾಜ್ಯದ ಕಾಂಗ್ರೆಸ್ ಸರ್ಕಾರವನ್ನುದ್ದೇಶಿಸಿ ಮಾತನಾಡಿದ್ದರೂ ಅವರ ಮಾತಿನಲ್ಲಿ ಕೇಂದ್ರದಲ್ಲಿರುವ ಅವರದ್ದೇ ಸರ್ಕಾರದ ವೈಫಲ್ಯ ಮತ್ತು ರಾಜ್ಯದಲ್ಲಿರುವ ಅವರ ಪಕ್ಷದ ದುಸ್ಥಿತಿಯನ್ನು ಸರಿಪಡಿಸ ಲಾಗದ ಅಸಹಾಯಕತೆ ಇತ್ತು ಎಂದು ಕಿಡಿಕಾರಿದ್ದಾರೆ. ➡ಪುಟ ೪

ವರ್ಕ್ ಫ್ರಮ್ ಹೋಮ್ ವ್ಯವಸ್ಥೆಗೆ ಒತ್ತು: ಮೋದಿ

• ಪುಟ ೭

60 ದಿನಕ್ಕೆ ಆಗುವಷ್ಟು ಇಂಧನ ದೇಶದಲ್ಲಿದೆ

• ಪುಟ ೭

ದೇಶದ ಆರ್ಥಿಕ ಪರಿಸ್ಥಿತಿ ಅಭದ್ರ: ಸಿದ್ದರಾಮಯ್ಯ

• ಪುಟ ೫



ದೇಶಭಕ್ತಿಯೋ? ಅಥವಾ ಸನ್ನದ್ಧತೆಯೋ?

ಪ್ರಧಾನಿ ನರೇಂದ್ರ ಮೋದಿ ಮಿತವ್ಯಯದ ಕರೆಯ ಹಿಂದಿನ ಅಸಲಿ ಕಾರಣ

• ಪುಟ ೭

ಸುದ್ದಿ ಸಮಗ್ರ

ಪ.ಬಂಗಾಳದಲ್ಲಿ ಸುವೇಂದು ಸರ್ಕಾರ ಮಹತ್ವದ ನಿರ್ಧಾರ
ಬಾಂಗ್ಲಾ ಗಡಿಯಲ್ಲಿ ಬೇಲಿ ಹಾಕಲು ಬಿಎಸ್ಎಫ್‌ಗೆ ಭೂಮಿ
ಬಂಗಾಳ ಬಾಂಗ್ಲಾ ಬೇಲಿ

• **ಕೋಲ್ಕತ್ತಾ:** ಭಾರತ-ಬಾಂಗ್ಲಾದೇಶ ಗಡಿ ಬೇಲಿ ನಿರ್ಮಾಣಕ್ಕಾಗಿ ಗಡಿ ಭದ್ರತಾ ಪಡೆಗೆ(ಬಿಎಸ್ಎಫ್) ಭೂಮಿ ಹಸ್ತಾಂತರಿಸುವ ಪ್ರಕ್ರಿಯೆ ಇಂದಿನಿಂದ ಆರಂಭವಾಗಲಿದೆ ಮತ್ತು 45 ದಿನಗಳೊಳಗೆ ಭೂಮಿ ವರ್ಗಾವಣೆ ಪೂರ್ಣಗೊಳ್ಳಲಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಸೋಮವಾರ ಘೋಷಿಸಿದ್ದಾರೆ. ಈ ನಿರ್ಧಾರವು ಬಾಂಗ್ಲಾದೇಶದಿಂದ ಅಕ್ರಮ ನುಸುಳುವಿಕೆಯನ್ನು ತಡೆಯುವ ಕುರಿತ ಬಿಜೆಪಿಯ ಪ್ರಮುಖ ಚುನಾವಣಾ ಭರವಸೆ ಈಡೇರಿಸಿದೆ.

ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ ಭರ್ಜರಿ ಜಯದ ಕೆಲವೇ ದಿನಗಳ ಬಳಿಕ, ನಬನ್ನಾದಲ್ಲಿ(ರಾಜ್ಯ ಕಾರ್ಯಾಲಯ) ನಡೆದ ಮೊದಲ ಸಚಿವ ಸಂಪುಟ ಸಭೆಗೆ ಅಧ್ಯಕ್ಷತೆ ವಹಿಸಿದ್ದ ಅಧಿಕಾರಿ, ಭಾರತ-ಬಾಂಗ್ಲಾದೇಶ ಗಡಿ ಬೇಲಿಗೆ ಅಗತ್ಯವಿರುವ ಭೂಮಿಯ ಸಂಪೂರ್ಣ ನಿಯಂತ್ರಣವನ್ನು ಬಿಎಸ್ಎಫ್‌ಗೆ ನೀಡಲಾಗುವುದು ಎಂದು ಹೇಳಿದರು.

ಇಂದು ನಡೆದ ನಮ್ಮ ಮೊದಲ ಸಚಿವ ಸಂಪುಟ ಸಭೆಯಲ್ಲೇ, ಭೂಮಿಯನ್ನು ಬಿಎಸ್ಎಫ್‌ಗೆ ವರ್ಗಾಯಿಸುವ ನಿರ್ಧಾರ ಕೈಗೊಂಡಿದ್ದೇವೆ. ಪ್ರಕ್ರಿಯೆ ಇಂದೇ ಆರಂಭವಾಗುತ್ತದೆ. ಮುಂದಿನ 45 ದಿನಗಳಲ್ಲಿ ಪೂರ್ಣಗೊಳ್ಳಲಿದೆ. ಇದು ಪೂರ್ಣವಾದ ಬಳಿಕ, ಬಿಎಸ್ ಎಫ್ ಗಡಿ ಬೇಲಿ ಕಾಮಗಾರಿ ಪೂರ್ಣಗೊಳಿಸುತ್ತದೆ ಮತ್ತು ಅಕ್ರಮ ನುಸುಳುವಿಕೆಯ ಸಮಸ್ಯೆಯನ್ನು ಅಲ್ಪಾವಧಿಯಲ್ಲೇ ಪರಿಹರಿಸಲಾಗುತ್ತದೆ ಎಂದು ಅಧಿಕಾರಿ ಸಭೆಯ ಬಳಿಕ ಸುದ್ದಿಗಾರರಿಗೆ ತಿಳಿಸಿದರು.

ವಿಧಾನಸಭೆ ಚುನಾವಣೆಯ ವೇಳೆ ನುಸುಳುವಿಕೆ ಪ್ರಮುಖ ರಾಜಕೀಯ ವಿಷಯವಾಗಿ ಹೊರಹೊಮ್ಮಿತ್ತು. ಬಿಜೆಪಿಯು ತುಷ್ಟೀಕರಣದ ರಾಜಕೀಯಕ್ಕಾಗಿ ತೃಣಮೂಲ ಕಾಂಗ್ರೆಸ್(ಟಿಎಂಸಿ) ಗಡಿಯನ್ನು ತೆರೆದಿಟ್ಟು ಬಾಂಗ್ಲಾದೇಶಿ ನುಸುಳುಕೋರರಿಗೆ ಅವಕಾಶ ನೀಡುತ್ತಿದೆ ಎಂದು ನಿರಂತರವಾಗಿ ಆರೋಪಿಸಿತ್ತು. ಚುನಾವಣಾ ಪ್ರಚಾರ ವೇಳೆ ಗೃಹ ಸಚಿವ ಅಮಿತ್ ಶಾ ಅವರು, ಬಿಜೆಪಿ ಅಧಿಕಾರಕ್ಕೆ ಬಂದರೆ ಗಡಿ ಬೇಲಿಗೆ ಅಗತ್ಯವಿರುವ ಎಲ್ಲಾ ಭೂಮಿಯನ್ನು 45 ದಿನಗಳಲ್ಲಿ ಬಿಎಸ್ಎಫ್‌ಗೆ ಹಸ್ತಾಂತರಿಸಲಾಗುವುದು ಎಂದು ಭರವಸೆ ನೀಡಿದ್ದರು. ➡ಪುಟ ೪



> ಪಶ್ಚಿಮ ಬಂಗಾಳದಲ್ಲಿ ಇತ್ತೀಚಿನ ರಾಜಕೀಯ ಹಿಂಸಾಚಾರದಲ್ಲಿ ಪ್ರಾಣ ಕಳೆದುಕೊಂಡ 321 ಬಿಜೆಪಿ ಕಾರ್ಯಕರ್ತರ ಕುಟುಂಬಗಳ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ಹೊರುತ್ತದೆ.
> ■ **ಸುವೇಂದು ಅಧಿಕಾರಿ,** ಮುಖ್ಯಮಂತ್ರಿ

ಕೇಂದ್ರ ಯೋಜನೆಗಳ ಜಾರಿಗೆ ಅನುಮೋದನೆ

ಗಡಿ ಬೇಲಿ ನಿರ್ಧಾರದ ಹೊರತಾಗಿ, ಅಧಿಕಾರಿಯವರ ಮೊದಲ ಸಚಿವ ಸಂಪುಟವು ಆಯುಷ್ಮಾನ್ ಭಾರತ್ ಹಾಗೂ ಇತರೆ ಬಾಕಿ ಉಳಿದಿದ್ದ ಕೇಂದ್ರ ಯೋಜನೆಗಳನ್ನು ಪಶ್ಚಿಮ ಬಂಗಾಳದಲ್ಲಿ ಜಾರಿಗೆ ತರುವುದಕ್ಕೂ ಅನುಮೋದನೆ ನೀಡಿತು. ಪ್ರಧಾನಮಂತ್ರಿ ಉಜ್ವಲ ಯೋಜನೆ 3.0 ಸೇರಿದಂತೆ ಕಲ್ಯಾಣ ಯೋಜನೆಗಳಲ್ಲಿ ಬಾಕಿ ಉಳಿದ ಅರ್ಜಿಗಳನ್ನು ಆದ್ಯತೆಯ ಮೇಲೆ ವಿಲೇವಾರಿ ಮಾಡಲಾಗುವುದು ಎಂದೂ ಅಧಿಕಾರಿ ಘೋಷಿಸಿದರು. ಜನರಿಗೆ ಲಾಭ ಸಿಗದಂತೆ ಮಾಡಲು ಟಿಎಂಸಿ ಸರ್ಕಾರ, ಕೇಂದ್ರ ಯೋಜನೆಗಳನ್ನು ತಡೆಹಿಡಿದಿತ್ತು ಎಂದು ಆರೋಪಿಸಿದರು.ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾತು ಕೊಟ್ಟಂತೆ ಶಾಲಾ ಉದ್ಯೋಗ ಅರ್ಜಿದಾರರ ವಯಸ್ಸಿನ ಮಿತಿಯನ್ನು 5 ವರ್ಷ ಕಾಲ ವಿಸ್ತರಿಸುವ ಪ್ರಸ್ತಾವನೆಗೂ ಸಂಪುಟ ಒಪ್ಪಿಗೆ ಸೂಚಿಸಿದೆ ಎಂದರು. ➡ಪುಟ ೪

ಎಸ್ಐಆರ್: ಹೊಸ ಅರ್ಜಿ ಸಲ್ಲಿಕೆಗೆ ಸುಪ್ರೀಂ ಅಸ್ತು

• **ಹೊಸದಿಲ್ಲಿ:** ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಇತರರು ಹೊಸ ಅರ್ಜಿಗಳನ್ನು ಸಲ್ಲಿಸಬಹುದು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ. ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ (ಎಸ್ಐಆರ್) ವೇಳೆ ಮತಪಟ್ಟಿಯಿಂದ ತೆಗೆದುಹಾಕಲಾದ ಮತಗಳ ಸಂಖ್ಯೆಗೆ ಹೋಲಿಸಿದರೆ, 31 ಕ್ಷೇತ್ರಗಳಲ್ಲಿ ಗೆಲುವಿನ ಅಂತರ ಕಡಿಮೆಯಿತ್ತು ಎಂಬ ಆರೋಪಕ್ಕೆ ಸಂಬಂಧಿಸಿ ನ್ಯಾಯಾಲಯ ಈ ಅವಕಾಶ ನೀಡಿದೆ.ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿ ಜೋಯ್ಮಲ್ಯ ಭಾಗ್ಚಿ ಅವರಿದ್ದ ಪೀಠ ವಿಚಾರಣೆ ನಡೆಸಿತು. ➡ಪುಟ ೪



ಸೋಮನಾಥ ಅಮೃತ ಮಹೋತ್ಸವದಲ್ಲಿ ಭಾಗಿ
ಯಾವ ಒತ್ತಡಕ್ಕೂ ಭಾರತ ಬಾಗದು: ಪ್ರಧಾನಿ ಮೋದಿ

• **ಸೋಮನಾಥ:** ಭಾರತ ಜಗತ್ತಿನ ಯಾವುದೇ ಶಕ್ತಿ ಅಥವಾ ಒತ್ತಡಕ್ಕೆ ಮಣಿಯುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ದೃಢವಾಗಿ ಹೇಳಿದ್ದಾರೆ. ಐತಿಹಾಸಿಕ ಬಿಕ್ಕಟ್ಟುಗಳ ಸಂದರ್ಭದಲ್ಲಿ ದೇಶ ಪ್ರದರ್ಶಿಸಿದ ದೃಢತೆಯನ್ನು ಅವರು ಈ ವೇಳೆ ಸ್ಮರಿಸಿದರು.

ಗುಜರಾತ್‌ನ ಸೋಮನಾಥದಲ್ಲಿ ನಡೆದ ಸೋಮನಾಥ ಅಮೃತ ಮಹೋತ್ಸವವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, 1998ರ ಪೋಖ್ರಾನ್ ಅಣು ಪರೀಕ್ಷೆಯ ಉದಾಹರಣೆ ನೀಡಿದರು. ಮೇ 11 ಮತ್ತು 13ರಂದು ನಡೆದ ಅಣು ಪರೀಕ್ಷೆಗಳ ನಂತರ ಅಂತಾರಾಷ್ಟ್ರೀಯ ಮಟ್ಟದಲ್ಲಿ ತೀವ್ರ ವಿರೋಧ ಮತ್ತು ಆರ್ಥಿಕ ನಿರ್ಬಂಧಗಳು ಎದುರಾದರೂ, ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಯಾವುದಕ್ಕೂ ತಲೆಬಾಗಲಿಲ್ಲ. ಆ ಕಾಲಘಟ್ಟ ಬಾಹ್ಯ ಬೆದರಿಕೆಗಳಿಗಿಂತ ರಾಷ್ಟ್ರೀಯ ಹಿತಾಸಕ್ತಿಗೆ ಆದ್ಯತೆ ನೀಡುವ ಭಾರತದ ರಾಜಕೀಯ ಇಚ್ಛಾಶಕ್ತಿಯನ್ನು ಜಗತ್ತಿಗೆ ತೋರಿಸಿಕೊಟ್ಟಿತು ಎಂದು ಅವರು ಅಭಿಪ್ರಾಯಪಟ್ಟರು. ➡ಪುಟ ೪

ವಿಜ್ಞಾನಿಗಳ ಸಾಧನೆಗೆ ಪ್ರಧಾನಿ ಮೋದಿ ಮೆಚ್ಚುಗೆ

• **ಹೊಸದಿಲ್ಲಿ:** 1998ರ ಪೋಖ್ರಾನ್ ಅಣು ಪರೀಕ್ಷೆ ಭಾರತದ ವೈಜ್ಞಾನಿಕ ಸಾಮರ್ಥ್ಯವನ್ನು ಜಗತ್ತಿಗೆ ಸಾಬೀತುಪಡಿಸಿದ ಐತಿಹಾಸಿಕ ಕ್ಷಣ ಎಂದು ಬಣ್ಣಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಸೋಮವಾರ ರಾಷ್ಟ್ರೀಯ ತಂತ್ರಜ್ಞಾನ ದಿನದ ಶುಭಾಶಯ ಕೋರಿದ್ದಾರೆ.ಸ್ವಾವಲಂಬಿ ಭಾರತ ನಿರ್ಮಾಣದಲ್ಲಿ ತಂತ್ರಜ್ಞಾನ ಪ್ರಮುಖ ಸ್ತಂಭ ಎಂದು ಪ್ರಧಾನಿ ತಿಳಿಸಿದರು. ಸಂಶೋಧನೆ, ನಾವೀನ್ಯತೆ ಮತ್ತು ಪ್ರತಿಭೆಗಳಿಗೆ ಶಕ್ತಿ ತುಂಬುವ ಮೂಲಕ ರಾಷ್ಟ್ರೀಯ ಆಕಾಂಕ್ಷೆಗಳನ್ನು ಈಡೇರಿಸಲು ಸರ್ಕಾರ ಗಮನಹರಿಸಿದೆ. ➡ಪುಟ ೪

ಚಳ್ಳಕೆರೆ ಜೈನಧಾಮದಲ್ಲಿ ನಡೆದ ವಿಧಿವಿಧಾನ | ಸರ್ಕಾರಿ ಗೌರವ
ಸಚಿವ ಡಿ.ಸುಧಾಕರ್ ಅಂತ್ಯಕ್ರಿಯೆ

• **ಚಳ್ಳಕೆರೆ(ಚಿತ್ರದುರ್ಗ):** ರಾಜ್ಯದ ಯೋಜನೆ ಮತ್ತು ಸಾಂಖ್ಯಿಕ ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಡಿ. ಸುಧಾಕರ್ ಅವರ ಅಂತ್ಯಕ್ರಿಯೆ ಚಳ್ಳಕೆರೆ ಜೈನಧಾಮದಲ್ಲಿ ಸೋಮವಾರ ಸಂಜೆ ನೆರವೇರಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿ ಅಂತಿಮ ನಮನ ಸಲ್ಲಿಸಿದರು. ಪೊಲೀಸ್ ಇಲಾಖೆ ವತಿಯಿಂದ ಮೃತರ ಗೌರವಾರ್ಥ 3 ಸುತ್ತಿನ ಕುಶಾಲತೋಪು ಸಿಡಿಸುವ ಮೂಲಕಗೌರವವಂದನೆಸಲ್ಲಿಸಲಾಯಿತು.ಒಂದು ನಿಮಿಷದ ಮೌನಾಚರಣೆ ಮಾಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವರ ಪತ್ನಿಗೆ ರಾಷ್ಟ್ರಧ್ವಜ ಹಸ್ತಾಂತರಿಸಿದರು. ➡ಪುಟ ೪



ಜಿಲೆಟಿನ್ ಕಡ್ಡಿ ಪತ್ತೆ ಪ್ರಕರಣಕ್ಕೆ ತ.ನಾಡು ಲಿಂಕ್ | 6 ತಂಡ ರಚನೆ
ಎನ್ಐಎ, ಐಬಿ ಜಂಟಿ ತನಿಖೆ

• **ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರು ನಗರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅವರ ಸಂಚಾರ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿಗಳು ಪತ್ತೆಯಾದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ತನಿಖಾ ದಳ (ಎನ್ಐಎ), ಗುಪ್ತಚರ ದಳ ಅಧಿಕಾರಿಗಳು ಸ್ಥಳೀಯ ಪೊಲೀಸರ ಜತೆಗೂಡಿ ತನಿಖೆ ಚುರುಕುಗೊಳಿಸಿದ್ದಾರೆ.



ಘಟನೆ ಬಗ್ಗೆ ಬೆಂಗಳೂರು ದಕ್ಷಿಣದ ವಡೇರಹಳ್ಳಿ ಗೇಟ್ ಸಮೀಪ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ಈ ಸಂಬಂಧ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣವೂ ದಾಖಲಾಗಿತ್ತು. ಈ ಪ್ರಕರಣ ಈಗ ಇಡೀ ದೇಶದ ಗಮನ ಸೆಳೆದಿದ್ದು, ರಾಷ್ಟ್ರೀಯ ತನಿಖಾ ಸಂಸ್ಥೆಗಳು ಈ ಘಟನೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿವೆ. ಆರ್ಟ್ ಆಫ್ ಲಿವಿಂಗ್ ಆಶ್ರಮಕ್ಕೆ ಪ್ರಧಾನಿಗಳು ಭೇಟಿಗೆ ಕೇವಲ ಎರಡು ಗಂಟೆಗಳ ಮೊದಲು ನಡೆದ ಈ ಘಟನೆ ಭದ್ರತಾ ಲೋಪವನ್ನು ಎತ್ತಿ ತೋರಿಸಿದ್ದು, ಈಗ ಕೇಂದ್ರ ಮತ್ತು ರಾಜ್ಯದ ತನಿಖಾ ಸಂಸ್ಥೆಗಳು ಅಖಾಡಕ್ಕೆ ಇಳಿದಿವೆ. ➡ಪುಟ ೪

ಹುಸಿ ಬಾಂಬ್ ಕರೆ ಮಾಡಿದ್ದ ವ್ಯಕ್ತಿ ವಿಚಾರಣೆ

ಪೊಲೀಸ್ ನಿಯಂತ್ರಣ ಕೊಠಡಿಗೆ ಭಾನುವಾರ ಬೆಳಗ್ಗೆ ಬಾಂಬ್ ಇಟ್ಟಿರುವುದಾಗಿ ಹುಸಿ ಕರೆ ಮಾಡಿದ್ದ ವ್ಯಕ್ತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಈ ಬಗ್ಗೆ ಮಾಹಿತಿ ನೀಡಿ ಕೋರಮಂಗಲ ಮೂಲದ ವ್ಯಕ್ತಿಯು ಕರೆ ಮಾಡಿದ ತಕ್ಷಣ ಮೊಬೈಲ್ ಸ್ವಿಚ್ ಆಫ್ ಮಾಡಿದ್ದರೂ, ತಾಂತ್ರಿಕ ಕಾರ್ಯಾಚರಣೆಯ ಮೂಲಕ ಆತನನ್ನು ಪತ್ತೆಹಚ್ಚಲಾಗಿದೆ. ➡ಪುಟ ೪

ಯಥಾಸ್ಥಿತಿ ಕಾಪಾಡಲು ಸೂಚನೆ



ಶೃಂಗೇರಿ ಅಂಚೆಮತ ಮರು ಎಣಿಕೆ ಫಲಿತಾಂಶ ಕುರಿತ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ

• **ಚಿಕ್ಕಮಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆಗೆ ಹೈಕೋರ್ಟ್ ನೀಡಿದ್ದ ಆದೇಶ ಹಾಗೂ ಮರು ಎಣಿಕೆ ಫಲಿತಾಂಶಕ್ಕೆ ಸೋಮವಾರ ಸುಪ್ರೀಂ ಕೋರ್ಟ್ ತಡೆ ನೀಡಿ, ಯಥಾಸ್ಥಿತಿ ಕಾಯ್ದುಕೊಳ್ಳಲು ಸೂಚಿಸಿದೆ. ಇಂದಿನ ಸುಪ್ರೀಂ ತೀರ್ಪಿನಿಂದ ಕಾಂಗ್ರೆಸ್ ಪಾಳೆಯದಲ್ಲಿ ಮತ್ತೆ ಸಂಭ್ರಮ ಮನೆ ಮಾಡಿದೆ. ಬಿಜೆಪಿ ಕಾರ್ಯಕರ್ತರಲ್ಲಿ ಮೂಡಿದ್ದ ಸಂತಸ, ಹುಮ್ಮಸ್ಸು ಎಲ್ಲವೂ ಕೇವಲ ಕೇವಲ 9 ದಿನಕ್ಕಷ್ಟೇ ಸೀಮಿತವಾಗಿದೆ. ಮೇ 2ರಂದು ನಡೆದಿದ್ದ ಅಂಚೆ ಮತಗಳ ಮರು ಎಣಿಕೆ ನಂತರ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ 52 ಮತಗಳ ಮುನ್ನಡೆ ಗಳಿಸಿದ್ದರು. ➡ಪುಟ ೪

ಪ್ರಜಾಪ್ರಭುತ್ವ ಹೈಜಾಕ್‌ಗಿಲ್ಲ ಅವಕಾಶ: ಸುಪ್ರೀಂ

• ಪುಟ ೪



ಮೂರು ವರ್ಷಗಳಲ್ಲಿ ಲೋಕಾಯುಕ್ತ ಕಾರ್ಯಾಚರಣೆ
6,400 ಕೆರೆ ಒತ್ತುವರಿ ತೆರವು

▸ ವೀರಣ್ಣ ಬಳಿಗಾರ

• **ಬೆಂಗಳೂರು:** ರಾಜ್ಯಾದ್ಯಂತ ಒತ್ತುವರಿಯಾಗಿರುವ ಕೆರೆಗಳನ್ನು ಸಂರಕ್ಷಿಸಲು ಕರ್ನಾಟಕ ಲೋಕಾಯುಕ್ತವು ಕೆರೆಗಳ ಒತ್ತುವರಿ ತೆರವು ಕಾರ್ಯಾಚರಣೆ ಕೈಗೆತ್ತಿಕೊಂಡಿದ್ದು, ಕಳೆದ 3 ವರ್ಷಗಳಲ್ಲಿ 6,400 ಕೆರೆಗಳ ಒತ್ತುವರಿ ತೆರವುಗೊಳಿಸಲಾಗಿದೆ ಎಂದು ಸಂಸ್ಥೆ ತನ್ನ ವರದಿಯಲ್ಲಿ ತಿಳಿಸಿದೆ.

ರಾಜ್ಯದ ಅನೇಕ ಕೆರೆಗಳು ದಶಕಗಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿ ಅತಿಕ್ರಮಣಕ್ಕೊಳಗಾಗಿವೆ. ಕೆಲವೆಡೆ ಕೆರೆಗಳನ್ನೇ ನುಂಗಿರುವ ರಿಯಲ್ ಎಸ್ಟೇಟ್‌ನವರು ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಿದ್ದಾರೆ. ಹಲವೆಡೆ ಕೆರೆಗಳ ಸಮೀಕ್ಷೆಯೇ ನಡೆದಿರಲಿಲ್ಲ. ಹೀಗಾಗಿ ಕೆರೆಗಳ ಪುನಶ್ಚೇತನ ಕಾರ್ಯವನ್ನು ಕೈಗೊಳ್ಳುವುದು ತುರ್ತು ಅಗತ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಲೋಕಾಯುಕ್ತದಿಂದ ಹಲವು ಕಡೆಗಳಲ್ಲಿ ಸ್ವಯಂ ದೂರು ದಾಖಲಿಸಿಕೊಂಡಿದ್ದು, ಸಾರ್ವಜನಿಕರಿಂದ ಬಂದ ದೂರುಗಳನ್ನು ಆಲಿಸಿ ಒತ್ತುವರಿ ತೆರವು ಕಾರ್ಯ ಕೈಗೊಂಡಿದೆ. ಇದಕ್ಕೆ ಸಾರ್ವಜನಿಕರಿಂದಲೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ್ ಅವರು ರಾಜ್ಯಾದ್ಯಂತ ಸುಮಾರು 70 ಸ್ವಯಂ ಪ್ರೇರಿತ ಪ್ರಕರಣಗಳನ್ನು ದಾಖಲಿಸಿ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದಾರೆ. ➡ಪುಟ ೪

70 ಸ್ವಯಂಪ್ರೇರಿತ ಪ್ರಕರಣ ದಾಖಲು



ರಾಜ್ಯದಲ್ಲಿ 34,099 ಕೆರೆಗಳ ಸಮೀಕ್ಷೆ

ಲೋಕಾಯುಕ್ತವು ಒತ್ತುವರಿಯಾಗಿರುವ ಕೆರೆಗಳಿಗೆ ಭೇಟಿ ನೀಡಿದ ನಂತರ ಸಮೀಕ್ಷಾ ಕಾರ್ಯಗಳಿಗೆ ವೇಗ ದೊರೆತು, ಅನೇಕ ಕಡೆಗಳಲ್ಲಿ ಅತಿಕ್ರಮಣಗಳನ್ನು ಗುರುತಿಸಿ ತೆರವುಗೊಳಿಸಲಾಗಿದೆ. ಕೆರೆಗಳ ಅತಿಕ್ರಮಣ ತೆರವು ಮತ್ತು ಪುನಶ್ಚೇತನ ಕಾರ್ಯಗಳು ನಿಯಮಿತ ವಿಚಾರಣೆ ಹಾಗೂ ನಿರಂತರ ಮೇಲ್ವಿಚಾರಣೆಯ ಮೂಲಕ ಮುಂದುವರಿಯುತ್ತಿವೆ. ➡ಪುಟ ೪

ವಿಬಿ ಜಿ ರಾಮ್ ಜಿ ಜುಲೈ 1ರಿಂದ ಜಾರಿ

• **ಹೊಸದಿಲ್ಲಿ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯ್ದೆಯನ್ನು ರದ್ದುಗೊಳಿಸಿ, ಅದರ ಬದಲಿಗೆ ವಿಕಸಿತ ಭಾರತ - ಗ್ಯಾರಂಟಿ ಫಾರ್ ರೋಜ್‌ಗಾರ್ ಆ್ಯಂಡ್ ಅಜೀವಿಕಾ ಮಿಷನ್ (ಗ್ರಾಮೀಣ) ಕಾಯ್ದೆಯನ್ನು ಜುಲೈ 1ರಿಂದ ದೇಶಾದ್ಯಂತ ಜಾರಿಗೆ ತರುವುದಾಗಿ ಕೇಂದ್ರ ಸರ್ಕಾರ ಸೋಮವಾರ ಘೋಷಿಸಿದೆ.



ಹೊಸ ಕಾಯ್ದೆಯಲ್ಲಿ ಗ್ರಾಮೀಣ ಕುಟುಂಬಗಳಿಗೆ ಒಂದು ಹಣಕಾಸು ವರ್ಷದಲ್ಲಿ 125 ದಿನಗಳ ಶಾಸನಬದ್ಧ ಉದ್ಯೋಗವನ್ನು ಖಾತರಿಪಡಿಸಲಾಗಿದೆ. ಇದು ಈ ಹಿಂದಿನ ನರೇಗಾ ಯೋಜನೆಯಲ್ಲಿದ್ದ 100 ದಿನಗಳ ಮಿತಿಗಿಂತ ಹೆಚ್ಚಾಗಿದೆ. ಈ ಬದಲಾವಣೆ, ಗ್ರಾಮೀಣ ಆದಾಯ ವೃದ್ಧಿ ಮತ್ತು ಗ್ರಾಮ ಮಟ್ಟದ ಮೂಲಸೌಕರ್ಯ ಅಭಿವೃದ್ಧಿಯನ್ನು ಬಲಪಡಿಸುವ ಗುರಿ ಹೊಂದಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವಾಲಯ ತಿಳಿಸಿದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,75,000** (2,75,000) ಅಪರಂಜಿ ಚಿನ್ನ: **1,52,130** (1,52,350) ಆಭರಣ ಚಿನ್ನ: **1,39,450** (1,39,650) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್ಇ **76,015** (1312↓) ಎನ್ಎಸ್ಇ **23,815** (360↓)

$1 = ₹95.25

ಕಿರುಸುದ್ದಿ

ಪ್ರಶಸ್ತಿಗೆ ಆಯ್ಕೆ

ಹುಬ್ಬಳ್ಳಿ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು 'ಭಾಗವತ ಪ್ರೀಯ- ಮಧ್ವ ಕಿಂಕರ' ಪ್ರಶಸ್ತಿಗೆ ಉಡುಪಿಯ ಪರ್ಯಾಯ ಶೀರೂರು ಮಠದ ವೇದವರ್ಧನ ತೀರ್ಥ ಶ್ರೀಪಾದರನ್ನು ಆಯ್ಕೆ ಮಾಡಿದೆ ಎಂದು ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.ಅಧಿಕಮಾಸದ ಸಂದರ್ಭದಲ್ಲಿ ಮೇ 24 ಬೆಳಿಗ್ಗೆ 9 ಗಂಟೆಗೆ ಉಡುಪಿಯ ಕೃಷ್ಣಮಠದ ರಾಜಾಂಗಣ ಸಭಾಂಗಣದಲ್ಲಿ ಜರುಗುವ ಅರ್ಹ 50 ದಂಪತಿಗಳಿಗೆ ಪುಸ್ತಕದಾನ ಸಮಾರಂಭದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತಿದೆ. ಉಡುಪಿ ಶಾಸಕ ಯಶಪಾಲ್ ಆನಂದ್ ಸುವರ್ಣ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆಂದು ಪ್ರಸಾರಾಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡಶೆಟ್ರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.



ಶಾಸಕ ಅರವಿಂದ ಬೆಲ್ಲದ ಹರ್ಷ

ಹುಬ್ಬಳ್ಳಿ: ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಾರ್ಟಿ ಸಾಧಿಸಿರುವ ಐತಿಹಾಸಿಕ ಮತ್ತು ಭರ್ಜರಿ ಜಯವು ಸತ್ಯ, ಧರ್ಮ ಮತ್ತು ಪ್ರಜಾಪ್ರಭುತ್ವಕ್ಕೆ ಸಂದ ಜಯವಾಗಿದೆ ಎಂದು ವಿಧಾನಸಭೆ ವಿಪಕ್ಷ ಉಪನಾಯಕ ಹಾಗೂ ಹು-ಧಾ ಪಶ್ಚಿಮ ವಿಧಾನಸಭಾ ಕ್ಷೇತ್ರದ ಶಾಸಕ ಅರವಿಂದ ಬೆಲ್ಲದ ಹರ್ಷ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಈ ಗೆಲುವಿನ ಮೂಲಕ ಬಂಗಾಳದ ಜನತೆ ದಬ್ಬಾಳಿಕೆಯ ಆಡಳಿತವನ್ನು ಕಿತ್ತೊಗೆದು, ಅಭಿವೃದ್ಧಿಯ ಪರವಾದ ಸ್ಪಷ್ಟ ತೀರ್ಪು ನೀಡಿದ್ದಾರೆ. ಹಿಂದಿನ ಆಡಳಿತಾರೂಢ ಸರ್ಕಾರದ ದಬ್ಬಾಳಿಕೆ, ರಾಜಕೀಯ ಹಿಂಸಾಚಾರ, ಭ್ರಷ್ಟಾಚಾರ ಮತ್ತು ತುಷ್ಟೀಕರಣದ ರಾಜಕಾರಣದಿಂದ ಬಂಗಾಳದ ಜನತೆ ರೋಸಿ ಹೋಗಿದ್ದರು. ವಿರೋಧ ಪಕ್ಷದ ಕಾರ್ಯಕರ್ತರ ಮೇಲಿನ ನಿರಂತರ ಹಲ್ಲೆಗಳು ಮತ್ತು ಪ್ರಜಾಪ್ರಭುತ್ವದ ಕಗ್ಗೊಲೆಯ ಮೂಲಕ ವಿರೋಧಿಗಳ ಧ್ವನಿ ಅಡಗಿಸುವ ಷಡ್ಯಂತ್ರಗಳು ನಡೆದಿದ್ದವು. ಈ ಭಯದ ಮತ್ತು ಉಸಿರುಗಟ್ಟಿಸುವ ವಾತಾವರಣದ ನಡುವೆಯೂ, ಜನತೆ ಬದಲಾವಣೆಯ ದೃಢ ಸಂಕಲ್ಪ ಮಾಡಿದ್ದರು ಎಂಬುದನ್ನು ಈ ಫಲಿತಾಂಶ ಸಾಬೀತುಪಡಿಸಿದೆ ಎಂದು ತಿಳಿಸಿದ್ದಾರೆ.

ಅಗತ್ಯ ಕ್ರಮ ಕೈಗೊಳ್ಳಿ: ಅಂಚಟಗೇರಿ

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಅವಳಿ ನಗರದ ಅನೇಕ ಪ್ರಮುಖ ರಸ್ತೆಗಳಲ್ಲಿ ಸಾರ್ವಜನಿಕರ ಸಂಚಾರಕ್ಕೆ ಅಡಚಣೆ ಉಂಟುಮಾಡುವ ರೀತಿಯಲ್ಲಿ ತೆಗ್ಗು-ಗುಂಡಿಗಳು ನಿರ್ಮಾಣವಾಗಿದ್ದು, ವಾಹನ ಸವಾರರು ಹಾಗೂ ಪಾದಚಾರಿಗಳು ತೀವ್ರ ಸಂಕಷ್ಟ ಅನುಭವಿಸುವಂತಾಗಿದೆ. ಸಾರ್ವಜನಿಕರ ಸುರಕ್ಷತೆ, ಸುಗಮ ಸಂಚಾರ ಹಾಗೂ ಮಳೆಗಾಲದ ಮುನ್ನೆಚ್ಚರಿಕಾ ದೃಷ್ಟಿಯಿಂದ ತಕ್ಷಣ ಅಗತ್ಯ ಕ್ರಮ ಜರುಗಿಸಬೇಕು ಎಂದು ಸಭಾ ನಾಯಕ ವೀರೇಶ ಅಂಚಟಗೇರಿ ಆಗ್ರಹಿಸಿದ್ದಾರೆ.



ಈ ಕುರಿತು ಮಹಾನಗರ ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ ಅವರಿಗೆ ಪತ್ರ ಬರೆದು ಮನವಿ ಮಾಡಿರುವ ಅವರು, ಈಗಾಗಲೇ ಅನೇಕ ಕಡೆಗಳಲ್ಲಿ ಅಪಘಾತಗಳ ಸಂಭವವೂ ಉಂಟಾಗಿರುವ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬರುತ್ತಿವೆ. ಈ ಸಮಸ್ಯೆಯನ್ನು ಬೇಸಿಗೆ ಅವಧಿಯಲ್ಲಿಯೇ ಹಲವು ಬಾರಿ ಮಹಾನಗರ ಪಾಲಿಕೆಯ ಗಮನಕ್ಕೆ ತರಲಾಗಿದೆ. ಆದರೆ ಇನ್ನೂ ಸಮರ್ಪಕ ರೀತಿಯಲ್ಲಿ ರಸ್ತೆ ದುರಸ್ತಿ ಕಾಮಗಾರಿಗಳು ಕೈಗೊಳ್ಳದಿರುವುದು ವಿಷಾದನೀಯ ಸಂಗತಿಯಾಗಿದೆ. ಮೇ 20ರ ನಂತರ ಮಳೆಗಾಲ ಆರಂಭವಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ, ಈಗಿರುವ ತೆಗ್ಗು-ಗುಂಡಿಗಳು ಮತ್ತಷ್ಟು ವಿಸ್ತಾರವಾಗಿ ಸಾರ್ವಜನಿಕರ ಸುರಕ್ಷತೆಗೆ ಗಂಭೀರ ಅಪಾಯ ಉಂಟುಮಾಡುವ ಪರಿಸ್ಥಿತಿ ನಿರ್ಮಾಣವಾಗಬಹುದು. ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿರುವ ಇರಾನ್ ಹಾಗೂ ಖಾಡಿ ಪ್ರದೇಶದ ಯುದ್ಧ ಪರಿಸ್ಥಿತಿಯಿಂದ ಡಾಂಬರ್ ಬೆಲೆ ಏರಿಕೆಯಾಗಿದೆ ಎಂಬ ಕಾರಣ ನೀಡಿ, ಕೆಲ ಗುತ್ತಿಗೆದಾರರು ರಸ್ತೆ ದುರಸ್ತಿ ಕಾಮಗಾರಿಗಳನ್ನು ಆರಂಭಿಸಲು ಹಿಂದೇಟು ಹಾಕುತ್ತಿರುವ ಮಾಹಿತಿ ಲಭ್ಯವಾಗಿದೆ. ಆದರೆ ಸಾರ್ವಜನಿಕರ ಹಿತದೃಷ್ಟಿಯಿಂದ ಮಹಾನಗರ ಪಾಲಿಕೆ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಪಟ್ಟ ಗುತ್ತಿಗೆದಾರರೊಂದಿಗೆ ತುರ್ತು ಸಭೆ ನಡೆಸಿ, ಅವಳಿ ನಗರದ ಪ್ರಮುಖ ರಸ್ತೆಗಳಲ್ಲಿ ಉಂಟಾಗಿರುವ ತೆಗ್ಗು-ಗುಂಡಿಗಳನ್ನು ಡಾಂಬರ್ ಪ್ಯಾಚ್ ಮೂಲಕ ಶೀಘ್ರವಾಗಿ ಮುಚ್ಚುವ ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇನೆ.



ಹುಬ್ಬಳ್ಳಿ: ತಾಲೂಕು ಆಡಳಿತ ಸೌಧದ ತಹಶೀಲ್ದಾರ್ ಕಾರ್ಯಾಲಯದಲ್ಲಿ ತಾಲೂಕು ಆಡಳಿತದಿಂದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯುತ್ಸವವನ್ನು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಆಚರಣೆ ಮಾಡಲಾಯಿತು.

ಪಾದಚಾರಿ ಮಾರ್ಗದ ಒತ್ತುವರಿ ತೆರವು

ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಲವು ಪ್ರದೇಶಗಳಲ್ಲಿ ಪಾದಚಾರಿ ಮಾರ್ಗದ ಒತ್ತುವರಿಯನ್ನು ಸೋಮವಾರ ತೆರವುಗೊಳಿಸಲಾಯಿತು.

ಮಹಾನಗರ ಪಾಲಿಕೆ ವಲಯ ಆಯುಕ್ತರ ನೇತೃತ್ವದಲ್ಲಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ತೆರವು ಕಾರ್ಯ ನಡೆಯಿತು. ಇಲ್ಲಿಯ ಹೊಸೂರು ವೃತ್ತದಿಂದ, ಗೋಕುಲ ರಸ್ತೆಯ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕಚೇರಿ ಎದುರು, ಹೊಸ ಬಸ್ ನಿಲ್ದಾಣ, ಅರ್ಬನ್ ಓಯಸಿಸ್ ಮಾಲ್, ಅಕ್ಷಯ ಪಾರ್ಕ್, ಮಂಜುನಾಥ ನಗರ ಸೇರಿದಂತೆ ವಿಮಾನ ನಿಲ್ದಾಣದ ವರೆಗೂ ತೆರವು ಕಾರ್ಯಾಚರಣೆ ನಡೆಯಿತು. ಇನ್ನೂ ಕೊಪ್ಪಿಕರ ರಸ್ತೆಯಿಂದ ದುರ್ಗದ ಬೈಲ್ ವರೆಗೂ ಪಾದಚಾರಿ ರಸ್ತೆಯಲ್ಲಿ ಒತ್ತುವರಿ ಮಾಡಲಾಗಿದ್ದ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸಿ, ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಪಾದಚಾರಿ ಮಾರ್ಗ ಒತ್ತುವರಿ ಮಾಡಿಕೊಂಡು ವ್ಯಾಪಾರ ವಹಿವಾಟು ಮಾಡುವವರಿಗೆ, ಶಾಶ್ವತ ಕಟ್ಟಡ ನಿರ್ಮಿಸಿಕೊಂಡವರಿಗೆ ಸಾಕಷ್ಟು ಬಾರಿ ಎಚ್ಚರಿಕೆ ನೀಡಲಾಗಿದೆ. ಕೆಲವುಕಡೆ ಕಾರ್ಯಾಚರಣೆ ನಡೆಸಿ ಶೆಡ್‌ಗಳನ್ನು ತೆರವು ಮಾಡಲಾಗಿದೆ ಎಂದು ಹು-ಧಾ ಮಹಾನಗರ ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ ತಿಳಿಸಿದರು.ಮೊದಲ ಹಂತದಲ್ಲಿ ಗೋಕುಲ ರಸ್ತೆ ಹಾಗೂ ಕೊಪ್ಪಿಕರ ರಸ್ತೆಯಲ್ಲಿ ತೆರವು ಕಾರ್ಯಾಚರಣೆ ಮಾಡಲಾಗಿದೆ. ಎರಡನೇ ಹಂತದಲ್ಲಿ ಕೇಶ್ವಾಪುರ, ವಿದ್ಯಾನಗರ ಹಾಗೂ ಇನ್ನಿತರ ಪ್ರಮುಖ ರಸ್ತೆಗಳಲ್ಲಿ ಮಾಡಲಾಗುವುದು ಎಂದರು.



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹಲವು ಪ್ರದೇಶಗಳಲ್ಲಿ ಪಾದಚಾರಿ ಮಾರ್ಗದ ಒತ್ತುವರಿಯನ್ನು ಸೋಮವಾರ ತೆರವುಗೊಳಿಸಲಾಯಿತು. ಮಹಾನಗರ ಪಾಲಿಕೆ ವಲಯ ಆಯುಕ್ತರ ನೇತೃತ್ವದಲ್ಲಿ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ತೆರವು ಕಾರ್ಯ ನಡೆಯಿತು.

ದೇಸಾಯಿ ವೃತ್ತದ ಬಳಿ ಪೈಪ್‌ಲೈನ್ ದುರಸ್ತಿ | ನಿರಂತರ ನೀರು ಪೋಲು

ಕಾಮಗಾರಿ ಶೀಘ್ರ ಪೂರ್ಣಗೊಳಿಸಿ: ಶಾಸಕ

ಹುಬ್ಬಳ್ಳಿ: ಇಲ್ಲಿಯ ದೇಸಾಯಿ ವೃತ್ತದಲ್ಲಿ ನಿರಂತರ ನೀರು ಪೋಲಾಗುತ್ತಿದ್ದ ಹಿನ್ನೆಲೆ ಸೋಮವಾರ ದುರಸ್ತಿ ಕಾಮಗಾರಿ ಕೈಗೊಂಡ ಸ್ಥಳಕ್ಕೆ ಶಾಸಕ ಮಹೇಶ ಟೆಂಗಿನಕಾಯಿ ಭೇಟಿ ನೀಡಿತಕ್ಷಣಕಾಮಗಾರಿ ಮುಗಿಸಿಸಾರ್ವಜನಿಕ ಸಂಚಾರಕ್ಕೆ ಅನುಕೂಲ ಮಾಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಕಳೆದ 8 ತಿಂಗಳಿನಿಂದ ಈ ಸ್ಥಳದಲ್ಲಿ ಪೈಪ್ ಒಡೆದು ಕುಡಿಯುವ ನೀರು ಪೋಲಾಗುತ್ತಿತ್ತು. ಸಾರ್ವಜನಿಕರು ನನ್ನ ಹಾಗೂ ಪಾಲಿಕೆ ಸದಸ್ಯರ ಗಮನಕ್ಕೆ ತಂದಿದ್ದರು. ಈ ಹಿನ್ನೆಲೆ ಕಳೆದ ಕೆಡಿಪಿ ಸಭೆಯಲ್ಲಿ ಅಧಿಕಾರಿಗಳ ಗಮನಕ್ಕೆ ತಂದು ತಕ್ಷಣ ಕಾಮಗಾರಿ ದುರಸ್ತಿ ಮಾಡಬೇಕು ಎಂದು ಸೂಚಿಸಿದ್ದೆ. ಈಗ ಕಾಮಗಾರಿ ಕೈಗೊಂಡ ಹಿನ್ನೆಲೆ ಸ್ಥಳಕ್ಕೆ ಭೇಟಿ ನೀಡಿ ತಕ್ಷಣ ಕಾಮಗಾರಿ ಮುಗಿಸಿ ಸಂಚಾರಕ್ಕೆ ಅನುಕೂಲ ಮಾಡಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ತಿಳಿಸಿದರು.

ದೇಸಾಯಿ ವೃತ್ತದ ರಸ್ತೆ ಪ್ರಮುಖ ರಸ್ತೆಗಳಲ್ಲಿ ಒಂದಾಗಿದ್ದು, ನಿತ್ಯ ಸಾವಿರಾರೂ ವಾಹನಗಳ ಸಂಚರಿಸುತ್ತವೆ. ರಸ್ತೆ ತಡೆದು ಕಾಮಗಾರಿ ಕೈಗೊಳ್ಳಲಾಗಿದ್ದು, ಸಂಚಾರಕ್ಕೆ ತೊಂದರೆಯಾಗಲಿದೆ. ಆದ್ದರಿಂದ ತಕ್ಷಣ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಪಾಲಿಕೆ ಸದಸ್ಯ ಮೀನಾಕ್ಷಿ ವಂಟಮುರಿ, ಬಿಜೆಪಿ ಮುಖಂಡ ರವಿ ನಾಯಕ, ಚಂದ್ರಶೇಖರ ಮಾಲಿ ಪಾಟೀಲ್, ಕಿರಣ ಗುಂಜಾಳ, ಸಿದ್ದು ಮೊಗಲಿಶೆಟ್ಟರ್ ಇದ್ದರು.

ವಾಹನಗಳ ಸಂಚಾರ ದಟ್ಟಣೆ: ಸಾರ್ವಜನಿಕರ ಆಕ್ರೋಶ

ಹುಬ್ಬಳ್ಳಿ: ನಗರದ ವಿಜಯಪುರ ರಸ್ತೆಯ ದೇಸಾಯಿ ಕ್ರಾಸ್ ಬಳಿ ಕುಡಿಯುವ ನೀರಿನ ಪೈಪ್‌ಲೈನ್ ಒಡೆದ ಪರಿಣಾಮ ಆರು-ಏಳು ತಿಂಗಳಿನಿಂದ ನೀರು ಸೋರಿಕೆಯಾಗುತ್ತಿದ್ದು, ಸರಿಪಡಿಸುವ ಕಾರ್ಯ ಭಾನುವಾರ ಸಂಜೆಯಿಂದ ಆರಂಭವಾಗಿದೆ. ಒಂದು ಕಡೆ ನಿರಂತರ ನೀರು ಸೋರಿಕೆ ಮುಕ್ತಿ ಸಿಗುತ್ತಿದ್ದು, ಇನ್ನೊಂದು ಕಡೆ ದೇಸಾಯಿ ಕ್ರಾಸ್‌ನಿಂದ ಪಿಂಟೋ ವೃತ್ತದವರೆಗೆ ರಸ್ತೆ ಬಂದ್ ಮಾಡಿದ ಪರಿಣಾಮ ಸೋಮವಾರ ನಗರದಾದ್ಯಂತ ವಾಹನಗಳ ಸಂಚಾರ ದಟ್ಟಣೆ ಉಂಟಾಗಿತ್ತು.

ಯಾವ ಮುನ್ಸೂಚನೆಯನ್ನೂ ನೀಡದೆ ಪ್ರಮುಖ ರಸ್ತೆಗಳನ್ನು ಸಂಪರ್ಕಿಸುವ ವೃತ್ತ ಹಾಗೂ ಪಿಂಟೋ ರಸ್ತೆ ರಸ್ತೆಯನ್ನು ಬಂದ್ ಮಾಡಿದ್ದು ವಾಹನ ಸವಾರರ ಹಾಗೂ ಸಾರ್ವಜನಿಕರ ಆಕ್ರೋಶಕ್ಕೂ ಕಾರಣವಾಗಿದೆ. ಕಾಂಕ್ರಿಟ್ ರಸ್ತೆ ನಿರ್ಮಿಸುತ್ತಿರುವ ಹಿನ್ನೆಲೆಯಲ್ಲಿ ಹಳೇ ಕೋರ್ಟ್ ವೃತ್ತದಿಂದ ದೇಸಾಯಿ ಕ್ರಾಸ್‌ವರೆಗಿನ ರಸ್ತೆಯ ಒಂದು ಭಾಗವನ್ನು ಈಗಾಗಲೇ ಬಂದ್ ಮಾಡಲಾಗಿದೆ. ಇದೇ ರಸ್ತೆಗೆ ಹೊಂದಿಕೊಂಡಿರುವ ದೇಸಾಯಿ ಕ್ರಾಸ್ ಸಹ ಬಂದ್ ಮಾಡಿ ವಾಹನಗಳ ಸಂಚಾರ ನಿಷೇಧಿಸಿದ್ದು, ಸಾರ್ವಜನಿಕರು ದೇಶಪಾಂಡೆ ನಗರದಿಂದ ಸ್ಟೇಶನ್ ರಸ್ತೆಗೆ ಹೋಗಲು 2 ಕಿ.ಮೀ. ದೂರ ಸಂಚರಿಸುವ ಅನಿವಾರ್ಯ ಎದುರಾಗಿದ್ದು, ಮತ್ತಷ್ಟು ಅಸಮಾಧಾನಕ್ಕೆ ಕಾರಣವಾಗಿದೆ. ದೇಸಾಯಿ ವೃತ್ತದಲ್ಲಿ ದೊಡ್ಡ ಮಟ್ಟದಲ್ಲಿ ನೀರು ಸೋರಿಕೆ ಯಾಗುತ್ತಿರುವ ಹಿನ್ನೆಲೆ ದುರಸ್ತಿ ಕಾಮಗಾರಿ ಇನ್ನೂ ಎರಡು-ಮೂರು ದಿನ ನಡೆಯಬಹುದು ಎಂದು ಕಾಮಗಾರಿ ಕೈಗೊಂಡಿರುವ ಎಲ್ ಅ್ಯಂಡ್ ಟಿ ಕಂಪನಿ ಸಿಬ್ಬಂದಿ ತಿಳಿಸುತ್ತಿದ್ದಾರೆ. ದೇಸಾಯಿ ವೃತ್ತದಲ್ಲಿ ಪೈಪ್ ಲೈನ್ ದುರಸ್ತಿ ಕಾಮಗಾರಿಯಿಂದ ಮತ್ತಷ್ಟು ಸಂಚಾರ ದಟ್ಟಣೆ ಉಂಟಾಗಿ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳನ್ನು ಶಪಿಸುತ್ತಿದ್ದಾರೆ.



> **ದೇಸಾಯಿ ವೃತ್ತದ ನಿರಂತರ ನೀರು ಸೋರಿಕೆ ತಡೆಯಲು ಪೈಪ್ ಲೈನ್ ದುರುಸ್ತಿ ಕಾರ್ಯ ಕೈಗೊಳ್ಳಲಾಗಿದ್ದು, ಆದಷ್ಟು ಬೇಗ ಕಾಮಗಾರಿ ಮುಗಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ.**
> ■ **ಮಹೇಶ ಟೆಂಗಿನಕಾಯಿ, ಶಾಸಕ**

> **ದೇಸಾಯಿ ವೃತ್ತದಲ್ಲಿ ಕೈಗೊಳ್ಳಲಾದ ಪೈಪ್ ಲೈನ್ ಕಾಮಗಾರಿ ನಡೆದಿದ್ದು, ಆದಷ್ಟು ಬೇಗ ಮುಗಿಸಲು ಸೂಚಿಸಲಾಗಿದೆ. ವಾಹನ ಸವಾರರಿಂದ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುವುದು.**
> ■ **ರವೀಶ ಸಿ.ಆರ್. ಡಿಸಿಪಿ ಸಂಚಾರ ವಿಭಾಗ**

ಮೇ 14ರಿಂದ ಚಕ್ರವ್ಯೂಹ ಮ್ಯಾನೇಜ್ಮೆಂಟ್ ಫೆಸ್ಟ್: ಡಾ. ಕೊರವಿ

ಹುಬ್ಬಳ್ಳಿ: ನಗರದ ಡಿ.ಕೆ.ಎಸ್. ಸೊಸೈಟಿಯ ಚೇತನ ಬಿಸಿನೆಸ್ ಸ್ಕೂಲ್ ವತಿಯಿಂದ ಪದವಿ ವಿದ್ಯಾರ್ಥಿಗಳಿಗೆ ಮ್ಯಾನೇಜ್ಮೆಂಟ್ ಸ್ಕಿಲ್ಸ್ ಕಲಿಸುವ ಉದ್ದೇಶದಿಂದ ಮೇ 14ರಿಂದ 16ರ ವರೆಗೆ ಮೂರು ದಿನಗಳ ಕಾಲ ಕಾಲೇಜ್ ಆವರಣದಲ್ಲಿ ಚಕ್ರವ್ಯೂಹ ಮ್ಯಾನೇಜ್ಮೆಂಟ್ ಫೆಸ್ಟ್ ಆಯೋಜಿಸಲಾಗಿದೆ ಎಂದು ಸ್ಕೂಲ್ ನಿರ್ದೇಶಕ ಡಾ. ವಿ.ಎಂ. ಕೊರವಿ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಬಿಎ, ಬಿಕಾಂ, ಬಿಎಸ್‌ಸಿ, ಬಿಸಿಎ ಹಾಗೂ ಬಿಎ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಫೈನಾನ್ಸ್ ಮಾರ್ಕೆಟಿಂಗ್, ಹ್ಯೂಮನ್ ರಿಸೋರ್ಸ್, ಬೆಸ್ಟ್ ಮ್ಯಾನೇಜರ್ ವಿಡಿಯೋಗ್ರಫಿ ಹಾಗೂ ಸಾಂಸ್ಕೃತಿಕ ವಿಭಾಗಗಳಿಗೆ ಸ್ಪರ್ಧೆ ಏರ್ಪಡಿಸಲಾಗಿದೆ ಎಂದರು.

ಚೇತನ ಬಿಸಿನೆಸ್ ಸ್ಕೂಲ್ ವಿನೂತನ ಪ್ರಯೋಗಕ್ಕೆ ಮುಂದಾಗಿದ್ದು, ಪ್ರಥಮ ದಿನದ ನಂತರ 42 ಗಂಟೆಗಳ ಕಾಲ ಕ್ಯಾಪಿಟಿಟಿವಿಟಿ ಜೂನ್ ಬ್ಲಾನ್ ಇನ್ ಮೂಲಕ ಸ್ಪರ್ಧೆಗಳನ್ನು ನಡೆಸಲು ನಿರ್ಧರಿಸಿದೆ. ಸುಮಾರು 20 ಕಾಲೇಜ್ ವಿದ್ಯಾರ್ಥಿಗಳ ಭಾಗವಹಿಸುತ್ತಿದ್ದು, 49 ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ವಿಜೇತರಿಗೆ 5ಸಾವಿರ ರೂ. ಪ್ರಶಸ್ತಿ, ಟ್ರೋಫಿ ಹಾಗೂ ಪ್ರಮಾಣ ಪತ್ರ ನೀಡಲಾಗುವುದು ಎಂದು ತಿಳಿಸಿದರು.

ಮೇ 14 ರಂದು ಬೆಳಿಗ್ಗೆ 10 ಗಂಟೆಗೆ ಸಮಾರಂಭಕ್ಕೆ ಚಾಲನೆ ದೊರೆಯಲಿದೆ. ಮುಖ್ಯ ಅತಿಥಿಯಾಗಿ ಉದ್ಯಮಿ ವಿ.ಎಸ್ .ವಿ ಪ್ರಸಾದ ಸಮಾರಂಭಕ್ಕೆ ಚಾಲನೆ ನೀಡಲಿದ್ದಾರೆ. ಡಿ.ಕೆ.ಎಸ್. ಸೊಸೈಟಿ ಗೌರವ ಕಾರ್ಯದರ್ಶಿ ರಾಜಣ್ಣ ಕೊರವಿ ಅಧ್ಯಕ್ಷತೆ ವಹಿಸಲಿದ್ದು, ಜಗದೀಶ ದ್ಯಾವಪ್ಪನವರ ಭಾಗವಹಿಸಲಿದ್ದಾರೆ. ಖ್ಯಾತ ಗಾಯಕಿ ಶ್ರೀರಕ್ಷಾ ಉಚ್ಚಿಲ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಪ್ರೊ. ಶ್ರೇಯಸ್ ಮುರಡೇಶ್ವರ, ಮೋಹಿತ್ ಡಿ., ಕಾವೇರಿ ಕುಲಕರ್ಣಿ, ಆದಿತ್ಯ, ವರ್ಷ ಪಾಟೀಲ ಇದ್ದರು.



ಕತ್ತಲಲ್ಲಿ ತುರ್ತು ಚಿಕಿತ್ಸಾ ಘಟಕ: ಆಕ್ರೋಶ

ನವಲಗುಂದ: ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದಲ್ಲಿ ಭಾನುವಾರ ರಾತ್ರಿ ಸಮಯದಲ್ಲಿ ಮೂಲಭೂತ ಸೌಕರ್ಯವಾದ ವಿದ್ಯುತ್ ಸಂಪರ್ಕವೇ ಇಲ್ಲದಿರುವುದು ಆಡಳಿತ ವ್ಯವಸ್ಥೆಗೆ ಹಿಡಿದಂತಹ ಕನ್ನಡಿಯಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ ಅವರು ತಾಲೂಕು ಕೇಂದ್ರದ ಸರ್ಕಾರಿ ಆಸ್ಪತ್ರೆಯು ಸುತ್ತಮುತ್ತಲಿನ ನೂರಾರು ಹಳ್ಳಿಗಳ ಬಡ ಜನರಿಗೆ ಜೀವನಾಡಿಯಾಗಿದೆ. ಆದರೆ, ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕ ವಿದ್ಯುತ್ ಸಂಪರ್ಕವಿಲ್ಲದೆ ಕತ್ತಲೆಯಲ್ಲಿ ಮುಳುಗಿದೆ.

ತುರ್ತು ಘಟಕದಲ್ಲಿ ಜೀವ ಉಳಿಸುವ ವೈದ್ಯಕೀಯ ಉಪಕರಣಗಳು ಕಾರ್ಯ ನಿರ್ವಹಿಸಲು ವಿದ್ಯುತ್ ಅತ್ಯಗತ್ಯ, ಕತ್ತಲಿನಲ್ಲಿ ಚಿಕಿತ್ಸೆ ನೀಡುವುದು ವೈದ್ಯರಿಗೂ ಕಷ್ಟಕರವಾಗಿದ್ದು ರೋಗಿಗಳ ಪ್ರಾಣದ ಜೊತೆ ಚೆಲ್ಲಾಟವಾಡಿದಂತಾಗುತ್ತದೆ. ಸರ್ಕಾರಿ ಆಸ್ಪತೆಗೆ ಬರುವ ಬಡ ರೋಗಿಗಳಿಗೆ ಇಂತಹ ಕನಿಷ್ಠ ಸೌಲಭ್ಯವು ಸಿಗದಿರುವುದು ಅತ್ಯಂತ ಖೇದಕರ ವಿಷಯವಾಗಿದೆ.

ಇನ್ನು ಆಸ್ಪತ್ರೆಯಲ್ಲಿ ಜನರೇಟರ್ ಅಥವಾ ಯು.ಪಿ.ಎಸ್ ವ್ಯವಸ್ಥೆ ಇದ್ದರು ಸಹ ತುರ್ತು ಸಂದರ್ಭದಲ್ಲಿ ಕಾರ್ಯ ನಿರ್ವಹಿಸದಿರುವುದು ನೋಡಿದರೆ ವಿದ್ಯುತ್ ಸಂಪರ್ಕ ನಿರ್ವಹಣೆಗೆ ಬಂದಿರುವಂತಹ ಅನುದಾನ ಮತ್ತು ಜನರೇಟರ್ ನಿರ್ವಹಣೆಗೆ ಮೀಸಲಿಟ್ಟ ಹಣ ದುರುಪಯೋಗವಾಗುತ್ತಿರುವ ಸಂಶಯವಿದೆ. ತುರ್ತು ಸಮಯದಲ್ಲಿ ರೋಗಿಗಳಿಗೆ ಕತ್ತಲೆಯಲ್ಲಿ ಚಿಕಿತ್ಸೆ ನೀಡುವ ಅನಿವಾರ್ಯತೆ ನಿರ್ಮಾಣವಾಗಿದ್ದು ಆಸ್ಪತ್ರೆಯ ಸಿಬ್ಬಂಧಿಗಳು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ವಿಫಲರಾಗಿದ್ದು ಈ ಕೂಡಲೇ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸೂಕ್ತ ರೀತಿಯ ಕಾನೂನು ಕ್ರಮ ಜರುಗಿಸಬೇಕೆಂದು ಪತ್ರಿಕಾ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.



ಹುಲಿಗೆಮ್ಮ ದೇವಿ ಜಾತ್ರೆ: ಮೆರವಣಿಗೆ



ಕುಂದಗೋಳ: ತಾಲೂಕಿನ ಸಂಶಿ ಗ್ರಾಮದಲ್ಲಿ ಶ್ರೀ ಹುಲಿಗೆಮ್ಮ ದೇವಿಯ ಜಾತ್ರಾ ಮಹೋತ್ಸವ ಅಂಗವಾಗಿ ಶುಕ್ರವಾರ ನಡೆದ ಭವ್ಯ ಮೆರವಣಿಗೆ ಗ್ರಾಮದ ವಿರಕ್ತಮಠದ ಚನ್ನಬಸವ ದೇವರು ಮೆರವಣಿಗೆ ಚಾಲನೆ ನೀಡಿದರು.

ಅಪಾರ ಭಕ್ತರ ಜಯಘೋಷದ ಮಧ್ಯೆ, ಮೆರವಣಿಗೆಯು ಡೊಳ್ಳು, ಜಾಂಜ್ ಮೇಳಗಳದೊಂದಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಮಹಿಳೆಯರು, ಯುವಕರು ಹಾಗೂ ಗ್ರಾಮದ ಭಕ್ತರು ಭಕ್ತಿ ಭಾವದಿಂದ ಮೆರವಣಿಗೆಯಲ್ಲಿ ಭಾಗವಹಿಸಿ ಜಾತ್ರೆಯ ಸಂಭ್ರಮವನ್ನು ಹೆಚ್ಚಿಸಿದರು.

ಈ ಸಂದರ್ಭದಲ್ಲಿ ಕರಿಸಿದ್ದೇಶ್ವರ ದೇವಸ್ಥಾನದ ಅರ್ಚಕರಾದ ಶಿವಾನಂದ ಪೂಜಾರಿ, ಪೂಜ್ಯರಾದ ಬಸಯ್ಯ ಹಿರೇಮಠ, ತಾಲೂಕು ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಲೋಕೇಶ್ ಸರಾವರಿ, ಪರಸಪ್ಪ ಮಾಯಣ್ಣವರ, ಸಿದ್ದಪ್ಪ ಕಾಯಕದ ಸೇರಿದಂತೆ ದೇವಸ್ಥಾನದ ಕಮಿಟಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಗ್ರಾಮದ ಭಕ್ತಾದಿಗಳು ಉಪಸ್ಥಿತರಿದ್ದರು.

ನಾಳೆ ವಾರ್ಷಿಕ, ಹಳೇ ವಿದ್ಯಾರ್ಥಿಗಳ ದಿನ

ಹುಬ್ಬಳ್ಳಿ: ಇಲ್ಲಿಯ ವಿದ್ಯಾನಗರದ ಕೆಎಲ್‌ಇ ಸಂಸ್ಥೆ ಪಿ.ಸಿ. ಜಾಬಿನ್ ವಿಜ್ಞಾನ ಕಾಲೇಜ್‌ನಲ್ಲಿ ವಾರ್ಷಿಕ ದಿನ ಹಾಗೂ ಹಳೇ ವಿದ್ಯಾರ್ಥಿಗಳ ದಿನ ಮೇ 13ರಂದು ಬೆಳಿಗ್ಗೆ 10.30ಕ್ಕೆ ಕಾಲೇಜ್ ಆವರಣದಲ್ಲಿ ಆಚರಿಸಲಾಗುತ್ತಿದೆ. ಜನಪದ ಗಾಯಕ ಡಾ. ರಾಮು ಮುಳಗಿ, ಐಸೆಲ್ ಟೆಕ್ನಾಲಜೀಸ್ ಪ್ರೈ.ಲಿ. ಸಿಇಒ ಪ್ರಸಾದ ಪಾಟೀಲ ಅತಿಥಿಯಾಗಿ ಹಾಗೂ ಸಂಸ್ಥೆ ಆಡಳಿತ ಮಂಡಳಿ ಸದಸ್ಯ ಮಂಜುನಾಥ ಮುನವಳ್ಳಿ ಅಧ್ಯಕ್ಷತೆ ವಹಿಸುವರು ಎಂದು ಕಾಲೇಜ್ ಪ್ರಾಂಶುಪಾಲರಾದ ಸಂಧ್ಯಾ ಕುಲಕರ್ಣಿ ತಿಳಿಸಿದ್ದಾರೆ.

ಸಾಧನೆಗೆ ಆಳವಾದ ಜ್ಞಾನವೇ ಅಡಿಪಾಯ

ಧಾರವಾಡ: ಜೀವನದಲ್ಲಿ ಉನ್ನತ ಗುರಿ ಹೊಂದುವ ಜೊತೆಗೆ ಗುರಿ ಸಾಧಿಸಲು ಕಠಿಣ ಪರಿಶ್ರಮ ಮತ್ತು ಸತತ ಪ್ರಯತ್ನ ಅಗತ್ಯ. ಸಾಧನೆಗೆ ಆಳವಾದ ಜ್ಞಾನವೇ ಅಡಿಪಾಯ ಎಂದು ಐಎಫ್‌ಎಸ್ ಅಧಿಕಾರಿ ವಸಂತ ರೆಡ್ಡಿ ಹೇಳಿದರು.

ನಗರದ ಜೆಎಸ್ಸೆಸ್ ಬನಶಂಕರಿ ಕಲಾ-ವಾಣಿಜ್ಯ ಮತ್ತು ಗುಬ್ಬಿ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಬಿಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳ ವಿಶೇಷ ಶೈಕ್ಷಣಿಕ ಮತ್ತು ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕವಿವಿ ಪ್ರಾಧ್ಯಾಪಕ ಡಾ.ರವೀಂದ್ರ ಕಾಂಬಳೆ ಮಾತನಾಡಿ, ರಸಾಯನಶಾಸ್ತ್ರ ಪದವೀಧರರಿಗೆ ದೇಶ-ವಿದೇಶಗಳ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಇರುವ ಉನ್ನತ ವ್ಯಾಸಂಗ ಮತ್ತು ಸಂಶೋಧನಾ ಕ್ಷೇತ್ರಗಳ ಕುರಿತು ಮಾಹಿತಿ ನೀಡಿದರು.

ಜೆಎಸ್ಸೆಸ್ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಮಾತನಾಡಿ, ರಸಾಯನಶಾಸ್ತ್ರದ ಅನ್ವಯಿಕತೆ ಮತ್ತು ಈ ವಿಷಯವನ್ನು ಅಭ್ಯಾಸಿಸುವುದರಿಂದ ಕೈಗಾರಿಕಾ ಕ್ಷೇತ್ರದಲ್ಲಿ ದೊರೆಯುವ ಉದ್ಯೋಗಾವಕಾಶಗಳ ಕುರಿತು ಬೆಳಕು ಚೆಲ್ಲಿದರು.

ಪ್ರಾಚಾರ್ಯ ಡಾ.ವೆಂಕಟೇಶ ಮುತಾಲಿಕ್ ಮಾತನಾಡಿ, ಮನುಷ್ಯನ ಜೀವನದ ಅನಿವಾರ್ಯತೆಗಳು ವ್ಯಕ್ತಿಯನ್ನು ರೂಪಿಸುವ ಮತ್ತು ಎದುರಾಗುವ ಸವಾಲು ಹೇಗೆ ಎದುರಿಸಬೇಕು ಎಂಬುವ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.

ಸಮಾರಂಭದಲ್ಲಿ ಜನತಾಶಿಕ್ಷಣಸಮಿತಿ ಕಾರ್ಯದರ್ಶಿ ಡಾ. ಅಜಿತ ಪ್ರಸಾದ ಅವರಿಗೆ ಸನ್ಮಾನಿಸುವ ಜೊತೆಗೆ ಬಿಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳನ್ನು ಬೀಳ್ಕೊಡಲಾಯಿತು.

ಆಡಳಿತಾಧಿಕಾರಿ ಅರಿಹಂತ ಪ್ರಸಾದ, ವಿಭಾಗದ ಮುಖ್ಯಸ್ಥ ಡಾ.ಅರುಣಕುಮಾರ್ ಶಿರಹಟ್ಟಿ, ಎಂಸಿಎ ನಿರ್ದೇಶಕ ಡಾ.ಸೂರಜ್ ಜೈನ್, ಮಹಾವೀರ ಉಪಾದ್ಯೆ, ಡಾ. ಜಿನ್ನಪ್ಪ ಕುಂದಗೋಳ, ಡಾ.ಶೌಕತ್ ಅಲಿ ಅನೇಕರು ಇದ್ದರು.



ಪ್ರತ್ಯೇಕ ಮಹಾನಗರ ಪಾಲಿಕೆಗೆ ವಕೀಲರ ಸಂಘ ಬೆಂಬಲ

ಧಾರವಾಡ: ಪ್ರತ್ಯೇಕ ಮಹಾನಗರ ಪಾಲಿಕೆ ರಚನೆ ಧಾರವಾಡಿಗರ ಬಹುದಿನಗಳ ಬೇಡಿಕೆ. ಇದಕ್ಕೆ ವಕೀಲರ ಸಂಘದ ಬೆಂಬಲವಿದೆ. ಈ ವಿಚಾರವಾಗಿ ಸಂಘವು ಕಠಿಣ ನಿಲುವು ತಳೆದಿದೆ ಎಂದು ವಕೀಲರ ಸಂಘದ ಅಧ್ಯಕ್ಷ ಸಿ.ಎಸ್ .ನೇಗಿನಹಾಳ ಹೇಳಿದರು.



ಸ್ಥಿರ ಸಂಕಲ್ಪ: ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ಪ್ರತ್ಯೇಕ ಪಾಲಿಕೆ ಹೋರಾಟದಲ್ಲಿ ಒಂದು ವೇಳೆ ಹೋರಾಟಗಾರರು ಹಿಂದೆ ಸರಿದರೂ, ಧಾರವಾಡ ವಕೀಲರ ಸಂಘವು ಏಕಾಂಗಿಯಾಗಿಯೇ ಹೋರಾಟವನ್ನು ಮುಂದುವರಿಸಲಿದೆ ಎಂದು ತಿಳಿಸಿದರು.

ಮೊದಲ ಪ್ರತ್ಯೇಕ ಪಾಲಿಕೆ ರಚನೆ ನಿರ್ಣಯ ಅಂಗೀಕರಿಸಿತ್ತು. ಇದೇ ನಿರ್ಣಯದ ಮೇಲೆ ನಿಲ್ಲಬೇಕು. ಬೃಹತ್ ಮಹಾನಗರ ಪಾಲಿಕೆ ಅಗತ್ಯವೇ ಇಲ್ಲ. ಇಚ್ಛಾಶಕ್ತಿಯ ಕೊರತೆ ಕಾರಣವೇ ಧಾರವಾಡಕ್ಕೆ ಅನ್ಯಾಯ ಆಗುತ್ತಿದೆ. ರಾಜಕೀಯ ಬಿಟ್ಟು ಹೆಚ್ಚಿನ ಅನುದಾನ ತರುವ ಮೂಲಕ ಪ್ರತ್ಯೇಕ ಪಾಲಿಕೆ ರಚನೆಗೆ ಸಹಕರಿಸುವಂತೆ ಆಗ್ರಹಿಸಿದರು.

ಅಭಿವೃದ್ಧಿಯ ಗುರಿ: ಧಾರವಾಡದ ಸ್ವತಂತ್ರ ಅಸ್ತಿತ್ವ ಮತ್ತು ಆಡಳಿತಾತ್ಮಕ ಸುಧಾರಣೆಗಾಗಿ ಈ ಪ್ರತ್ಯೇಕತೆ ಅನಿವಾರ್ಯ ಎಂಬುದು ಸಂಘದ ಅಭಿಮತ. ಈ ವಿಷಯದಲ್ಲಿ ಸಂಘ ಯಾವುದೇ ರಾಜೀಗೂ ಒಪ್ಪುವುದಿಲ್ಲ. ಪ್ರತ್ಯೇಕ ಪಾಲಿಕೆ ಒಂದೇ ನಮ್ಮ ಮುಂದಿನ ಗುರಿ ಎಂದು ನೇಗಿನಹಾಳ ಪ್ರಶ್ನೆಗೆ ಉತ್ತರಿಸಿದರು.

ರಾಷ್ಟ್ರಪತಿಗೆಪತ್ರ: ಆಂಧ್ರಪ್ರದೇಶದಲ್ಲಿ ವಕೀಲರನ್ನು ಪೊಲೀಸ್ ಕಸ್ಟಡಿಗೆ ನೀಡಿದ ನ್ಯಾಯಾಧೀಶರ ಕ್ರಮ ಖಂಡನೆ. ಇದು ಕಾನೂನು ಬಾಹಿರ ಮತ್ತು ವೃತ್ತಿ ಗೌರವಕ್ಕೆ ಧಕ್ಕೆ ತರಲಿದೆ. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೋರಿ ರಾಷ್ಟ್ರಪತಿಗಳಿಗೆ ಪತ್ರ ಬರೆಯಲು ನಿರ್ಧರಿಸಿದೆ ಎಂದರು.

ಆರ್.ಎಂ.ಎಸ್ ಕಚೇರಿ ಸ್ಥಳಾಂತರಕ್ಕೆ ವಿರೋಧ: ಧಾರವಾಡದ ಆರ್.ಎಂ.ಎಸ್. (ರೈಲ್ವೆ ಮೇಲ್ ಸರ್ವೀಸ್) ಕಚೇರಿಯನ್ನು ಹುಬ್ಬಳ್ಳಿಗೆ ಸ್ಥಳಾಂತರಿಸುವ ನಿರ್ಧಾರವನ್ನು ಖಂಡಿಸಿದ ಅವರು, ಧಾರವಾಡದ ಪ್ರಮುಖ ಸಂಸ್ಥೆಗಳನ್ನು ಒಂದೊಂದಾಗಿ ಬೇರೆಡೆಗೆ ಸ್ಥಳಾಂತರಿಸುವುದು ಧಾರವಾಡ ಪ್ರಾಮುಖ್ಯತೆ ಕ್ಷೀಣಿಸುವಂತೆ ಮಾಡುವ ಹುನ್ನಾರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯಾವುದೇ ಕಾರಣಕ್ಕೂ ಕಚೇರಿ ಸ್ಥಳಾಂತರಕ್ಕೆ ಅವಕಾಶ ನೀಡುವುದಿಲ್ಲ ಮತ್ತು ಇದರ ವಿರುದ್ಧ ಕಾನೂನಾತ್ಮಕ ಹಾಗೂ ಸಂಘಟಿತ ಹೋರಾಟ ಮಾಡುವುದಾಗಿ ಸಂಘವು ನಿರ್ಣಯ ಕೈಗೊಂಡಿದೆ ಎಂದು ನೇಗಿನಹಾಳ ತಿಳಿಸಿದರು.

ವಕೀಲರ ಸಂಘದ ಉಪಾಧ್ಯಕ್ಷ ಎಸ್. ಎಸ್.ಬನ್ನೂರ, ಕಾರ್ಯದರ್ಶಿ ಸಚಿನ್ ಕುಲಕರ್ಣಿ, ಜಂಟಿ ಕಾರ್ಯದರ್ಶಿ ಬಸವರಾಜ ಪೂಜಾರ, ಖಜಾಂಚಿ ಸುವರ್ಣ ಅಂಟಿನ, ಸದಸ್ಯರಾದ ಚೈತ್ರಾ ದಂಡಿನ, ಬಸವರಾಜ ಸುಂಕದ, ಉಳವಪ್ಪ ಉಳವಣ್ಣವರ, ಮಂಜುನಾಥ ಮಡಿವಾಳರ ಇದ್ದರು.

> **ಧಾರವಾಡದ ಹಿತರಕ್ಷಣೆ ಮತ್ತು ವಕೀಲರ ಘನತೆಯ ವಿಷಯದಲ್ಲಿ ನಾವು ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ, ಪ್ರತ್ಯೇಕ ಪಾಲಿಕೆ ನಮ್ಮ ಹಕ್ಕು, ಅದನ್ನು ಪಡೆಯುವವರೆಗೂ ವಿಶ್ರಮಿಸುವುದಿಲ್ಲ.**
> ■ **ಸಿ.ಎಸ್. ನೇಗಿನಹಾಳ, ಅಧ್ಯಕ್ಷರು ವಕೀಲರ ಸಂಘ, ಧಾರವಾಡ.**

ಪ್ರತ್ಯೇಕ ಪಾಲಿಕೆಗೆ ಆಗ್ರಹ: ಮೇ 15ರಿಂದ ಸರಣಿ ಧರಣಿ

ಧಾರವಾಡ: ಹುಬ್ಬಳ್ಳಿ-ಧಾರವಾಡ ಅವಳಿನಗರಗಳ ಆಡಳಿತಾತ್ಮಕ ಸಂಕಷ್ಟದಿಂದ ಮುಕ್ತಿ ಹೊಂದಿ, ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ರಚನೆ ಹೋರಾಟಕ್ಕೆ ಇದೀಗ ಹೊಸ ಆಯಾಮ ಲಭಿಸಿದೆ.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಸೋಮವಾರ ನಡೆದ ಸ್ವಾಭಿಮಾನಿ ಹೋರಾಟಗಾರರ ಪಕ್ಷಾತೀತ ಸಭೆಯಲ್ಲಿ ರಾಜ್ಯಪಾಲರಿಗೆ ಬಿಸಿ ಮುಟ್ಟಿಸಲು ಐದು ನಿರ್ಣಯಗಳು ಕೈಗೊಂಡಿದೆ.

ಮಹಾನಗರ ಪಾಲಿಕೆ ಪ್ರತ್ಯೇಕತೆ ಬೇಡಿಕೆ ಬಲವಾಗಿ ಒತ್ತಾಯಿಸಲು ಮೇ.15 ರಿಂದ 30ರವರೆಗೆ ಧಾರವಾಡ ಪಾಲಿಕೆ ಕಚೇರಿ ಮುಂಭಾಗ ನಿರಂತರ ಧರಣಿ ಸತ್ಯಾಗ್ರಹ ನಡೆಸಲು ನಿರ್ಣಯಿಸಿದೆ.

ಬೆಲ್ಲದ-ಜೋಶಿಗೆ ಒತ್ತಾಯ: ಧಾರವಾಡ ಪ್ರತ್ಯೇಕ ಪಾಲಿಕೆಗೆ ಅಡ್ಡಿಪಡಿಸಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹಾಗೂ ಶಾಸಕ ಅರವಿಂದ ಬೆಲ್ಲದ ಮುಂದೆ ಮೇ.15ರ ನಂತರ ಧರಣಿ ನಡೆಸಿ ಒತ್ತಡ ಹೇರಲು ನಿರ್ಣಯಿಸಲಾಗಿದೆ.



ಪ್ರತ್ಯೇಕ ಪಾಲಿಕೆಯೊಂದೇ ದಾರಿ

ಅಭಿವೃದ್ಧಿ ಮತ್ತು ಅನುದಾನ ಹಂಚಿಕೆಯಲ್ಲಿ ಧಾರವಾಡಕ್ಕೆ ಆಗುತ್ತಿರುವ ಅನ್ಯಾಯ ತಡೆಯಲು ಪ್ರತ್ಯೇಕ ಪಾಲಿಕೆಯೊಂದೇ ದಾರಿ. ಇದು ಕೇವಲ ಭಾವನಾತ್ಮಕ ವಿಚಾರವಲ್ಲ, ಇದು ಆಡಳಿತಾತ್ಮಕ ಅಗತ್ಯ ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ಎಲ್ಲ ಪ್ರಮುಖರು ಅಭಿಪ್ರಾಯ.

ಲಾಡ್‌ಗೆ ಮನವರಿಕೆ: ಧಾರವಾಡ ಪ್ರತ್ಯೇಕ ಪಾಲಿಕೆ ಏಕೆ? ಎಂಬ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್‌ಗೆ ಮನವರಿಕೆ ಮಾಡಿ, ಸರ್ಕಾರದ ಮಟ್ಟದಲ್ಲಿ ಈ ಪ್ರಸ್ತಾವನೆಗೆ ವೇಗ ನೀಡುವಂತೆ ಸಭೆ ಒತ್ತಾಯಿಸಿದೆ.

ಪಕ್ಷಾತೀತ ಬೆಂಬಲಕ್ಕೆ ಕರೆ: ಈ ಹೋರಾಟ ಕೇವಲ ನಾಗರಿಕರ ಹೋರಾಟವಲ್ಲ, ರಾಜಕೀಯವಾಗಿಯೂ ಬಲಪಡಿಸಲು ನಿರ್ಧರಿಸಿದೆ. ಪಾಲಿಕೆಯ ಬಿಜೆಪಿ ಸದಸ್ಯರಿಗೂ ಹೋರಾಟದಲ್ಲಿ ಪಾಲ್ಗೊಳ್ಳಲು ಆಹ್ವಾನ ನೀಡಲಾಗಿದೆ.

ಧಾರವಾಡ ಅಭಿವೃದ್ಧಿ ದೃಷ್ಟಿಯಿಂದ ಪಕ್ಷಭೇದ ಮರೆತು ಒಂದಾಗುವಂತೆ ಕರೆ ನೀಡಲಾಗಿದೆ. ಇದೀಗ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ತೀವ್ರ ಸ್ವರೂಪ ಪಡೆಯುವ ಲಕ್ಷಣಗಳು ಗೋಚಿಸಿವೆ.

ಮಾಜಿ ಸಭಾಪತಿ ಡಾ.ವೀರಣ್ಣ ಮತ್ತಿಕಟ್ಟಿ, ಗುರುರಾಜ ಹುಣಸಿಮರದ, ಸಿ.ಎಸ್.ನೇಗಿನಹಾಳ, ಮನೋಜ ಪಾಟೀಲ, ವೆಂಕಟೇಶ ಮಾಚಕನೂರ, ವಿಠ್ಠಲ ಕಮ್ಮಾರ, ಗೌರಮ್ಮ ಬಲೋಗಿ, ಕವಿತಾ ಕಬ್ಬೇರ ಮತ್ತು ಈಶ್ವರ ಶಿವಳ್ಳಿ ಅನೇಕರು ಪಾಲ್ಗೊಂಡಿದ್ದರು.

ಧಾರವಾಡ ಬಂದ್!

ಒಂದು ವೇಳೆ ನಿಗದಿತ ಧರಣಿ ಸತ್ಯಾಗ್ರಹದ ನಂತರವೂ ಸರ್ಕಾರ ಸ್ಪಂದಿಸದಿದ್ದರೆ, ಮುಂದಿನ ದಿನಗಳಲ್ಲಿ ಸಂಪೂರ್ಣ 'ಧಾರವಾಡ ಬಂದ್' ಮಾಡುವ ಮೂಲಕ ಕಠಿಣ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಭೆಯಲ್ಲಿ ಈ ಹೋರಾಟಗಾರರು ಎಚ್ಚರಿಸಿದ್ದಾರೆ.

ಕಿರುಸುದ್ದಿ

ವಿಚಾರಣಾಧೀನ ಕೈದಿಗಳಿಂದ ಜೈಲರ್ ಮೇಲೆ ಹಲ್ಲೆ

ಜಮಖಂಡಿ: ಮುಧೋಳ ರಸ್ತೆಯ ಸಮೀಪ ಇರುವ ಉಪಕಾರಾಗೃಹದಲ್ಲಿ ಇರುವ ವಿಚಾರಣಾ ಕೈದಿಗಳಿಂದ ಹಲ್ಲೆಗೊಳಗಾದ ಕಾರಾಗೃಹದ ಜೈಲರ್ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಜಮಖಂಡಿ ವಿಚಾರಣಾ ಕೈದಿಗಳಾದ ಜಾಕೀರ ಹುಸೇನ್ ಅಬ್ದುಲ್, ಗಫಾರ ಮಕಾನಂದ್, ಫಯಾಜ್ ಮಕಾನದಾರ, ಸಚಿನ್ ನಾಯಕೋಡಿ,ಅಲ್ತಾಫ್ ಫಾರೂಕ್ ಅಹ್ಮದ್ ತಾಳಿಕೋಟಿ ಜೈಲಿನಲ್ಲಿ ಪರಸ್ಪರ ಜಗಳ ಮಾಡುತ್ತಿರುವ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಜೈಲರ್ ವಿ.ಡಿ.ಕಂಬಾರ ಕೈದಿಗಳನ್ನು ಬಿಡಿಸಲು ಹೋದ ಸಂದರ್ಭದಲ್ಲಿ ಜೈಲರ್ ಮೇಲೆಯೇ ಹಲ್ಲೆ ಮಾಡಿ ಗಾಯಗೊಳಿಸಿದ ಘಟನೆ ನಡೆಯಿತು.

ಜೈಲರ್ ಕಂಬಾರಗೆ ಕೈದಿಗಳು ಹಲ್ಲೆ ಮಾಡಿದ ಪರಿಣಾಮ ಕೈಗೆ ಪೆಟ್ಟಾಗಿದ್ದು ಜಮಖಂಡಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮೀಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಠಾಣಾಧಿಕಾರಿ ಗಂಗಾಧರ ಪೂಜೇರಿ ಪ್ರಕರಣ ದಾಖಲಿಸಿಕೊಂಡಿದ್ದು ತನಿಖೆ ನಡೆಸಿದ್ದಾರೆ. ಪ್ರಕರಣ ಸುದ್ದಿ ತಿಳಿದು ಹಿರಿಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಸೇತುವೆ ಮೇಲಿಂದ ಜಿಗಿದು ಯುವಕ ಆತ್ಮಹತ್ಯೆ

ಕಲಬುರಗಿ: ಜಿಲ್ಲೆಯ ಕಮಲಾಪೂರ ತಾಲೂಕಿನ ಕುರಿಕೋಟಾ ಗ್ರಾಮದ ಬಳಿ ಯುವಕನೊಬ್ಬ ಸೇತುವೆ ಮೇಲಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.ಅಮರನಾಥ ದೊಡ್ಡಮನಿ (30) ಆತ್ಮಹತ್ಯೆ ಮಾಡಿಕೊಂಡ ಯುವಕನಾಗಿದ್ದು, ಇವರು ಮೂಲತಃ ಶಹಬಾದ್ ತಾಲೂಕಿನ ನಂದೂರ್ ಗ್ರಾಮದ ನಿವಾಸಿಯಾಗಿದ್ದರು ಎಂದು ತಿಳಿದುಬಂದಿದೆ.



ಮನೆಯಿಂದ ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಅಮರನಾಥ, ಬಳಿಕ ಕುರಿಕೋಟಾ ಸೇತುವೆ ಬಳಿ ವಾಹನ ನಿಲ್ಲಿಸಿ ಸೇತುವೆ ಮೇಲಿಂದ ಜಿಗಿದಿದ್ದಾರೆ ಎನ್ನಲಾಗಿದೆ. ಆತ್ಮಹತ್ಯೆಗೆ ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ. ಘಟನೆ ಮಹಾಗಾಂವ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದು, ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅಗ್ನಿಶಾಮಕ ದಳದ ಸಿಬ್ಬಂದಿ ಮೃತದೇಹವನ್ನು ಪತ್ತೆಹಚ್ಚಿ ಹೊರತೆಗೆದಿದ್ದಾರೆ. ಈ ಸಂಬಂಧ ಮಹಾಗಾಂವ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು,ತನಿಖೆ ಮುಂದುವರಿದಿದೆ.

ರೈತ ಆತ್ಮಹತ್ಯೆ

ಹಾವೇರಿ: ಸಾಲ ಬಾಧೆ ತಾಳಲಾರದೆ ರೈತರೊಬ್ಬರು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ರಾಣೇಬೆನ್ನೂರ ತಾಲೂಕು ಮಾಕನೂರು ಗ್ರಾಮದಲ್ಲಿ ನಡೆದಿದೆ.

ಮಾಕನೂರು ಗ್ರಾಮದ ಮಧುಕುಮಾರ ಬಸವರಾಜ ಗುಂಡೋಜಿ (33) ಮೃತ ದುರ್ದೈವಿ. ಈ ರೈತರು ಗೋನಾಳ ಗ್ರಾಮದಲ್ಲಿ ಐದು ಎಕರೆ ಜಮೀನು ಹೊಂದಿದ್ದು, ಕೃಷಿ ಚಟುವಟಿಕೆಗಳಿಗಾಗಿ ಕಾರಡಗಿ ಬ್ಯಾಂಕ್‌ನಲ್ಲಿ 5 ಲಕ್ಷ ರೂ.ಸಾಲವನ್ನು ಮಾಡಿಕೊಂಡಿದ್ದಾರೆ. ಮಳೆ ಸರಿಯಾಗಿ ಬಾರದ ಹಿನ್ನೆಲೆ ಬೆಳೆಯೂ ಸರಿಯಾಗಿ ಬರುತ್ತಿಲ್ಲ. ಮಾಡಿದ ಸಾಲವನ್ನು ತೀರಿಸುವುದು ಹೇಗೆ ಎಂಬ ಚಿಂತೆಯಲ್ಲಿ ಮನೆಯಲ್ಲಿ ಯಾರೂ ಇಲ್ಲದ ವೇಳೆ ಹಾಲ್‌ನಲ್ಲಿ ಫ್ಯಾನ್ ಅಳವಡಿಸುವ ಕೊಂಡಿಗೆ ಹಗ್ಗದಿಂದ ನೇಣು ಹಾಕಿಕೊಂಡು ಮೃತಪಟ್ಟಿದ್ದಾರೆ ಎಂದು ಮೃತನ ಪತ್ನಿ ಶ್ವೇತಾ ಗುಂಡೋಜಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಕುಮಾರಪಟ್ಟಣಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಅಲಸಂದೆ ಕಾಳು	2229	2229
ಕಡಲೆಕಾಳು	1710	5685
ಉದ್ದಿನಕಾಳು	1209	5811
ಒಣ ಮೆಣಸಿನಕಾಯಿ	8066	25500
ಹೆಸರುಕಾಳು	1351	7559
ನೆಲಗಡಲೆ (ಶೇಂಗಾ)	600	7459
ಹುರುಳಿ ಕಾಳು	3807	3807
ಜೋಳ	1711	3506
ಮೆಕ್ಕೆಜೋಳ	1429	1935
ಮಡಿಕೆ (ಮಟಕಿ)	14111	14111
ಸಾಸುವೆ	4559	5529
ನವಣೆ	5608	5608
ಈರುಳ್ಳಿ	500	1600
ಆಲೂಗಡ್ಡೆ	1200	1800
ಕುಸುಬೆ	5419	5419
ಸೋಯಾಬಿನ್	2330	6890
ಸೂರ್ಯ ಕಾಂತಿ	6363	6363
ಗೋಧಿ	2357	2425

ಆರೋಗ್ಯ ಕ್ಷೇತ್ರದಲ್ಲಿ ಸಾಧನೆ | 20,511 ಹೆಣ್ಣು ಮಕ್ಕಳಿಗೆ ಲಸಿಕೆ

ಎಚ್‌ಪಿವಿ ಲಸಿಕೆ: ರಾಜ್ಯಕ್ಕೆ ಕಲಬುರಗಿ ಫಸ್ಟ್!

ರಾಚಪ್ಪಾ ಜಂಬಗಿ

ಕಲಬುರಗಿ: ಆರೋಗ್ಯ ಕ್ಷೇತ್ರದಲ್ಲಿ ಬಿಸಿಲು ನಾಡಾದ ಕಲಬುರಗಿ ಮತ್ತೊಮ್ಮೆ ರಾಜ್ಯದ ಗಮನ ಸೆಳೆದಿದ್ದು, ಕೇಂದ್ರ ಸರ್ಕಾರದ ಮಹಾತ್ವಾಕಾಂಕ್ಷಿ ಯೋಜನೆ ಹಾಗೂ ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ನಡೆದ ಎಚ್‌ಪಿವಿ ಲಸಿಕೆ ನೀಡುವ ಅಭಿಯಾನದಲ್ಲಿ ಕಲಬುರಗಿ ಜಿಲ್ಲೆಯೂ ಕರ್ನಾಟಕದಲ್ಲೇ ಪ್ರಥಮ ಸ್ಥಾನ ಪಡೆದು ಹೊಸ ದಾಖಲೆ ನಿರ್ಮಿಸಿದೆ.


ದಿಗಂತ ವಿಶೇಷ

ಕಳೆದ ಮಾರ್ಚ್ 13ರಿಂದ ಆರಂಭವಾದ ಎಚ್‌ಪಿವಿ ಲಸಿಕೆ ಅಭಿಯಾನದಲ್ಲಿ ಜಿಲ್ಲೆಯಾದ್ಯಂತ ದ 29,958 ಲಸಿಕೆ ಗುರಿಯಲ್ಲಿ ಇಲ್ಲಿಯವರೆಗೆ 20,511 ಮಂದಿಗೆ ಲಸಿಕೆ ನೀಡಲಾಗಿದ್ದು, ಶೇ.68.5 ಸಾಧನೆ ಮಾಡುವ ಮೂಲಕ ಕಲಬುರಗಿ ಇಡೀ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಮಹಿಳೆಯರಲ್ಲಿ ಗರ್ಭಕಂಠ ಕ್ಯಾನ್ಸರ್ ತಡೆಗಟ್ಟುವ ಉದ್ದೇಶದಿಂದ ಸರ್ಕಾರ ಕೈಗೊಂಡಿರುವ ಈ ಮಹತ್ವಾಕಾಂಕ್ಷಿ ಅಭಿಯಾನಕ್ಕೆ ಜಿಲ್ಲೆಯ ಆರೋಗ್ಯ ಇಲಾಖೆ,ಶಾಲೆಗಳುಹಾಗೂಅಂಗನವಾಡಿಸಿಬ್ಬಂದಿಯ ಸಮನ್ವಯ ಕಾರ್ಯ ದೊಡ್ಡ ಬಲವಾಗಿದ್ದು, ಗ್ರಾಮೀಣ ಭಾಗದಿಂದ ನಗರ ಪ್ರದೇಶದವರೆಗೂ ಜಾಗೃತಿ ಮೂಡಿಸಿ ಲಸಿಕೆ ನೀಡುತ್ತಿರುವ ಆರೋಗ್ಯ ಸಿಬ್ಬಂದಿಯ ಶ್ರಮದಿಂದ ಕಲಬುರಗಿ ರಾಜ್ಯಕ್ಕೆ ಮಾದರಿಯಾಗಿದೆ.

ಎಚ್‌ಪಿವಿ ಅಂದರೆ ಹ್ಯೂಮನ್ ಪ್ಯಾಪಿಲೋಮ್ ವೈರಸ್. ಇದು ಜನನಾಂಗದ ಸೋಂಕುಗಳಿಗೆ ಕಾರಣವಾಗುವ ಒಂದು ಸಾಮಾನ್ಯ ವೈರಸ್. ಮಹಿಳೆಯರಲ್ಲಿ ಕಂಡುಬರುವ ಗರ್ಭಕಂಠದ ಕ್ಯಾನ್ಸರ್‌ಗೆ ಹೆಚ್ಚಾಗಿ ಇದೆ ವೈರಸ್ ಕಾರಣವಾಗಿರುತ್ತದೆ. ದೇಶಾದ್ಯಂತ ನಡೆಯುತ್ತಿರುವ ಈ ಅಭಿಯಾನದಲ್ಲಿ ಮುಖ್ಯವಾಗಿ 14 ವರ್ಷದ ಹೆಣ್ಣು ಮಕ್ಕಳಿಗೆ ಈ ಲಸಿಕೆ ನೀಡುವ ಗುರಿ ಹೊಂದಲಾಗಿದೆ.

ಭಾರತೀಯ ಮಹಿಳೆಯರಲ್ಲಿ ಕಂಡು ಬರುವ ಕ್ಯಾನ್ಸರ್‌ಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಎರಡನೇ ಸ್ಥಾನದಲ್ಲಿದೆ. 2024ರ ಅಂದಾಜಿನ ಪ್ರಕಾರ ಸುಮಾರು 78,499 ಹೊಸ ಪ್ರಕರಣಗಳು ಪತ್ತೆಯಾಗಿವೆ ಮತ್ತು 42,392 ಸಾವುಗಳು ಸಂಭವಿಸಿದ್ದು, ಆದ್ದರಿಂದ ಈ ಲಸಿಕೆ ಬಹಳ ಮುಖ್ಯ ಎಂದು ಕಲಬುರಗಿ ಡಿಎಚ್‌ಒ ಶರಣಬಸಪ್ಪಾ ಕ್ಯಾತವಾಳ ಹೊಸ ದಿಗಂತಕ್ಕೆ ತಿಳಿಸಿದರು.



"ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ರಾಜ್ಯ ಸರ್ಕಾರದ ಸಹಯೋಗದಲ್ಲಿ ನಡೆಯುತ್ತಿದ್ದು, ಈ ಲಸಿಕೆಯಿಂದ ಯಾವುದೇ ರೀತಿಯ ಅಡ್ಡಪರಿಣಾಮ ಇಲ್ಲ, ಸುರಕ್ಷಿತವಾದ ಲಸಿಕೆ. ಗರ್ಭಕಂಠದ ಕ್ಯಾನ್ಸರಿಗೆ ಉಪಯುಕ್ತವಾಗಿದೆ.
■ ಶರಣಬಸಪ್ಪ ಕ್ಯಾತನಾಳ್, ಡಿಎಚ್‌ಒ,ಕಲಬುರಗಿ

- ಗರ್ಭಾಶಯದ ಬಾಯಿಯ ಕ್ಯಾನ್ಸರ್ (ಸೆರವಿಕಲ್ ಕ್ಯಾನ್ಸರ್) ತಡೆಯಲು
- ಎಚ್‌ಪಿವಿ ಕಾರಣವಾಗುವ ಇತರೆ ಕ್ಯಾನ್ಸರ್‌ಗಳನ್ನು ಕಡಿಮೆ ಮಾಡಲು
- ಜನನಾಂಗದ ಮಸೂರಿಗಳು ತಡೆಯಲು
- ಭವಿಷ್ಯದಲ್ಲಿ ವೈರಸ್ ಸೋಂಕಿನ ಅಪಾಯ ಕಡಿಮೆ ಮಾಡಲು

ಜಿಲ್ಲೆ	ಗುರಿ	ಸಾಧನೆ	ಪ್ರತಿಶತ
ಕಲಬುರಗಿ	29,958	20,511	68.5%
ಯಾದಗಿರಿ	14,264	8640	60.6%
ಶಿವಮೊಗ್ಗ	17,772	9005	50.7%
ಹಾಸನ	17,145	7752	45.2%
ಬಳ್ಳಾರಿ	14,069	5661	40.2%

"ಎಚ್‌ಪಿವಿ ಸಂಜೀವಿನಿ ಇದ್ದಂತೆ. ದೇಶದಲ್ಲಿ ವರ್ಷಕ್ಕೆ ಸುಮಾರು 1.60 ಸಾವಿರ ಸರ್ವೈಕಲ್ ಕ್ಯಾನ್ಸರ್ ಕೇಸ್ ಡಿಕ್ಟೇಟ್ ಆಗಿದ್ರೆ ಆದರಲ್ಲಿ 70 ಸಾವಿರಕ್ಕೂ ಅಧಿಕ ಹೆಣ್ಣು ಮಕ್ಕಳು ಜೀವ ಕಳೆದುಕೊಳ್ಳುತ್ತಿದ್ದಾರೆ. ಹೀಗಾಗಿ ಮುಂಜಾಗ್ರತಾ ಕ್ರಮ ಅಗತ್ಯ. ಮೊದಲ ಲಸಿಕೆಯೇ 100% ಪರಿಣಾಮಕಾರಿಯಾಗಿದೆ.
■ ಡಾ.ಸುಧಾ ಹಾಲಕಾಯಿ, ವೈದ್ಯರು, ಕಲಬುರಗಿ

"ಸರ್ವೈಕಲ್ ಕ್ಯಾನ್ಸರ್ ಮಹಿಳೆಯರಲ್ಲಿ ಹೆಚ್ಚಾಗಿ ಕಂಡು ಬರುತ್ತಿರುವ ಹಿನ್ನೆಲೆ, ಸರ್ಕಾರದಿಂದ ಉಚಿತವಾಗಿ ಯೋಜನೆ ಜಾರಿಗೆ ತಂದು 15-16 ವರ್ಷದ ಹೆಣ್ಣು ಮಕ್ಕಳಿಗೆ ಲಸಿಕೆ ನೀಡಲಾಗುತ್ತಿದೆ. ಲಸಿಕೆಯಿಂದ ಭವಿಷ್ಯದಲ್ಲಿ ಹೆಣ್ಣು ಮಕ್ಕಳಿಗೆ ಅನುಕೂಲವಾಗಲಿದೆ. ನಮ್ಮ ಆರೋಗ್ಯ ಇಲಾಖೆಯ ಎಲ್ಲ ಸಿಬ್ಬಂದಿಗಳ ಪರಿಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ.
■ ಫೌಜಿಯಾ ತರನ್ನುಮ್ ಡಿಸಿ(ನಿರ್ಗಮಿತ) ಕಲಬುರಗಿ

ಸಚಿವ ಎಚ್.ಕೆ.ಪಾಟೀಲ ಅಭಿಪ್ರಾಯ

ಪುರಾತತ್ವ ಸಂಪತ್ತಿನ ತಾಣ ಲಕ್ಕುಂಡಿ



ಗದಗ: ತಾಲೂಕಿನ ಲಕ್ಕುಂಡಿಯಲ್ಲಿ ಸುಮಾರು 10ಕೋಟಿ ರೂ. ವೆಚ್ಚದಲ್ಲಿ ಉತ್ಖನನ ಕಾರ್ಯ ಆರಂಭಿಸಲಾಗಿದೆ. ಇದು ಐತಿಹಾಸಿಕ ಹಾಗೂ ಸಾಂಸ್ಕೃತಿಕವಾಗಿ ಅತ್ಯಂತ ಮಹತ್ವದ ಪ್ರದೇಶವಾಗಿದ್ದು, ಸರ್ಕಾರ ಯೋಜಿತ ರೀತಿಯಲ್ಲಿ ಕಾರ್ಯ ನಡೆಸುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಹೇಳಿದರು.

ನಗರದ ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆಸ್ಪತ್ರೆಗೆ ಭೇಟಿನೀಡಿದಬಳಿಕಸುದ್ದಿಗಾರರೊಂದಿಗೆ ಮಾತನಾಡಿದರು.

ಲಕ್ಕುಂಡಿಯಲ್ಲಿ ರಾಷ್ಟ್ರಕೂಟರು ಹಾಗೂ ಹೊಯ್ಸಳರ ಕಾಲಕ್ಕೆ ಸೇರಿದ ಅಮೂಲ್ಯ ಶಿಲ್ಪಗಳು ಹಾಗೂ ಪುರಾತತ್ವ ಅವಶೇಷಗಳು ದೊರೆತಿವೆ. ದೇಶದಲ್ಲಿಯೇ ಅತ್ಯುತ್ತಮ ಪುರಾತತ್ವ ಸಂಪತ್ತನ್ನು ಹೊಂದಿರುವ ತಾಣಗಳಲ್ಲಿ ಲಕ್ಕುಂಡಿ ಪ್ರಮುಖ ಸ್ಥಾನ ಪಡೆದಿದೆ ಎಂದರು.

ಲಕ್ಕುಂಡಿಯಲ್ಲಿ ಪುರಾತತ್ವ ಸಪ್ತಾಹಕ್ಕೆ ಉತ್ತಮ ಸ್ಪಂದನೆ: ಕಳೆದ ವಾರ ಲಕ್ಕುಂಡಿಯಲ್ಲಿ ಪುರಾತತ್ವ ಅವಶೇಷ ಸಪ್ತಾಹ ಆರಂಭಿಸಲಾಗಿದೆ. ಈ ವೇಳೆ ತಾವು ಹಾಗೂ ಶಾಸಕ ಸಿ.ಸಿ.ಪಾಟೀಲರು ಮಾತನಾಡಿದಂತೆ ಈಗಾಗಲೇ 1300ಕ್ಕೂ ಹೆಚ್ಚು ಪುರಾತತ್ವ ಅವಶೇಷಗಳನ್ನು ಗುರುತಿಸಿ ಬಯಲಿಗೆ ತರುವ ಕಾರ್ಯ ನಡೆದಿದೆ ಎಂದು ಹೇಳಿದರು.

ಸಹಕಾರಕ್ಕೆ ಮೆಚ್ಚುಗೆ: ಮಾಧ್ಯಮಗಳು ಈ ಕಾರ್ಯವನ್ನು ಉತ್ತಮವಾಗಿ ಬೆಳಕಿಗೆ ತರುತ್ತಿದ್ದು, ಲಕ್ಕುಂಡಿ ಜನರಿಂದಲೂ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಎಲ್ಲಿಯೇ ಪುರಾತತ್ವ ಅವಶೇಷಗಳು ದೊರೆತರೂ ಜನರು ಅವನ್ನು ಸರ್ಕಾರ ಹಾಗೂ ಪುರಾತತ್ವ ಪ್ರಾಧಿಕಾರಕ್ಕೆ ಒಪ್ಪಿಸುವ ಮೂಲಕ ದೊಡ್ಡತನ ಮೆರೆದಿದ್ದಾರೆ ಎಂದು ಪ್ರಶಂಸಿಸಿದರು.

ಬಸ್ ತಂಗುದಾಣ ನಿರ್ಮಾಣ: ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಜಿಲ್ಲಾಸ್ಪತ್ರೆಗೆ ಬರುವ ಸಾರ್ವಜನಿಕರು ಹಾಗೂ ರೋಗಿಗಳ ಅನುಕೂಲಕ್ಕಾಗಿ ಶೀಘ್ರದಲ್ಲೇ ಆಸ್ಪತ್ರೆ ಆವರಣದಲ್ಲಿ ಬಸ್ ತಂಗುದಾಣ ನಿರ್ಮಿಸಲಾಗುವುದು. ಸಾರ್ವಜನಿಕ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರ ಆದ್ಯತೆ ನೀಡುತ್ತಿದೆ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಬಿ.ಬಿ.ಅಸೂಟಿ, ತಾಲೂಕು ಅಧ್ಯಕ್ಷ ಅಶೋಕ ಮಂದಾಲಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರ್ ಸಾಬ್ ಬಬರ್ಜಿ, ಎಸ್.ಎನ್. ಬಳ್ಳಾರಿ, ಸಿದ್ದು ಪಾಟೀಲ, ಪ್ರಭು ಬುರಬುರೆ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ, ಸಂಸ್ಥೆಯ ನಿರ್ದೇಶಕ ಡಾ. ಬಸವರಾಜ ಬೊಮ್ಮನಹಳ್ಳಿ, ಡಿವೈಎಸ್ಪಿ ಮುರ್ತುಜಾ ಖಾದ್ರಿ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಡಿ.ಸುಧಾಕರ್ ಅಗಲಿಕೆಗೆ ಸಚಿವರ ಸಂತಾಪ

ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಡಿ.ಸುಧಾಕರ ಅವರ ಅಗಲಿಕೆಯನ್ನು ಸ್ಮರಿಸಿದ ಸಚಿವ ಎಚ್.ಕೆ.ಪಾಟೀಲರು ಸಂತಾಪ ವ್ಯಕ್ತಪಡಿಸಿದರು. ಡಿ.ಸುಧಾಕರ್ ಅವರ ನಿಧನ ಮಧ್ಯ ಕರ್ನಾಟಕ ಭಾಗಕ್ಕೆ ಅಪಾರ ನಷ್ಟ ಉಂಟುಮಾಡಿದೆ. ಅವರು ಸರಳತೆ, ಸೌಜನ್ಯ ಮತ್ತು ಜನಪರ ಮನೋಭಾವದಿಂದ ಜನರ ಮನಸ್ಸು ಗೆದ್ದಿದ್ದ ನಾಯಕರು. ರಾಜಕೀಯ ಜೀವನದಲ್ಲಿ ಸದಾ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದ ಅವರು ಅಭಿವೃದ್ಧಿ ಕಾರ್ಯಗಳ ಮೂಲಕ ತಮ್ಮದೇ ಆದ ಛಾಪು ಮೂಡಿಸಿದ್ದರು ಎಂದು ಹೇಳಿದರು. ಅವರ ಕುಟುಂಬ ಸದಸ್ಯರು ಹಾಗೂ ಅಭಿಮಾನಿಗಳಿಗೆ ದೇವರು ದುಃಖ ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುವುದಾಗಿ ಸಂತಾಪ ಸೂಚಿಸಿದರು.

ಸೀಬರ್ಡ್ ನೌಕಾನೆಲೆ ನಿರಾಶ್ರಿತರ ಸಮಸ್ಯೆ ಆಲಿಸಿದ ಕಾಗೇರಿ

ಅಂಕೋಲಾ: ಸೀಬರ್ಡ್ ನೌಕಾನೆಲೆ ಯೋಜನೆಯಲ್ಲಿ ಸ್ಥಳೀಯ ನಿರಾಶ್ರಿತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವಂತೆ ಒತ್ತಾಯಿಸಿ ಸ್ಥಳೀಯ ನಿರಾಶ್ರಿತರು, ಅಸಂಘಟಿತ ಕಾರ್ಮಿಕರು ನೌಕಾನೆಲೆಯ ವಜ್ರಕೋಶ ದ್ವಾರದ ಬಳಿ ಪ್ರತಿಭಟನೆ ನಡೆಸಿದ್ದು, ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆಗೆ ತೆರಳುತ್ತಿದ್ದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸಿದರು.

ಕಳೆದ 16 ವರ್ಷಗಳಿಂದ ನೌಕಾನೆಲೆ ಯೋಜನೆಯಲ್ಲಿ ಉದ್ಯೋಗಕ್ಕಾಗಿ ಆಗ್ರಹಿಸುತ್ತ ಬರಲಾದರೂ ಉದ್ಯೋಗಾವಕಾಶಕ್ಕೆ ನಿರಾಶ್ರಿತರನ್ನು ಪರಿಗಣಿಸಲಾಗುತ್ತಿಲ್ಲ ಎಂದು ಉದ್ಯೋಗಕ್ಕಾಗಿ ಸಲ್ಲಿಸಿದ ಮನವಿಗಳ ಕಡತ ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು ಜಮೀನು ಕಳೆದುಕೊಂಡು ನಿರಾಶ್ರಿತರಾದ ಕುಟುಂಬದವರಿಗೆ ಸಣ್ಣಪುಟ್ಟ ಕೆಲಸಗಳನ್ನಾದರೂ ನೀಡಿ ಎಂದು ಕೇಳಿಕೊಂಡರೂ ಅಧಿಕಾರಿಗಳು ಗಮನವೇ ನೀಡುತ್ತಿಲ್ಲ ಎಂದು ಆರೋಪಿಸಿದರು.

ಹಟ್ಟಿಕೇಶ್ವರ ಸ್ಥಳೀಯ ಸೀ ಬರ್ಡ್ ನಿರಾಶ್ರಿತರ ಕೂಲಿ ಕಾರ್ಮಿಕರ ಅಸಂಘಟಿತರ ಸಂಘದ ಅಧ್ಯಕ್ಷ ಸುನೀಲ ನಾಯ್ಕ ಹೊನ್ನಿಕೇರಿ ಮಾತನಾಡಿ, ಯೋಜನಾ ನಿರಾಶ್ರಿತರಿಗೆ ಉದ್ಯೋಗ ನೀಡದೆ ಸತಾಯಿಸುವುದು ಸರಿಯಲ್ಲ, ನಿರಾಶ್ರಿತರಿಗೆಉದ್ಯೋಗಕ್ಕೆಪರಿಗಣಿಸದಿದ್ದರೆ ಉಗ್ರ ಹೋರಾಟ ಅನಿವಾರ್ಯ ಎಂದರು.

ಸ್ಥಳಕ್ಕೆ ಭೇಟಿ ನೀಡಿದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಸ್ಥಳೀಯ ಜನರಿಗೆ ಅದರಲ್ಲೂ ನಿರಾಶ್ರಿತ ಕುಟುಂಬಗಳಿಗೆ ಉದ್ಯೋಗ ನೀಡಬೇಕು ಎಂಬ ಬೇಡಿಕೆ ನ್ಯಾಯಯುತವಾದುದು. ಹಲವಾರು ವರ್ಷಗಳಿಂದ ಬಾಕಿಯಿದ್ದ ಸೂಕ್ತ ಪರಿಹಾರ ಕೊಡಿಸುವ ಕಾರ್ಯದಲ್ಲಿ ಯಶಸ್ವಿಯಾಗಿದ್ದು ಉದ್ಯೋಗಾವಕಾಶದ ಬೇಡಿಕೆ ಕುರಿತಂತೆ ಸಂಬಂಧಿಸಿದ ಅಧಿಕಾರಿಗಳು ಮತ್ತು ಕೇಂದ್ರ ಸಚಿವರೊಂದಿಗೆ ಚರ್ಚಿಸುವುದಾಗಿ ಭರವಸೆ ನೀಡಿದರು.

ವಜ್ರಕೋಶದ ಅಧಿಕಾರಿ ವಿಕ್ರಮ ಮೆನನ್ ಪ್ರತಿಭಟನಾಕಾರರ ಜೊತೆ ಸಮಾಲೋಚನೆ ನಡೆಸಿದರು.

ಹಟ್ಟಿಕೇಶ್ವರ ಸ್ಥಳೀಯ ಸೀ ಬರ್ಡ್ ನಿರಾಶ್ರಿತರ ಕೂಲಿ ಕಾರ್ಮಿಕರ ಅಸಂಘಟಿತರ ಸಂಘದ ಪದಾಧಿಕಾರಿಗಳು ಸದಸ್ಯರು, ಹಟ್ಟಿಕೇರಿ, ಅವರ್ಸಾ, ಬೆಲೇಕೇರಿ, ಬಾವಿಕೇರಿಯ ಸುತ್ತಮುತ್ತಲಿನ ನೌಕಾನೆಲೆ ನಿರಾಶ್ರಿತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಕ್ಷುಲ್ಲಕ ಕಾರಣಕ್ಕೆ ಕಲ್ಲಿನಿಂದ ಜಜ್ಜಿ ಕೊಲೆ

ಹಾವೇರಿ: ಮನೆಗೆ ಹೊದಿಸಲಾಗಿದ್ದ ತಗಡಿನ ನೀರು ಪಕ್ಕದ ಮನೆ ಗೋಡೆಗೆ ಬಿದ್ದು ಹಾನಿ ಮಾಡುತ್ತಿದೆ ಎಂಬ ವಿಚಾರವಾಗಿ ಅಕ್ಕಪಕ್ಕದ ಮನೆಯವರ ದ್ವೇಷಕ್ಕೆ ಕಾರಣವಾಗಿ ಕೊಲೆಯಲ್ಲಿ ಅಂತ್ಯಗೊಂಡ ಘಟನೆ ತಾಲೂಕಿನ ಕಬ್ಬೂರಿನಲ್ಲಿ ಸೋಮವಾರ ನಡೆದಿದೆ.

ಶಿವಪ್ಪ ಪಟ್ಟೆದ ಕೊಲೆ ಆರೋಪಿಯಾಗಿದ್ದು, ಈತನ ಮನೆಯ ಮೇಲ್ಛಾವಣಿಗೆ ಹೊದಿಸಲಾಗಿದ್ದ ತಗಡು ಪಕ್ಕದ ಮನೆಯ ನಿಂಗಪ್ಪ ಕರಿಗಾರ ಮನೆಯ ಗೋಡೆಗೆ ಮಳೆ ನೀರು ಬಿದ್ದು ಗೋಡೆಗೆ ಹಾನಿಯಾಗುತ್ತಿತ್ತು. ಈ ಕುರಿತು ಗ್ರಾಮದ ಹಿರಿಯರ ಮೂಲಕ ಶಿವಪ್ಪ ಪಟ್ಟೆದಗೆ ಬುದ್ಧಿ ಹೇಳಿಸಲಾಗಿತ್ತು. ಇದರಿಂದ ಕೋಪಗೊಂಡಿದ್ದ ಶಿವಪ್ಪ ಪಟ್ಟೆದ ದ್ವೇಷದಿಂದ ತಿಂಗಳ ಹಿಂದೆ ನಿಂಗಪ್ಪ ಕರಿಗಾರ ಮೇಲೆ ಹಲ್ಲೆ ನಡೆಸಿದ್ದ.

ಈ ಕುರಿತು ಗ್ರಾಮಸ್ಥರು ಶಿವಪ್ಪ ಪಟ್ಟೆದಗೆ ಬುದ್ಧಿ ಹೇಳಿ ಆಸ್ಪತ್ರೆ ಖರ್ಚು ಎಂದು ರೂ.2000 ಕೊಡಲು ತಿಳಿಸಿದ್ದರು. ಸೋಮವಾರ ನಿಂಗಪ್ಪ ಕರಿಗಾರ ತನ್ನ ಆಸ್ಪತ್ರೆಯ ಖರ್ಚು ನೀಡುವಂತೆ ಶಿವಪ್ಪನಿಗೆ ಕೇಳಿದಾಗ ಆತ ಸಿಟ್ಟಿನಿಂದ ಗ್ರಾಮದ ಬಸವೇಶ್ವರ ದೇವಸ್ಥಾನದ ಬಳಿ ನಿಂಗಪ್ಪ ಕರಿಗಾರ ಮೇಲೆ ಮತ್ತೆ ಹಲ್ಲೆ ನಡೆಸಿ ಕಲ್ಲಿನಿಂದ ಜಜ್ಜಿದ ಪರಿಣಾಮ ನಿಂಗಪ್ಪ ಕರಿಗಾರ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ನಂತರ ಶಿವಪ್ಪ ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಗೆ ಬಂದು ಕೊಲೆ ಮಾಡಿದ್ದಾಗಿ ತಿಳಿಸಿ ಪೊಲೀಸರಿಗೆ ಶರಣಾಗಿದ್ದಾನೆ. ಈ ಕುರಿತು ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಧಿಕಾರಿಗಳಿಗೆ ಸಂಸದ ಕಾಗೇರಿ ಕಟ್ಟುನಿಟ್ಟಿನ ಸೂಚನೆ

ಕೇಂದ್ರದ ಯೋಜನೆಗಳ ಅನುಷ್ಠಾನದಲ್ಲಿ ಪ್ರಗತಿ ಸಾಧಿಸಿ

ಕಾರವಾರ: ಪ್ರಧಾನಿ ಮೋದಿಯವರ ಮಹತ್ವಾಕಾಂಕ್ಷಿ ಯೋಜನೆ ಜಲಜೀವನ ಮಿಷನ್ ಮತ್ತು ಅಮೃತ ಯೋಜನೆಯು ಉತ್ತರ ಕನ್ನಡ ಜಿಲ್ಲೆಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ಆಗಿರುವುದಿಲ್ಲ. ಯೋಜನೆ ಜನರಿಗೆ ತಲುಪಬೇಕೆಂದರೆ ಅದರ ನಿರ್ವಹಣೆ ಮತ್ತು ಅನುಷ್ಠಾನದಲ್ಲಿ ದಕ್ಷತೆ ಬರಬೇಕು. ಇಲ್ಲವಾದರೆ ಜನರು ಅಧಿಕಾರಿಗಳನ್ನೊಳಗೊಂಡು ಜನಪ್ರತಿನಿಧಿಗಳನ್ನು ದೂಷಿಸದೇ ಬಿಡುವುದಿಲ್ಲ. ಈ ಬಗ್ಗೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.



ಅವರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನೆ ನಂತರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಲಜೀವನ್ ಮಿಷನ್ ಯೋಜನೆ ಪ್ರಗತಿ ಬಗ್ಗೆ ತಿಳಿಸುತ್ತ, ನಮ್ಮಲ್ಲಿ ಸಾಕಷ್ಟು ನೀರಿನ ಮೂಲಗಳಿವೆ. ಆದರೆ, ಎಷ್ಟೋ ಹಳ್ಳಿಗಳಲ್ಲಿ ಸೌಲಭ್ಯ ತಲುಪಿಲ್ಲ. ನಾನು ಹೋದ ಕಡೆಯಲ್ಲೆಲ್ಲ, ಜೆಜೆಎಂ ಯೋಜನೆ ಬಗ್ಗೆ ಆಪಾದನೆಗಳು ಕೇಳಿ ಬರುತ್ತಿದೆ. ಇದಕ್ಕೆ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡಬೇಕು. ಇದೇ ರೀತಿ ಅಮೃತ ಯೋಜನೆ ಮತ್ತು ಮಲ್ಟಿಸ್ಕೀಮ್ ಯೋಜನೆಗಳು ಕೂಡ ನಮ್ಮ ಜಿಲ್ಲೆಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಪ್ರಗತಿ ಆಗಿಲ್ಲ ಎಂದರು. ಯೋಜನೆ ಸರಿಯಾಗಿ ಜನರಿಗೆ ತಲುಪಲು ಕೆಲಸದ ಗುಣಮಟ್ಟ, ನಿರ್ವಹಣೆ ಸಮಸ್ಯೆ, ನಿರ್ವಹಣೆಗೆ ಹಣಕಾಸಿನ ಸಮಸ್ಯೆ ಎಲ್ಲ ಇದೆ. ಆದರೆ, ಇದಕ್ಕೆ ಬೇಕಾಗಿರುವುದು ದಕ್ಷತೆಯ ಕಾರ್ಯನಿರ್ವಹಣೆಆಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಜೆಜೆಎಂ ಮೊದಲ ಹಂತದಲ್ಲಿ ಸುಮಾರು 250 ಹಳ್ಳಿಗಳು ತಪ್ಪಿ ಹೋಗಿದ್ದು,ಇದನ್ನು ಎರಡನೆಯ ಹಂತದಲ್ಲಿ ಸೇರ್ಪಡೆ ಮಾಡಲಾಗಿದ್ದು, ಅದಕ್ಕೆ ಮಂಜೂರಾತಿ ಸಿಗಲಿದೆ ಎಂದರು.

ಯೋಜನೆ ಅನುಷ್ಠಾನವು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಯೋಗದಲ್ಲಿ ನಡೆಯುತ್ತಿದೆ. ಸಂಬಂಧಿತ ಅಧಿಕಾರಿಗಳು ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕು. ಯೋಜನೆ ಫಲ ಜನರಿಗೆ ಸಿಗಬೇಕು. ಇದು 2020ರಲ್ಲಿ ಪ್ರಾರಂಭವಾಗಿತ್ತು. ಇನ್ನೂ ಕೂಡ ಗ್ರಾಮೀಣ ಭಾಗದಲ್ಲಿ ಜನರಿಂದ ದೂರು ದುಮ್ಮಾನಗಳು ಬರುತ್ತಿವೆ. ಇನ್ನಾದರೂ ಅಧಿಕಾರಿಗಳು ದಕ್ಷತೆಯಿಂದ ಕೆಲಸ ಮಾಡಬೇಕು. ಇಲ್ಲವಾದಲ್ಲಿ ಜನರು ಅಧಿಕಾರಿಗಳ ಜೊತೆ ಜನಪ್ರತಿನಿಧಿಗಳನ್ನು ದೂಷಿಸಲಿದ್ದಾರೆ. ಅದಕ್ಕೆ ಅವಕಾಶವನ್ನು ಅಧಿಕಾರಿಗಳು ಕೊಡಬಾರದು ಎಂದು ಹೇಳಿದ್ದಾಗಿ ತಿಳಿಸಿದರು.

ಜೆಜೆಎಂದಲ್ಲಿ ಕಳಪೆ ಕಾಮಗಾರಿ ಆಗಿರುವ ಬಗ್ಗೆ ಮಹಾಲೇಖಪಾಲರು ಉತ್ತರ ಕನ್ನಡ ಜಿಲ್ಲೆಯನ್ನು ಹೆಸರಿಸಿದ್ದಾರೆ ಎಂದು ಕೇಳಲಾದ ಪ್ರಶ್ನೆಗೆ ಈ ಬಗ್ಗೆ ಸಂಬಂಧಿತ ಕಾರ್ಯನಿರ್ವಾಹಕ ಎಂಜಿನಿಯರರನ್ನು ಅಮಾನತು ಮಾಡಲಾಗಿದೆ. ಈಗ ಹೊಸ ಸಿಇಒ ಮತ್ತು ಎಂಜಿನಿಯರ್ ಬಂದಿದ್ದಾರೆ. ಅವರು ಮುತುವರ್ಜಿ ವಹಿಸಲು ಸೂಚಿಸಿದ್ದೇನೆ ಎಂದರು.

ಕುಡಿಯುವ ನೀರು ಯೋಜನೆ ಪ್ರಧಾನಿ ಮೋದಿಜಿಯವರ ಕನಸಿನ ಮತ್ತು ಮಹತ್ವಾಕಾಂಕ್ಷಿ ಯೋಜನೆ ಆಗಿದೆ. ಇದರ ನಿರ್ವಹಣೆಯ ಜವಾಬ್ದಾರಿ ಗ್ರಾಪಂಗಳದ್ದಾಗಿದ್ದು, ಅದನ್ನು ಪಿಡಿಒರವರು ನಿರ್ವಹಿಸಬೇಕು. ಸಾಕಷ್ಟು ಗ್ರಾಪಂಗಳಲ್ಲಿ ಇದರ ನಿರ್ವಹಣೆಗೆ ಹಾಗೂ ವಿದ್ಯುತ್ ಬಿಲ್ ತುಂಬಲು ಹಣಕಾಸಿನ ಕೊರತೆ ಇದೆ ಎನ್ನುವ ಮಾತು ಕೇಳಿಬರುತ್ತಿದೆ. ಇದೆಲ್ಲ ಬಗೆಹರಿಬೇಕಾದರೆ ಮುಖ್ಯವಾಗಿ ನಿರ್ವಹಣೆ ಮತ್ತು ಅನುಷ್ಠಾನದಲ್ಲಿ ದಕ್ಷತೆ ಬೇಕು. ಅದಕ್ಕಾಗಿ ನಾನು ಕ್ರಮ ವಹಿಸುತ್ತಿದ್ದೇನೆ ಎಂದು ಕಾಗೇರಿ ಹೇಳಿದರು.

ಬಂಗಾಳ ಬಾಂಗ್ಲಾ ಬೇಲಿ



ಪಶ್ಚಿಮ ಬಂಗಾಳವು ಬಾಂಗ್ಲಾದೇಶದೊಂದಿಗೆ 4,097 ಕಿ.ಮೀ. ಉದ್ದದ ಗಡಿಯನ್ನು ಹಂಚಿಕೊಂಡಿದೆ. ಕೇಂದ್ರ ಗೃಹ ಸಚಿವಾಲಯದ ಪ್ರಕಾರ, ಸುಮಾರು 3,240 ಕಿ.ಮೀ. ಪ್ರದೇಶಕ್ಕೆ ಈಗಾಗಲೇ ಬೇಲಿ ನಿರ್ಮಾಣವಾಗಿದ್ದು, ಸುಮಾರು 850 ಕಿ.ಮೀ. ಭಾಗ, ಇದರಲ್ಲಿ 175 ಕಿ.ಮೀ. ಕಠಿಣ ಭೂಪ್ರದೇಶವೂ ಸೇರಿದೆ, ಇನ್ನೂ ಬೇಲಿಯಿಲ್ಲದೆ ಉಳಿದಿದೆ.

ಹಿಂದಿನ ಟಿಎಂಸಿ ಸರ್ಕಾರವು ಭೂಮಿ ಹಸ್ತಾಂತರದಲ್ಲಿ ವಿಳಂಬ ಮಾಡಿದ್ದರಿಂದ ಬೇಲಿ ಕಾಮಗಾರಿ ನಿಧಾನಗೊಂಡಿತು ಎಂದು ಬಿಜೆಪಿ ಹಲವು ಬಾರಿ ಆರೋಪಿಸಿತ್ತು. ಇದಕ್ಕೆ ಪ್ರತಿಯಾಗಿ ಟಿಎಂಸಿ, ಬೇಲಿ ಕಾಮಗಾರಿಗೆ ಮೊದಲು ಸ್ಥಳೀಯರ ಭೂಮಿ ಮತ್ತು ಜೀವನೋಪಾಯದ ಸಮಸ್ಯೆಗಳನ್ನು ಪರಿಹರಿಸಬೇಕಾಗಿತ್ತು ಎಂದು ಹೇಳಿತ್ತು. ಆದರೆ, ಹಿಂದಿನ ಟಿಎಂಸಿ ಸರ್ಕಾರದ ಅವಧಿಯಲ್ಲಿ 127 ಕಿ.ಮೀ. ಉದ್ದದ ಪ್ರಸ್ತಾವಿತ ಪ್ರದೇಶದಲ್ಲಿ ಕೇವಲ 8 ಕಿ.ಮೀ. ಮಾತ್ರ ಮುಚ್ಚಲಾಗಿತ್ತು ಎಂದು ಅಧಿಕಾರಿ ಆರೋಪಿಸಿದರು. ಟಿಎಂಸಿ ಆಡಳಿತದ ಅವಧಿಯಲ್ಲಿಯೂ, ಅಂತಾರಾಷ್ಟ್ರೀಯ ಗಡಿ ನಿರ್ವಹಣೆ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತಿದ್ದುದರಿಂದ ಗಡಿ ಭದ್ರತಾ ಕಾರ್ಯಾಚರಣೆಗಳು ಬಿಎಸ್‌ಎಫ್ ಅಧೀನದಲ್ಲೇ ಇವೆ. ಆದರೆ ಬೇಲಿ ಯೋಜನೆಗಳಿಗೆ ಸಂಬಂಧಿಸಿದ ಭೂಸ್ವಾಧೀನ, ಸ್ಥಳೀಯ ಅನುಮತಿಗಳು ಮತ್ತು ಆಡಳಿತಾತ್ಮಕ ಸಮನ್ವಯವನ್ನು ರಾಜ್ಯ ಸರ್ಕಾರ ನಿಯಂತ್ರಿಸುತ್ತಿತ್ತು.

2021ರಲ್ಲಿ ಕೇಂದ್ರ ಸರ್ಕಾರವು ಪಶ್ಚಿಮ ಬಂಗಾಳದಲ್ಲಿ ಬಿಎಸ್‌ಎಫ್ ಅಧಿಕಾರ ವ್ಯಾಪ್ತಿಯನ್ನು ಗಡಿಯಿಂದ 15 ಕಿ.ಮೀ.ನಿಂದ 50 ಕಿ.ಮೀ.ವರೆಗೆ ವಿಸ್ತರಿಸಿದ ಬಳಿಕ ಈ ವಿಷಯ ರಾಜಕೀಯವಾಗಿ ವಾಕ್ಸಮರಕ್ಕೆ ಕಾರಣವಾಗಿತ್ತು. ಆಗಿನ ಟಿಎಂಸಿ ಸರ್ಕಾರ ಇದನ್ನು ಒಕ್ಕೂಟ ವ್ಯವಸ್ಥೆಯ ಅಧಿಕಾರಗಳ ಮೇಲೆ ದಾಳಿ ಎಂದು ತೀವ್ರವಾಗಿ ವಿರೋಧಿಸಿತ್ತು.

ಮೊದಲ ಸಚಿವ ಸಂಪುಟ ಸಭೆಯಲ್ಲಿ ದಿಲೀಪ್ ಘೋಷ್, ಅಗ್ನಿಮಿತ್ರ ಪೌಲ್ ಹಾಗೂ ನಿಶಿತ್ ಪ್ರಮಾಣಿಕ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಕೇಂದ್ರ ಯೋಜನೆಗಳ ಜಾರಿಗೆ ಅನುಮೋದನೆ

ರಾಜ್ಯದಲ್ಲಿ ಭಾರತೀಯ ನ್ಯಾಯ ಸಂಹಿತೆಯನ್ನು(ಬಿಎನ್‌ಎಸ್) ಜಾರಿಗೆ ತರಲಾಗುತ್ತದೆ. ಇದು ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಿಗೆ ಕೇಂದ್ರ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ನೀಡುತ್ತದೆ ಮತ್ತು ಜನಗಣತಿ ಪ್ರಕ್ರಿಯೆಯನ್ನು ಆರಂಭಿಸುತ್ತದೆ ಎಂದು ಹೇಳಿದರು. ಹಿಂದಿನ ಸರ್ಕಾರ ಸಂಬಂಧಿತ ಕಡತಗಳನ್ನು ವಿಳಂಬಗೊಳಿಸಿತ್ತು ಎಂದು ಸುವೇಂದು ಅಧಿಕಾರಿ ಆರೋಪಿಸಿದರು. ಹಿಂದಿನ ಸರ್ಕಾರವು ಗೃಹ ಸಚಿವಾಲಯದ ಜೂನ್ 2025ರ ಜನಗಣತಿ ಸುತ್ತೋಲೆಯನ್ನು ನಿರ್ಲಕ್ಷಿಸಿತ್ತು. ಬಂಗಾಳ ಸಚಿವ ಸಂಪುಟವು ಅದನ್ನು ತಕ್ಷಣ ಜಾರಿಗೆ ತರುವ ಅನುಮೋದನೆ ನೀಡಿದೆ ಎಂದು ಅವರು ಹೇಳಿದರು.

ಎಸ್‌ಐಆರ್: ಹೊಸ ಅರ್ಜಿ ಸಲ್ಲಿಕೆಗೆ ಸುಪ್ರೀಂ ಅಸ್ತು

ತೃಣಮೂಲ ಕಾಂಗ್ರೆಸ್ ಸಂಸದ ಕಲ್ಯಾಣ್ ಬ್ಯಾನರ್ಜಿ, ಒಂದು ಕ್ಷೇತ್ರದಲ್ಲಿ ಕೇವಲ 862 ಮತಗಳಿಂದ ಸೋಲಾಗಿದ್ದರೆ, ಅದೇ ಕ್ಷೇತ್ರದಲ್ಲಿ 5,550 ಮತಗಳನ್ನು ಮತಪಟ್ಟಿಯಿಂದ ತೆಗೆದುಹಾಕಲಾಗಿತ್ತು ಎಂದು ವಾದಿಸಿದರು. ಚುನಾವಣಾ ಆಯೋಗವು ಇದಕ್ಕೆ ವಿರೋಧ ವ್ಯಕ್ತಪಡಿಸಿ, ಪರಿಹಾರಕ್ಕೆ ಚುನಾವಣಾ ಅರ್ಜಿಯೇ ಸರಿಯಾದ ಮಾರ್ಗ ಎಂದು ತಿಳಿಸಿತು. ಇತ್ತೀಚಿನ ಚುನಾವಣೆಯಲ್ಲಿ ಬಿಜೆಪಿ 207 ಸ್ಥಾನಗಳೊಂದಿಗೆ ಭರ್ಜರಿ ಜಯ ಸಾಧಿಸಿದರೆ, ಟಿಎಂಸಿ 80 ಸ್ಥಾನಗಳನ್ನು ಗೆದ್ದಿದೆ.

ಸಚಿವ ಡಿ.ಸುಧಾಕರ್ ಅಂತ್ಯಕ್ರಿಯೆ



ಈ ವೇಳೆ ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್, ಗೃಹ ಸಚಿವ ಜಿ. ಪರಮೇಶ್ವರ್, ಸಚಿವರಾದ ಎಚ್.ಕೆ. ಪಾಟೀಲ್, ಸತೀಶ್ ಜಾರಕಿಹೊಳಿ, ಕೆ.ಜೆ.ಜಾರ್ಜ್, ಕೆ.ಎಚ್.ಮುನಿಯಪ್ಪ, ಶರಣ ಪ್ರಕಾಶ್ ಪಾಟೀಲ್, ಎಂ.ಸಿ.ಸುಧಾಕರ್, ಲಕ್ಷ್ಮೀ ಹೆಬ್ಬಾಳ್ಕರ್, ಈಶ್ವರ ಖಂಡ್ರೆ, ಭೈರತಿ ಸುರೇಶ್ ಅಲ್ಲದೆ ಶಾಸಕರು, ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

ಇಂಜಿನಿಯರ್ ಆತ್ಮಹತ್ಯೆ

ತುಮಕೂರು: ಲೋಕೋಪ ಯೋಗಿ ಇಲಾಖೆಯ ಸಹಾಯಕ ಇಂಜಿನಿಯರ್ ಮಂಜು ಪ್ರಸಾದ್ (33) ತಾಲೂಕಿನ ದೇವರಾಯನದುರ್ಗದ ಬೆಟ್ಟದಿಂದ ಜಿಗಿದು ಆತ್ಮಹತ್ಯೆಗೆ ಶರಣಾಗಿರುವ ಘಟನೆ ದೇವರಾಯನದುರ್ಗದಲ್ಲಿ ನಡೆದಿದೆ. ಮಂಜುಪ್ರಸಾದ್ ಪಾವಗಡದ ಪಿಡಬ್ಲ್ಯೂ ಡಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ನಗರದ ಸತ್ಯಮಂಗಲದಲ್ಲಿ ವಾಸವಾಗಿದ್ದರು ಎನ್ನಲಾಗಿದೆ. ಸೋಮವಾರ ಬೆಳಗ್ಗೆ ಕೆಲಸಕ್ಕೆ ಹೋಗುವುದಾಗಿ ಹೇಳಿ ಹೊರಟಿದ್ದ ಮಂಜು ಪ್ರಸಾದ್ ಕೊರಟಗೆರೆಯಲ್ಲಿರುವ ಸಂಬಂಧಿಗೆ ಮೊಬೈಲ್, ಮನೆ ಕೀ ಕೊಟ್ಟು ಹೋಗಿದ್ದರು. ಮೀಟಿಂಗ್ ಇದೆ ಎಂದು ದೇವರಾಯನದುರ್ಗಕ್ಕೆ ಬಂದಿದ್ದರು. ಹೀಗೆ ಬಂದವರೇ ದೇವರಾಯನದುರ್ಗದ ಬೆಟ್ಟದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕುಟುಂಬದವರು ಅನುಮಾನಗೊಂಡು ಪರಿಶೀಲಿಸಿದಾಗ ಮಂಜು ಪ್ರಸಾದ್ ಆತ್ಮಹತ್ಯೆ ಮಾಡಿಕೊಂಡಿರುವುದು ತಿಳಿದುಬಂದಿದೆ. ಈ ಸಂಬಂಧ ಕ್ಯಾತ್ಸಂದ್ರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಮೆಕಾಲೆ ಶಿಕ್ಷಣ ಪದ್ಧತಿಯಿಂದಾಗಿ ನಮ್ಮ ದೇಶದ ಸಂಸ್ಕೃತಿ, ಆಚಾರ ವಿಚಾರಗಳು ಅವಗಣಿಸಲ್ಪಟ್ಟಿವೆ
–ಶ್ರೀ ವಿವಿಕ್ತಾನಂದ ಸರಸ್ವತಿ ಸ್ವಾಮೀಜಿ

- ಆದರೆ ಅದರಿಂದಾಗಿ ಅಮ್ಮ ಮಮ್ಮಿಯಾಗಿ, ಅಪ್ಪ ಡ್ಯಾಡಿಯಾಗಿ , ಸಂಬಂಧಿಕರೆಲ್ಲ ಆಂಟಿ ಅಂಕಲ್ ಆಗಿ,ಅನ್ನ ರೈಸ್ ಆಗಿ, ಹುಟ್ಟುಹಬ್ಬ ಬರ್ತ್ ಡೇ ಆಗಿ,ಮದುವೆ ವೆಡ್ಡಿಂಗ್ ಆಗಿ,ಹಾಡು ಸಾಂಗ್ ಆಗಿ, ಕೊನೆಗೆ ಭಾರತವೇ ಇಂಡಿಯಾ ಆಗಿ ಭಾರೀ ಬದಲಾವಣೆಯಾಗಿ ಹೆಚ್ಚಿನವರ ಪ್ರೆಸ್ಟೀಜ್ ಆಕಾಶದೆತ್ತರಕ್ಕೆ ಹಾರಾಡಿ ಸಂತಸದಿಂದ ತೇಲಾಡುವಂತಾಗಿದೆ!

ದಿನ ಭವಿಷ್ಯ

ಮೇಷ
ಈ ದಿನ ತಾಳ್ಮೆ ಮುಖ್ಯ. ಮನಸ್ಸಿನ ಗೊಂದಲ ನಿಮ್ಮ ದಾರಿ ತಪ್ಪಿಸಬಹುದು. ಕೆಲಸದಲ್ಲಿ ಜಡತ್ವ, ಉತ್ಸಾಹದಿಂದ ಕಾರ್ಯ ನಿರ್ವಹಿಸಿ.

ವೃಷಭ
ನಿಮ್ಮ ದಾರಿಗೆ ಅಡ್ಡ ಬರುವ ವಿಘ್ನಗಳನ್ನು ನಿವಾರಿಸಿಕೊಳ್ಳಿ. ಅವಸರ ಬೇಡ. ಟೀಕೆಗಳನ್ನು ಕಡೆಗಣಿಸಿರಿ. ಬಂಧು ಜತೆ ವಿರಸ ತಪ್ಪಿಸಿರಿ.

ಮಿಥುನ
ನಿಮ್ಮ ಪ್ರಗತಿಗೆ ಪೂರಕ ವಾತಾವರಣ. ಅದನ್ನು ಸದುಪಯೋಗ ಮಾಡಿಕೊಳ್ಳಿ. ಬಂಧುತ್ವ ವೃದ್ಧಿ. ವಿಘ್ನ ನಿವಾರಣೆ. ಆರೋಗ್ಯ ಸುಸ್ಥಿರ.

ಕಟಕ
ಕೆಲಸದ ಒತ್ತಡ ಹೆಚ್ಚು. ಸಹೋದ್ಯೋಗಿ ಜತೆ ಸಮಸ್ಯೆ. ವಾಗ್ವಾದದಲ್ಲಿ ತೊಡಗಬೇಡಿ. ಹಣದ ವಿಚಾರದಲ್ಲಿ ರಿಸ್ಕ್ ತೆಗೆದುಕೊಳ್ಳದಿರಿ.

ಸಿಂಹ
ಆತ್ಮವಿಶ್ವಾಸದ ಕೊರತೆ. ಕೆಲಸದಲ್ಲಿ ನಿರಾಸಕ್ತಿ. ಪ್ರೀತಿಯಲ್ಲೂ ಸಮಸ್ಯೆ. ಪ್ರಮುಖ ನಿರ್ಧಾರ ತಾಳದಿರಿ. ಕಾದು ನೋಡುವ ನೀತಿ ಒಳಿತು.

ಕನ್ಯಾ
ಸಂಗಾತಿ ಜತೆ ಸಂಬಂಧ ಕೆಡದಂತೆ ನೋಡಿಕೊಳ್ಳಿ. ಖರ್ಚು ಹೆಚ್ಚಳ ಚಿಂತೆಗೆ ಕಾರಣ. ಆತ್ಮೀಯರ ಟೀಕೆ ಮನಸ್ಸಿಗೆ ಘಾಸಿ ಮಾಡಲಿದೆ.

ತುಲಾ
ಏಕಾಗ್ರಚಿತ್ತತೆ ನಿಮ್ಮ ಗುರಿ ಸಾಧಿಸಲು ನೆರವು ನೀಡಲಿದೆ. ನಿಮ್ಮ ಪ್ರತಿಭೆ ಅನಾವರಣಕ್ಕೆ ಅವಕಾಶ. ವ್ಯವಹಾರದ ಸಮಸ್ಯೆ ಪರಿಹಾರ ಕಾಣಲಿದೆ.

ವೃಶ್ಚಿಕ
ಕೆಲಸದ ಒತ್ತಡದಿಂದ ಮುಕ್ತಿ. ಮನೆಯಲ್ಲೂ ನಿರಾಳತೆ. ಒಟ್ಟಿನಲ್ಲಿ ನಿಶ್ಚಿಂತ ದಿನ. ನಿಮ್ಮ ಹವ್ಯಾಸದಲ್ಲಿ ತೊಡಗಲು ಸಕಾಲ. ಧನಲಾಭದ ಸಂಕೇತ.

ಧನು
ಎಲ್ಲರ ಜತೆ ಸೌಹಾರ್ದದಿಂದ ವರ್ತಿಸುವ ನಿಮ್ಮ ಸ್ವಭಾವ ಮೆಚ್ಚುಗೆ ಗಳಿಸುವುದು. ಹಣ ಉಳಿತಾಯದ ಯೋಜನೆ ಫಲಿಸಲಿದೆ.

ಮಕರ
ವೃತ್ತಿಯಲ್ಲಿ ಸಾಫಲ್ಯ. ಖಾಸಗಿ ಬದುಕಲ್ಲೂ ನೀವು ಬಯಸಿದ ಬೆಳವಣಿಗೆ. ಆರ್ಥಿಕ ಒತ್ತಡ ನಿವಾರಣೆ. ಗಳಿಕೆಯ ಹಾದಿ ಸುಗಮ. ಬಂಧುಮಿತ್ರರ ನೆರವು.

ಕುಂಭ
ನಿಮ್ಮ ಸಂವಹನ ಕಲೆ ಎಲ್ಲರ ಜತೆ ವ್ಯವಹರಿಸಲು ನೆರವಿಗೆ ಬರಲಿದೆ. ಅಡ್ಡಿಗಳನ್ನು ಸುಲಭವಾಗಿ ನಿವಾರಿಸಿಕೊಳ್ಳುವಿರಿ. ಕೌಟುಂಬಿಕ ಸೌಹಾರ್ದ.

ಮೀನ
ನಿಮ್ಮ ಮನಸ್ಥಿತಿ ಉತ್ತೇಜಿಸುವ ಬೆಳವಣಿಗೆ. ಬಯಸಿದ ಕಾರ್ಯ ಸುಗಮವಾಗಿ ಸಾಗಲಿದೆ. ಆಪ್ತರ ಜತೆಗಿನ ವಿರಸ ಅಂತ್ಯ. ಸೌಹಾರ್ದತೆ.

ರಾಹುಕಾಲ: 3.00 - 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 2,8,1,5

ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ದೇವೇಗೌಡ ಅಸಮಾಧಾನ

ಪ್ರಧಾನಿ ಟೀಕೆ ಸಲ್ಲದು

ಬೆಂಗಳೂರು: ರಾಜ್ಯ ಸರ್ಕಾರದ ವಿರುದ್ಧ ಭಾನುವಾರ ವಾಗ್ದಾಳಿ ನಡೆಸಿದ್ದ ಪ್ರಧಾನಿ ನರೇಂದ್ರ ಮೋದಿಯವರ ಹೇಳಿಕೆಯನ್ನು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸಮರ್ಥಿಸಿಕೊಂಡಿದ್ದಾರೆ.

ಸೋಮವಾರ ಕಬ್ಬನ್ ಪಾರ್ಕ್‌ನಲ್ಲಿ ನಡೆಯುತ್ತಿರುವ ಮಾವು ಮೇಳಕ್ಕೆ ಭೇಟಿ ನೀಡಿ ಮಾಧ್ಯಮದವರೊಂದಿಗೆ ಮಾತನಾಡಿದರು. ಪ್ರಧಾನಿ ಮೋದಿಯವರು ಎಚ್‌ಎಎಲ್ ಏರ್‌ಪೋರ್ಟ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಜ್ಯ ಸರ್ಕಾರದ ವಿರುದ್ಧ ಕೆಲವು ಆರೋಪ ಮಾಡಿದ್ದು, ಅದು ಸರಿಯಾಗಿದೆ. ಆದರೆ, ರಾಜ್ಯ ಸರ್ಕಾರದ ಮಂತ್ರಿಯೊಬ್ಬರು ಮೋದಿಯವರನ್ನು ಟೀಕಿಸುವ ಭರದಲ್ಲಿ ಕಠಿಣ ಶಬ್ದ ಉಪಯೋಗಿಸಿದ್ದಾರೆ, ಅದು ಸರಿಯಲ್ಲ. ನಾನು ಮಂತ್ರಿ, ಪ್ರಧಾನಿಯಾಗಿ ಸಾಕಷ್ಟು ಅನುಭವ ಇದೆ. ನಾನು ಯಾರ ಬಗ್ಗೆ ಟೀಕೆ ಮಾಡಲು ಹೋಗಲ್ಲ. ಟೀಕೆ ಮಾಡುವಾಗ ಬಳಸುವ ಭಾಷೆ ಸರಿಯಾಗಿರಬೇಕು ಎಂದು ಪರೋಕ್ಷವಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಮಹಿಳಾ ಮೀಸಲಾತಿ ಬಿಲ್ ಮೊದಲು ತಂದಿದ್ದು ನಾನೇ: ಎಚ್‌ಡಿಡಿ: ನಾನು ಅಧಿಕಾರದಲ್ಲಿದ್ದಾಗ ಸಾಮಾಜಿಕ ನ್ಯಾಯ ಕೊಡುವ ಬಗ್ಗೆ ಯಾರಿಂದಲೂ ಹೇಳಿಸಿಕೊಂಡಿಲ್ಲ, ನಾನು ಹಿಂದುಳಿದ ಎಲ್ಲ ಜಾತಿಗಾಗಿ ಶಕ್ತಿ ಮೀರಿ ಪ್ರಯತ್ನಿಸಿದ್ದೇನೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದವರಿಗೆ ಅನುಕೂಲ ಮಾಡಿದ್ದೇನೆ. ಕ್ರಿಶ್ಚಿಯನ್, ಮುಸ್ಲಿಂ ಸಮುದಾಯಕ್ಕೂ ನ್ಯಾಯ ನೀಡಿದ್ದೇನೆ. ಮಹಿಳೆಯರಿಗೆ ಮೀಸಲಾತಿ ಯಾವ ರಾಜ್ಯ ಕೊಡದೇ ಇದ್ದರೂ, ಮೊದಲ ಬಾರಿ ಕರ್ನಾಟಕದಲ್ಲಿ ಸರ್ಕಾರಿ ಹುದ್ದೆಯಲ್ಲಿ ಮಹಿಳೆ ಮೀಸಲಾತಿ ಕೊಟ್ಟಿದ್ದು ನಾನು ಎಂದು ಎಚ್.ಡಿ.ದೇವೇಗೌಡ ಹೇಳಿದರು.





> **ವಾರದಲ್ಲಿ 2 ದಿನ ಆರೋಗ್ಯ ತಪಾಸಣೆಗೆ ಮೀಸಲಿಟ್ಟಿದ್ದೇನೆ. ಐದು ದಿನ ಕೆಲಸ ಮಾಡುತ್ತೇನೆ. ನಾನು ಹಾಸನಕ್ಕೆ ಹೋಗುತ್ತೇನೆ. ಅಲ್ಲೂ ಸುದ್ದಿಗೋಷ್ಠಿ ಮಾಡಿ ಮಾತಾಡುತ್ತೇನೆ. ಶಕ್ತಿ ಇರುವವರೆಗೆ ನಾಡಿನ ಜನರ ಆಶೀರ್ವಾದದಿಂದ ಜನತೆಗೆ ಉಪಯೋಗ ಮಾಡುತ್ತೇನೆ.**
> ■ **ಎಚ್.ಡಿ.ದೇವೇಗೌಡ, ಮಾಜಿ ಪ್ರಧಾನಿ**

ಮಹಿಳೆಯರಿಗೆ ಮೀಸಲಾತಿ ನೀಡುವ ವಿಧೇಯಕ ವಿರೋಧ ಪಕ್ಷಗಳ ವಿರೋಧದಿಂದ ಸೋಲುಂಟಾಯಿತು. ಆದರೆ, ಈಗ ವಿರೋದ ಪಕ್ಷಗಳು ಮೀಸಲಾತಿ ಬಿಲ್ ತನ್ನಿ ಎನ್ನುತ್ತಿದ್ದಾರೆ. ಬಹುಶಃ ಮತ್ತೆ ಮಹಿಳಾ ಮೀಸಲಾತಿ ಬಿಲ್ ಅನ್ನು ಪ್ರಧಾನಿ ಮೋದಿ, ಗೃಹ ಸಚಿವರಾದ ಅಮಿತ್ ಷಾ ಅವರು ಚರ್ಚೆಗೆ ತಂದು ಪಾಸ್ ಮಾಡುತ್ತಾರೆ ಎನ್ನುವ ನಂಬಿಕೆಯಿದೆ ಎಂದರು. ಪ್ರಧಾನಿ ಮೋದಿ ಅವರ ಕಾರ್ಯಕ್ರಮದಿಂದ ದೇಶದ ಜನಕ್ಕೆ ಒಳ್ಳೆಯದಾಗಿದೆ. ಮೋದಿ ಅವರಿಗೆ ಸರಿಸಮರಾದ ನಾಯಕರು ಯಾರು ಇಲ್ಲ ಎಂದು ದೇವೇಗೌಡ ತಿಳಿಸಿದರು.

6,400 ಕೆರೆ ಒತ್ತುವರಿ ತೆರವು

ಸಂಬಂಧಪಟ್ಟ ಅಧಿಕಾರಿಗಳಿಂದ ವರದಿಗಳನ್ನು ಪಡೆಯುವುದು ಹಾಗೂ ವೈಯಕ್ತಿಕ ವಿಚಾರಣೆಗೆ ಹಾಜರುಪಡಿಸುವ ಮೂಲಕ ಇಂತಹ ಪ್ರಕರಣಗಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗಿದೆ. ಇದರ ಪರಿಣಾಮವಾಗಿ ಅನೇಕ ಕೆರೆಗಳು ಪುನಶ್ಚೇತನಗೊಂಡು ಅಭಿವೃದ್ಧಿಗೊಂಡಿವೆ.

ಕೆರೆಗಳ ಅಭಿವೃದ್ಧಿ: ದೂರುಗಳು ಮತ್ತು ವರದಿಗಳ ಆಧಾರದ ಮೇಲೆ ಲೋಕಾಯುಕ್ತವು ತನಿಖೆ ಕೈಗೊಂಡ ಪರಿಣಾಮದಿಂದ ರಾಜ್ಯಾದ್ಯಂತ ಕೆರೆಗಳ ಒತ್ತುವರಿ ತೆರವು ಹಾಗೂ ಪುನಶ್ಚೇತನ ಜತೆಗೆ ಅಭಿವೃದ್ಧಿ ಕಾರ್ಯಗಳು ನಡೆದಿವೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಎಲ್ಲಾ ಕೆರೆಗಳು ಅತಿಕ್ರಮಣವಾಗಿ ಅನೇಕ ಕೆರೆಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿದ್ದವು. ಅತಿಕ್ರಮಣ ತೆರವುಗೊಳಿಸಿ ಅಭಿವೃದ್ಧಿ ಕಾಮಗಾರಿ ಕೈಗೊಂಡ ನಂತರ ನೀರಿನ ಸಂಗ್ರಹ ಸಾಮರ್ಥ್ಯವು ಗಣನೀಯವಾಗಿ ಹೆಚ್ಚಿದ್ದು, ಅಂತರ್ಜಲ ಮಟ್ಟವೂ ಏರಿಕೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ 101 ಕೆರೆಗಳ ಅತಿಕ್ರಮಣದ ವಿರುದ್ಧ ಕ್ರಮ ಕೈಗೊಳ್ಳಲಾಗಿದ್ದು, ಏ.2ರವರೆಗೆ 41 ಕೆರೆಗಳ ಅತಿಕ್ರಮಣ ತೆರವುಗೊಳಿಸಲಾಗಿದ್ದು, ಉಳಿದ 60 ಕೆರೆಗಳ ಅತಿಕ್ರಮಣ ತೆರವು ಕಾರ್ಯ ಪ್ರಗತಿಯಲ್ಲಿದೆ. ಕೋಲಾರ ಜಿಲ್ಲೆಯಲ್ಲಿ 3,232 ಕೆರೆಗಳನ್ನು ಸಮೀಕ್ಷೆ ನಡೆಸಲಾಗಿದ್ದು, ಅನೇಕ ಕೆರೆಗಳ ಅತಿಕ್ರಮಣಗಳನ್ನು ತೆರವುಗೊಳಿಸಿ ಪುನಶ್ಚೇತನ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಇದೇ ರೀತಿ ರಾಜ್ಯಾದ್ಯಂತ ಕೆರೆಗಳ ಒತ್ತುವರಿ ತೆರವು ಜತೆಗೆ ಪುನಶ್ಚೇತನ ಕಾರ್ಯ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ 34,099 ಕೆರೆಗಳ ಸಮೀಕ್ಷೆ

ಇದುವರೆಗೂ 47 ಕೆರೆಗಳ ಪುನಶ್ಚೇತನಗೊಂಡಿವೆ. ಲೋಕಾಯುಕ್ತವು ರಾಜ್ಯಾದ್ಯಂತ 34,099 ಕೆರೆಗಳ ಸಮೀಕ್ಷೆ ನಡೆಸಿದ್ದು, 16,229 ಅತಿಕ್ರಮಣ ಕೆರೆಗಳ ಪತ್ತೆಯಾಗಿವೆ. ಇನ್ನೂ 9,825 ಕೆರೆಗಳ ಅತಿಕ್ರಮಣ ತೆರವು ಬಾಕಿ ಇದೆ.

ರಾಜ್ಯದಲ್ಲಿ ಕೆರೆಗಳ ತೆರವು ಕಾರ್ಯಾಚರಣೆ ವಿವರ

- ರಾಜ್ಯದಲ್ಲಿರುವ ಒಟ್ಟು ಕೆರೆಗಳು 40,630 ಕ್ಕೂ ಅಧಿಕ
- ದಾಖಲಾದ ಸ್ವಯಂಪ್ರೇರಿತ ಪ್ರಕರಣಗಳು 70
- ಸಮೀಕ್ಷೆ ನಡೆಸಲಾದ ಕೆರೆಗಳ ಸಂಖ್ಯೆ 34,029
- ಸಮೀಕ್ಷೆಗೆ ಬಾಕಿ ಇರುವ ಕೆರೆಗಳ ಸಂಖ್ಯೆ 376
- ಒತ್ತುವರಿ ಪತ್ತೆಯಾದ ಕೆರೆಗಳ ಸಂಖ್ಯೆ 16,229
- ಒತ್ತುವರಿ ತೆರವುಗೊಳಿಸಿದ ಕೆರೆಗಳ ಸಂಖ್ಯೆ 6,400
- ಒತ್ತುವರಿ ತೆರವು ಬಾಕಿ ಇರುವ ಕೆರೆಗಳು 9,825

ರಾಜ್ಯ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಶೇ.1.5 ಹೆಚ್ಚಳ

ಯಾರಿಗೆಲ್ಲ ಅನ್ವಯವಾಗಲಿದೆ?: ಯುಜಿಸಿ, ಎಐಸಿಟಿಇ, ಐಸಿಎಆರ್ ವೇತನ ಶ್ರೇಣಿಗಳ ನಿವೃತ್ತ ನೌಕರರಿಗೆ ಈ ಆದೇಶ ಅನ್ವಯವಾಗಲಿದೆ. ಸರ್ಕಾರದ ಮತ್ತು ಜಿಲ್ಲಾ ಪಂಚಾಯತ್‌ಗಳ ಪೂರ್ಣಾವಧಿ ನೌಕರರಿಗೆ, ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ವರ್ಕ್‌ಚಾರ್ಜ್ ನೌಕರರಿಗೆ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ನೌಕರರಿಗೂ ಅನ್ವಯಿಸಲಿದೆ. ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು, ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಪಡೆಯುತ್ತಿರುವ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು, ಕುಟುಂಬ ನಿವೃತ್ತಿ ವೇತನದಾರರಿಗೂ ಇದು ಅನ್ವಯವಾಗಲಿದೆ. ಯುಜಿಸಿ, ಎಐಸಿಟಿಇ, ಐಸಿಎಆರ್ ವೇತನ ಶ್ರೇಣಿಗಳ ನೌಕರರಿಗೆ ಮತ್ತು ಎನ್‌ಜೆಪಿಸಿ ವೇತನ ಶ್ರೇಣಿಗಳ ನ್ಯಾಯಾಂಗ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆದೇಶ ಹೊರಡಿಸಲಾಗುತ್ತದೆ. ತುಟ್ಟಿಭತ್ಯೆಯನ್ನು ಸಂಭಾವನೆಯ ವಿಶಿಷ್ಟ ಅಂಶವಾಗಿ ತೋರಿಸಬೇಕು. ಯಾವುದೇ ಉದ್ದೇಶಕ್ಕಾಗಿ ಇದನ್ನು ವೇತನ ಎಂದು ಪರಿಗಣಿಸಲಾಗುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವಿಬಿ ಜಿ ರಾಮ್ ಜಿ ಜುಲೈ 1ರಿಂದ ಜಾರಿ

ವರ್ಗಾವಣೆ ಪ್ರಕ್ರಿಯೆ: ಜೂನ್ 30ರವರೆಗೆ ನರೇಗಾದಲ್ಲಿ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳು ಯಾವುದೇ ಅಡೆತಡೆಯಿಲ್ಲದೆ ಹೊಸ ಚೌಕಟ್ಟಿಗೆ ವರ್ಗಾವಣೆಯಾಗಲಿವೆ. ಪ್ರಸ್ತುತ ಚಾಲ್ತಿಯಲ್ಲಿರುವ ಇ-ಕೆವೈಸಿ ಪರಿಶೀಲಿಸಿದ ಜಾಬ್ ಕಾರ್ಡ್‌ಗಳು ಹೊಸ ಗ್ರಾಮೀಣ ರೋಜ್‌ಗಾರ್ ಗ್ಯಾರಂಟಿ ಕಾರ್ಡ್ ವಿತರಿಸುವವರೆಗೆ ಮಾನ್ಯವಾಗಿರುತ್ತವೆ. ಕಾರ್ಡ್ ಇಲ್ಲದವರು ಗ್ರಾಮ ಪಂಚಾಯತ್ ಮಟ್ಟದಲ್ಲಿ ನೋಂದಾಯಿಸಿಕೊಳ್ಳಬಹುದು ಮತ್ತು ಇ-ಕೆವೈಸಿ ಬಾಕಿ ಇರುವ ಕಾರಣಕ್ಕೆ ಯಾರಿಗೂ ಕೆಲಸ ನಿರಾಕರಿಸುವಂತಿಲ್ಲ.

ವೇತನ ಮತ್ತು ಅನುದಾನ: ಕೂಲಿಯನ್ನು ನೇರ ನಗದು ವರ್ಗಾವಣೆ ಮೂಲಕ ಕಾರ್ಮಿಕರ ಬ್ಯಾಂಕ್ ಅಥವಾ ಅಂಚೆ ಕಚೇರಿ ಖಾತೆಗಳಿಗೆ ಜಮಾ ಮಾಡಲಾಗುತ್ತದೆ. ಮಾಸ್ಟರ್ ರೋಲ್ ಮುಕ್ತಾಯಗೊಂಡ 15 ದಿನಗಳೊಳಗೆ ವೇತನ ಪಾವತಿಯಾಗಬೇಕು. ತಪ್ಪಿದಲ್ಲಿ ಕಾರ್ಮಿಕರು ವಿಳಂಬ ಪರಿಹಾರಕ್ಕೆ ಅರ್ಹರಾಗಿರುತ್ತಾರೆ. ನಿಗದಿತ ಅವಧಿಯಲ್ಲಿ ಕೆಲಸ ನೀಡದಿದ್ದಲ್ಲಿ ನಿರುದ್ಯೋಗ ಭತ್ಯೆ ನೀಡುವ ಅವಕಾಶವೂ ಇಲ್ಲಿದೆ.

2026-27ರ ಹಣಕಾಸು ವರ್ಷಕ್ಕೆ ಈ ಯೋಜನೆಗಾಗಿ ಕೇಂದ್ರ ಸರ್ಕಾರ 95,692.31 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ. ಇದು ಗ್ರಾಮೀಣ ಉದ್ಯೋಗ ಕಾರ್ಯಕ್ರಮವೊಂದಕ್ಕೆ ನೀಡಲಾದ ಗರಿಷ್ಠ ಅನುದಾನವಾಗಿದೆ. ರಾಜ್ಯಗಳ ಪಾಲು ಸೇರಿದರೆ ಈ ಮೊತ್ತ 1.51 ಲಕ್ಷ ಕೋಟಿ ರೂಪಾಯಿ ದಾಟುವ ನಿರೀಕ್ಷೆಯಿದೆ.

ಪ್ರಧಾನಿ ಮೋದಿ ಭಾಷಣಕ್ಕೆ ಸಿಎಂ ಸಿದ್ದರಾಮಯ್ಯ ಕಿಡಿ



ದೇಶದ ಜಿಡಿಪಿಯಲ್ಲಿ ಕರ್ನಾಟಕದ ಪಾಲು ಶೇ.9.19 ಆಗಿದೆ. ಜಿಎಸ್ಟಿ ಸಂಗ್ರಹದಲ್ಲಿ ಮಹಾರಾಷ್ಟ್ರದ ನಂತರ ಕರ್ನಾಟಕದ್ದೇ ಅತ್ಯಧಿಕ ಪಾಲು. ಪ್ರಧಾನಿಗಳೇ, ಕರ್ನಾಟಕವು ಅಭಿವೃದ್ಧಿಯ ಪಥದಲ್ಲಿ ವೇಗದಲ್ಲಿ ಸಾಗುತ್ತಿರುವುದಕ್ಕೆ ಇನ್ನೇನು ಪುರಾವೆ ಬೇಕು? ಮುಂದಿನ ಬಾರಿ ನಮ್ಮ ಸರ್ಕಾರದ ವಿರುದ್ಧ ಆರೋಪ ಮಾಡುವಾಗ ಸ್ವಲ್ಪ ಪೂರ್ವತಯಾರಿ ಮಾಡಿಕೊಂಡು ಬನ್ನಿ. ದೇಶದ ಪ್ರಧಾನಿಯವರ ಬಾಯಲ್ಲಿ ಸುಳ್ಳು ಹೇಳಿಕೆಗಳು ಶೋಭೆಯಲ್ಲ ಎಂದು ಗುಡುಗಿದ್ದಾರೆ.

ಇರಾನ್ ವಿರುದ್ಧ ಇಸ್ರೇಲ್ ಮತ್ತು ಅಮೆರಿಕ ಜಂಟಿಯಾಗಿ ನಡೆಸುತ್ತಿರುವ ಯುದ್ಧದ ನಡುವೆ ಭಾರತ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದೆ. ಇಂತಹ ಸಂದರ್ಭದಲ್ಲಿ ನ್ಯಾಯ ಮತ್ತು ನೀತಿಯ ಪರವಾಗಿ ಗಟ್ಟಿಯಾದ ನಿಲುವು ತೆಗೆದುಕೊಂಡಿದ್ದರೆ ಭಾರತ ಇಂದಿನ ದುಸ್ಥಿತಿ ಎದುರಿಸುತ್ತಿರಲಿಲ್ಲ. ಮೋದಿಯವರೇ, ಈ ವೈಫಲ್ಯಕ್ಕೆ ಯಾರನ್ನು ದೂರುತ್ತೀರಿ? ಜವಾಹರಲಾಲ್ ನೆಹರೂ ಅವರನ್ನೇ? ಕಾಂಗ್ರೆಸ್ ಪಕ್ಷವನ್ನೇ? ಉತ್ತರಿಸಿ ಎಂದು ಹೇಳಿದ್ದಾರೆ.

ಯಾವ ಒತ್ತಡಕ್ಕೂ ಭಾರತ ಬಾಗದು: ಪ್ರಧಾನಿ ಮೋದಿ

1951ರಲ್ಲಿ ಪುನರ್‌ನಿರ್ಮಾಣಗೊಂಡ ಸೋಮನಾಥ ದೇವಾಲಯದ ಉದ್ಘಾಟನೆಯ 75 ವರ್ಷಗಳ ಸ್ಮರಣಾರ್ಥ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಅಂಚೆ ಚೀಟಿ ಬಿಡುಗಡೆ: ದೇವಾಲಯದ ಪುನರ್‌ನಿರ್ಮಾಣ ಭಾರತದ ಮುಕ್ತ ಪ್ರಜ್ಞೆಯ ಘೋಷಣೆ ಎಂದು ಮೋದಿ ಬಣ್ಣಿಸಿದರು. ಈ ಸಂದರ್ಭದಲ್ಲಿ ವಿಶೇಷ ಪೂಜೆ ನೆರವೇರಿಸಿದ ಅವರು, ಆ ಸ್ಮರಣಾರ್ಥ ಅಂಚೆ ಚೀಟಿ ಬಿಡುಗಡೆ ಮಾಡಿದರು. ಆಕ್ರಮಣಕಾರರು ಹಲವು ಬಾರಿ ಈ ದೇವಾಲಯವನ್ನು ಧ್ವಂಸಗೊಳಿಸಿದರೂ, ಪ್ರತಿ ಬಾರಿಯೂ ಅದು ಮರುನಿರ್ಮಾಣಗೊಂಡು ಸಾಂಸ್ಕೃತಿಕ ಬೇರುಗಳೊಂದಿಗಿನ ಅವಿನಾಭಾವ ಸಂಬಂಧವನ್ನು ಸಾಬೀತುಪಡಿಸಿದೆ ಎಂದು ಅವರು ಹೇಳಿದರು.

ಪರಂಪರೆ ಮತ್ತು ಆಧುನಿಕತೆ: ದೇಶದ ಕೆಲವು ಶಕ್ತಿಗಳು ರಾಷ್ಟ್ರೀಯ ಸ್ವಾಭಿಮಾನಕ್ಕಿಂತ ಓಲೈಕೆ ರಾಜಕೀಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿವೆ ಎಂದು ಮೋದಿ ಆರೋಪಿಸಿದರು. ಸೋಮನಾಥ ದೇವಾಲಯದ ಪುನರ್‌ನಿರ್ಮಾಣದ ವೇಳೆ ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಡಾ. ರಾಜೇಂದ್ರ ಪ್ರಸಾದ್ ಅವರು ಎದುರಿಸಿದ ವಿರೋಧವನ್ನು ಅಯೋಧ್ಯೆಯ ರಾಮಮಂದಿರ ನಿರ್ಮಾಣದ ಸಂದರ್ಭದಲ್ಲಿನ ವಿರೋಧಕ್ಕೆ ಹೋಲಿಸಿದರು. ದೇಶದ ಪ್ರಗತಿಗೆ ಪರಂಪರೆ ಮತ್ತು ಆಧುನಿಕತೆ ಜತೆಗೆ ಸಾಗಬೇಕು ಎಂದು ಅವರು ಕರೆ ನೀಡಿದರು.

ವಿಜ್ಞಾನಿಗಳ ಸಾಧನೆಗೆ ಪ್ರಧಾನಿ ಮೋದಿ ಮೆಚ್ಚುಗೆ

ದೇಶದ ಹೆಮ್ಮೆ ಮತ್ತು ಎಲ್ಲಾ ವಲಯಗಳ ಬೆಳವಣಿಗೆಗೆ ವಿಜ್ಞಾನಿಗಳ ಸಮರ್ಪಣಾ ಮನೋಭಾವವೇ ಕಾರಣ ಎಂದು ಅವರು ಶ್ಲಾಘಿಸಿದರು. ರಾಜಸ್ಥಾನದ ಪೋಖ್ರಾನ್ ಶ್ರೇಣಿಯಲ್ಲಿ ನಡೆದ ಯಶಸ್ವಿ ಅಣು ಪರೀಕ್ಷೆಗಳ ನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ. 1998ರ ಮೇ 11ರಂದು ಮಧ್ಯಾಹ್ನ 3:45ಕ್ಕೆ ವಿಜ್ಞಾನಿಗಳು ಏಕಕಾಲದಲ್ಲಿ ಮೂರು ಪರೀಕ್ಷೆಗಳನ್ನು ನಡೆಸಿದರು, ನಂತರ ಮೇ 13ರಂದು ಮತ್ತೆರಡು ಪರೀಕ್ಷೆಗಳನ್ನು ಕೈಗೊಳ್ಳಲಾಯಿತು. ಈ ಘಟನೆ ಸುಧಾರಿತ ಆಯುಧ ವಿನ್ಯಾಸದಲ್ಲಿ ಭಾರತದ ಪರಿಣತಿಯನ್ನು ಜಗತ್ತಿಗೆ ಸಾರಿತು.

ಎನ್‌ಐಎ, ಐಬಿ ಜಂಟಿ ತನಿಖೆ

ಎನ್‌ಐಎ, ಐಬಿ ಜಂಟಿ ಕಾರ್ಯಾಚರಣೆ: ಈ ಪ್ರಕರಣದ ತನಿಖೆಯನ್ನು ಕೇವಲ ರಾಜ್ಯ ಪೊಲೀಸರಿಗೆ ಸೀಮಿತಗೊಳಿಸದೆ, ಕೇಂದ್ರದ ಪ್ರಭಾವಿ ಸಂಸ್ಥೆಗಳಾದ ರಾಷ್ಟ್ರೀಯ ತನಿಖಾ ದಳ (ಎನ್‌ಐಎ), ಹಾಗೂ ಗುಪ್ತಚರ ದಳ(ಐಬಿ) ಹಿರಿಯ ಅಧಿಕಾರಿಗಳು ಈಗ ಜಂಟಿಯಾಗಿ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಎನ್‌ಐಎ ಡಿವೈಎಸ್ಪಿ ನೇತೃತ್ವದ ತಂಡವು ಘಟನಾ ಸ್ಥಳವನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್‌ಗೌಡ ಅವರಿಂದ ಸಮಗ್ರ ಮಾಹಿತಿ ಪಡೆದುಕೊಂಡಿದೆ. ಅಲ್ಲದೆ, ಪ್ರಧಾನಿಗಳ ಭದ್ರತೆಯ ಹೊಣೆ ಹೊತ್ತಿರುವ ಎನ್‌ಎಸ್‌ಜಿ ಪಡೆ ಕೂಡ ರಾಜ್ಯ ಪೊಲೀಸ್ ಇಲಾಖೆಯಿಂದ ಪ್ರತಿ ಗಂಟೆಗೊಮ್ಮೆ ತನಿಖಾ ಪ್ರಗತಿಯ ವರದಿ ತರಿಸಿಕೊಳ್ಳುತ್ತಿದೆ.

ತಮಿಳುನಾಡಿಗೆ ಧಾವಿಸಿದ ವಿಶೇಷ ಪೊಲೀಸ್ ತಂಡ: ಪ್ರಕರಣದ ತನಿಖೆಯ ವ್ಯಾಪ್ತಿ ಈಗ ತಮಿಳುನಾಡಿಗೂ ವ್ಯಾಪಿಸಿದೆ. ಸ್ಫೋಟಕಗಳ ಮೂಲದ ಬಗ್ಗೆ ಶಂಕೆ ವ್ಯಕ್ತವಾಗುತ್ತಿದ್ದಂತೆ ವಿಶೇಷ ಪೊಲೀಸ್ ತಂಡವೊಂದು ತಮಿಳುನಾಡಿಗೆ ಧಾವಿಸಿದೆ. ಅಲ್ಲಿನ ಗಣಿಗಾರಿಕೆ ಪ್ರದೇಶಗಳು ಅಥವಾ ಸ್ಫೋಟಕ ಪೂರೈಕೆದಾರರಿಂದ ಈ ಜಿಲೆಟಿನ್ ಕಡ್ಡಿಗಳನ್ನು ತರಲಾಗಿದೆಯೇ ಎಂಬ ದಿಕ್ಕಿನಲ್ಲಿ ತನಿಖೆ ನಡೆಯುತ್ತಿದೆ.

ಕಗ್ಗಲಿಪುರ ಪೊಲೀಸರು ಒಟ್ಟು ಆರು ವಿಶೇಷ ತಂಡಗಳನ್ನು ರಚಿಸಿ ಶೋಧ ಮುಂದುವರಿಸಿದ್ದಾರೆ. ಅಂತಾರಾಜ್ಯ ಅಥವಾ ಅಂತರಜಿಲ್ಲಾ ಸಂಚುಕೋರರ ತಂಡ ಈ ಕೃತ್ಯದ ಹಿಂದೆ ಇದೆಯೇ ಎಂದು ಅಧಿಕಾರಿಗಳು ರಹಸ್ಯ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಹುಸಿ ಬಾಂಬ್ ಕರೆ ಮಾಡಿದ್ದ ವ್ಯಕ್ತಿ ವಿಚಾರಣೆ

ತಪಾಸಣೆಯ ವೇಳೆ ಯಾವುದೇ ಸ್ಫೋಟಕಗಳು ಪತ್ತೆಯಾಗಿಲ್ಲ. ಆರೋಪಿ ಈ ಹಿಂದೆಯೂ ಹಲವು ಬಾರಿ ಇದೇ ರೀತಿ ಹುಸಿ ಕರೆಗಳನ್ನು ಮಾಡಿದ್ದು, ಸದ್ಯ ಪೊಲೀಸರು ಆತನ ಮಾನಸಿಕ ಸ್ಥಿತಿಯ ಬಗ್ಗೆ ವೈದ್ಯರಿಂದ ಮಾಹಿತಿ ಪಡೆಯುತ್ತಿದ್ದಾರೆ. ಸಿಸಿಬಿ ಮತ್ತು ಆಗ್ನೇಯ ವಿಭಾಗದ ಪೊಲೀಸರು ಈ ಪ್ರಕರಣದ ಹೆಚ್ಚಿನ ವಿಚಾರಣೆ ನಡೆಸುತ್ತಿದ್ದಾರೆ.

ಯಥಾಸ್ಥಿತಿ ಕಾಪಾಡಲು ಸೂಚನೆ

ಈ ಹಿನ್ನೆಲೆಯಲ್ಲಿ ಶಾಸಕರಾಗಿ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರೆದುರು ಪ್ರಮಾಣವಚನವನ್ನೂ ಸ್ವೀಕರಿಸಿದ್ದರು.

ಗೊಂದಲ-ಸಂಶಯ: ಮೂರು ವರ್ಷಗಳ ನಂತರ ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ ಅವರು ಅಧಿಕಾರ ಕಳೆದುಕೊಂಡಿದ್ದರು. ಮತಗಳ ಮರು ಎಣಿಕೆ ಸಂದರ್ಭದಲ್ಲಿ ಮತಗಳಿದ್ದ ಟ್ರಂಕ್ ಬಾಯ್ತೆರೆದುಕೊಂಡಿದ್ದು, ಸೀಲ್ ಇಲ್ಲದಿರುವುದು, ಮರು ಮತ ಎಣಿಕೆ ನಂತರ ದೊಡ್ಡ ಪ್ರಮಾಣದಲ್ಲಿ ಅಂಚೆ ಪತ್ರಗಳು ಅಸಿಂಧು ಎಂದು ಗೊತ್ತಾಗಿರುವುದೆಲ್ಲವೂ ಗೊಂದಲಕ್ಕೆಡೆಮಾಡಿದ್ದರೆ, ತಪ್ಪು ಎಲ್ಲಿ ನಡೆದಿದೆ ಎನ್ನುವ ಕುರಿತು ವ್ಯಾಪಕ ಚರ್ಚೆಗೂ ಗ್ರಾಸವಾಗಿತ್ತು. ಕಾಂಗ್ರೆಸ್-ಬಿಜೆಪಿ ನಡುವೆ ಆರೋಪ, ಪ್ರತ್ಯಾರೋಪಗಳು ನಡೆದಿದ್ದವು. ಸ್ವತಃ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರ ನಡುವೆ ವಾಗ್ಯುದ್ಧಕ್ಕೂ ಕಾರಣವಾಗಿತ್ತು.

ಶೃಂಗೇರಿ ಕ್ಷೇತ್ರದ ಮತದಾರರು ಹಾಗೂ ವಿವಿಧ ಸಂಘ-ಸಂಸ್ಥೆಗಳು ಚುನಾವಣೆ ನಡೆದಾಗಿನಿಂದ ಅಂಚೆ ಮತಗಳ ಮರುಎಣಿಕೆ ಪ್ರಕ್ರಿಯೆ ಹಾಗೂ ಅದರ ಫಲಿತಾಂಶದ ಕುರಿತು ಎರಡೂ ಪಕ್ಷಗಳ ಅಭ್ಯರ್ಥಿಗಳು ಹಾಗೂ ಅವರ ಚುನಾವಣಾ ಏಜೆಂಟರು ಮತ್ತು ಮತ ಎಣಿಕೆ ಕೇಂದ್ರದ ಏಜೆಂಟರುಗಳ ವಿರುದ್ಧ ಹಲವು ರೀತಿಯ ಸಂಶಯಗಳನ್ನು ವ್ಯಕ್ತಪಡಿಸಿದ್ದರು.

ಆಣೆ-ಪ್ರಮಾಣ: ಎರಡೂ ಅಭ್ಯರ್ಥಿಗಳ ಕಡೆಯವರು ತಮ್ಮ ತಪ್ಪಿಲ್ಲ ಎಂದು ದೇವರ ಮುಂದೆ ಪ್ರಮಾಣ ಮಾಡಬೇಕು ಎನ್ನುವ ಒತ್ತಾಯವನ್ನೂ ಮಾಡಿದ್ದ ಹಿನ್ನೆಲೆಯಲ್ಲಿ 2023ರಲ್ಲಿ ನಡೆದ ಮತ ಎಣಿಕೆ ಸಂದರ್ಭದಲ್ಲಿ ಹಾಜರಿದ್ದ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಕೊಪ್ಪದ ವೀರಭದ್ರಸ್ವಾಮಿ ದೇವರ ಮುಂದೆ ನಿಂತು ಮತ ಎಣಿಕೆ ವೇಳೆ ಯಾವುದೇ ಲೋಪಗಳು ನಡೆದಿರಲಿಲ್ಲ, ಎಲ್ಲವೂ ಪಾರದರ್ಶಕವಾಗಿ ನಡೆದಿತ್ತು ಎಂದು ಪ್ರಮಾಣವನ್ನೂ ಮಾಡಿದ್ದರು.

ಅಂಚೆ ಮತಗಳ ಎಣಿಕೆಯಲ್ಲಿ ಲೋಪವಾಗಿದೆ ಎಂದು ಕೋರ್ಟ್ ಮೆಟ್ಟಿಲೇರಿ ಮರು ಮತ ಎಣಿಕೆಗೂ ಕಾರಣರಾಗಿರುವ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರ ಪರ ಹಾಜರಿದ್ದ ಎಣಿಕೆ ಕೇಂದ್ರದ ಏಜೆಂಟರು ಸಹ ಪ್ರತ್ಯೇಕವಾಗಿ ದೇವರ ಮುಂದೆ ನಿಂತು ಎಣಿಕೆಯಲ್ಲಿ ಯಾವ ಲೋಪವೂ ನಡೆದಿರಲಿಲ್ಲ ಎಂದು ಪ್ರಮಾಣ ಮಾಡಿದ್ದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿತ್ತು.

ಅಧಿಕಾರದ ಹಾವು-ಏಣಿ ಆಟ: ಇದೀಗ ಸುಪ್ರೀಂ ಕೋರ್ಟ್ ಅಂಚೆ ಮತಗಳ ಮರು ಎಣಿಕೆಗೆ ಹೈಕೋರ್ಟ್ ನೀಡಿದ್ದ ಆದೇಶ ಮತ್ತು ಮರು ಎಣಿಕೆ ನಂತರದ ಫಲಿತಾಂಶಕ್ಕೆ ತಡೆ ನೀಡಿರುವುದರಿಂದ ಕೇವಲ 7 ದಿನಗಳಲ್ಲಿ ಶಾಸಕ ಸ್ಥಾನ ಕಳೆದುಕೊಂಡಿರುವ ಡಿ.ಎನ್.ಜೀವರಾಜ್ ಮಾಜಿ ಆಗಿದ್ದಾರೆ. ಮೂರು ವರ್ಷಗಳ ಕಾಲ ಶಾಸಕರಾಗಿದ್ದು, 7 ದಿನಗಳ ಕಾಲ ಮಾಜಿ ಆಗಿದ್ದ ಟಿ.ಡಿ. ರಾಜೇಗೌಡ ಮತ್ತೆ ಶಾಸಕರಾಗಿ ಮುಂದುವರಿಯಲಿದ್ದಾರೆ. ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಮೇ 21ಕ್ಕೆ ಮುಂದೂಡಿದೆ.


ಪ್ರಜಾಪ್ರಭುತ್ವ ಹೈಜಾಕ್‌ಗಿಲ್ಲ ಅವಕಾಶ: ಸುಪ್ರೀಂ

ಬೆಂಗಳೂರು: ಪ್ರಜಾಪ್ರಭುತ್ವವನ್ನು ಹೈಜಾಕ್ ಮಾಡಲು ಅವಕಾಶ ನೀಡುವುದಿಲ್ಲ ಎಂದಿರುವ ಸುಪ್ರೀಂ ಕೋರ್ಟ್, ಶೃಂಗೇರಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಕಾಂಗ್ರೆಸ್‌ನ ಟಿ.ಡಿ. ರಾಜೇಗೌಡ ಮುಂದುವರಿಯಲಿದ್ದಾರೆ ಎಂದು ಸೋಮವಾರ ಮಹತ್ವದ ಆದೇಶ ಮಾಡಿದೆ. ರಾಜೇಗೌಡರ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪಿ.ವಿ. ಸಂಜಯ್ ಕುಮಾರ್ ಮತ್ತು ಕೆ. ವಿನೋದ್ ಚಂದ್ರನ್ ಅವರ ವಿಭಾಗೀಯ ಪೀಠವು ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ವಿರುದ್ಧ ಗಂಭೀರ ಮಾತುಗಳನ್ನಾಡಿದೆ. ಹೈಕೋರ್ಟ್ ನಿರ್ದೇಶದನಂತೆ ಅಂಚೆ ಮತ ಎಣಿಕೆಯ ನಂತರ ಬಿಜೆಪಿಯ ಜೀವರಾಜ್ ವಿಜೇತರಾಗಿದ್ದಾರೆ ಎಂಬ ನಿರ್ದೇಶನದ ಹೊರತಾಗಿಯೂ ರಾಜೇಗೌಡ ಶಾಸಕರಾಗಿ ಮುಂದುವರಿಯಲಿದ್ದಾರೆ ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಪ್ರಜಾಪ್ರಭುತ್ವವನ್ನು ಈ ರೀತಿಯಲ್ಲಿ ಹೈಜಾಕ್ ಮಾಡಲು ಅವಕಾಶ ನೀಡಲಾಗದು ಎಂದು ಪೀಠ ಮೌಖಿಕವಾಗಿ ಹೇಳಿದ್ದು, ಮತ ಮರು ಎಣಿಕೆಗೂ ಮುನ್ನ ಇದ್ದ ಯಥಾಸ್ಥಿತಿಯನ್ನು ಕಾಪಾಡುವಂತೆ ಪಕ್ಷಕಾರರಿಗೆ ನ್ಯಾಯಾಲಯ ನಿರ್ದೇಶಿಸಿದ್ದು, ರಾಜೇಗೌಡ ಶೃಂಗೇರಿ ಶಾಸಕರಾಗಿ ಮುಂದುವರಿಯಲಿದ್ದಾರೆ. ರಾಜೇಗೌಡ ತಮ್ಮ ಆಯ್ಕೆ ಅಸಿಂಧುವನ್ನು ವಕೀಲ ತುಷಾರ್ ಗಿರಿ ಮೂಲಕ ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. 279 ತಿರಸ್ಕೃತ ಮತಗಳನ್ನು ಮಾತ್ರ ಪರಿಶೀಲಿಸುವಂತೆ ಹೈಕೋರ್ಟ್ ನಿರ್ದೇಶಿಸಿತ್ತು. ಆದರೆ, ಚುನಾವಣಾಧಿಕಾರಿಯು ರಾಜೇಗೌಡ ಪರವಾಗಿದ್ದ 562 ಸಿಂಧುವಾದ ಮತಗಳನ್ನು ಅಕ್ರಮವಾಗಿ ಪರಿಗಣಿಸಿದ್ದಾರೆ ಎಂದು ವಾದಿಸಲಾಗಿತ್ತು.

ಮಾರ್ಚ್, ಏಪ್ರಿಲ್ ಗೃಹಲಕ್ಷ್ಮಿ ಹಣ ಶೀಘ್ರ ಜಮಾ: ಸಚಿವೆ

ಬೆಳಗಾವಿ: ಮಾರ್ಚ್ ತಿಂಗಳ ಗೃಹಲಕ್ಷ್ಮಿ ಇನ್ನು 4-5 ದಿನದಲ್ಲಿ ಹಾಗೂ ಏಪ್ರಿಲ್ ತಿಂಗಳ ಹಣ ಇನ್ನು 8-10 ದಿನದಲ್ಲಿ ಜಮಾ ಆಗಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ತಿಳಿಸಿದ್ದಾರೆ.

ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಬಾಕನೂರು ಗ್ರಾಮದ ಮಹಾಲಕ್ಷ್ಮೀ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಬೆಳಗ್ಗೆ ದೇವಿಗೆ ವಿಶೇಷ ಪೂಜೆ



ಸಲ್ಲಿಸಿ, ಗ್ರಾಮಸ್ಥರನ್ನು ಉದ್ದೇಶಿಸಿ ಅವರು ಮಾತನಾಡಿದರು. ಕೆಲಸ ಮಾಡುವುದೆಂದರೆ ನನಗೆ ಹುಚ್ಚು. 2013ರಲ್ಲಿ ಚುನಾವಣೆಯಲ್ಲಿ ಸೋತ ನಂತರ ಕೂಡ ಕೆಲಸ ಮಾಡುತ್ತಲೇ ಇದ್ದೆ. ಬೇರೆಯವರಂತೆ ನಾಟಕ ಮಾಡುವುದು ನನಗೆ ಗೊತ್ತಿಲ್ಲ, ಕೆಲಸ ಮಾಡುವುದೊಂದೇ ನನಗೆ ಗೊತ್ತು. ಹಿಂದೆ ಆಯ್ಕೆಯಾದವರು ಬರೀ ಹಿಂದುತ್ವ ಎಂದುಕೊಂಡು ಓಡಾಡಿದ್ದನ್ನು ಬಿಟ್ಟು ಬೇರೇನೂ ಮಾಡಿಲ್ಲ, ನಾನು ಹೇಳುವುದಿಲ್ಲ, ಮಾಡಿ ತೋರಿಸುತ್ತಿದ್ದೇನೆ. ಪ್ರತಿಯೊಂದು ಸಮಾಜಕ್ಕೆ ಸಹಾಯವಾಗುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸರ್ವ ಭಾಷಿಕ, ಸರ್ವ ಜಾತಿಯ ಜನರ ಕೆಲಸ ಮಾಡುತ್ತಿದ್ದೇನೆ. ಸರ್ವ ಕ್ಷೇತ್ರದಲ್ಲೂ ನಂಬರ್ ಒನ್ ಮಾಡುವ ಮೂಲಕ ಬಾರಾಮತಿಯಂತೆ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಗುರಿಯನ್ನು ನಾನು ಹೊಂದಿದ್ದೇನೆ ಎಂದು ತಿಳಿಸಿದರು.

ಈ ವೇಳೆ ಕಾಡಾ ಅಧ್ಯಕ್ಷ ಯುವರಾಜ ಕದಂ, ಯುವ ಮುಖಂಡ ಮೃಣಾಲ ಹೆಬ್ಬಾಳ್ಕರ್ ಸೇರಿದಂತೆ ಹಲವಾರು ಮುಖಂಡರು, ಗ್ರಾಮಸ್ಥರು ದೊಡ್ಡ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.



ಹುಬ್ಬಳ್ಳಿ ಮತ್ತು ಉತ್ತರ ಕರ್ನಾಟಕ ಭಾಗಕ್ಕೆ ರೈಲ್ವೆ ಇಲಾಖೆ ಕೊಡುಗೆ ನೀಡಿದ್ದು, ಮೂರು ಹೊಸ ವಿಶೇಷ ರೈಲುಗಳನ್ನು ಖಾಯಂಗೊಳಿಸಲು ಸೋಮವಾರ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹಸಿರು ನಿಶಾನೆ ತೋರಿಸಿದರು.

ಸಿಎಂಗೆ ಪ್ರಶ್ನೆಗಳ ಸುರಿಮಳೆ

ಬೆಂಗಳೂರು: ಪ್ರಧಾನಿ ಮೋದಿ ಅವರ ಭಾಷಣಕ್ಕೆ ಪ್ರತಿಕ್ರಿಯೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಪ್ರಶ್ನೆಗಳ ಸುರಿಮಳೆ ಹರಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಸುದೀರ್ಘ ಪೋಸ್ಟ್ ಹಂಚಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮಾಡಿದ ಭಾಷಣ



ನಿಮ್ಮನ್ನು ಯಾಕೆ ಇಷ್ಟು ವಿಚಲಿತಗೊಳಿಸಿದೆ ಎಂಬುದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಇಷ್ಟಕ್ಕೂ ಪ್ರಧಾನಿ ಮೋದಿ ಅವರು ಹೇಳಿದ್ದರಲ್ಲಿ ಹೊಸತೇನೂ ಇಲ್ಲ, ಅಧಿಕಾರ ಹಂಚಿಕೆಯ ನಿರಂತರ ಸರ್ಕಸ್ ಮತ್ತು ನಿಮ್ಮ ಸರ್ಕಾರದ ಒಳಜಗಳದಿಂದ ಕಂಗೆಟ್ಟಿರುವ 7 ಕೋಟಿ ಕನ್ನಡಿಗರ ಅಂತರಾಳದ ಧ್ವನಿಯನ್ನೇ ಪ್ರಧಾನಿಗಳು ಪ್ರತಿಧ್ವನಿಸಿದ್ದಾರೆ. ಆ ಸತ್ಯವೇ ಇಂದು ನಿಮಗೆ ನುಂಗಲಾರದ ತುತ್ತಾಗಿದೆ ಎಂದು ಕುಟುಕಿದ್ದಾರೆ. ಎಚ್.ಎ.ಎಲ್. ವಿಮಾನ ನಿಲ್ದಾಣದ ಬಳಿ ನಡೆದದ್ದು ಸರ್ಕಾರಿ ಕಾರ್ಯಕ್ರಮವಲ್ಲ, ಅದು ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ವಿಧಾನಸಭಾ ಚುನಾವಣೆಗಳಲ್ಲಿ ನಮ್ಮ ಪಕ್ಷದ ಐತಿಹಾಸಿಕ ವಿಜಯದ ಹಿನ್ನೆಲೆಯಲ್ಲಿ ನಮ್ಮ ಲಕ್ಷಾಂತರ ಕಾರ್ಯಕರ್ತರು ಅಭಿಮಾನಪೂರ್ವಕವಾಗಿ ಹಮ್ಮಿಕೊಂಡಿದ್ದ ಬಿಜೆಪಿ ಪಕ್ಷದ ಕಾರ್ಯಕ್ರಮ. ಒಂದು ರಾಜಕೀಯ ವೇದಿಕೆಯಲ್ಲಿ ರಾಜಕೀಯ ಭಾಷಣ ಮಾಡುವ ಮತ್ತು ಪ್ರತಿಪಕ್ಷಗಳ ವೈಫಲ್ಯಗಳ ಬಗ್ಗೆ ಟೀಕೆ ಮಾಡುವ ಸಂಪೂರ್ಣ ಪ್ರಜಾಸತ್ತಾತ್ಮಕ ಹಕ್ಕು ಪ್ರಧಾನಮಂತ್ರಿಗಳಿಗಿದೆ ಎಂದಿದ್ದಾರೆ. ಇಷ್ಟಕ್ಕೂ ಶಿಷ್ಟಾಚಾರ, ಘನತೆ ಮತ್ತು ಗೌರವದ ಬಗ್ಗೆ ನೀವು ಇತರರಿಗೆ ಉಪದೇಶ ನೀಡುವುದು ನೋಡಿದರೆ ಎಂತಹವರಿಗೂ ಆಶ್ಚರ್ಯವಾಗುತ್ತದೆ, ನಗು ಬರುತ್ತದೆ. ಬಜೆಟ್ ಭಾಷಣವನ್ನೂ ರಾಜಕೀಯಕ್ಕೆ ಬಳಸುವ, ರಾಜ್ಯಪಾಲರ ಭಾಷಣವನ್ನು ಕಾಂಗ್ರೆಸ್ ಪಕ್ಷದ ಚುನಾವಣಾ ಕರಪತ್ರದಂತೆ ದುರ್ಬಳಕೆ ಮಾಡುವ ಮತ್ತು ಸಾಂವಿಧಾನಿಕ ಸಂಸ್ಥೆಗಳ ಮೇಲೆ ನಿರಂತರ ದಾಳಿ ಮಾಡುವ ಸಿದ್ದರಾಮಯ್ಯ ಅವರೇ ಇಂದು ಸಂಸದೀಯ ಮೌಲ್ಯಗಳ ಮತ್ತು ಶಿಷ್ಟಾಚಾರದ ಬಗ್ಗೆ ಮಾತನಾಡುತ್ತಿರುವುದು ಅತ್ಯಂತ ಹಾಸ್ಯಾಸ್ಪದ ಎಂದು ಲೇವಡಿ ಮಾಡಿದ್ದಾರೆ.

ಕಿರುಸುದ್ದಿ

ಮೇ 14ಕ್ಕೆ ಮೈ. ಚ. ಜಯದೇವ ಪುಸ್ತಕ ಬಿಡುಗಡೆ

ಬೆಂಗಳೂರು: ರಾಷ್ಟ್ರೋತ್ಥಾನ ಪರಿಷತ್ ವತಿಯಿಂದ ದಿವಂಗತ ಮೈ. ಚ. ಜಯದೇವ ಅವರ ಬದುಕು -ನೆನಪುಗಳನ್ನೊಳಗೊಂಡ ಅವಿಶ್ರಾಂತ ಧ್ಯೇಯಜೀವಿ ಪುಸ್ತಕದ ಲೋಕಾರ್ಪಣೆ ಕಾರ್ಯಕ್ರಮವನ್ನು ಮೇ 14 ರಂದು ಹಮ್ಮಿಕೊಳ್ಳಲಾಗಿದೆ. ಆರ್‌ಎಸ್‌ಎಸ್‌ನ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿದ, ರಾಷ್ಟ್ರೋತ್ಥಾನ ಪರಿಷತ್ತಿನ ಆರಂಭದ



ದಿನಗಳಿಂದಲೂ ಅದರ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಮೈ.ಚ. ಜಯದೇವ ಅವರ ಕುರಿತ ಪುಸ್ತಕ ನಗರದ ಟೌನ್‌ಹಾಲ್ ಸಂಜೆ 6.30 ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಲೋಕಾರ್ಪಣೆ ಮಾಡಲಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಪುಸ್ತಕದ ಕುರಿತು ಮಾತನಾಡಲಿದ್ದಾರೆ. ಲೇಖಕರಾದ ಡಾ.ಬಾಬು ಕೃಷ್ಣಮೂರ್ತಿ ಹಾಗೂ ಬೇಳೂರು ಸುದರ್ಶನ್, ರಾಷ್ಟ್ರೋತ್ಥಾನ ಪರಿಷತ್‌ನ ಅಧ್ಯಕ್ಷ ಎಂ. ಪಿ. ಕುಮಾರ್ ಉಪಸ್ಥಿತರಿರಲಿದ್ದಾರೆ.

ಮೇ 14ರಂದು ನೂತನ ಶಾಸಕರಿಗೆ ಪ್ರಮಾಣವಚನ

ಬೆಂಗಳೂರು: ವಿಧಾನಸಭಾ ಉಪ ಚುನಾವಣೆಯಲ್ಲಿ ಚುನಾಯಿತರಾಗಿರುವ ಶಾಸಕದ್ವಯರು ಮೇ 14ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಕಳೆದ ತಿಂಗಳು ನಡೆದ ಉಪ ಚುನಾವಣೆಯಲ್ಲಿ ಬಾಗಲಕೋಟೆ ವಿಧಾನ ಸಭಾ ಕ್ಷೇತ್ರದಿಂದ ಉಮೇಶ ಹುಲ್ಲಪ್ಪ ಮೇಟಿ ಹಾಗೂ ದಾವಣಗೆರೆ ದಕ್ಷಿಣ ಕ್ಷೇತ್ರದಿಂದ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ್ ಆಯ್ಕೆಯಾಗಿದ್ದಾರೆ. ಮೇ 14 ರಂದು ಬೆಳಗ್ಗೆ 10 ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 334ರಲ್ಲಿ ವಿಧಾನಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕಾರ ಮಾಡಲಿದ್ದಾರೆ.

ಈಜಲು ಹೋದ ಇಬ್ಬರು ಬಾಲಕರ ಸಾವು

ನಾಗಮಂಗಲ: ಕೆರೆಯಲ್ಲಿ ಈಜಲು ಹೋಗಿದ್ದ ಬಾಲಕರಿಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟಿರುವ ಘಟನೆ ತಾಲೂಕಿನ ಬಿಂಡಿಗನವಿಲೆ ಹೋಬಳಿಯ ಹೆರಗನಹಳ್ಳಿಯಲ್ಲಿ ನಡೆದಿದೆ. ತಾಲೂಕಿನ ಬಿಂಡಿಗನವಿಲೆ ಹೋಬಳಿಯ ಅಳಿಸಂದ್ರ ಗ್ರಾಮದ ಸತ್ಯಪ್ರಕಾಶ್ (17) ಮತ್ತು ಹೆರಗನಹಳ್ಳಿ ಗ್ರಾಮದ ಯಶಸ್ (17) ಮೃತ ದುರ್ದೈವಿಗಳು. ಮೃತ ಬಾಲಕರು ಮನೆಗೆ ಬಾರದಿರುವುದರಿಂದ ಗಾಬರಿಗೊಂಡ ಪಾಲಕರು, ಸ್ನೇಹಿತರು ಹಾಗೂ ಕುಟುಂಬಸ್ಥರ ಮನೆಗಳಲ್ಲಿ ವಿಚಾರಿಸಿ ನಂತರ ಕೆರೆಯ ಬಳಿಗೆ ಈಜಲು ತೆರಳಿರುವ ವಿಚಾರ ತಿಳಿದು ಕೆರೆಯ ಬಳಿ ಹೋಗಿ ನೋಡಲಾಗಿ ಕೆರೆಯ ಕೋಡಿಯ ಬಳಿ ಮೃತ ಸತ್ಯಪ್ರಕಾಶ್ ತಂದಿದ್ದ ಬೈಕ್‌ನಿಂತಿರುವುದು ಹಾಗೂ ಇಬ್ಬರು ಬಾಲಕರ ಬಟ್ಟೆಗಳು ಪತ್ತೆಯಾಗಿದ್ದವು. ಮೃತದೇಹಗಳನ್ನು ಹೊರತೆಗೆದು ಆದಿಚುಂಚನಗಿರಿ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಿದರು. ಬಿಂಡಿಗನವಿಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಿಷಯ ತಿಳಿದ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಆದಿಚುಂಚನಗಿರಿ ಆಸ್ಪತ್ರೆಯ ಶವಾಗಾರಕ್ಕೆ ತೆರಳಿ ಮೃತ ಬಾಲಕರ ಅಂತಿಮ ದರ್ಶನ ಪಡೆದು, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಜನರ ನಿತ್ಯದ ಜೀವನ ನಿರ್ವಹಣೆಗಾಗಿ ಪರದಾಟ: ಸಿದ್ದರಾಮಯ್ಯ

ದೇಶದ ಆರ್ಥಿಕ ಸ್ಥಿತಿ ಅಭದ್ರ

ಬೆಂಗಳೂರು: ಬೆಂಗಳೂರು : ದೇಶದ ಬಡತನವನ್ನು ನಿರ್ಮೂಲನೆ ಮಾಡಿದ್ದೇವೆ. ಎಂದಿದ್ದ ಪ್ರಧಾನಿಯವರು ಈಗ ಚಿನ್ನ ಖರೀದಿಸಬೇಡಿ, ಪೆಟ್ರೋಲ್ ಮತ್ತು ಖಾದ್ಯ ಎಣ್ಣೆ ಕಡಿಮೆ ಬಳಸಿ, ವಿದೇಶ ಪ್ರವಾಸ ಮಾಡಬೇಡಿ ಮತ್ತು ಗೊಬ್ಬರ ಬಳಕೆ ತಗ್ಗಿಸಿ ಎಂದು ಮನವಿ ಮಾಡಿರುವುದು ಯಾವ ಅಭಿವೃದ್ಧಿಯ ಲಕ್ಷಣ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಮೋದಿಯವರ ಹೇಳಿಕೆ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ಮಾತನಾಡಿರುವ ಅವರು, ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಖಾದ್ಯತೈಲ ಎಲ್ಲವೂ ದುಬಾರಿಯಾಗಿ ದೇಶದ ಜನರ ನಿತ್ಯದ ಜೀವನ ನಿರ್ವಹಣೆಗಾಗಿ ಪರದಾಡುವಂತಹ ಪರಿಸ್ಥಿತಿ ನಿರ್ಮಾಣಕ್ಕೆ ದೇಶದ



ಎಡಬಿಡಂಗಿ ವಿದೇಶಾಂಗ ನೀತಿ ಕಾರಣ ಎನ್ನುವುದನ್ನು ಅರಿತುಕೊಳ್ಳುವಷ್ಟು ಜನತೆ ಪ್ರಬುದ್ಧರಾಗಿದ್ದಾರೆ ಎಂದಿದ್ದಾರೆ. ಇರಾನ್ ವಿರುದ್ಧ ಇಸ್ರೇಲ್ ಮತ್ತು ಅಮೆರಿಕ ಜಂಟಿಯಾಗಿ ನಡೆಸುತ್ತಿರುವ ಯುದ್ಧದ ನಡುವೆ ಭಾರತ ಸಿಕ್ಕಿಹಾಕಿಕೊಂಡು ಒದ್ದಾಡುತ್ತಿದೆ. ಇಂತಹ ಸಂದರ್ಭದಲ್ಲಿ ನ್ಯಾಯ ಮತ್ತು ನೀತಿಯ ಪರವಾಗಿ ಗಟ್ಟಿಯಾದ ನಿಲುವು ತೆಗೆದುಕೊಂಡಿದ್ದರೆ ಭಾರತ ಇಂದಿನ ದುಸ್ಥಿತಿ ಯನ್ನು ಎದುರಿಸುತ್ತಿರಲಿಲ್ಲ, ಮೋದಿಯವರೇ, ಈ ವೈಫಲ್ಯಕ್ಕೆ ಯಾರನ್ನು ದೂರುತ್ತೀರಿ? ಜವಾಹರಲಾಲ್ ನೆಹರೂ ಅವರನ್ನೇ? ಕಾಂಗ್ರೆಸ್ ಪಕ್ಷವನ್ನೇ? ಉತ್ತರಿಸಿ ಎಂದು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಆಡಳಿತದಲ್ಲಿ ಕರ್ನಾಟಕದ ಆರ್ಥಿಕ ಪರಿಸ್ಥಿತಿ ಸುಭದ್ರವಾಗಿದೆ. ದೇಶದ ತಲಾವಾರು ಆದಾಯ ರೂ.2.11 ಲಕ್ಷ ರೂಗಳಾಗಿದ್ದರೆ ಕರ್ನಾಟಕದ್ದು 4.33 ಲಕ್ಷ ರೂಪಾಯಿಗಳು. ದೇಶದ ಜಿಡಿಪಿ ಬೆಳವಣಿಗೆಯ ದರ ಶೇಕಡಾ 7.4 ಆಗಿದ್ದರೆ, ಕರ್ನಾಟಕದ್ದು ಶೇಕಡಾ 8.1 ಆಗಿದೆ. ದೇಶದ ಜಿಡಿಪಿಯಲ್ಲಿ ಕರ್ನಾಟಕದ ಪಾಲು ಶೇಕಡಾ 9.19 ಆಗಿದೆ. ಜಿಎಸ್ಟಿ ಸಂಗ್ರಹದಲ್ಲಿ ಮಹಾರಾಷ್ಟ್ರದ ನಂತರ ಕರ್ನಾಟಕದ್ದೇ ಅತ್ಯಧಿಕ ಪಾಲು ಎಂದಿದ್ದಾರೆ.

ಬೆಲೆ ಏರಿಕೆಯಾಗಿದ್ದು ಯಾರಿಂದ?: ಡಿಸಿಎಂ

ಬೆಂಗಳೂರು: ಚಿನ್ನ ಖರೀದಿಸಬೇಡಿ, ಇಂಧನ ಬಳಕೆ ಕಡಿಮೆ ಮಾಡಿ ಎಂಬ ಸಲಹೆ ನೀಡುತ್ತಿರುವ ಪ್ರಧಾನ ಮಂತ್ರಿಗಳು, ಇವುಗಳ ಬೆಲೆ ಏರಿಕೆಯಾಗಿದ್ದು ಯಾಕೆ? ಯಾರಿಂದ



ಬೆಲೆ ಏರಿಕೆಯಾಗಿದೆ ಎಂಬುದನ್ನೂ ವಿವರಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ. ಸೋಮವಾರ ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಅವರು, ಮದುವೆ, ಮುಂಜಿ ಮಾಡುವವರು ಚಿನ್ನ ತೆಗೆದುಕೊಳ್ಳಬೇಡಿ ಎಂದು ಹೇಳಲು ಸಾಧ್ಯವೇ? ಅವರು ಸಲಹೆಗಳನ್ನು ನೀಡುತ್ತಾರೆ. ಹಿಂದೆ ಕೋವಿಡ್ ಬಂದಾಗ ದೀಪ ಹಚ್ಚಿಸಿ, ಚಪ್ಪಾಳೆ ತಟ್ಟಿಸಿದರು. ಅದರಿಂದ ಸಮಸ್ಯೆ ನಿಂತು ಹೋಯಿತಾ? ಮದುವೆಯಾದ ಮಹಿಳೆ ಚಿನ್ನದ ತಾಳಿ, ಸರ ಹಾಕಿಕೊಳ್ಳುವುದುನ್ನು ಬೇಡ ಎನ್ನಲು ಸಾಧ್ಯವೇ? ಎಂದು ಪ್ರಶ್ನಿಸಿದರು. ಜನ ಸಾಮಾನ್ಯರ ಬದುಕಿನಲ್ಲಿ ಕಷ್ಟವೋ ಸುಖವೋ, ಸಾಲ ಮಾಡಿ ಚಿನ್ನ ಖರೀದಿ ಮಾಡುತ್ತಾರೆ. ಎಲ್ಲರನ್ನು ಸಾರ್ವಜನಿಕ ಸಾರಿಗೆಯಲ್ಲೇ ಓಡಾಡಿ ಎನ್ನುವುದಾದರೆ, ಪ್ರಧಾನ ಮಂತ್ರಿಗಳು, ಕೇಂದ್ರ ಸರ್ಕಾರದ ಅಧಿಕಾರಿಗಳು ಸಾರ್ವಜನಿಕ ಸಾರಿಗೆಯಲ್ಲಿ ಓಡಾಡುವಂತೆ ಸೂಚಿಸಲಿ. ಅವರ ಕೇಂದ್ರ ಸಚಿವರಿಗೆ ತಾಕೀತು ಮಾಡಲಿ. ನಾವು ಮೊದಲು ನಡೆದುಕೊಂಡು ನಂತರ ಸಾಮಾನ್ಯ ಜನಕ್ಕೆ ಸಂದೇಶ ನೀಡಬೇಕು ಎಂದರು. ಮೊದಲು ತ್ಯಾಗವನ್ನು ಕೇಂದ್ರ ಸರ್ಕಾರದ ಸಚಿವರು, ಅಧಿಕಾರಿಗಳು, ಬಿಜೆಪಿ ಆಡಳಿತ ರಾಜ್ಯಗಳಲ್ಲಿರುವ ಅಧಿಕಾರಿಗಳಿಂದ, ಅವರ ಪಕ್ಷದ ಶಾಸಕರು, ನಾಯಕರು ಹಾಗೂ ಕಾರ್ಯಕರ್ತರಿಂದ ತ್ಯಾಗ ಆರಂಭವಾಗಲಿ. ನಂತರ ಬೇರೆಯವರಿಗೆ ತ್ಯಾಗದ ಸಲಹೆ ನೀಡಲಿ ಎಂದು ತಿರುಗೇಟು ನೀಡಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ ಅವರೊಂದಿಗೆ ರಾಜಕೀಯವಾಗಿ ಸಭೆ ಮಾಡಿದ್ದೇವೆ. ಅಧಿಕಾರಿಗಳನ್ನು ಕರೆದು ಕೆಲವು ಸೂಚನೆ ನೀಡಿದ್ದು, ಬೆಂಗಳೂರು ನಗರಕ್ಕೆ ದೊಡ್ಡ ಗ್ಯಾರಂಟಿಗಳನ್ನು ನೀಡುತ್ತಿದ್ದೇವೆ. ಈ ಬಗ್ಗೆ ಮೇ 13ರಂದು ಮಾಹಿತಿ ನೀಡುತ್ತೇವೆ.
■ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

ಹುದ್ದೆ ಭರ್ತಿಗೆ ಸರ್ಕಾರ ಮೀನಾಮೇಷ: ಬಿವೈವಿ

ಬೆಂಗಳೂರು: ರಾಜ್ಯ ಸರ್ಕಾರ 56,432 ಹುದ್ದೆಗಳ ಭರ್ತಿಗೆ ಮೀನಾಮೇಷ ಎಣಿಸದೇ ಅಧಿಸೂಚನೆ ಹೊರಡಿಸಿ, ಅತೀ ಶೀಘ್ರದಲ್ಲಿ ಅಭ್ಯರ್ಥಿಗಳ ಆಯ್ಕೆಯಾಗುವಂತೆ ಕಾಳಜಿ ಪ್ರದರ್ಶಿಸಲಿ. ಇಲ್ಲದಿದ್ದರೆ ಈಗಾಗಲೇ ಹತಾಶೆಯ ಅಂಚಿನಲ್ಲಿರುವ ಲಕ್ಷಾಂತರ ನಿರುದ್ಯೋಗಿಗಳ ಆಕ್ರೋಶ ಆಸ್ಫೋಟವಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಎಚ್ಚರಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅವರು ಪೋಸ್ಟ್ ಮಾಡಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಕರ್ನಾಟಕ ಲೋಕ ಸೇವಾ ಆಯೋಗ (ಕೆಪಿಎಸ್‌ಸಿ) ಅರ್ಹ ಪ್ರತಿಭಾವಂತ ನಿರುದ್ಯೋಗಿಗಳ ಪಾಲಿಗೆ ಕಲ್ಪವೃಕ್ಷವಾಗುವ ಬದಲು ಪಾಪಾಸುಕಳ್ಳಿಯಾಗಿ ಲಕ್ಷಾಂತರ ನಿರುದ್ಯೋಗಿಗಳ ಭವ್ಯ ಭವಿಷ್ಯವನ್ನು ಅತಂತ್ರ ಸ್ಥಿತಿಗೆ ಸಿಲುಕಿಸಿದ ಕರಾಳ ಇತಿಹಾಸವನ್ನು ಅಂಟಿಸಿಕೊಂಡಿದೆ ಎಂದು ಟೀಕಿಸಿದ್ದಾರೆ.

ನಿರುದ್ಯೋಗಿ ಯುವಜನರ ಬೃಹತ್ ಪ್ರತಿಭಟನೆಗೆ ಮಣಿದು 56,432 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸುವುದಾಗಿ ಸರ್ಕಾರ ಪ್ರಕಟಿಸಿದೆ. ಆದರೆ, ಈ ಸಂಬಂಧ ಇನ್ನೂ ಅಧಿಸೂಚನೆ ಹೊರಡಿಸಿಲ್ಲ, ಸರ್ಕಾರಿ ಯಂತ್ರವನ್ನು ಸಮರ್ಥವಾಗಿ ನಿಭಾಯಿಸಲು ಅರ್ಹ ಅಧಿಕಾರಿಗಳನ್ನು ನೇಮಿಸುವ ಸಾಂವಿಧಾನಿಕ ಹೊಣೆ ಹೊತ್ತಿರುವ ಲೋಕಸೇವಾ ಆಯೋಗ ಅಭ್ಯರ್ಥಿಗಳ ಆಯ್ಕೆಯಲ್ಲಿ ಪಾರದರ್ಶಕತೆ ವಿಫಲವಾಗಿ ಬ್ರಹ್ಮಾಂಡ ಭ್ರಷ್ಟಾಚಾರ, ಅಕ್ರಮ ಹಾಗೂ ದೋಷಪೂರಿತ ಪ್ರಕ್ರಿಯೆಗಳಿಂದ ಕುಖ್ಯಾತಿ ಪಡೆದಿದೆ ಎಂದಿದ್ದಾರೆ.



ಆಯ್ಕೆಗೆ ಸುಭದ್ರ ವ್ಯವಸ್ಥೆ ರೂಪಿಸಿ

ಆಯೋಗದ ಈ ದುರವಸ್ಥೆಗೆ ಅಂಕುಶ ಹಾಕಲು ಆಯೋಗದ ವಿರುದ್ಧದ ನ್ಯಾಯಾಲಯದ ಅನೇಕ ತೀರ್ಪುಗಳು ಭ್ರಷ್ಟ ವ್ಯವಸ್ಥೆಯನ್ನು ಬಯಲು ಮಾಡಿದೆ. ಕೆಲ ತಪ್ಪಿತಸ್ಥರ ಮುಖವಾಡಗಳು ಕೂಡ ಕಳಚಿ ಬಿದ್ದಿವೆ. ಇಷ್ಟಾಗಿಯೂ ಆಯೋಗದ ವ್ಯವಸ್ಥೆಗೆ ಕಾಯಕಲ್ಪ ನೀಡುವ ಪ್ರಯತ್ನ ಈವರೆವಿಗೂ ಸಾಧ್ಯವಾಗಿಲ್ಲ. ಸದ್ಯ ನೂತನ ತಂತ್ರಜ್ಞಾನ ಅಳವಡಿಸಿಕೊಂಡು ಅಭ್ಯರ್ಥಿಗಳ ಆಯ್ಕೆಗೆ ಸುಧಾರಣೆಗಳನ್ನು ತರುವುದಾಗಿ ಆಯೋಗದ ಮೂಲಗಳು ತಿಳಿಸಿವೆ. ಆದರೆ, ಇದನ್ನು ನಂಬುವ ಮನಸ್ಥಿತಿಯನ್ನು ಉದ್ಯೋಗಾಕಾಂಕ್ಷಿಗಳು ಕಳೆದುಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಆಯೋಗದ ಅಸ್ತಿತ್ವವನ್ನು ಪ್ರಶ್ನಿಸುವ ಪರಿಸ್ಥಿತಿ ಉದ್ಭವವಾಗಲಿದೆ ಎಂದು ವಿಜಯೇಂದ್ರ ಎಚ್ಚರಿಸಿದ್ದಾರೆ.

ಭಾರತ ಆರ್ಥಿಕವಾಗಿ ಬಲಿಷ್ಠ: ಜೋಶಿ

ಹುಬ್ಬಳ್ಳಿ: ಇಡೀ ವಿಶ್ವದಲ್ಲಿ ಜಾಗತಿಕ ಸಮಸ್ಯೆ ಎದುರಾಗಿದೆ. ಹಲವು ತಿಂಗಳು ಕಳೆದರು ದೇಶದಲ್ಲಿ ಯಾವುದೇ ಸಮಸ್ಯೆಯಾಗದಂತೆ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಉತ್ತಮವಾಗಿ ನಿರ್ವಹಣೆ ಮಾಡಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದರು.



ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜೈವಿಕ ಅನಿಲ ಹೊಸ ಚಿಂತನೆಗಳ ಅನುಸರಿಸಲಾಗುತ್ತಿದೆ. ಎಲ್‌ಪಿಜಿ, ಕ್ರೂಡ್ಆಯಿಲ್ ದರ ಹೆಚ್ಚಾದರೂ ಜನರಿಗೆ ಸಮಸ್ಯೆಯಾಗದಂತೆ ನೀಡಲಾಗುತ್ತಿದೆ. ಮುಂದೆ ದೇಶಕ್ಕೆ ದೊಡ್ಡ ಸಮಸ್ಯೆಯಾಗಬಾರದು ಎಂಬ ದೂರ ದೃಷ್ಟಿಯಿಂದ ಪ್ರಧಾನಿ ಮೋದಿ ಅವರು ಕರೆ ನೀಡಿದ್ದಾರೆ ಎಂದರು. ಇಡೀ ವಿಶ್ವಕ್ಕೆ ಅತೀ ದೊಡ್ಡ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದ್ದರೂ ಸಹ ಭಾರತ ಆರ್ಥಿಕವಾಗಿ ಬಲಿಷ್ಠವಾಗಿದೆ. ಪ್ರಧಾನಿ ಮೋದಿ ಅವರ ಕರೆ ಎಲ್ಲರೂ ಪಾಲಿಸಬೇಕು. ಪೆಟ್ರೋಲ್, ಡೀಸೆಲ್ ಸಮಸ್ಯೆ ಎದುರಾಗಲ್ಲ ಎಂದು ತಿಳಿಸಿದರು.

ಬೆಂಗಳೂರು ಹಾಗೂ ಮುಂಬೈ ಮಧ್ಯೆ ವಂದೇ ಭಾರತ ರೈಲು ಜೂನ್‌ನಲ್ಲಿ ಆರಂಭಿಸಲಾಗುತ್ತಿದೆ. ವಿದ್ಯುತೀಕರಣ ಕಾಮಗಾರಿ ವೇಗವಾಗಿ ಸಾಗಿದ್ದು, ಭಾರತ ವಿಶ್ವದಲ್ಲಿ ವಿದ್ಯುತೀಕರಣ ಹೊಂದಿದ ರೈಲೆ ಸಂಪರ್ಕದಲ್ಲಿ 2 ನೇ ಸ್ಥಾನದಲ್ಲಿ ಇದೆ ಎಂದು ಹೇಳಿದರು.

ನಿಯೋಜನೆ ಆದೇಶ ಹಿಂಪಡೆಯಲು ಆಗ್ರಹ

ಬೆಂಗಳೂರು: ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಕಾರ್ಯಭಾರ ಕಡಿಮೆ ಇರುವ ಉಪನ್ಯಾಸಕರನ್ನು ನಿಯೋಜನೆ ಮಾಡುವ ಆದೇಶವನ್ನು ಸರ್ಕಾರ ಕೂಡಲೇ ಹಿಂಪಡೆಯಬೇಕು ಎಂದು ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆ ಆಗ್ರಹಿಸಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ಹೊರಡಿಸಿರುವ ಸಂಘಟನೆಯ ರಾಜ್ಯ ಕಾರ್ಯದರ್ಶಿ ರಾಜೇಶ್ ಭಟ್ ಅವರು, ಕಾರ್ಯಭಾರ ಕಡಿಮೆ ಇರುವ ಖಾಯಂ ಉಪನ್ಯಾಸಕರಿಗೆ ಹೆಚ್ಚುವರಿ ಕಾರ್ಯಭಾರವನ್ನು ನೀಡುವ ಹೆಸರಿನಲ್ಲಿ ಮೇ 7 ರಂದು ಆದೇಶ ಹೊರಡಿಸಲಾಗಿತ್ತು. 320 ವಿದ್ಯಾರ್ಥಿಗಳಿಗೆ 1 ಉಪನ್ಯಾಸಕರು (1:320 ಅನುಪಾತ) ಎಂಬ ಅನುಪಾತದ ಆಧಾರದ ಮೇಲೆ ಕಾರ್ಯ ಭಾರವನ್ನು ಪದವಿಪೂರ್ವ ಇಲಾಖೆ ಮತ್ತು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ತಿಳಿಸಿದ್ದಾರೆ. ಈ ಅನುಪಾತದ ಪ್ರಕಾರ ಓರ್ವ ಉಪನ್ಯಾಸಕರನ್ನು ಮೂರು ದಿನ ಒಂದು ಕಾಲೇಜಿಗೆ ಉಳಿದ ಮೂರು ದಿನ ಇನ್ನೊಂದು ಕಾಲೇಜಿಗೆ ನಿಯೋಜನೆ ಮಾಡಲು ಆದೇಶಿಸಲಾಗಿದೆ. ಇದು ಜಾರಿಗೆ ಬಂದರೆ ರಾಜ್ಯಾದ್ಯಂತ ಸಾವಿರಾರು ಜನ ಅನುಭವಿ ಹಾಗೂ ಪ್ರತಿಭಾವಂತ ಅತಿಥಿ ಉಪನ್ಯಾಸಕರು ಕೆಲಸ ಕಳೆದುಕೊಂಡು ಬೀದಿ ಪಾಲಾಗುತ್ತಾರೆ ಎಂದು ಹೇಳಿದ್ದಾರೆ.

ಆದ್ದರಿಂದ ಸರ್ಕಾರ ಆದೇಶವನ್ನು ಹಿಂಪಡೆಯಬೇಕು. ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಅತಿಥಿ ಉಪನ್ಯಾಸಕರ ಸೇವೆಯನ್ನು ರಾಜ್ಯ ಸರ್ಕಾರ ಈ ಕೂಡಲೇ ಸಕ್ರಮಗೊಳಿಸಿ, ಅವರನ್ನು ಖಾಯಂ ಉಪನ್ಯಾಸಕರಾಗಿ ನೇಮಕ ಮಾಡಿಕೊಳ್ಳಬೇಕೆಂದರು.

ಮಿತವ್ಯಯದ ಸಂದೇಶ

ಗದಗ: ಇಸ್ರೇಲ್, ಅಮೇರಿಕಾ, ಇರಾನ್ ಯುದ್ಧ ಮುಗಿಯದ ಕಾರಣ ಮುಂಜಾ ಗ್ರತಾ ಕ್ರಮವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಪೆಟ್ರೋಲ್, ಡಿಸೇಲ್ ಮಿತವ್ಯಯದ ಸಂದೇಶ ಕೊಟ್ಟಿದ್ದಾರೆ. ಕಾಂಗ್ರೆಸ್‌ನವರಿಗೆ ತ್ಯಾಗ, ದೇಶ ಭಕ್ತಿ ಅನ್ನುವುದೇ ಗೊತ್ತಿಲ್ಲ, ಕಾಂಗ್ರೆಸ್‌ನವರಿಗೆ ಜನ ಮಾನಸದಲ್ಲಿ ದೇಶ ಭಕ್ತಿ ಆಳವಾಗಿ ಊರಿದೆ ಎಂಬುದು



ಗೊತ್ತಿಲ್ಲ, ವಿರೋಧ ಮಾಡುವುದರ ಸಲುವಾಗಿ ವಿರೋಧ ಮಾಡುತ್ತಾರೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಇರಾನ್ ಇಸ್ರೇಲ್, ಅಮೇರಿಕಾ ಯುದ್ಧ ನಡೆಯುತ್ತಿದೆ. ಗಲ್ಫ್ ರಾಷ್ಟ್ರದ ಯುದ್ಧ ಮುಗಿಯುವಂತೆ ಕಾಣುತ್ತಿಲ್ಲ, ಉಕ್ರೇನ್ ರಷ್ಯಾ ಯುದ್ಧ ಆದಾಗ ಬಹಳಷ್ಟು ಸಮಸ್ಯೆ ಆಗಿತ್ತು. ರಸಗೊಬ್ಬರ ಕಚ್ಚಾವಸ್ತುಗಳ ಸಮಸ್ಯೆ ಆಗಿತ್ತು. ಈಗ ಪೆಟ್ರೋಲ್, ಡಿಸೇಲ್, ಆಯಿಲ್ ಸಮಸ್ಯೆ ಆಗುತ್ತಿದೆ.

ಇರಾನ್ ದೇಶದ ಮೇಲೆ ಅವಲಂಬಿತ ವಾಗಿದೇವೆ. ಇಷ್ಟು ದಿನ ನರೇಂದ್ರ ಮೋದಿ ಅವರು ಅಂತಾರಾಷ್ಟ್ರೀಯ ಮಟ್ಟದ ವ್ಯಕ್ತಿತ್ವ ಉಪಯೋಗಿಸಿ ಕಳೆದ ಎರಡು ತಿಂಗಳು ಪೆಟ್ರೋಲ್ ಡಿಸೇಲ್, ಗ್ಯಾಸ್ ಸಮಸ್ಯೆ ಆಗದಂತೆ ನೋಡಿದ್ದರು. ಆಯಿಲ್ ಕಂಪನಿಗಳು ನಷ್ಟದಲ್ಲಿ ವಿತರಣೆ ಮಾಡಿ ದ್ದಾರೆ. ಯುದ್ಧ ಮುಗಿಯುತ್ತೆ ಎಂಬ ನಂಬಿಕೆ ಇತ್ತು. ಆದರೆ, ಯುದ್ಧ ಮುಗಿದಿಲ್ಲ, ಬರುವ ದಿನಗಳಲ್ಲಿ ಪೆಟ್ರೋಲ್ ಡಿಸೇಲ್ ಗ್ಯಾಸ್ ಸಂಕಷ್ಟ ಬರಹಬಹುದು. ಅಂತಾರಾಷ್ಟ್ರೀಯ ಮಟ್ಟದಲ್ಲಿ ದರಗಳು ಹತ್ತು ಪಟ್ಟು ಹೆಚ್ಚಿಗೆ ಆಗಿವೆ. ಅಮೇರಿಕಾ, ಶ್ರೀಲಂಕಾ, ಮಲೇಷಿಯಾ, ಪಾಕಿಸ್ತಾನ ಸೇರಿದಂತೆ ಹಲವು ರಾಷ್ಟ್ರದಲ್ಲಿ ದರ ಏರಿಕೆ ಆಗಿದೆ. ಭಾರತ ದರ ಹೆಚ್ಚಿಗೆ ಆಗದೆ ಇರುವ ದೇಶವಾಗಿದೆ. ಮುಂಜಾಗ್ರತಾ ಕ್ರಮವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಸಂದೇಶ ಕೊಟ್ಟಿದ್ದಾರೆ ಜನರು ನಮ್ಮ ಮಿತವ್ಯಯದಲ್ಲಿ ಬಳಕೆ ಮಾಡಬೇಕು ಎಂದರು.

ಮೀಸಲಾತಿ: 9ನೇ ಪರಿಚ್ಛೇದಕ್ಕೆ ಸೇರಿಸಲಿ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಮಸೂದೆ-2022 ಅನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಲು ಕೇಂದ್ರ ಸರ್ಕಾರ ವಿಫಲವಾದರೆ ರಾಜ್ಯಾದ್ಯಂತ ಆಂದೋಲನ ನಡೆಸಲಾಗುವುದು ಎಂದು ಮಾಜಿ ಸಂಸದ ವಿ.ಎಸ್ ಉಗ್ರಪ್ಪ ಎಚ್ಚರಿಸಿದ್ದಾರೆ.

ನಗರದಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ



ಅವರು, ರಾಜ್ಯದ ಮನವಿಗೆ ಕೇಂದ್ರ ಸರ್ಕಾರ ಯಾವುದೇ ಸ್ಪಂದನೆ ನೀಡಿಲ್ಲ, ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ.25 ರಷ್ಟಿರುವ ಎಸ್ಸಿ ಮತ್ತು ಎಸ್ಟಿ ಸಮುದಾಯಗಳಿಂದ ಮತ ಪಡೆದ ಕರ್ನಾಟಕದ ಬಿಜೆಪಿ ಸಂಸದರು ಮತ್ತು ಕೇಂದ್ರ ಸಚಿವರು ಈ ವಿಷಯದಲ್ಲಿ ಮೌನವಾಗಿದ್ದಾರೆ ಎಂದು ವಾಗ್ದಾಳಿ ನಡೆಸಿದರು. 2022ರಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ನೇತೃತ್ವದ ಹಿಂದಿನ ಬಿಜೆಪಿ ಸರ್ಕಾರವು ಎಸ್ಸಿ ಮೀಸಲಾತಿ ಯನ್ನು ಶೇಕಡಾ 15ರಿಂದ ಶೇಕಡಾ 17ಕ್ಕೆ ಮತ್ತು ಎಸ್ಟಿ ಮೀಸಲಾತಿಯನ್ನು ಶೇ.3 ರಿಂದ ಶೇ.7ಕ್ಕೆ ಹೆಚ್ಚಿಸಿತ್ತು ಎಂದರು.

ಜನಸಂಖ್ಯೆಗೆ ತಕ್ಕ ಮೀಸಲಾತಿ ನೀಡಿ: ಸಂವಿಧಾನವು ಎಸ್ಸಿ ಮತ್ತು ಎಸ್ಟಿ ಸಮುದಾಯಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಸ್ಪಷ್ಟವಾಗಿ ಒದಗಿಸಿದೆ. ಸಂಸತ್ತು, ರಾಜ್ಯ ವಿಧಾನಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಸಾಂವಿಧಾನಿಕ ನಿಬಂಧನೆಗಳ ಅಡಿಯಲ್ಲಿ ಮೀಸಲಾತಿಯನ್ನು ಜಾರಿಗೆ ತರಲಾಗಿದೆ. ಉದ್ಯೋಗದಲ್ಲಿ ಮೀಸಲಾತಿಯನ್ನು ರಕ್ಷಿಸಲು ಏಕೆ ಹಿಂಜರಿಕೆ? ಎಂದು ಉಗ್ರಪ್ಪ ಪ್ರಶ್ನಿಸಿದರು.

ನೈರುತ್ಯ ರೈಲ್ವೆ ಆರ್‌ಪಿಎಫ್ ಸಿಬ್ಬಂದಿ ವಿಶೇಷ ಕಾರ್ಯಾಚರಣೆ ಅಕ್ರಮ ಟಿಕೆಟ್ ದಂಧೆಗೆ ರೈಲ್ವೆ ಸಿಬ್ಬಂದಿ

ರೈಲ್ವೆ ಅಕ್ರಮ ಟಿಕೆಟ್ ದಂಧೆಗೆ ಪೊಲೀಸ್ ಸಿಬ್ಬಂದಿ ಕಡಿವಾಣ

▶ ಅನುಪಾ ನಾಯಕ್

ಬೆಂಗಳೂರು: ಹಬ್ಬ, ಬೇಸಿಗೆರಜೆ, ಮದುವೆಸೀಸನ್‌ಗಳಲ್ಲಿ ರೈಲು ಟಿಕೆಟ್ ಬುಕ್ ಮಾಡುವವರ ಸಂಖ್ಯೆ ಅಧಿಕವಾಗಿರುತ್ತದೆ. ಇದನ್ನೇ ಅಸ್ತ್ರ ಮಾಡಿಕೊಳ್ಳುವ ದಲ್ಲಾಳಿಗಳು ಅಕ್ರಮ ಸಾಫ್ಟ್‌ವೇರ್ ಬಳಸಿ ಟಿಕೆಟ್ ಬುಕ್ ಮಾಡಿ, ಹೆಚ್ಚುವರಿ ಮೊತ್ತಕ್ಕೆ ಟಿಕೆಟ್ ಮಾರಾಟ ಮಾಡುತ್ತಾರೆ. ಇದರಿಂದ ನಿಜವಾದ ಪ್ರಯಾಣಿಕರಿಗೆ ಟಿಕೆಟ್ ಸಿಗದೇ ಪರದಾಟವಂತೂ ಖಚಿತ. ಹೀಗಾಗಿ

ದಿಗಂತ ವಿಶೇಷ

ಈ ಅಕ್ರಮ ಟಿಕೆಟ್ ದಂಧೆಗೆ ಕಡಿವಾಣ ಹಾಕಲು ನೈರುತ್ಯ ರೈಲ್ವೆ ಆರ್‌ಪಿಎಫ್ ಸಿಬ್ಬಂದಿ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ನೈರುತ್ಯ ರೈಲ್ವೆಯ ಆರ್‌ಪಿಎಫ್ ಸಿಬ್ಬಂದಿಗಳು ನಿಜವಾದ ಪ್ರಯಾಣಿಕರಿಗೆ ರೈಲು ಟಿಕೆಟ್‌ಗಳ ನ್ಯಾಯಯುತ ಲಭ್ಯತೆಯನ್ನು ಖಚಿತಪಡಿಸಲು, ಟಿಕೆಟ್ ದಲ್ಲಾಳಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಇತ್ತೀಚೆಗೆ ನಡೆದ ಕಾರ್ಯಾಚರಣೆ ಅಡಿಯಲ್ಲಿ ಅಂದರೆ, ಕಳೆದ ನಾಲ್ಕು ತಿಂಗಳಲ್ಲಿ ಒಟ್ಟು 92 ಪ್ರಕರಣಗಳಲ್ಲಿ 23,29,740 ಮೌಲ್ಯದ ಟಿಕೆಟ್‌ಗಳನ್ನು ಆರ್‌ಪಿಎಫ್ ಸಿಬ್ಬಂದಿಗಳು ವಶಪಡಿಸಿಕೊಂಡಿದ್ದಾರೆ. ಜನವರಿಯಲ್ಲಿ 24 ದಲ್ಲಾಳಿಗಳನ್ನು ಬಂಧಿಸಿ, ಅವರಿಂದ 33,170 ಮೌಲ್ಯದ 23 ಲೈವ್ ಟಿಕೆಟ್ ಹಾಗೂ 82,812 ಮೌಲ್ಯದ 59 ಬಳಸಿದ ಟಿಕೆಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಫೆಬ್ರವರಿಯಲ್ಲಿ 23 ದಲ್ಲಾಳಿಗಳನ್ನು ಬಂಧಿಸಿ, 77,804 ಮೌಲ್ಯದ 48 ಲೈವ್ ಟಿಕೆಟ್, 97,496 ಮೌಲ್ಯದ 65 ಬಳಸಿದ ಟಿಕೆಟ್, ಮಾರ್ಚ್‌ನಲ್ಲಿ 28 ದಲ್ಲಾಳಿಗಳನ್ನು ಬಂಧಿಸಿ, 2,06,967 ಮೌಲ್ಯದ 65 ಲೈವ್ ಟಿಕೆಟ್, 15,88,185 ಮೌಲ್ಯದ 70 ಬಳಸಿದ ಟಿಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಏಪ್ರಿಲ್‌ನಲ್ಲಿ 17 ದಲ್ಲಾಳಿಗಳನ್ನು ಬಂಧಿಸಿ, 81,554 ಮೌಲ್ಯದ 22 ಲೈವ್ ಟಿಕೆಟ್ ಹಾಗೂ 1,61,752 ಮೌಲ್ಯದ 82 ಬಳಸಿದ ಟಿಕೆಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ.



ನಾಲ್ಕು ತಿಂಗಳ ಉಪಲಬ್ಧ ಕಾರ್ಯಚರಣೆ ವಿವರ

ತಿಂಗಳು	ಪ್ರಕರಣ	ಟಿಕೆಟ್ ಮೌಲ್ಯ
ಜನವರಿ	24	1,15,982
ಫೆಬ್ರವರಿ	23	1,75,300
ಮಾರ್ಚ್	28	17,95,152
ಏಪ್ರಿಲ್	17	2,43,306
ಒಟ್ಟು	92	23,29,740

ಟಿಕೆಟ್ ದಲ್ಲಾಳಿಗಳ ವಿರುದ್ಧ ಸೂಕ್ತ ಕ್ರಮ

ಕರ್ನಾಟಕ ಮತ್ತು ಗೋವಾ ರಾಜ್ಯಗಳ ವಿವಿಧ ಪ್ರವಾಸ ಏಜೆನ್ಸಿಗಳು, ಟ್ರಾವೆಲ್ ಕಚೇರಿಗಳು, ಇ-ಸೇವಾ ಕೇಂದ್ರಗಳು, ಅನುಮಾನಾಸ್ಪದ ಸ್ಥಳಗಳಲ್ಲಿ ಹಾಗೂ 139 ಹೆಲ್ಪ್‌ಲೈನ್, ರೈಲ್‌ಮದದ್ ಆಪ್ ಮೂಲಕ ಬಂದ ಪ್ರಯಾಣಿಕರ ದೂರಿನ ಆಧಾರದ ಮೇಲೆ ಆರ್‌ಪಿಎಫ್ ಮತ್ತು ವಾಣಿಜ್ಯ ವಿಭಾಗ ಜಂಟಿಯಾಗಿ ತೀವ್ರ ತಪಾಸಣೆ ನಡೆಸಿದ್ದಾರೆ. ಈ ವೇಳೆ ಅನಧಿಕೃತ ಟಿಕೆಟ್ ವ್ಯವಹಾರದಲ್ಲಿ ತೊಡಗಿರುವವರನ್ನು ಪತ್ತೆಹಚ್ಚಿ ಬಂಧಿಸಿ, ಕಾನೂನು ಕ್ರಮ ಕೈಗೊಳ್ಳುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮಾದರಿಯ ಬೋಗಿ ಪೂರೈಸಲು ಒಪ್ಪಂದ

ಬೆಂಗಳೂರು: ಬೆಂಗಳೂರು ಉಪನಗರ ರೈಲು ಯೋಜನೆಯ ಕಾರಿಡಾರ್-2 ಮತ್ತು ಕಾರಿಡಾರ್- 4 ಕ್ಕೆ ಅಗತ್ಯವಿರುವ 153 ಹವಾನಿಯಂತ್ರಿತ ಬ್ರಾಡ್-ಗೇಜ್ ಮೆಟ್ರೊ ಮಾದರಿಯ ಬೋಗಿಗಳನ್ನು ಪೂರೈಸುವ ಸಂಬಂಧ ಕೆ-ರೈಡ್ ಚೆನ್ನೈನ ಬಿ-ರೈಡ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಂಡಿದೆ.

ಈ ಬೃಹತ್ ಕಾರ್ಯಾದೇಶದ ಒಟ್ಟು ಮೊತ್ತ 1,513.75 ಕೋಟಿಗಳಾಗಿದ್ದು, ಭವಿಷ್ಯದಲ್ಲಿ ಬೆಂಗಳೂರು ಹಾಗೂ ಸುತ್ತಮುತ್ತಲಿನ ಜನತೆಗೆ ಇದೊಂದು ಅತ್ಯಂತ ವಿಶ್ವಾಸಾರ್ಹ ಮತ್ತು ಸುಸ್ಥಿರ ಸಾರಿಗೆ ವ್ಯವಸ್ಥೆಯಾಗಿ ಹೊರಹೊಮ್ಮಲಿದೆ. ಗುತ್ತಿಗೆಯ ಅನ್ವಯ, ಮುಂದಿನ 18 ತಿಂಗಳೊಳಗೆ ಐಸಿಎಫ್ ಸಂಸ್ಥೆಯು ಬೋಗಿಗಳ ಪೂರೈಕೆಯನ್ನು ಕಡ್ಡಾಯವಾಗಿ ಆರಂಭಿಸಬೇಕಿದೆ.

ಬೆಂಗಳೂರು ಉಪನಗರ ರೈಲು ಯೋಜನೆಯ ಪಾಲಿಗೆ ಈ ಕಾರ್ಯಾದೇಶವು ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ. ಬಿ-ರೈಡ್ ಜೊತೆಗಿನ ಈ ಪಾಲುದಾರಿಕೆಯ ಮೂಲಕ, ಕಾರಿಡಾರ್ -2 ಮತ್ತು 4ರ ಟ್ರ್ಯಾಕ್ ಮತ್ತು ವ್ಯವಸ್ಥೆಗಳ ಮೂಲಸೌಕರ್ಯ ಕಾಮಗಾರಿ ಪೂರ್ಣಗೊಳ್ಳುವಷ್ಟರಲ್ಲಿ, ಅಗತ್ಯವಾಗಿರುವ ರೈಲು ಬೋಗಿಗಳು ಲಭ್ಯವಿರುವುದನ್ನು ನಾವು ಖಚಿತಪಡಿಸಿಕೊಳ್ಳುತ್ತಿದ್ದೇವೆ.
■ ಲಕ್ಷ್ಮಣ್ ಸಿಂಗ್, ವ್ಯವಸ್ಥಾಪಕ ನಿರ್ದೇಶಕ, ಕೆರೈಡ್

ಸಂಪಾದಕೀಯ

ವಿಜಯ್ ಭಿನ್ನ ಹಾದಿ ತುಳಿಯಲಿ

ಕೊನೆಗೂ ತಮಿಳುನಾಡಿನ ಅತಂತ್ರ ಪರಿಸ್ಥಿತಿ ಕೊನೆಗೊಂಡಿದ್ದು, ಬಹುಮತಕ್ಕೆ ಬೇಕಾದ ಸಂಖ್ಯೆಯನ್ನು ಗಳಿಸಲು ಟಿವಿಕೆ ಚಿತ್ರನಟ ಜೋಸೆಫ್ ವಿಜಯ್ ಸಫಲರಾಗಿದ್ದಾರೆ. ರಾಜ್ಯಪಾಲರ ಆಹ್ವಾನದಂತೆ ವಿಜಯ್ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿಯೂ ಆಗಿದೆ. ಮುಂದಿನ ರಾಜಕೀಯ ಜೀವನ ಸುಲಭದ ಹಾದಿಯೇನಲ್ಲ, ಕಠಿಣ ಹಾದಿ ತಮ್ಮ ಮುಂದೆ ಕಾದಿದೆ ಎಂಬ ಸಂಕೇತವನ್ನೂ ವಿಜಯ್‌ಗೆ ಆರಂಭದಲ್ಲೇ ಲಭಿಸಿದೆ. ಬಹುಮತಕ್ಕೆ ಬೇಕಾದಷ್ಟೇ ಬೆಂಬಲ ಸಿಕ್ಕಿರುವುದರಿಂದ ಮೊತ್ತಮೊದಲಾಗಿ ವಿಧಾನಸಭೆಯಲ್ಲಿ ವಿಶ್ವಾಸಮತ ಸಾಬೀತುಪಡಿಸುವ ದೊಡ್ಡ ಸವಾಲು ಅವರ ಮೇಲಿದೆ. ಎರಡು ಕ್ಷೇತ್ರಗಳಿಂದ



ಗೆದ್ದಿರುವ ವಿಜಯ್ ಒಂದು ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗಿರುವುದರಿಂದ, ಪಕ್ಷದ ಒಬ್ಬರು ಸ್ಪೀಕರ್ ಆಗಿ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ಸಂಖ್ಯೆಯ ಕಸರತ್ತನ್ನು ನಾಜೂಕಿನಿಂದ ನಿಭಾಯಿಸಬೇಕಿದೆ. ತಕ್ಷಣಕ್ಕೆ ವಿಜಯ್ ಸರಕಾರವನ್ನು ಉರುಳಿಸಲು ಯಾರೂ ಬಯಸದಿರುವುದರಿಂದ ಸದನದಲ್ಲಿ ಬಹುಮತ ಸಾಧಿಸುವುದು ಹೆಚ್ಚೇನೂ ಕಷ್ಟವಾಗಲಾರದೇನೋ.

ಆದರೆ ವಿಜಯರ ಮುಂದಿನ ದೊಡ್ಡ ಸವಾಲಿರುವುದು ಒಂದೆಡೆಯಿಂದ ತಾವು ನೀಡಿದ ಆಶ್ವಾಸನೆಗಳನ್ನು ನೆರವೇರಿಸುವುದು, ಹಾಗೂ ಇನ್ನೊಂದೆಡೆಯಿಂದ ಮೈತ್ರಿ ಸರಕಾರವನ್ನು ತೂಗಿಸಿಕೊಂಡು ಹೋಗುವುದರಲ್ಲಿ. ಚುನಾವಣಾ ಪೂರ್ವದಲ್ಲಿ ಸಾಕಷ್ಟು ಉಚಿತ ಕೊಡುಗೆಗಳನ್ನು ಘೋಷಿಸಿರುವುದರಿಂದ ಅದನ್ನು ಅನುಷ್ಠಾನಿಸುವುದು ಅವರಿಗೆ ಅನಿವಾರ್ಯವಾಗಿದೆ. ಇದರೊಂದಿಗೆ, ಹಿಂದಿನ ಡಿಎಂಕೆ ಸರಕಾರವು ಸರಕಾರಿ ಬೊಕ್ಕಸವನ್ನು ಬಹುತೇಕ ಖಾಲಿ ಮಾಡಿರುವುದರಿಂದ ಅನುಷ್ಠಾನದ ಮುಂದಿನ ದೊಡ್ಡ ಸವಾಲೂ ಇದೆ.

ಎಲ್ಲಕ್ಕಿಂತ ಮುಖ್ಯವಾಗಿ ಕಾಂಗ್ರೆಸ್ ಮತ್ತು ಎಡಪಕ್ಷಗಳ ಬೆಂಬಲವು ವಿಜಯ್‌ಗೆ ದೊಡ್ಡ ಹೊಲವಾಗಿ ಪರಿಣಮಿಸಲಿದೆ. ಅವುಗಳ ಧೋರಣೆಗಳು ಸಮಜಾಯಿಷಿಯಾಗಿವೆ. ಈಗಾಗಲೆ ಪ್ರಮಾಣವಚನ ಸಮಾರಂಭದಲ್ಲಿ ವಂದೇಮಾತರಂಗೀತೆಹಾಡಿದ್ದಕ್ಕಾಗಿಸಿಪಿಎಂಅಪಸ್ವರವೆತ್ತಿದೆ.ವಿಜಯ್ ಅವರು ಕಾಂಗ್ರೆಸ್‌ಮತ್ತುಎಡಪಕ್ಷಗಳ ಒತ್ತಡಕ್ಕೊಳಗಾಗದೆ, ತಮ್ಮದೇ ಸ್ವತಂತ್ರ ನಿಲುವಿನೊಂದಿಗೆ ಕಾರ್ಯ ನಿರ್ವಹಿಸಬೇಕಾಗಿರುವುದು ಎಲ್ಲಕ್ಕಿಂತ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ರಾಜಕೀಯ ಅನುಭವಿಗಳ ಸಲಹೆ ಪಡೆಯುವುದೊಳಿತು. ಕೇಂದ್ರ ಸರಕಾರದ ಜತೆ ಸಂಘರ್ಷಕ್ಕಿಳಿಯದೆ ಸಮನ್ವಯದಿಂದ ಕಾರ್ಯಾಚರಿಸುವುದು ಅವಶ್ಯವಾಗಿದೆ. ಹಿಂದಿನ ಡಿಎಂಕೆ ಸರಕಾರದಂತೆ ಪ್ರಾದೇಶಿಕಪ್ರತ್ಯೇಕತೆಯನ್ನು ಬೆಂಬಲಿಸದೆ, ಸನಾತನಧರ್ಮದ ದ್ವೇಷವನ್ನು ಪೋಷಿಸದೆ ಸಮರಸತೆಯಿಂದ ಹೊಣೆ ನಿಭಾಯಿಸಬೇಕಾಗಿದೆ. ದ್ವೇಷ ಭಾವನೆ ಬೆಳೆಸುವ 'ದ್ರಾವಿಡ ರಾಜಕೀಯ'ದಿಂದ ಬೇರೆಯೇ ಆದ ಭಿನ್ನ ಹಾದಿಯನ್ನು ವಿಜಯ್ ತುಳಿಯುವುದು ಒಳಿತು.

ಹಾರುವತಟ್ಟೆಗಳ ರಹಸ್ಯದ ಬಾಗಿಲು ತೆರೆದ ಅಮೆರಿಕ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com

ಕತ್ತಲರಾತ್ರಿಯಲ್ಲಿ ಆಕಾಶದತ್ತ ಮುಖಮಾಡುವ ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿ ಒಂದಷ್ಟು ಪ್ರಶ್ನೆಗಳು ಮೂಡಿಯೇ ಮೂಡುತ್ತವೆ. ಈ ಬ್ರಹ್ಮಾಂಡದಲ್ಲಿ ನಾವು ಒಬ್ಬಂಟಿಯೇ ಅಥವಾ ಮೇಲೆ ಕಾಣುವ ಈ ಅಗಣಿತ ತಾರೆಗಳಲ್ಲಿ ನಮ್ಮಂತೆಯೇ ಇನ್ನೊಂದು ಸೌರವ್ಯೂಹವಿದ್ದು, ಆದರಲ್ಲೊಂದು ಗ್ರಹದಲ್ಲಿ ನಮ್ಮಂತೆಯೇ ಇನ್ನೊಂದು ನಾಗರಿಕತೆ ವಾಸಿಸುತ್ತಿರಬಹುದೇ? ಹಾಗೇನಾದರೂ ಇದ್ದರೆ ಯಾಕಿನ್ನೂಇದುವರೆಗೂ ಯಾರೂ ತಮ್ಮ ಇರುವಿನ ಬಗೆಗೊಂದು ಸುಳಿವನ್ನೂ ಕೊಟ್ಟಿಲ್ಲ ಅಥವಾ ಯಾಕೆ ನಮ್ಮನ್ನು ಮಾತನಾಡಿಸಲಿಕ್ಕೆ ಬಂದಿಲ್ಲ? ಎಂದು ನಮಗೆಲ್ಲರಿಗೂ ಒಂದಲ್ಲ ಒಂದು ಬಾರಿ ಅನ್ನಿಸಿಯೇ ಅನ್ನಿಸಿರುತ್ತದೆ. ಆದರೆ, ಈ ಪ್ರಶ್ನೆ ಬೇರೆಲ್ಲಾ ಅನ್ಯಗ್ರಹಜೀವಿಗಳು ನಮಗಿಂತಾ ತಾಂತ್ರಿಕವಾಗಿ ಮುಂದುವರಿದವರಾಗಿರಬೇಕು ಎಂದು ಊಹಿಸಿಕೊಂಡು ಬಿಡುತ್ತದೆ. ಅವರು ನಮಗಿಂತಲೂ ತಂತ್ರಜ್ಞಾನದಲ್ಲಿ ಹಿಂದುಳಿದಿರಬಹುದು, ಅಥವಾ ಅವರ ತಂತ್ರಜ್ಞಾನಗಳು, ವಿಜ್ಞಾನಗಳು, ಮತ್ತವುಗಳ ನಿಯಮಗಳೇ ಬೇರೆಯಿರಬಹುದು. ತಂತ್ರಜ್ಞಾನದಲ್ಲಿ ಮುಂದುವರೆದರೂ ಬೇರೆ ಗ್ರಹಗಳಲ್ಲೂ ಜೀವಿಗಳಿರಬಹುದೇ ಎಂಬ ಪ್ರಶ್ನೆಯೇ ಇನ್ನೂ ಅವರಿಗೆ ಮೂಡದಿರಬಹುದು, ಅಥವಾ ಬೇರೆಯವರನ್ನು ಹುಡುಕಿಕೊಂಡು ಹೋಗುವ ಅಗತ್ಯತೆಯೇ ಕಂಡುಬರದಿರಬಹುದು. ನಮ್ಮ ಈ ಜಗತ್ತು ಅದೆಷ್ಟು ದೊಡ್ಡದೆಂದರೆ, ನಮ್ಮದೇ ಪಕ್ಕದ ಆಂಡ್ರೋಮಿಡಾ ಗೆಲಾಕ್ಸಿಯ ತಾರೆಯ ಸುತ್ತ ಸುತ್ತುತ್ತಿರುವ ಗ್ರಹವೊಂದರಲ್ಲಿ ನಾಗರೀಕತೆಯಿದ್ದರೂ ನಾವು ಅವರಿಗೆ ಕಂಡುಬರುವ ಸಾಧ್ಯತೆಯೇ 0.00001%. ಪಕ್ಕದ ಗೆಲ್ಯಾಕ್ಸಿ ಬಿಡಿ, ನಮ್ಮದೇ ಆಕಾಶಗಂಗೆ ಗೆಲ್ಯಾಕ್ಸಿಯಲ್ಲಿಯೇ, ನಮ್ಮಷ್ಟೇ ತಾಂತ್ರಿಕವಾಗಿ ಮುಂದುವರಿದ ಜೀವಿಗಳಿದ್ದರೂ ಅವರು ನಮ್ಮನ್ನು ಗಮನಿಸುವ ಸಾಧ್ಯತೆ 0.0001%.

ಹೋಗಲಿ, ಇಷ್ಟೆಲ್ಲಾ ಪ್ರಶ್ನೆ ಮೂಡಿರುವ ನಾವೇನು ಸಾಧಿಸಿದ್ದೇವೆ? ನಾವೆಷ್ಟು ಗ್ರಹಗಳಿಗೆ ಅಥವಾ ಸೌರವ್ಯೂಹಗಳಿಗೆ ಭೇಟಿನೀಡಿದ್ದೇವೆ? ಇನ್ನೂ ನಮ್ಮದೇ ಚಂದ್ರನ ಮೇಲಷ್ಟೇ ಕಾಲಿಟ್ಟು ಬಂದಿರುವುದು. ನಮ್ಮ ಪಕ್ಕದ ಗ್ರಹಗಳ ಮೇಲಂತೂ ಇನ್ನೂ ಕಾಲೇ ಇಟ್ಟಿಲ್ಲ, ಆದಾದಮೇಲೆ ಯಾವ ಗ್ರಹದ ಮೇಲೂ ನಮ್ಮ ವಾಹನಗಳು ಇಳಿದಿಲ್ಲ, ನಮ್ಮ ಸೌರವ್ಯೂಹವನ್ನು ದಾಟಿ ಒಂದೇ ಒಂದು ಆಕಾಶಕಾಯ ಹೋಗಿದೆ, ಹೌದು, ಆದರೆ ಅದೇನೂ ಅನ್ಯಗ್ರಹಜೀವಿಗಳ ಹುಡುಕಾಟದಲ್ಲಿ ಹೋಗಿಲ್ಲ ಅಥವಾ ಯಾವುದಾದರೂ ಅನ್ಯಗ್ರಹಜೀವಿಗಳ ಕೈಗೆ ಅದು ಸಿಕ್ಕರೂ ಅವರಿಗೆ ದಾರಿತೋರಿಸುತ್ತಾ ಭೂಮಿಗೆ ಕರೆತರಬಲ್ಲ ಯಾವ ಸೌಲಭ್ಯವನ್ನೂ ಹೊಂದಿಲ್ಲ, ಸದ್ಯಕ್ಕೆ ಅದೊಂದು ಬ್ರಹ್ಮಾಂಡದ ಅಗಾಧತೆಯಲ್ಲಿ ತೇಲುತ್ತಿರುವ ಒಂದು ಧೂಳಿನ ಕಣವಷ್ಟೆ. ಆದರೂ, ನಾವು ಇನ್ನೂ ಯಾಕ ಬರಲಿಲ್ಲವ್ವ ಹುಬ್ಬಳ್ಳಿಯಾವ ಎಂಬ ಹಾಡುಹಾಡುತ್ತಾ, ಯಾರೋ ಬಂದಿಳಿಯುವ ಕನಸಿನಲ್ಲಿದ್ದೇವೆ.

ಆದರೆ,ಈಪ್ರಶ್ನೆಗೆಇಂಬುಕೊಡುವಂತೆ, ಕ್ರಿಸ್ತಪೂರ್ವದಿಂದಲೂಇಂದಿನವರೆಗೆ ಜಗತ್ತಿನಾದ್ಯಂತ ಹಲವಾರು ಬಾರಿ ಅನ್ಯ ಗ್ರಹ ಜೀವಿಗಳು ಮತ್ತವರ ವಾಹನಗಳು ಕಂಡುಬಂದಂತಹಹಲವಾರುಘಟನೆಗಳು ದಾಖಲಾಗಿವೆ. ಆದರಲ್ಲಿ ಅರ್ಧಕ್ಕರ್ಧ ಸುಳ್ಳುಸುದ್ದಿಗಳು ಅಥವಾ ದೃಶ್ಯಭ್ರಮೆಗಳು ಎಂದುಕೊಂಡರೂ, ಹಲವಾರು ಘಟನಾವಳಿಗಳು ಮತ್ತು ಸಾಕ್ಷ್ಯಗಳು ಸುಳ್ಳೆಂದು ಅಲ್ಲಗಳೆಯಲಾಗದಷ್ಟು ಗಟ್ಟಿಯಿವೆ, ವಿಚಿತ್ರವಾಗಿಯೂ ಇವೆ. ತೊಂಬತ್ತರ ದಶಕದಲ್ಲಿ ಪ್ರದೀಪ್ ಕೆಂಜಿಗೆ ಮತ್ತು ಪೂರ್ಣಚಂದ್ರ ತೇಜಸ್ವಿಯವರು ಬರೆದ ಫ್ಲೈಯಿಂಗ್ ಸಾಸರ್ ಎಂಬ ಪುಸ್ತಕ ಸರಣಿ ಕನ್ನಡದ ಓದುಗರಿಗೆ ಈ ವಿಚಾರದ ಬಗ್ಗೆ ಬಹಳಷ್ಟು ರಸವತ್ತಾದ ಮಾಹಿತಿಗಳನ್ನು ಉಣಬಡಿಸಿವೆ. ಈ ಅನ್ಯಗ್ರಹಜೀವಿ ಕುತೂಹಲಿಗಳ ಉತ್ಸಾಹಕ್ಕೆ ಇಂಬುಕೊಡುವಂತೆ, ಅಮೆರಿಕಾ ಸರ್ಕಾರವು ಇತ್ತೀಚೆಗೆ ಒಂದು ಐತಿಹಾಸಿಕ ಕ್ರಮ ಕೈಗೊಂಡಿದೆ. ಅದೇನೆಂದರೆ, ಯುಎಫ್‌ಒ (UFO)ಅಥವಾ ಯುಎಪಿ (UAP - Unidentified Anomalous Phenomena) ಬಗ್ಗೆ ತನ್ನ ಬಳಿಯಿದ್ದ ಮಾಹಿತಿಗಳಲ್ಲಿ ದೊಡ್ಡದೊಂದು ಭಾಗವನ್ನು 2026ರ ಮೇ೮ರಂದು ಪೆಂಟಗನ್‌ನಿಂದ ಬಿಡುಗಡೆ ಮಾಡಿದೆ. ಈ ರೀತಿಯ ಮಾಹಿತಿಗಳು ಹೊಸದೇನೂ ಅಲ್ಲವಾದರೂ, ಈ ಮುಂಚೆ ಸಣ್ಣಪುಟ್ಟ ಅಥವಾ ಒಂದೆರಡು ಘಟನೆಗಳನ್ನಷ್ಟೆ ಹೊರಬಿಡುತ್ತಿದ್ದ ಅಮೇರಿಕಾ ಸರ್ಕಾರ, ಈ ಬಾರಿ ಬಹುದೊಡ್ಡ ಮಾಹಿತಿಯ ಕಣಜವನ್ನೇ ಸಾರ್ವಜನಿಕರ ಅವಗಾಹನೆಗಾಗಿ ಬಿಡುಗಡೆ ಮಾಡಿದೆ. ಹಾಗೂ ಪ್ರತಿ ಕೆಲವು ವಾರಗಳಿಗೊಮ್ಮೆ ಹೊಸ ಫೈಲ್‌ಗಳು ಬರುತ್ತವೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಸಧ್ಯಕ್ಕೆ ಈ ಫೈಲ್‌ಗಳು ಜಗತ್ತಿನಾದ್ಯಂತ ಸಂಚಲನ ಸೃಷ್ಟಿಸಿವೆ. ಇದು ಕೇವಲ ದಾಖಲೆಗಳ ಬಿಡುಗಡೆಯಲ್ಲ, ಬದಲಿಗೆ ಮಾನವ ಕುತೂಹಲದ ಒಂದು ಹೊಸ ಅಧ್ಯಾಯದ ಆರಂಭ.

ಹಲವು ದಶಕಗಳಿಂದ ಜನರ ಮನಸ್ಸಿನಲ್ಲಿ ''ನಿಜವಾಗಿಯೂ ಅನ್ಯಗ್ರಹ ಜೀವಿಗಳು ಇದ್ದಾರೆಯೇ?'', ''ಅಮೆರಿಕ ಸರ್ಕಾರ ಏನನ್ನಾದರೂ ಮರೆಮಾಚಿತ್ತೇ?'' ಎಂಬ ಪ್ರಶ್ನೆಗಳು ಕಾಡುತ್ತಲೇ ಇದ್ದವು. ಈಗ ಬಿಡುಗಡೆಯಾದ ಹೊಸ ದಾಖಲೆಗಳು ಈ ಕುತೂಹಲಕ್ಕೆ ಮತ್ತಷ್ಟು ಬೆಂಕಿ ಹಚ್ಚಿವೆ. ಕೆಲವರಿಗೆ ಇದು ವಿಜ್ಞಾನ ಯುಗದ ದೊಡ್ಡ ರಹಸ್ಯದ ಬಾಗಿಲು ತೆರೆಯುವ ಕ್ಷಣವಾಗಿದ್ದರೆ, ಮತ್ತೊಬ್ಬರಿಗೆ ಇದು ಸರ್ಕಾರದ ಪಾರದರ್ಶಕತೆಯ ಹೊಸ ಅಧ್ಯಾಯವಾಗಿದೆ. ಅಮೆರಿಕದ ರಕ್ಷಣಾ ಇಲಾಖೆ ಮತ್ತು ಹಲವು ಗುಪ್ತಚರ ಸಂಸ್ಥೆಗಳು ಸುಮಾರು 160ಕ್ಕೂ ಹೆಚ್ಚು ಡೀಕ್ಲಾಸಿಫೈಡ್ ದಾಖಲೆಗಳು, ಚಿತ್ರಗಳು, ವಿಡಿಯೋಗಳು ಮತ್ತು ಸಾಕ್ಷ್ಯಾಧಾರಗಳನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಿವೆ. ಈ ದಾಖಲೆಗಳು 1940ರ ದಶಕದಿಂದ ಹಿಡಿದು ಇತ್ತೀಚಿನ ವರ್ಷಗಳವರೆಗೆ ನಡೆದ ವಿಚಿತ್ರ ಆಕಾಶಘಟನೆಗಳ ಕುರಿತು ಮಾಹಿತಿಯನ್ನು ಒಳಗೊಂಡಿವೆ.

ಈ ಬಿಡುಗಡೆಗೆ ಮತ್ತಷ್ಟು ಕುತೂಹಲ ತಂದದ್ದು, ಅಪೋಲೊ ಚಂದ್ರಯಾನ ಮಿಷನ್‌ಗಳ ಕೆಲವು ದಾಖಲೆಗಳು. 1972ರ ಅಪೋಲೊ 11, 12 ಮತ್ತು 17 ಮಿಷನ್'ಗಳಲ್ಲಿ ಖಗೋಳಯಾತ್ರಿಗಳು ಚಂದ್ರನ ಸಮೀಪದಲ್ಲಿ ವಿಚಿತ್ರವಾಗಿ ತೇಲುತ್ತಿದ್ದ ಆಕಾರವೊಂದರ ಬಗ್ಗೆ ಕೆಲವು ಸಂದರ್ಶನಗಳಲ್ಲಿ ಹೇಳಿದ್ದರು. ಅಮೆರಿಕ ಸರ್ಕಾರ ತಕ್ಷಣವೇ ಆ ಎಲ್ಲಾ ಸಂದರ್ಶನಗಳ ಟೇಪ್'ಗಳನ್ನು ವಶಪಡಿಸಿಕೊಂಡಿತ್ತು ಹಾಗೂ ಗಗನಯಾತ್ರಿಗಳಿಗೆ ಆ ಬಗ್ಗೆ ಬೇರೆಲ್ಲೂ ಮಾತನಾಡದಂತೆ ತಾಕೀತು ಮಾಡಿತ್ತು. ಈಗ ಅದೇ ಮಿಷನ್ ವೇಳೆ ಗಗನಯಾತ್ರಿಗಳು ತಮ್ಮ ನೌಕೆಯಲ್ಲಿದ್ದಾಗ ಕಂಡ ಬೆಳಕುಗಳು ಮತ್ತು ತುಂಡುಗಳ ಬಗ್ಗೆ ಮಾತನಾಡಿರುವ ಮಾತುಕತೆಯ ಧ್ವನಿತುಣುಕುಗಳು ಬಿಡುಗಡೆಯಾಗಿವೆ ಹಾಗೂ ಈಗ ಸಾರ್ವಜನಿಕರ ಗಮನ ಸೆಳೆದಿವೆ. ಕೆಲವು ಚಿತ್ರಗಳಲ್ಲಿ ಚಂದ್ರನ ಮೇಲ್ಮೈ ಸಮೀಪ ಕಾಣಿಸಿಕೊಂಡ ಅಜ್ಞಾತ ಆಕಾರಗಳೂ ಇದ್ದವೆಂದು ವರದಿಯಾಗಿದೆ. 1969ರ ಒಂದು ಟೆಕ್ನಿಕಲ್ ಡೀಬ್ರೀಫಿಂಗ್‌ನಲ್ಲಿ ನೀಲ್ ಆರ್ಮ್‌ಸ್ಟ್ರಾಂಗ್, ಬಜ್ ಆಲ್ಡ್ರಿನ್ ಮತ್ತು ಮೈಕಲ್ ಕಾಲಿನ್ಸ್ ಅವರ ನಡುವೆ ನಡೆದ ಚರ್ಚೆಯೂ ಇದೆ. ವಾಯುದಳದ ಪೈಲಟ್ಟುಗಳು ನೋಡಿದ ಅಗಾಧವೇಗದಲ್ಲಿ ಹಾರುವ ತಿರುಗುವ ಸಾಸರ್‌ಗಳು, ಲೋಹದ ವಸ್ತುಗಳು, ಮಧ್ಯ ಆಕಾಶದಲ್ಲಿ ತೇಲುತ್ತಿರುವ ಬೆಳಕಿನ ಉಂಡೆಗಳು ? ಇವುಗಳ ಹಲವಾರು ವಿವರಣೆಗಳಿವೆ.

ಅತ್ಯಂತ ಚರ್ಚೆಯಲ್ಲಿರುವ ವಿಷಯವೆಂದರೆ, ಈ ದಾಖಲೆಗಳಲ್ಲಿ ಹಲವಾರು ಸೇನಾ ಪೈಲಟ್‌ಗಳ ಸಾಕ್ಷ್ಯಗಳಿವೆ. ವೇಗವಾಗಿ ಚಲಿಸುವ, ನಮ್ಮ ತಂತ್ರಜ್ಞಾನಗಳ ಮಿತಿಯಲ್ಲಿ ನಾವು ಊಹಿಸಲೂ ಆಗದ ರೀತಿಯಲ್ಲಿ ದಿಕ್ಕುಬದಲಾವಣೆ ಮಾಡುವ, ಮಾನವ ತಂತ್ರಜ್ಞಾನದ ಗಡಿಯನ್ನು ಮೀರಿದಂತೆ ಕಂಡ ಕೆಲವು ವಸ್ತುಗಳನ್ನು ಅಮೆರಿಕದ ಯುದ್ಧವಿಮಾನ ಪೈಲಟ್‌ಗಳು ಕಂಡಿರುವುದಾಗಿ ವರದಿ ಮಾಡಿದ್ದಾರೆ. ಕೆಲವು ವಿಡಿಯೋಗಳಲ್ಲಿ ಆಕಾಶದಲ್ಲಿ ತೇಲುತ್ತಿದ್ದ ಗೋಳಾಕಾರದ ಬೆಳಕುಗಳು, ''ಫುಟ್ಬಾಲ್'' ಆಕಾರದ ವಸ್ತುಗಳು ಮತ್ತು ವಿಚಿತ್ರ ಚಲನೆಯನ್ನು ತೋರಿಸುವ ದೃಶ್ಯಗಳು ಕಂಡುಬಂದಿವೆ. ಆದರೆ, ಈ ದಾಖಲೆಗಳಲ್ಲಿ ಯಾವುದೇ ದೃಢವಾದ ''ಅನ್ಯ ಗ್ರಹ ಜೀವಿಗಳ'' ಸಾಕ್ಷ್ಯ ಸಿಕ್ಕಿಲ್ಲ ಎಂಬುದನ್ನು ಅಮೆರಿಕ ಸರ್ಕಾರ ಮತ್ತು ನಾಸಾ ಸ್ಪಷ್ಟಪಡಿಸಿವೆ. ಪ್ರಕರಣಗಳು ಇನ್ನೂ ''ಅನಿರ್ಧರಿತ''ವಾಗಿಯೇ ಉಳಿದಿವೆ. ಇದೇ ಕಾರಣಕ್ಕೆ ಜನರಲ್ಲಿ ಕುತೂಹಲ ಕಡಿಮೆಯಾಗದೆ ಮತ್ತಷ್ಟು ಹೆಚ್ಚಾಗಿದೆ.

ಈ ಹೊಸ ದಾಖಲೆಗಳ ಮತ್ತೊಂದು ವಿಶೇಷತೆ ಎಂದರೆ, ಅಮೆರಿಕ ಸರ್ಕಾರ ಈಗ ''ಪೂರ್ಣ ಪಾರದರ್ಶಕತೆ''ಯತ್ತ ಹೆಜ್ಜೆ ಇಡುತ್ತಿದೆ ಎಂಬ ಸಂದೇಶ ನೀಡಿರುವುದು. ಹೊಸ ಯುಎಫ್‌ಒ ವೆಬ್‌ಸೈಟ್ ಆರಂಭವಾದ ಮೊದಲ 12 ಗಂಟೆಗಳಲ್ಲೇ ಕೋಟ್ಯಂತರ ಜನರು ಅದನ್ನು ವೀಕ್ಷಿಸಿದ್ದಾರೆ. ಇದು ಯುಎಫ್‌ಒ ವಿಷಯದ ಮೇಲೆ ಜನರ ಆಸಕ್ತಿ ಎಷ್ಟಿದೆ ಎಂಬುದನ್ನು ತೋರಿಸುತ್ತದೆ. ಇದೀಗ ಪ್ರಮುಖ ಪ್ರಶ್ನೆ ಏನೆಂದರೆ ? ಮುಂದೇನು? ಭವಿಷ್ಯದಲ್ಲಿ ಇನ್ನಷ್ಟು ರಹಸ್ಯ ದಾಖಲೆಗಳು ಹೊರಬರಬಹುದೇ? ಅಮೆರಿಕದ ರಾಷ್ಟ್ರೀಯ ಆರ್ಕೈವ್ಸ್ ಈಗಾಗಲೇ "UAP Records Collection" ಎಂಬ ವಿಶೇಷ ಸಂಗ್ರಹವನ್ನು ರಚಿಸಿದ್ದು, ಇನ್ನೂ ಅನೇಕ ದಾಖಲೆಗಳನ್ನು ಹಂತ ಹಂತವಾಗಿ ಬಿಡುಗಡೆ ಮಾಡುವುದಾಗಿ ಹೇಳಿದೆ. ಹೀಗಾಗಿ ಈಗ ''ರಹಸ್ಯ''ವೆಂದು ಕಾಣುತ್ತಿರುವ ಅನೇಕ ಘಟನೆಗಳಿಗೆ, ಭವಿಷ್ಯದಲ್ಲಿ ವೈಜ್ಞಾನಿಕವಾದ ಉತ್ತರಗಳು ಸಿಗುವ ಸಾಧ್ಯತೆಯಿದೆ. ಆದರೂ ಸಹ, ಈ ಹೊಸ ದಾಖಲೆಗಳು ಜನರ ಕಲ್ಪನೆಗೆ ಹೊಸ ಬಣ್ಣಗಳನ್ನು ತುಂಬಿವೆ. ಕೆಲವರಿಗೆ ಇದು ವಿಜ್ಞಾನ ಮತ್ತು ಅನ್ವೇಷಣೆಯ ಮಹತ್ವವನ್ನು ನೆನಪಿಸುವ ಘಟನೆಯಾದರೆ, ಇನ್ನೊಬ್ಬರಿಗೆ ಇದು ''ನಾವು ಬ್ರಹ್ಮಾಂಡದಲ್ಲಿ ಒಬ್ಬರೇನಾ?'' ಎಂಬ ಶಾಶ್ವತ ಪ್ರಶ್ನೆಗೆ ದಾರಿ ತೋರಿಸುವ ಹೊಸ ಪ್ರಯತ್ನವಾಗಿದೆ. ಇನ್ನಷ್ಟು ವಿಡಿಯೋಗಳು, ಸೇನಾ ದಾಖಲೆಗಳು ಮತ್ತು ಅಂತರಿಕ್ಷ ಮಿಷನ್ ಮಾಹಿತಿಗಳು ಹೊರಬಂದರೆ, ಮಾನವಕುಲದ ಬ್ರಹ್ಮಾಂಡದ ಬಗ್ಗೆ ಇರುವ ತಿಳುವಳಿಕೆಯೇ ಬದಲಾಗಬಹುದು. ಅಥವಾ ಕೊನೆಗೆ ಈ ಎಲ್ಲವೂ ನಮಗೆ ಸಧ್ಯಕ್ಕೆ ಗೊತ್ತಿರುವ ವಿಜ್ಞಾನವೇ ಉತ್ತರಿಸಬಹುದಾದ ಸಾಮಾನ್ಯ ಘಟನೆಗಳೇ ಎಂಬುದೂ ಸಾಬೀತಾಗಬಹುದು. ಯುಎಫ್‌ಒಗಳ ರಹಸ್ಯ ಇನ್ನೂ ಸಂಪೂರ್ಣವಾಗಿ ಬಯಲಾಗಿಲ್ಲ, ಆದಕ್ಕಾಗಿಯೇ ಜಗತ್ತಿನ ಕೋಟ್ಯಂತರ ಜನರು ಇನ್ನೂ ಆಕಾಶವನ್ನು ಕುತೂಹಲದಿಂದ ನೋಡುವುದನ್ನು ನಿಲ್ಲಿಸಿಲ್ಲ.

ಇದರ ಬಗ್ಗೆ ನಿಮಗೂ ಹೆಚ್ಚಿನ ಕುತೂಹಲವಿದ್ದಲ್ಲಿ www.war.gov/UFO/ ಅಥವಾ www.archives.gov/research/topics/uapsಗೆ ಭೇಟಿ ಕೊಟ್ಟು, ಧ್ವನಿಮುದ್ರಿಕೆಗಳನ್ನು ಕೇಳಬಹುದು ಹಾಗೂ ಚಿತ್ರಗಳು, ವಿಡಿಯೋಗಳು ಮತ್ತು ನೋಡಬಹುದು.

ಮೈತ್ರಿ ಬಲಪಡಿಸುವ ಕಾರಣಗಳು

ಭವತು ಕೋಮಲಮತ್ರ ಮನಸ್ತವ ಪ್ರಕೃತಿ ನಿರ್ಮಲತಾಸ್ತು ಸದಾ ಧಿಯಿ ।
ವಚಿಸಿ ನಿಷ್ಕಪಟತಾ ಸದಾಸ್ತುತೇ ಭಜತಿ ಸರ್ವಜನಸ್ತವ ಮಿತ್ರತಾಮ್ ॥

-ಸುವಚನ ಶತಕಮ್

ಶ್ಲೋಕ ಸಾಗರ
• ಡಾ. ಸೋಂದಾ ಭಾಸ್ಕರ ಭಟ್

ನಿನ್ನ ಮನಸ್ಸು ಸದಾ ಮೃದುವಾಗಿರಲಿ, ಬುದ್ಧಿಯಲ್ಲಿ ಸ್ವಭಾವಸಿದ್ಧವಾದ ನಿರ್ಮಲತ್ವವಿರಲಿ. ಮಾತಿನಲ್ಲಿ ಕಪಟತೆ ಇಲ್ಲದಿರಲಿ. ಆಗ ಎಲ್ಲರೂ ನಿಮ್ಮ ಮೈತ್ರಿಯನ್ನು ಬಯಸುತ್ತಾರೆ – ಎಂಬುದು ಶ್ಲೋಕಾರ್ಥ.

ಮನುಷ್ಯ ಸಮಾಜಜೀವಿ. ಎಲ್ಲರೊಳು ಒಂದಾಗಿ ಬದುಕುವುದೇ ನಿಜವಾದ ಬದುಕು. ಆ ಬದುಕಿನಲ್ಲಿಯೇ ನೆಮ್ಮದಿಯಿದೆ, ಸಂತೋಷವಿದೆ. ಬದುಕು ಸಹ್ಯವಾಗಬೇಕಾದರೆ ಮೈತ್ರಿ ಅನಿವಾರ್ಯ. ಮಿತ್ರರನ್ನು ಹೊಂದಿದವರ ಜೀವನ ಚೆನ್ನಾಗಿರುತ್ತದೆ. ಅಂದರೆ ಚೆನ್ನಾಗಿ ಜೀವನ ನಿರ್ವಹಿಸಲು ಮಿತ್ರ ಸಂಕುಲ ಅನಿವಾರ್ಯ.

ಮಿತ್ರ ಪ್ರಾಪ್ತಿ ಸುಲಭವಲ್ಲ. ಇನ್ನಾವುದೋ ಕಾರಣಕ್ಕಾಗಿ ಮಿತ್ರರಾದವರು ಸದಾ ಇರುವುದಿಲ್ಲ. ತಮ್ಮ ಕಾರ್ಯವಾದ ಮೇಲೆ ಬಂದಂತೆಯೇ ತೆರಳಿಬಿಡುತ್ತಾರೆ. ಇದು ಉತ್ತಮ ಮಿತ್ರನ ಲಕ್ಷಣವಲ್ಲ. ಸನ್ಮೈತ್ರಿಯ ನೆಲೆಯೂ ಅಲ್ಲ. ಜೀವನದಲ್ಲಿ ಎಷ್ಟೊಂದು ಜನ ವಿಷಯಾಧಾರಿತವಾಗಿ ಮಿತ್ರರಾಗಿಲ್ಲ. ಆದರೆ ಕಾರ್ಯ ಸಿದ್ಧಿಯಾದ ಮೇಲೆ ಆ ಮೈತ್ರಿ ಉಳಿದಿಲ್ಲ. ಇದಕ್ಕೆ ಕಾರಣ ಯಾರೋ ಒಬ್ಬರು ಕಾರಣರಲ್ಲ. ಎರಡೂ ಕಡೆಯಿಂದ ಮೈತ್ರಿ ದೂರಾಗಲು ಕೊಡುಗೆಯಿರುತ್ತದೆ. ಯಾವ ಮೈತ್ರಿಯಲ್ಲಿ ಸ್ವಾರ್ಥ, ಕುಹಕ, ಸಮಯಸಾಧಕತನ, ಸ್ನೇಹದ ಕೊರತೆ, ಅಸಹಕಾರ ಮನೋಭಾವ ಇರುತ್ತವೆಯೋ ಅಂತ ಮೈತ್ರಿ ನಿರಂತರತೆಯನ್ನು ಕಾಯ್ದುಕೊಳ್ಳುವುದಿಲ್ಲ.

ಎಲ್ಲರೂ ನನ್ನನ್ನು ಪ್ರೀತಿಸಬೇಕು, ಮೆಚ್ಚಿಕೊಳ್ಳಬೇಕು, ನನ್ನನ್ನು ಹಚ್ಚಿಕೊಳ್ಳಬೇಕು ಎಂದು ಬಯಸುವುದಾದರೆ ಪ್ರಧಾನವಾಗಿ ಮೂರು ಪಥ್ಯವನ್ನು ಪಾಲಿಸಬೇಕು. ಕವಿಯು ಹೇಳಿದ ಮೂರು ಅಂಶಗಳನ್ನು ಶತಾಯ ಗತಾಯ ರೂಢಿಸಿಕೊಂಡು ಅಂತೆಯೇ ನಡೆದುಕೊಳ್ಳಬೇಕು. ಅವುಗಳೆಂದರೆ ಮೃದುವಾದ ಮನಸ್ಸು, ಬುದ್ಧಿಯಲ್ಲಿ ನಿರ್ಮಲತ್ವ ಹಾಗೂ ಮಾತಿನಲ್ಲಿ ನಿಷ್ಕಪಟತೆ.

ಮೃದುವಾದ ಮನಸ್ಸು ಹಾಗೂ ಮಾತು ಜನರನ್ನು ಆಕರ್ಷಿಸುತ್ತದೆ. ಇದು ನಡೆಯ ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ. ನಿಷ್ಕಲ್ಮಷ ಮನಸ್ಸು ಹಾಗೂ ಮಾತುಗಳನ್ನು ಸಜ್ಜನರು ಮೆಚ್ಚಿಕೊಳ್ಳುತ್ತಾರೆ ಹಾಗೂ ಇಂತಹ ವ್ಯಕ್ತಿತ್ವವನ್ನು ಬಯಸುತ್ತಾರೆ. ಇಂಥವರ ಸಮೀಪವರ್ತಿಯಾಗಲು ಬಯಸುತ್ತಾರೆ. ಒಮ್ಮೆ ಸಾಮಿಪ್ಯಕ್ಕೆ ಬಂದ ಮೇಲೆ ಅಲ್ಲಿಯೇ ಚಿರಸ್ಥಾಯಿಯಾಗುತ್ತಾರೆ. ಬುದ್ಧಿ ನಿರ್ಮಲವಾಗಿರಬೇಕು. ಇದು ಸ್ವಭಾವಸಿದ್ಧವಾಗಿರಬೇಕು. ಸ್ವಾರ್ಥ ಚಿಂತನೆಯಿರಬಾರದು. ಉತ್ತಮರು ಬಯಸುವುದು ಈ ಬಗೆಯ ಸ್ವಭಾವವುಳ್ಳ ವ್ಯಕ್ತಿಗಳನ್ನು. ಕಪಟ ವಿಲ್ಲದ, ವಂಚಿಸುವ ಮನೋಭಾವವಿಲ್ಲದವರನ್ನು ಸಮಾಜ ಆಧರಿಸುತ್ತದೆ. ಯಾರಿಗೂ ಮೋಸ ಮಾಡದ ಪರರಿಗೆ ಕೇಡು ಬಯಸದ ಬುದ್ಧಿಯುಳ್ಳವರು ಸ್ನೇಹಕ್ಕೆ ಅರ್ಹರಾದವರು. ಮೂರನೆಯದು ಮಾತು. ಅದರಲ್ಲಿಯೂ ಕಿಂಚಿತ್ತೂ ಕಪಟತೆ ಇಲ್ಲದ ಮಾತು. ಈ ಕಾರಣಕ್ಕಾಗಿಯೇ ಅಂಥಹ ವ್ಯಕ್ತಿ ಎಲ್ಲರಿಗೂ ಹತ್ತಿರವಾಗುತ್ತಾನೆ. ಈ ಮೂರು ಅಂಶಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡರೆ ಆತನು ಅಜಾತಶತ್ರು ವಾಗುತ್ತಾನೆ. ಸಜ್ಜನ ಲೋಕವು ಇಂಥವರ ಮೈತ್ರಿಗೆ ಹಾತೊರೆಯುತ್ತದೆ. ಆದ್ದರಿಂದ ಸಭ್ಯತೆಯನ್ನೂ ಶ್ರೇಷ್ಠತೆಯನ್ನೂ ಜನಾನುರಾಗವನ್ನೂ ತಂದುಕೊಡುವ ಈ ಮೂರು ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸೋಣ.

ದೇಶಿ ಗೋವಿನ ಹಾಲು ಭೂಲೋಕದ ಅಮೃತ

ಧರಣಿ ಮಂಡಲ
• ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ನಾವು ಪ್ರತಿನಿತ್ಯ ಸೇವಿಸುವ ಆಹಾರದಲ್ಲಿ ಎರಡು ಭಾಗವಿದೆ. ಒಂದು ರಕ್ತಕ್ಕೆ ಬೇಕಾಗುವ ಶಕ್ತಿ, ಇನ್ನೊಂದು ಮೆದುಳಿಗೆ ಬೇಕಾಗುವ ಖನಿಜ ಸತ್ವಗಳು. ಇವೆರಡನ್ನು ಹೊಂದಿರುವ ಜಗತ್ತಿನ ಏಕೈಕ ಪೇಯ ದೇಶಿ ಗೋವಿನ ಹಾಲು. ಈ ಹಾಲು ಎಲ್ಲಾ ಖನಿಜ ಸತ್ವಗಳನ್ನು ಹೊಂದಿದ್ದು, ರಕ್ತಕ್ಕೆ ಬೇಕಾಗುವ ಶಕ್ತಿಯನ್ನು ಗ್ಲೂಕೋಸ್ ಮೂಲಕ ಒದಗಿಸುತ್ತದೆ. ಇದಕ್ಕೆ ಮುಖ್ಯ ಕಾರಣ ಗೋವು ಸೇವಿಸುವ ಹುಲ್ಲು. ಹುಲ್ಲು ಭೂಮಿಯಲ್ಲಿರುವ ಖನಿಜಗಳನ್ನು ಹೀರಿಕೊಳ್ಳುವ ವಿಶೇಷ ಗುಣವನ್ನು ಹೊಂದಿರುವುದರಿಂದ ಅಂತಹ ಹುಲ್ಲನ್ನು ತಿನ್ನುವ ಗೋವಿನ ಹಾಲಿನಲ್ಲೂ ಆ ಎಲ್ಲಾ ಗುಣ ಮತ್ತು ಖನಿಜ ಸತ್ವಗಳು ಅಡಕವಾಗಿರುತ್ತವೆ. ಆದ್ದರಿಂದ ದೇಶಿ ಹಸುವಿನ ಹಾಲು ಒಂದು ಪರಿಪೂರ್ಣ ಆಹಾರವಾಗಿದೆ.

ತಾಯಿಯ ಎದೆಹಾಲಿನ ನಂತರ ಜೀವಮಾನವಿಡಿ ನಾವು ಸೇವಿಸುವುದು ಗೋವಿನಹಾಲನ್ನು. ದೈನಂದಿನಆಹಾರಕ್ರಮದಲ್ಲಿಎಲ್ಲರೂಉಪಯೋಗಿಸುವ ಆಹಾರ ಪಾನೀಯಗಳಲ್ಲಿ ಹಾಲು ಅತಿ ಮುಖ್ಯವಾದುದಾಗಿದೆ. ಹಾಗಾಗಿ ವಿಶ್ವದಲ್ಲಿ ಅತಿ ಹೆಚ್ಚು ಗ್ರಾಹಕರನ್ನು ಹೊಂದಿರುವ ಉತ್ಪನ್ನಗಳಲ್ಲಿ ಹಾಲು ಸಹ ಒಂದಾಗಿದೆ. ಈ ಕಾರಣದಿಂದಲೇ ದೇಶಿ ಗೋವಿನ ಹಾಲನ್ನು ಭೂಲೋಕದ ಅಮೃತವೆಂದು ಹೇಳಲಾಗಿರುವುದು. ಇಂತಹ ಅಮೃತದ ಸೇವನೆಯಿಂದ ಆರೋಗ್ಯ ವೃದ್ಧಿಸುವುದಲ್ಲದೆ, ಮೂಳೆಗಳಲ್ಲಿನ ನೋವು ಸಹ ಕಡಿಮೆಯಾಗುತ್ತದೆ. ಹಾಗಾಗಿ ವಿಟಮಿನ್‌ಯುಕ್ತವಾದ ಈ ಪೇಯ ಮಕ್ಕಳಿಂದ ಹಿಡಿದು ಮುದುಕರವರೆಗೆ ಅತಿ ಸೂಕ್ತವಾದುದು. ಮಕ್ಕಳು ಎಲ್ಲಿಯವರೆಗೂಅನ್ನಪಾನಾದಿಗಳನ್ನುಸೇವಿಸುವುದಿಲ್ಲವೋ,ಅಲ್ಲಿಯವರೆಗೂ ಆ ಕೂಸು ಹಾಲಿನಿಂದಲೇ ಜೀವಿಸಬೇಕಾಗುತ್ತದೆ. ಹಾಗಾಗಿ ಮಕ್ಕಳ ಏಕೈಕ ಪೋಷಕಾಂಶಹಾಲಾಗಿದೆ. ಅಷ್ಟೇಅಲ್ಲದೆಸಸ್ಯಾಹಾರಿಗಳಿಗೆದೊರಕುವಏಕೈಕ ಪ್ರಾಣಿಜನ್ಯ ಪ್ರೋಟಿನ್ ಸಹ ಇದೇ ಆಗಿದೆ. ಇತ್ತೀಚಿನ ಸಂಶೋಧನೆಯ ಪ್ರಕಾರ ಬೆಳೆಯುವ ಮಕ್ಕಳು ಕ್ಯಾಲ್ಸಿಯಂನ್ನು ತಮ್ಮ ಆಹಾರದಲ್ಲಿ ಸೇವಿಸದೆ ಇದ್ದಲ್ಲಿ ಮುಂದೆ ಮೂಳೆಗಳಲ್ಲಿ ಕ್ಯಾಲ್ಸಿಯಂ ಕೊರತೆಯಿರುವ ಹಾಗೂ ಸಂಧಿವಾತದಂತಹ ಸಮಸ್ಯೆಗಳಿಗೆ ಬೇಗನೆ ತುತ್ತಾಗುತ್ತಾರೆ. ಆದರೆ ಹಾಲಿನಲ್ಲಿ ಪಾಸ್ಪರಸ್ ಅಂಶವಿದ್ದು ಇದು ಗಟ್ಟಿ ಮುಟ್ಟಾದ ಮೂಳೆಯನ್ನು ಹೊಂದಲು ಅತಿ ಸಹಕಾರಿಯಾದುದಾಗಿದೆ. ಆದುದರಿಂದ ನಮ್ಮ ಪೂರ್ವಜರು ಹಾಲಿಗೆ ಬಾಲಜೀವನ ಎಂದು ಹೆಸರನ್ನಿಟ್ಟಿರುವುದು.

ಹಾಲಿನಷ್ಟು ಅತ್ಯುತ್ತಮ ಸಂತುಲಿತ, ಸಾತ್ವಿಕ ಮತ್ತು ಅನುಪಮ ಆರೋಗ್ಯವರ್ಧಕ ಆಹಾರ ಭೂಲೋಕದಲ್ಲಿ ಇನ್ನೊಂದಿಲ್ಲ ಎಂದು ಹೇಳಲಾಗುತ್ತದೆ. ಹೀಗಾಗಿಯೇ ಹಾಲು ಸರ್ವಜೀವಿಗಳ ಜೀವನಾಧಾರವಾಗಿರುವುದು. ಮತ್ತೊಂದು ವೈಶಿಷ್ಟ್ಯವೇನೆಂದರೆ ಯಾವುದೇ ಪ್ರಾಣಿಯ ಹಾಲಿನಲ್ಲಿ ಸ್ವರ್ಣದ ಅಂಶವಿರುವುದಿಲ್ಲ. ಆದರೆ ಗೋವಿನ ಹಾಲಿನಲ್ಲಿ ಮಾತ್ರ ಸ್ವರ್ಣದ ಅಂಶ ಸಾಕಷ್ಟು ಕಂಡುಬರುತ್ತದೆ. ಇದಕ್ಕೆ ಇರಬೇಕು 'ಹಾಲು ಎಲ್ಲಿದೆಯೋ ಅಲ್ಲಿ ಬುದ್ಧಿ, ಬುದ್ಧಿ ಎಲ್ಲಿದೆಯೋ ಅಲ್ಲಿ ಜಯವಿದೆ' ಎಂಬುದಾಗಿ ಮನು ಹೇಳಿರುವುದು. ಪ್ರಾಚೀನ ವೈದ್ಯಕೀಯ ಪಿತಾಮಹರಾದ ಭಾಗಭಟ್ಟರು ಹಾಲಿನ ಮಹಿಮೆಯ ಬಗ್ಗೆ ಹೇಳುತ್ತಾ ಅದರಿಂದ ವಾಸಿಯಾಗುವ ಕಾಯಿಲೆಗಳ ಪಟ್ಟಿಯನ್ನೇ ನೀಡಿದ್ದಾರೆ. ಹಾಗೆಯೇ ದೇಹದ ಶಕ್ತಿಗೆ ಮತ್ತು ರಾಸಲೀಲೆಗೆ ಹಾಲು ಹೆಚ್ಚು ಸ್ಫೂರ್ತಿ ಮತ್ತು ಶಕ್ತಿದಾಯಕವೆಂದೂ ತಿಳಿಸಿದ್ದಾರೆ. ಅಷ್ಟೇ ಅಲ್ಲದೆ ಇತ್ತೀಚಿನ ವೈದ್ಯಕೀಯ ವಿಜ್ಞಾನವೂ ಸಹ ಹಾಲಿಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿ ಹಾಲು ಮನುಷ್ಯನ ಜೀವನಕ್ಕೆ ಅತಿ ಅವಶ್ಯಕವಾದ ಪೇಯ ಎಂಬುದನ್ನು ದೃಢೀಕರಿಸಿವೆ.

ಮುಖ್ಯವಾಗಿ ಹೃದ್ರೋಗಿಗಳಿಗೆ ಹಾಲು ಕವಚವಿದ್ದಂತೆ. ಕಾರಣ ಅದರಲ್ಲಿ ಅಗತ್ಯವಾದ ಸುವರ್ಣಾಂಶವಿರುವುದೇ ಆಗಿದೆ. ಹಾಗೆಯೇ ದೇಶಿ ಗೋವಿನ ಹಾಲಿನಿಂದ ಜೀರ್ಣಕ್ರಿಯೆ ಸುಲಭವಾಗುತ್ತದೆ. ರಾತ್ರಿ ಮಲಗುವ ವೇಳೆ ಬಿಸಿಯಾದ ದೇಶಿ ಗೋವಿನ ಹಾಲಿನೊಂದಿಗೆ ಒಂದು ಚಮಚ ತುಪ್ಪ ಸ್ವೀಕರಿಸುವುದರಿಂದದೇಹಆರೋಗ್ಯಕರವಾಗುತ್ತದೆ. ಅದರಲ್ಲೂಜ್ವರಬಂದಾಗ ಹಾಲನ್ನು ಸೇವಿಸುವುದರಿಂದ ದೇಹದ ಆರೋಗ್ಯ ಮತ್ತಷ್ಟು ಸುಧಾರಿಸುತ್ತದೆ. ಒಟ್ಟಿನಲ್ಲಿ ಹೇಳಬೇಕೆಂದರೆ ಹಾಲು ವಿಟಮಿನ್‌ಗಳಿಂದ ಸಮೃದ್ಧಿಯಾಗಿದೆ. ಹಾಲಿನಲ್ಲಿ ಎ, ಬಿ, ಬಿ2, ಡಿ2, ಎ(ಡಬ್ಲೂ) ಜೀವಸತ್ವಗಳಿವೆ. ಎಂಟು ವಿಧವಾದ ಸಸಾರಜನಕವಸ್ತುಗಳು, ಹತ್ತು ರೀತಿಯ ಅಮೈನೊ ಆಮ್ಲಗಳು, ಹನ್ನೊಂದು ನಮೂನೆಯ ಸ್ನಿಗ್ಧ ಆಮ್ಲಗಳು, ಎಂಟು ಬಗೆಯ ಜೀವಾಣು ರಹಿತ ಕಣ್ವಗಳು ಮತ್ತು ಅಧಿಕ ಪ್ರಮಾಣದ ಕೆರೋಟಿನ್ ಇದೆ. ಸಾಮಾನ್ಯವಾಗಿ ಒಂದು ಬಿಂದು ಹಾಲಿನಲ್ಲಿ ಹತ್ತು ಕೋಟಿಗೂ ಹೆಚ್ಚು ಕೊಬ್ಬಿನ ಗುಳ್ಳೆಗಳಿರುತ್ತವೆ. ಈ ಕೊಬ್ಬಿನ ಕಣಗಳು ಬೆಳಕನ್ನು ಸಂಪೂರ್ಣವಾಗಿ ಆಂತರಿಕವಾಗಿ ಪ್ರತಿಫಲಿಸುವುದರಿಂದ ಹಾಲು ಶುಭ್ರ ಬಿಳಿ ಬಣ್ಣದಲ್ಲಿರುತ್ತದೆ. ಹಾಗೆಯೇ ಹಾಲಿನಲ್ಲಿ ಕೆಸೀನ್ ಎಂಬ ಪ್ರಮುಖ ಪ್ರೋಟಿನ್ ಇದೆ. ಇದು ಭೂಮಿಯ ಮೇಲಿನಸಕಲಪ್ರಾಣಿಗಳಸಮಗ್ರ ಬೆಳವಣಿಗೆಗೆ ಅತ್ಯವಶ್ಯಕವಾದುದಾಗಿದೆ. ಹಾಲಿನ ಮಹತ್ವದ ಕುರಿತಾದ ವಿವರಣೆಗಳು ನಮ್ಮ ಪ್ರಾಚೀನ ಗ್ರಂಥಗಳಲ್ಲಿ ಸಾಕಷ್ಟು ಕಂಡುಬರುತ್ತದೆ. ಹಾಲು ವೀರ್ಯವರ್ಧಕ, ಕಾಂತಿವರ್ಧಕ, ಮೈಥುನಶಕ್ತಿಯನ್ನು ಹೆಚ್ಚಿಸುವ ಇತ್ಯಾದಿಗುಣಗಳಿಂದಕೂಡಿರುವುದೆಂದು ಖವಾಸುಲ್ಲ ಅದ್ವಿಯಾ ಎಂಬ ಯುನಾನಿ ಗ್ರಂಥದಿಂದ ತಿಳಿದು ಬರುತ್ತದೆ. ಹಾಗೆಯೇ ಮಜರುಲ್ಲಾತ ಆಕರಿ ಎಂಬ ಗ್ರಂಥದಲ್ಲಿ ಆಕಳ ಹಾಲು ವೀರ್ಯ ಶಕ್ತಿ ಮತ್ತು ಬುದ್ಧಿ ವರ್ಧಕವಾಗಿರುವುದೆಂದು ಹೇಳಿರುವುದಲ್ಲದೆ ರಕ್ತ ಶೋಧಕವು ಆಗಿರುವುದೆಂದು ನಿರೂಪಿಸಿ ಅಶಕ್ತ ಪುರುಷರಿಗೆ ಅಮೃತದಂತಿರುವುದೆಂದು ವರ್ಣಿಸಲಾಗಿದೆ.

ಭಾರತೀಯ ಗೋತಳಿಗಳ ಹಾಲು ಹೆಚ್ಚು ಕೊಬ್ಬಿನಂಶ ಹೊಂದಿದ್ದು ಕಡಿಮೆ ಕೊಲೆಸ್ಟ್ರಾಲ್‌ನ್ನು ಹೊಂದಿರುತ್ತದೆ. ಇದಕ್ಕೆ ಪ್ರಮುಖ ಕಾರಣ ಅವುಗಳ ಬೆನ್ನಿನ ಡುಬ್ಬದಲ್ಲಿರುವ ಸೂರ್ಯಕೇತು ನಾಡಿ. ಇದು ಸೂರ್ಯನ ಕಿರಣವನ್ನು ಅಂಟೆನಾದ ರೀತಿ ಹೀರಿಕೊಂಡು ಅದರಲ್ಲಿನ ಅಂಶವನ್ನು ತನ್ನ ಉತ್ಪನ್ನಗಳಾದ ಗೋಮೂತ್ರ, ಗೋಮಯ ಮತ್ತು ಹಾಲಿನ ಮೂಲಕ ಹೊರಹಾಕುತ್ತದೆ. ಹೀಗಾಗಿ ದೇಶಿ ತಳಿಗಳ ಹಾಲು ಸೂರ್ಯನ ಬಿಸಿಲಿಗೆ ಪ್ರಚೋದನೆಗೊಂಡು ಹೆಚ್ಚು ಪೌಷ್ಟಿಕಾಂಶಯುಕ್ತವಾದ ಹಳದಿ ಬಣ್ಣದಿಂದ ಕೂಡಿರುತ್ತದೆ ಎಂದು ಹೇಳಲಾಗುತ್ತದೆ. ಕರೆಯುತ್ತಿದ್ದಂತೆ ಬಿಸಿಯಾಗಿರುವ ಗೋವಿನ ಹಾಲು ಕುಡಿಯಲು ರುಚಿಕರ ಹಾಗೂ ಶ್ರೇಷ್ಠವಾದುದಾಗಿದೆ. ಹಾಗೆಯೇ ಹಾಲನ್ನು ಆಗಾಗ ಕಾಯಿಸುತ್ತಿದ್ದರೆ ಅದು ವಿಷಯುಕ್ತವಾಗುತ್ತದೆ ಮತ್ತು ಸೇವನೆಗೆ ಯೋಗ್ಯವಾಗಿರುವುದಿಲ್ಲ ಎಂಬುದನ್ನು ವೈದ್ಯಕೀಯ ಲೋಕ ತಿಳಿಸುತ್ತದೆ. ವಿಜ್ಞಾನಿಗಳ ನಿರ್ಣಯದ ಪ್ರಕಾರ ಹಸುವಿನ ಹಾಲು ಉತ್ತಮವಾದ ಮತ್ತು ಪುಷ್ಟಿಕರವಾದ ಭೋಜನಕ್ಕೆ ಸಮಾನವಾದದ್ದಾಗಿದೆ. ಅದರಲ್ಲಿ ಶೇಕಡಾ87ರಷ್ಟು ನೀರು, ಶೇಕಡಾ4.6ರಷ್ಟು ಸಕ್ಕರೆ ಹಾಗೂ ಇನ್ನೂ ಹೆಚ್ಚಿನ ವಿಟಮಿನ್ನುಗಳಂತಹ ಪ್ರಯೋಜನಗಳೆಲ್ಲವೂ ಇದೆ ಎಂಬುದಾಗಿದೆ.

ಗುಜರಾತ್‌ನ ಗೀರ್, ಪಂಜಾಬ್‌ನ ಸೆಹವಾಲ್ ಜಗತ್ತಿನಲ್ಲಿಯೇ ಅತಿ ಹೆಚ್ಚು ಹಾಲನ್ನು ನೀಡುವ ತಳಿಗಳಾಗಿವೆ. ಭಾರತೀಯ ಮೂಲದ ಗೋತಳಿಗಳು ವಿದೇಶಿ ಮೂಲದ ತಳಿಗಳಿಗಿಂತ ಹೆಚ್ಚಿನ ಹಾಲನ್ನು ನೀಡುತ್ತವೆ. ಈ ಹಾಲು ವಿದೇಶಿ ದನಗಳು ನೀಡುವ ಹಾಲಿನ ಗುಣಮಟ್ಟಕ್ಕಿಂತ ಅತ್ಯಂತ ಉತ್ಕೃಷ್ಟವಾಗಿರುತ್ತದೆ ಎಂಬುದನ್ನು ರಾಷ್ಟ್ರೀಯ ಜಾನುವಾರು ವಂಶವಾಹಿ ಸಂಪನ್ಮೂಲಗಳ ಇಲಾಖೆಯ ಒಂದು ಸಮೀಕ್ಷೆ ಕೂಡ ದೃಢಪಡಿಸಿದೆ. ಇದಕ್ಕೆ ಪ್ರಮುಖ ಕಾರಣ ಅವುಗಳಲ್ಲಿನ ಆಲೀಲ್ ಜೀನ್. ಇದು ಭಾರತೀಯ ತಳಿಗಳಲ್ಲಿ ಶೇಕಡಾ 100 ರಷ್ಟಿದ್ದರೆ ವಿದೇಶಿ ತಳಿಗಳಲ್ಲಿ ಹೆಚ್ಚೆಂದರೆ ಶೇಕಡಾ 60ರಷ್ಟು ಮಾತ್ರ ಇರುತ್ತದೆ. ದೇಶಿ ಗೋವಿನ ಹಾಲು ಮತ್ತು ಅದರಿಂದ ಮಾಡಿದ ತುಪ್ಪದ ಮಹತ್ವ ಇತ್ತೀಚಿನ ದಿನಗಳಲ್ಲಿ ಜನಸಾಮಾನ್ಯರ ಅರಿವಿಗೂ ಬರುತ್ತಿದೆ. ಹೀಗಾಗಿ ಅವುಗಳಿಗಿಂದು ಎಲ್ಲಿಲ್ಲದ ಬೇಡಿಕೆ ಸೃಷ್ಟಿಯಾಗುತ್ತಿದೆ. ಎಷ್ಟು ಬೇಡಿಕೆ ಸೃಷ್ಟಿಯಾಗಿದೆಯೆಂದರೆ ಮಾರುಕಟ್ಟೆಯಲ್ಲಿ ಸಿಗುವ ಹಾಲಿಗಿಂತ ಹತ್ತು ಪಟ್ಟು ಹೆಚ್ಚಿನ ಬೆಲೆಗೆ ಕಾಳಸಂತೆಯಲ್ಲಿ ಬಿಕರಿಯಾಗುವಷ್ಟು. ಇಂದು ಸುಮಾರು 40 ರೂಪಾಯಿಗೆ ಸಿಗುವ ಹಾಲು ಭಾಗಶಃ ವಿದೇಶಿ ತಳಿಯ ಹಾಲಾಗಿರುವುದರಿಂದ ಜನ ದೇಶಿ ಗೋವಿನ ಹಾಲನ್ನು ಕೊಳ್ಳಲು ಮುಗಿಬೀಳುತ್ತಿದ್ದಾರೆ. ಇದರಿಂದ ಪ್ರತಿ ಲೀಟರ್ ದೇಶಿ ಹಾಲಿನ ಬೆಲೆ ಕೆಲವು ಭಾಗಗಳಲ್ಲಿ 400 ರೂಪಾಯಿಯನ್ನು ದಾಟಿದೆ ಎಂದರೆ ಆಶ್ಚರ್ಯವಾಗಬಹುದು. ರಾಜಸ್ತಾನದ ಪಶುಸಂಗೋಪನ ಇಲಾಖೆಯ ಪೂರ್ವದ ನಿರ್ದೇಶಕರಾಗಿದ್ದ ಡಾ॥ ಭಂಡಾರಿಯವರ ಪ್ರಕಾರ ದೇಶಿ ಹಸುವಿನ ಹೊಟ್ಟೆಯಲ್ಲಿರುವ ವಿಶಿಷ್ಟ ಬ್ಯಾಕ್ಟೀರಿಯಾಗಳಿಂದ ಅದರ ಹಾಲು ತನ್ನ ವಿಶಿಷ್ಟತೆ ಹಾಗೂ ಮಾನವನಿಗೆ ಹೊಂದುವಂತಹ ಸತ್ವಗುಣಗಳಿಂದ ಕೂಡಿದೆ ಎಂದು ಹೇಳಿದ್ದಾರೆ. ಎಮ್ಮೆ ಹಾಲು ಹೆಚ್ಚು ಮಂದವಾಗಿ ಕಂಡರೂ, ದೇಶಿ ಹಸುವಿನ ಹಾಲಿನ ಸೇವನೆಯಿಂದ ಬುದ್ಧಿ ಶಕ್ತಿಯ ತೀಕ್ಷ್ಣತೆ, ದೈಹಿಕ ಚುರುಕುತನ ಹಾಗೂ ಭಾವನೆಗಳ ಸ್ಥಿರತೆಯನ್ನು ಮತ್ತು ಸೌಮ್ಯ ಗುಣಗಳನ್ನು ಹೊಂದಬಹುದಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಇವರಂತೆ ಸಾಕಷ್ಟು ಸಂಶೋಧಕರು, ವೈದ್ಯರು, ವಿಜ್ಞಾನಿಗಳು ದೇಶಿ ಗೋವಿನ ಹಾಲನ್ನು ಕೊಂಡಾಡುತ್ತಾ ಭೂಲೋಕದ ಅಮೃತ ಎಂದು ಹೇಳಿದ್ದಾರೆ.

ಹಿಂದೂ ಒಗ್ಗಟ್ಟು ಸಾಧನೆಯ ಮಹತ್ವದ ಮೈಲಿಗಲ್ಲು !

ಮುಸ್ಲಿಮರನ್ನು ಓಲೈಸದ, ದೇಶದ ಹಿತಾಸಕ್ತಿಯನ್ನು ಬಲಿಗೊಡದ 'ನೈಜಸೆಕ್ಯುಲರ್' ಸರಕಾರ ರಚನೆಗಾಗಿ ಹಿಂದುಗಳು ಒಗ್ಗೂಡಿದ್ದಾರೆ.

ಅರುಣ್ ಆನಂದ್

ಪ. ಬಂಗಾಳದಲ್ಲಿ ಬಿಜೆಪಿಯ ಅಭೂತಪೂರ್ವ ಚುನಾವಣಾ ವಿಜಯವು 2029ರ ಲೋಕಸಭಾ ಚುನಾವಣೆಗೆ ಮುಂಚಿತವಾಗಿಯೇ 'ಮೋದಿ 4.0'ರ ಆರಂಭವನ್ನು ಸಂಕೇತಿಸಿದೆ.

2014ರಲ್ಲಿ ಬಿಜೆಪಿ ಲೋಕಸಭಾ ಚುನಾವಣೆಯನ್ನು ಗೆಲ್ಲುವ ಮೂಲಕ 'ಮೋದಿ1.0' ಆರಂಭವಾಗಿತ್ತು. 2019ರಲ್ಲಿ ಇನ್ನಷ್ಟು ಹೆಚ್ಚು ಸ್ಥಾನ ಗಳಿಕೆಯೊಂದಿಗೆ ಮೋದಿ 2.0 ಯುಗ ಆರಂಭಗೊಂಡಿತು. ಆದರೆ 2024ರಲ್ಲಿ ಬಿಜೆಪಿ ಸರಕಾರ ರಚಿಸಿಕೊಂಡರೂ ಅದರ ಸ್ಥಾನವು 240ಕ್ಕಿಳಿದು ತುಸು ನಿರಾಶೆ ಅನುಭವಿಸಬೇಕಾಗಿತ್ತು. ಇದು ಪಕ್ಷ ಮತ್ತು ಸರಕಾರಕ್ಕೆ ಉಂಟಾದ ಸಣ್ಣದೊಂದು ಆಘಾತವಾಗಿತ್ತು.

ಅಲ್ಲಿಂದ ಬಳಿಕ ಮೋದಿ ಸರಕಾರ ಮತ್ತು ಬಿಜೆಪಿ ತನ್ನ ಲೋಪಗಳನ್ನು ಸರಿಪಡಿಸುವ ಕಾರ್ಯಕ್ಕೆ ಮುಂದಾಯಿತು. ಅದರ ಫಲವಾಗಿ ನಂತರದ ವಿಧಾನಸಭಾ ಚುನಾವಣೆಗಳಲ್ಲಿ ಮಹತ್ವದ ಗೆಲುವು ಸಿಗಲಾರಂಭಿಸಿತು. ಬಿಹಾರ ಮತ್ತು ಮಹಾರಾಷ್ಟ್ರದಲ್ಲಿ ಗೆಲುವು ಸಾಧಿಸಿದ ಬಿಜೆಪಿ, ಬಳಿಕ ದಿಲ್ಲಿಯಲ್ಲಿ ಆಪ್‌ನ್ನು ಸೋಲಿಸಿ ಗದ್ದುಗೆ ಹಿಡಿಯಿತು. 1993ರಲ್ಲಿ ಕೊನೆಯದಾಗಿ ದಿಲ್ಲಿಯನ್ನು ಗೆದ್ದಿದ್ದ ಬಿಜೆಪಿಗೆ ಕಳೆದ ವರ್ಷ ಮತ್ತೆ ದಿಲ್ಲಿ ಗದ್ದುಗೆ ವಶವಾಯಿತು.

ಇವೆಲ್ಲದರ ನಡುವೆಯೂ ಈಗ ಪ.ಬಂಗಾಳದಲ್ಲಿ ಗಳಿಸಿರುವ ಗೆಲುವು ಬಿಜೆಪಿ ಪಾಲಿನ ಮಹೋನ್ನತ ಸಾಧನೆಯಾಗಿದೆ. ಇದರಿಂದ ಪೂರ್ವ ಭಾರತದಲ್ಲಿ ಎಲ್ಲಾ ದಿಕ್ಕುಗಳಿಗೂ ಬಿಜೆಪಿಯ ವ್ಯಾಪ್ತಿ ವಿಸ್ತರಿಸಿದಂತಾಗಿದೆ.

ಪ.ಬಂಗಾಳ ಗೆಲ್ಲುವುದು ಬಿಜೆಪಿ ಪಾಲಿಗೆ ಅತ್ಯಂತ ಕಠಿಣ ಸವಾಲಾಗಿತ್ತು. ಏಕೆಂದರೆ ಪ.ಬಂಗಾಳದಲ್ಲಿ ಎಡಪಂಥೀಯ ಧೋರಣೆ ಆಳವಾಗಿ ಬೇರೂರಿತ್ತು. ವಿಪರ್ಯಾಸವೆಂದರೆ ಭಾರತೀಯ ಜನಸಂಘದ ಸ್ಥಾಪಕ ಡಾ. ಶ್ಯಾಮಪ್ರಸಾದ್ ಮುಖರ್ಜಿಯವರು ಪ.ಬಂಗಾಳದಲ್ಲಿ ಜನಿಸಿದವರು. ಸ್ವತಂತ್ರ ಭಾರತದ ಮೊತ್ತಮೊದಲ ಲೋಕಸಭಾ ಚುನಾವಣೆಯಲ್ಲಿ ಜನಸಂಘವು ಮೂರು ಸ್ಥಾನಗಳನ್ನು ಗೆದ್ದಿದ್ದು ಅದರಲ್ಲಿ ಎರಡು ಸ್ಥಾನಗಳು ಪ.ಬಂಗಾಳದಿಂದ ಲಭಿಸಿದ್ದವು. ಮೂವರು ವಿಜೇತರೆಂದರೆ ಡಾ. ಶ್ಯಾಮಪ್ರಸಾದ್ ಮುಖರ್ಜಿ (ಪ. ಬಂಗಾಳದ ಆಗ್ನೇಯ ಕಲ್ಕತ್ತಾ ಕ್ಷೇತ್ರ), ದುರ್ಗಚರಣ್ ಬ್ಯಾನರ್ಜಿ (ಪ.ಬಂಗಾಳದ ಮಿಡ್ನಾಪುರ್ ಕ್ಷೇತ್ರ) ಮತ್ತು ಉಮಾಶಂಕರ್ ತ್ರಿವೇದಿ (ರಾಜಸ್ಥಾನದ ಚಿತ್ತೂರ್ ಕ್ಷೇತ್ರ).

ಜಮ್ಮು-ಕಾಶ್ಮೀರದ 370ನೇ ವಿಧಿ ರದ್ದತಿಗಾಗಿ ಹೋರಾಡುತ್ತಿದ್ದ ಶ್ಯಾಮಪ್ರಸಾದ್ ಮುಖರ್ಜಿಯವರು ಅನಿರೀಕ್ಷಿತ ದುರ್ಮರಣಕ್ಕೆ ಈಡಾದುದು ಕೆಲವು ದಶಕಗಳ ಕಾಲ ಜನಸಂಘವನ್ನೂ



ದುರ್ಬಲಗೊಳಿಸಿತು. 1980ರಲ್ಲಿ ಬಿಜೆಪಿ ರಚನೆಯಾದ ಬಳಿಕವೂ ಪಕ್ಷದ ಸಂಕಷ್ಟ ಮುಂದುವರಿದೇ ಇತ್ತು. ಪ.ಬಂಗಾಳದಲ್ಲಂತೂ ಮೊದಲಿಗೆ ಕಾಂಗ್ರೆಸ್, ಬಳಿಕ ಎಡಪಕ್ಷಗಳು ಆಳತೊಡಗಿದವು. 2000 ಇಸವಿಯ ಬಳಿಕ ಎಡಪಕ್ಷಗಳ ಜಾಗವನ್ನು ತೃಣಮೂಲ ಕಾಂಗ್ರೆಸ್ ಆಕ್ರಮಿಸಿತು.

ಮೊದಲಿಗೆ ಜನಸಂಘ ಹಾಗೂ ಬಳಿಕ ಬಿಜೆಪಿ ಪ.ಬಂಗಾಳದಲ್ಲಿ ರಾಜಕೀಯ ಅವಕಾಶ ಪಡೆಯಲು ಹೆಣಗಾಡುತ್ತಿರಬೇಕಾದರೆ ಪಕ್ಷದ ತಳಮಟ್ಟವನ್ನು ಭದ್ರಪಡಿಸುವಲ್ಲಿ ಆರೆಸ್ಸೆಸ್ ಪಾತ್ರ ದೊಡ್ಡದು. ಆರೆಸ್ಸೆಸ್ ತಳಮಟ್ಟದಲ್ಲಿ ತನ್ನ ಜಾಲವನ್ನು ವಿಸ್ತರಿಸತೊಡಗಿತು. ಹಲವಾರು ಸಂಘ ಪ್ರೇರಿತ ಸಂಸ್ಥೆಗಳು ಶಿಕ್ಷಣ, ಆರೋಗ್ಯ, ಸಂಸ್ಕೃತಿ, ಉದ್ಯೋಗಸೃಷ್ಟಿ, ಮಹಿಳಾಸಬಲೀಕರಣ ಮೊದಲಾದ ಕ್ಷೇತ್ರಗಳಲ್ಲಿ ಕಾರ್ಯಾಚರಿಸತೊಡಗಿದವು.

ಆದರೆ ಆರೆಸ್ಸೆಸ್ ಕೂಡಾ ಇದಕ್ಕಾಗಿ ಸಾಕಷ್ಟು ಬೆಲೆ ತೆರಬೇಕಾಯಿತು ಎನ್ನುವುದು ದುರಂತ. ಆರೆಸ್ಸೆಸ್‌ನ ಕೆಲವಾರು ಕಾರ್ಯಕರ್ತರು ಬಲಿಯಾಗಬೇಕಾಯಿತು. ಮೊದಲಿಗೆ ಎಡಪಕ್ಷ ಕಾರ್ಯಕರ್ತರು ಹಾಗೂ ಬಳಿಕ ತೃಣಮೂಲ ಕಾರ್ಯಕರ್ತರಿಂದ ಆರೆಸ್ಸೆಸ್ ಕಾರ್ಯಕರ್ತರ ಮೇಲೆ ದಾಳಿ ನಡೆಯಿತು. ಹಲವಾರು ಬಿಜೆಪಿ ಕಾರ್ಯಕರ್ತರು ಪ್ರಾಣ ತೆತ್ತರು.

ಕೇರಳ ಮತ್ತು ಪ.ಬಂಗಾಳಗಳಲ್ಲಿ ಆರೆಸ್ಸೆಸ್ ಮತ್ತು ಬಿಜೆಪಿ ಕಾರ್ಯಕರ್ತರು ತಮ್ಮ ಸೈದ್ಧಾಂತಿಕ ವಿರೋಧಿಗಳಿಂದ ಹೆಚ್ಚಿನ ಹಿಂಸೆ ಅನುಭವಿಸಬೇಕಾಯಿತು. 2021ರ ವಿಧಾನಸಭಾ ಚುನಾವಣೆಯ ಫಲಿತಾಂಶದ ಬಳಿಕವಂತೂ ಪ.ಬಂಗಾಳದಲ್ಲಿ ಮಹಿಳೆಯರು ಮಕ್ಕಳು ಸೇರಿದಂತೆ ಎಲ್ಲಾ ಹಿಂದುಗಳ ಮೇಲೂ ದೌರ್ಜನ್ಯ ನಡೆಯಿತು.

ಭಾರತದ ಚುನಾವಣಾ ಇತಿಹಾಸದಲ್ಲಿ ಆಡಳಿತ ಪಕ್ಷವೇ ಜನರಲ್ಲಿ ಈ ಬಗೆಯ ಭೀತಿ ತುಂಬಿದ ಬೇರೆ ನಿದರ್ಶನವಿಲ್ಲ. ಪ.ಬಂಗಾಳದಲ್ಲಿ ಜನರು ಬೇರೆ ಪಕ್ಷಗಳ ಹೆಸರನ್ನೂ ಕೂಡಾ ಎತ್ತಲಾರದಂತಹ ಪರಿಸ್ಥಿತಿ ನಿರ್ಮಾಣವಾಯಿತು. ಎಡಪಕ್ಷಗಳಿಂದ ಜಾರಿಗೆ ತರಲ್ಪಟ್ಟ ಈ ವ್ಯವಸ್ಥೆಯನ್ನು ಮಮತಾ ಬ್ಯಾನರ್ಜಿ ಇನ್ನೊಂದು ಸ್ತರ ಮೇಲೆತ್ತಿದರು. ವಿರೋಧ ಪಕ್ಷದ ಕಾರ್ಯಕರ್ತರಾರೂ ಸ್ವತಂತ್ರವಾಗಿ ತಿರುಗಾಡಲಾರದ ಪರಿಸ್ಥಿತಿ ಸೃಷ್ಟಿಸಲ್ಪಟ್ಟಿತು. ಇದು ಪಕ್ಷ ಮತ್ತು ಸರಕಾರದ ನಡುವಿನ ಅಂತರವನ್ನೂ ತೊಡೆದುಹಾಕಿತು. ಸರಕಾರಿಯಂತ್ರವು ತೃಣಮೂಲ ಕಾಂಗ್ರೆಸ್‌ನ ಇಷ್ಟಾನುಸಾರ ನಡೆಯುವಂತಾಯಿತು.

ಇಂತಹ ಪರಿಸ್ಥಿತಿಯಲ್ಲಿ ಪ.ಬಂಗಾಳದಲ್ಲಿ ಬೇರೆ ಪಕ್ಷಗಳು ಜಯಗಳಿಸುವುದು ಅಸಾಧ್ಯದ ಮಾತು. ಆದರೆ ಬಿಜೆಪಿ ತನ್ನ ಹೋರಾಟ ಮುಂದುವರಿಸಿತು. 15 ವರ್ಷಗಳ ಹಿಂದೆ ತನ್ನ ಪುಟ್ಟ ಖಾತೆ ತೆರೆದ ಬಿಜೆಪಿ ಇದೀಗ ಇಡೀ ರಾಜ್ಯವನ್ನೇ ತನ್ನ ವಶಕ್ಕೆ ತೆಗೆದುಕೊಂಡಿದೆ.

ಪ.ಬಂಗಾಳದಲ್ಲಿ ಮೂರನೇ ಒಂದು ಜನಸಂಖ್ಯೆ ಮುಸ್ಲಿಮರದ್ದು. ಅವರು ಬಿಜೆಪಿಯನ್ನು ವಿರೋಧಿಸುವ ಯಾವುದೇ ಪಕ್ಷವನ್ನು ಬೆಂಬಲಿಸುತ್ತಾರೆ. ಈ ಬಾರಿ ಕೂಡಾ ಅವರು ತಮ್ಮ ನಿಲುವನ್ನು ಬದಲಿಸಿರುವ ಸಾಧ್ಯತೆ ಕಡಿಮೆ. 2021ರಲ್ಲಿ ಟಿಎಂಸಿ ಪಕ್ಷವು ಮುಸ್ಲಿಮರು ನಿರ್ಣಾಯಕರಾಗಿರುವ 90 ಸ್ಥಾನಗಳಲ್ಲಿ 88 ಸ್ಥಾನಗಳನ್ನು ಗೆದ್ದಿತ್ತು. ಆದರೆ ಮೋದಿ ನೇತೃತ್ವದಲ್ಲಿ ಬಿಜೆಪಿ ಈಗ ವ್ಯತಿರಿಕ್ತ ಫಲಿತಾಂಶ ಸೃಷ್ಟಿಸಿದೆ.

ಹಿಂದೂ ಒಗ್ಗಟ್ಟಿನ ಹೊಸ ಯುಗಕ್ಕೆ ಪ.ಬಂಗಾಳ ಸಾಕ್ಷಿಯಾಗಿದೆ. ಇದು ಹಿಂದು ಮತಗಳ ಧ್ರುವೀಕರಣವಲ್ಲ. ಹಿಂದುಗಳು ಮುಸ್ಲಿಮರ ವಿರುದ್ಧವಾಗಿ ಒಗ್ಗಟ್ಟಾಗಿರುವುದೂ ಅಲ್ಲ. ಮುಸ್ಲಿಮರನ್ನು ಓಲೈಸದ, ದೇಶದ ಹಿತಾಸಕ್ತಿಯನ್ನು ಬಲಿಗೊಡದ 'ನೈಜಸೆಕ್ಯುಲರ್' ಸರಕಾರ ರಚನೆಗಾಗಿ ಒಗ್ಗೂಡಿದ್ದಾರೆ. ಮೋದಿಯವರ ನಾಯಕತ್ವದಲ್ಲಿ ವಿಶ್ವಾಸವಿರಿಸಿ ಬಿಜೆಪಿಯನ್ನು ಬೆಂಬಲಿಸಿದ್ದಾರೆ. ಆ ಮೂಲಕ ಮೋದಿಯವರ ಹಿಂದೆ ಹಿಂದುಗಳ ಧ್ರುವೀಕರಣ ಮತ್ತು ಒಗ್ಗಟ್ಟು ಭಾರತೀಯ ರಾಜಕಾರಣದ ಹೊಸ ಶಕೆಯನ್ನು ಹುಟ್ಟು ಹಾಕಿದೆ. ಇದು 'ಮೋದಿ 3.0' ನೆಟ್ಟ ಮಹತ್ವದ ಮೈಲಿಗಲ್ಲು.



ಮಧ್ಯಪ್ರಾಚ್ಯ ಸಂಘರ್ಷದಿಂದ ಜಾಗತಿಕ ಪೂರೈಕೆ ಜಾಲ ವ್ಯತ್ಯಯಗೊಂಡು ಭಾರತದ ವಿದೇಶಿ ವಿನಿಮಯ ಮೀಸಲಿನ ಮೇಲೆ ಒತ್ತಡ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಇಂಧನ ಬಳಕೆ ತಗ್ಗಿಸಲು, ವಿದೇಶಿ ಪ್ರವಾಸ ಹಾಗೂ ಅನಿವಾರ್ಯವಲ್ಲದ ಚಿನ್ನದ ಖರೀದಿಯನ್ನು ಒಂದು ವರ್ಷದವರೆಗೆ ಮುಂದೂಡುವಂತೆ ದೇಶವಾಸಿಗಳಿಗೆ ತುರ್ತು ಕರೆ ನೀಡಿದ್ದಾರೆ. ಅಷ್ಟಕ್ಕೂ ಮೋದಿ ಈ ಸಲಹೆಗಳನ್ನು ನೀಡಲು ಕಾರಣವೇನು? ಎಂಬುದರ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಪ್ರಧಾನಿ ನರೇಂದ್ರ ಮೋದಿ ಮಿತವ್ಯಯದ ಕರೆಯ ಹಿಂದಿನ ಅಸಲಿ ಕಾರಣ

ಸನ್ನದ್ಧತೆಯ ದೇಶಭಕ್ತಿ



ಹಾರ್ಮುಜ್ ಜಲಸಂಧಿ: ಮುಂದುವರಿದ ಬಿಕ್ಕಟ್ಟು

ವಿಶ್ವದ ಒಟ್ಟು ತೈಲ ಪೂರೈಕೆಯ ಶೇ.20ರಷ್ಟು ಭಾಗ ಸಾಗುವ ಇರಾನ್ ಮತ್ತು ಒಮಾನ್ ನಡುವಿನ ಈ ಕಿರಿದಾದ ಸಮುದ್ರ ಮಾರ್ಗ ಕಳೆದ ಎರಡು ತಿಂಗಳಿನಿಂದ ಸ್ಥಗಿತಗೊಂಡಿದೆ. ಅಮೆರಿಕದೊಂದಿಗಿನ ಸಂಘರ್ಷದ ಹಿನ್ನೆಲೆಯಲ್ಲಿ ಇರಾನ್ ಪಡೆಗಳು ವಾಣಿಜ್ಯ ಹಡಗುಗಳ ಸಂಚಾರವನ್ನು ನಿರ್ಬಂಧಿಸಿವೆ. ಇದರಿಂದಾಗಿ ತೈಲ ಟ್ಯಾಂಕರ್‌ಗಳು ಆಫ್ರಿಕಾದ ಕೇಪ್ ಆಫ್ ಗುಡ್ ಹೋಪ್ ಮಾರ್ಗವಾಗಿ ಸುತ್ತಿ ಬರಬೇಕಾಗಿದ್ದು, ಸಾರಿಗೆ ವೆಚ್ಚ ಮತ್ತು ಸಮಯ ಗಣನೀಯವಾಗಿ ಹೆಚ್ಚಾಗಿದೆ.

ಇಂಧನ ಉಳಿತಾಯ ಅನಿವಾರ್ಯ

ಪ್ರಧಾನಿಯವರ ಭಾಷಣದ ಕೇಂದ್ರಬಿಂದು ಇಂಧನ ಉಳಿತಾಯವಾಗಿತ್ತು. ಸಾರ್ವಜನಿಕ ಸಾರಿಗೆ ಮತ್ತು ಮೆಟ್ರೊ ಬಳಕೆ, ಕಾರ್ ಪೂಲಿಂಗ್, ಸರಕು ಸಾಗಣೆಗಾಗಿ ರೈಲ್ವೆಗೆ ಆದ್ಯತೆ ಮತ್ತು ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಅವರು ಒತ್ತು ನೀಡಿದರು. ನಮ್ಮಲ್ಲಿ ದೊಡ್ಡ ತೈಲ ನಿಕ್ಷೇಪಗಳಿಲ್ಲ, ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್‌ಗಾಗಿ ನಾವು ಆಮದನ್ನೇ ಅವಲಂಬಿಸಿದ್ದೇವೆ. ಯುದ್ಧದ ಕಾರಣದಿಂದಾಗಿ ಇವುಗಳ ಬೆಲೆ ಗಗನಕ್ಕೇರಿದೆ ಎಂದು ಹೇಳಿದರು.

ಪ್ರಧಾನಿಯ ಸಂದೇಶ ಸ್ಪಷ್ಟವಾಗಿದೆ:
ದೇಶದ ಹಿತದೃಷ್ಟಿಯಿಂದ ಮುಂಬರುವ ಕಠಿಣ ದಿನಗಳಿಗೆ ಸಿದ್ಧರಾಗಿ

ಖಾದ್ಯ ತೈಲ ಕಡಿತದಿಂದ ವಿದೇಶಿ ವಿನಿಮಯ ಉಳಿತಾಯ: ಹೇಗೆ?

ಭಾರತದ ವಿದೇಶಿ ವಿನಿಮಯ ಮೀಸಲು ಮೇಲಿನ ಒತ್ತಡ ತಗ್ಗಿಸಲು ಖಾದ್ಯ ತೈಲ ಬಳಕೆ ಕಡಿಮೆ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ನೀಡಿರುವ ಕರೆ ಆರ್ಥಿಕವಾಗಿ ನಿರ್ಣಾಯಕ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ದೇಶ ತನ್ನ ಖಾದ್ಯ ತೈಲ ಅಗತ್ಯತೆಯ ಶೇ.55-60ರಷ್ಟನ್ನು ಆಮದು ಮಾಡಿಕೊಳ್ಳುತ್ತಿದ್ದು, ಇದಕ್ಕಾಗಿ ವಾರ್ಷಿಕ 19.5 ಬಿಲಿಯನ್ ಡಾಲರ್ ವ್ಯಯಿಸುತ್ತಿದೆ. ಇಂಡೋನೇಷ್ಯಾ ಮತ್ತು ಮಲೇಷ್ಯಾದಿಂದ ಬರುವ ಪಾಮ್ ಆಯಿಲ್ ಹಾಗೂ ಅರ್ಜೆಂಟೀನಾದ ಸೋಯಾಬೀನ್ ಮತ್ತು ಸೂರ್ಯಕಾಂತಿ ಎಣ್ಣೆ ಈ ಆಮದಿನ ಸಿಂಹಪಾಲನ್ನು ಹೊಂದಿವೆ. ಸೊಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮಾಹಿತಿ ಪ್ರಕಾರ, 202526ರ ಮೊದಲ ಐದು ತಿಂಗಳಲ್ಲಿ ತೈಲ ಆಮದು ಶೇ.8ರಷ್ಟು ಏರಿಕೆಯಾಗಿ 6.57 ಮಿಲಿಯನ್ ಟನ್‌ಗಳಿಗೆ ತಲುಪಿದೆ.

ಪರ್ಯಾಯ ಮಾರ್ಗಗಳು ಸಾಲುತ್ತಿಲ್ಲ

ತೈಲ ಕೊರತೆ ನೀಗಿಸಲು ಭಾರತ ರಷ್ಯಾ, ಯುಎಇ ಮತ್ತು ಪಶ್ಚಿಮ ಆಫ್ರಿಕಾದ ದೇಶಗಳಿಂದ ಹೆಚ್ಚಿನ ತೈಲ ಆಮದು ಮಾಡಿಕೊಳ್ಳಲು ಯತ್ನಿಸುತ್ತಿದೆ. ಆದರೆ, ಈ ಪರ್ಯಾಯಗಳು ಗಲ್ಫ್ ರಾಷ್ಟ್ರಗಳ ತೈಲಕ್ಕೆ ಸಮನಾಗುತ್ತಿಲ್ಲ. ತಾಂತ್ರಿಕ ಸಮಸ್ಯೆಗಳು, ಹಣಕಾಸು ವ್ಯವಹಾರದ ಅಡೆತಡೆಗಳು ಮತ್ತು ರಿಫೈನರಿಗಳಲ್ಲಿನ ಹೊಂದಾಣಿಕೆಯ ಕೊರತೆಯಿಂದಾಗಿ ಭಾರತಕ್ಕೆ ಪೂರ್ಣ ಪ್ರಮಾಣದ ತೈಲ ಪೂರೈಕೆ ಕಷ್ಟಕರವಾಗಿದೆ.



ಪ್ರಧಾನಿ ಪ್ರಧಾನ ಮನವಿ

- ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಕಡಿಮೆ ಮಾಡಿ
- ವರ್ಕ್ ಫ್ರಮ್ ಹೋಮ್ ಮತ್ತು ವರ್ಚುವಲ್ ಸಭೆಗಳಿಗೆ ಆದ್ಯತೆ ನೀಡಿ.
- ವಿದೇಶಿ ಪ್ರವಾಸ ಮತ್ತು ವಿದೇಶಿ ವಿವಾಹಗಳನ್ನು ಸದ್ಯಕ್ಕೆ ತಪ್ಪಿಸಿ
- ಒಂದು ವರ್ಷದವರೆಗೆ ಅನಿವಾರ್ಯವಲ್ಲದ ಚಿನ್ನದ ಖರೀದಿ ಮಾಡಬೇಡಿ

ಚರ್ಚೆಗೆ ಕಾರಣವಾದ ಮನವಿ

ತೆಲಂಗಾಣದ ಸಿಕಂದರಾಬಾದ್‌ನಲ್ಲಿ ಸುಮಾರು 9,400 ಕೋಟಿ ರೂ. ಮೌಲ್ಯದ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದ ಪ್ರಧಾನಿ ಮೋದಿ, ಈ ಮಿತವ್ಯಯದ ಕರೆಯನ್ನು ದೇಶಭಕ್ತಿಯ ಕರ್ತವ್ಯ ಎಂದು ಬಣ್ಣಿಸಿದರು. ದೇಶಭಕ್ತಿ ಎಂದರೆ ಕೇವಲ ದೇಶಕ್ಕಾಗಿ ಪ್ರಾಣತ್ಯಾಗ ಮಾಡುವುದು ಮಾತ್ರವಲ್ಲ, ಕಷ್ಟಕಾಲದಲ್ಲಿ ಜವಾಬ್ದಾರಿಯುತವಾಗಿ ಬದುಕುವ ಮೂಲಕ ದೇಶದ ಹಿತ ಕಾಯುವುದೂ ಆಗಿದೆ ಎಂದು ಅವರು ಹೇಳಿದರು.

ಈಗ ಏಕೆ?


- ಕಳೆದ 70 ದಿನಗಳಿಂದ ನಡೆಯುತ್ತಿರುವ ಅಮೆರಿಕ-ಇರಾನ್ ನಡುವಿನ ಯುದ್ಧ ಜಾಗತಿಕ ಇಂಧನ ಮಾರುಕಟ್ಟೆಯನ್ನು ತಲ್ಲಣಗೊಳಿಸಿದೆ. ವಿಶ್ವದ ಶೇ.20ರಷ್ಟು ತೈಲ ಪೂರೈಕೆಯ ಮಾರ್ಗವಾಗಿರುವ ಹಾರ್ಮುಜ್ ಜಲಸಂಧಿ ಕಳೆದ ಎರಡು ತಿಂಗಳಿನಿಂದ ಬಂದ್ ಆಗಿದ್ದು, ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರೆಲ್‌ಗೆ ಸುಮಾರು 126ಕ್ಕೆ ತಲುಪಿದೆ.
- ಭಾರತದ ಸರ್ಕಾರಿ ತೈಲ ಕಂಪನಿಗಳಾದ ಇಂಡಿಯನ್ ಆಯಿಲ್, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಪ್ರತಿ ತಿಂಗಳು ಸುಮಾರು 30,000 ಕೋಟಿ ರೂ.ಗಳ ನಷ್ಟದ ಹೊರೆ ಭರಿಸುತ್ತಿವೆ. ಗ್ರಾಹಕರ ಮೇಲೆ ಹೆಚ್ಚಿನ ಹೊರೆ ಬೀಳದಂತೆ ತಡೆಯಲು ಸರ್ಕಾರ ಪ್ರತಿದಿನ ಸುಮಾರು 1,600 ರಿಂದ 1,700 ಕೋಟಿ ರೂ.ಗಳನ್ನು ವ್ಯಯಿಸುತ್ತಿದೆ.
- ವಿದೇಶಿ ವಿನಿಮಯ ಮೀಸಲು ಕೂಡ ತೀವ್ರ ಒತ್ತಡದಲ್ಲಿದೆ. ಕಳೆದ 10 ವಾರಗಳಲ್ಲಿ ಹೆಚ್ಚುವರಿ ಆಮದು ಬಿಲ್‌ಗಳಿಂದಾಗಿ ಸುಮಾರು 1 ಲಕ್ಷ ಕೋಟಿ ರೂ. ವೆಚ್ಚವಾಗಿದೆ. ಥೈಲ್ಯಾಂಡ್, ಇಂಡೋನೇಷ್ಯಾ ಮತ್ತು ಪಾಕಿಸ್ತಾನ ಸೇರಿದಂತೆ 70ಕ್ಕೂ ಹೆಚ್ಚು ದೇಶಗಳು ಈಗಾಗಲೇ ಇಂತಹ ಇಂಧನ ಉಳಿತಾಯ ಕ್ರಮಗಳನ್ನು ಜಾರಿಗೆ ತಂದಿವೆ.

ವರ್ಕ್ ಫ್ರಮ್ ಹೋಮ್ ವ್ಯವಸ್ಥೆಗೆ ಒತ್ತು

ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಏರಿಕೆ ಮತ್ತು ಪಶ್ಚಿಮ ಏಷ್ಯಾದ ಅಸ್ಥಿರ ಪರಿಸ್ಥಿತಿಯ ನಡುವೆ ದೇಶದ ಜನತೆ ಇಂಧನ ಉಳಿತಾಯದತ್ತ ಗಮನಹರಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ಅವರು ಮತ್ತೊಮ್ಮೆ ಕರೆ ನೀಡಿದ್ದಾರೆ. ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುವವರೆಗೆ ಸರ್ಕಾರಿ ಹಾಗೂ ಖಾಸಗಿ ಕಚೇರಿಗಳಲ್ಲಿ ಸಾಧ್ಯವಾದಷ್ಟು ವರ್ಕ್ ಫ್ರಂ ಹೋಮ್ ವ್ಯವಸ್ಥೆಯನ್ನು ಅನುಸರಿಸುವಂತೆ ಅವರು ಸಲಹೆ ನೀಡಿದ್ದಾರೆ.

ಗುಜರಾತಿನ ವಡೋದರಾದ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ, 'ಭಾರತದ ಆಮದುಗಳಲ್ಲಿ ಕಚ್ಚಾ ತೈಲದ ಪಾಲು ಬಹಳ ದೊಡ್ಡದು. ತೈಲ ಪೂರೈಕೆ ಮಾಡುವ ಪ್ರದೇಶವೇ ಈಗ ಸಂಘರ್ಷ ಮತ್ತು ಅನಿಶ್ಚಿತತೆಯಲ್ಲಿದೆ. ಆದ್ದರಿಂದ ದೇಶದ ಹಿತದೃಷ್ಟಿಯಿಂದ ಪ್ರತಿಯೊಬ್ಬರೂ ತಮ್ಮ ದಿನನಿತ್ಯದ ಬದುಕಿನಲ್ಲಿ ಕೆಲವು ಬದಲಾವಣೆಗಳನ್ನು ತರಬೇಕಾಗಿದೆ,' ಎಂದು ಹೇಳಿದರು.

ಕೋವಿಡ್ ಅವಧಿಯಲ್ಲಿ ಜಾರಿಯಾಗಿದ್ದ ವರ್ಕ್ ಫ್ರಂ ಹೋಮ್, ಆನ್‌ಲೈನ್ ಸಭೆಗಳು ಮತ್ತು ವಿಡಿಯೋ ಕಾನ್ಫರೆನ್ಸ್‌ಗಳಂತಹ ವ್ಯವಸ್ಥೆಗಳನ್ನು ಮತ್ತೆ ಉತ್ತೇಜಿಸುವ ಅಗತ್ಯವಿದೆ ಎಂದು ಮೋದಿ ಅಭಿಪ್ರಾಯಪಟ್ಟರು. ಇದರಿಂದ ಪೆಟ್ರೋಲ್ ಮತ್ತು ಡೀಸೆಲ್ ಬಳಕೆ ಕಡಿಮೆಯಾಗುವುದಲ್ಲದೆ ವಿದೇಶಿ ವಿನಿಮಯ ಸಂಗ್ರಹದ ಮೇಲಿನ ಒತ್ತಡವೂ ತಗ್ಗಲಿದೆ ಎಂದು ಹೇಳಿದರು. ಇದರ ಜೊತೆಗೆ ಸಾರ್ವಜನಿಕ ಸಾರಿಗೆ ಬಳಕೆ, ಕಾರ್ ಪೂಲಿಂಗ್, ಎಲೆಕ್ಟ್ರಿಕ್ ವಾಹನಗಳ ಬಳಕೆ ಹಾಗೂ ಅನಗತ್ಯ ವಿದೇಶಿ ಪ್ರವಾಸಗಳನ್ನು ಕಡಿಮೆ ಮಾಡುವಂತೆ ಪ್ರಧಾನಿ ಮನವಿ ಮಾಡಿದರು. ದೇಶದ ಆರ್ಥಿಕ ಸ್ಥಿರತೆಗೆ ನಾಗರಿಕರ ಸಹಕಾರ ಅತ್ಯಗತ್ಯ ಎಂದೂ ಅವರು ಹೇಳಿದರು.



ಕಿರುಸುದ್ದಿ

ಮಾಜಿ ಸಿಎಂ ಸ್ಟಾಲಿನ್ ಭೇಟಿಯಾದ ವಿಜಯ್

ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಜೋಸೆಫ್ ವಿಜಯ್ ಸೋಮವಾರ ಮಾಜಿ ಮುಖ್ಯಮಂತ್ರಿ ಮತ್ತು ಡಿಎಂಕೆ ಮುಖ್ಯಸ್ಥ ಎಂ. ಕೆ. ಸ್ಟಾಲಿನ್ ಅವರನ್ನು ಭೇಟಿಯಾಗಿದ್ದಾರೆ. ವಿಧಾನಸಭೆಯಲ್ಲಿ ಬಹುಮತ ಸಾಬೀತಿಗೂ ಮುನ್ನ ಸ್ಟಾಲಿನ್ ಮನೆಗೆ ತೆರಳಿ ವಿಜಯ್ ಭೇಟಿಯಾಗಿರುವುದು ಚರ್ಚೆಗೆ ಗ್ರಾಸವಾಗಿದೆ. ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ವಿಜಯ್ ಅವರು ನನ್ನನ್ನು ರಾಜಕೀಯ ಸೌಜನ್ಯದಿಂದ ಭೇಟಿಯಾಗಿ ನನ್ನ ಶುಭಾಶಯಗಳನ್ನು ಸ್ವೀಕರಿಸಿದರು ಎಂದು ಸ್ಟಾಲಿನ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಂಗಾಳದ ಮಾಜಿ ಸಚಿವ ಸುಜಿತ್ ಬೋಸ್ ಬಂಧನ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ಪುರಸಭೆ ನೇಮಕಾತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಾಜಿ ಸಚಿವ ಹಾಗೂ ಟಿಎಂಸಿ ನಾಯಕ ಸುಜಿತ್ ಬೋಸ್‌ರನ್ನು ಜಾರಿ ನಿರ್ದೇಶನಾಲಯ(ಇಡಿ) ಬಂಧಿಸಿದೆ. ಬೋಸ್‌ರನ್ನು ದಿನಪೂರ್ತಿ ವಿಚಾರಣೆ ನಡೆಸಿದ ಬಳಿಕ, ಪಿಎಂಎಲ್‌ಎ ಅನ್ವಯ ಬಂಧಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

60 ದಿನಕ್ಕೆ ಆಗುವಷ್ಟು ಇಂಧನ ದೇಶದಲ್ಲಿದೆ

ಹೊಸದಿಲ್ಲಿ: ಮಧ್ಯಪ್ರಾಚ್ಯದ ಯುದ್ಧದ ನಡುವೆಯೂ ಭಾರತದಲ್ಲಿ 60 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ ಸಂಗ್ರಹವಿದೆ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ. ಇಂಧನ ಸರಬರಾಜು ಪರಿಶೀಲನೆಗಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ಸೋಮವಾರ ಐದನೇ ಅನೌಪಚಾರಿಕ ಐಜಿಒಎಂ ಸಭೆ ನಡೆದಿದ್ದು, ಸಭೆ ಬಳಿಕ ದೇಶದಲ್ಲಿ 60 ದಿನಗಳ ಕಚ್ಚಾ ತೈಲ, 60 ದಿನಗಳ ನೈಸರ್ಗಿಕ ಅನಿಲ ಹಾಗೂ 45 ದಿನಗಳಿಗಾಗುವಷ್ಟು ಎಲ್‌ಪಿಜಿ ಸಂಗ್ರಹ ಲಭ್ಯವಿದೆ ಎಂದು ರಕ್ಷಣಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಜಾಗತಿಕ ಅಡೆತಡೆಗಳು ಮತ್ತು ಸವಾಲುಗಳನ್ನು ಎದುರಿಸಲು ಜನರ ಸಾಮೂಹಿಕ ಭಾಗವಹಿಸುವಿಕೆಗಾಗಿ ಪ್ರಧಾನಿ ನರೇಂದ್ರ ಮೋದಿಯವರ ಮನವಿ ಸ್ವಾವಲಂಬನೆ ಮತ್ತು ಇಂಧನ ಭದ್ರತೆ ಖಾತ್ರಿಪಡಿಸಿಕೊಳ್ಳುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಲಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಪೂರೈಕೆ ಸರಪಳಿಗಳಲ್ಲಿನ ಕೊರತೆಗಳು ಅಥವಾ ಅಡೆತಡೆಗಳನ್ನು ತಡೆಯಲು ಸರ್ಕಾರವು ದೃಢವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದರಿಂದ ಜನರುಯಾವುದೇ ರೀತಿ ಆತಂಕಪಡುವ ಅಗತ್ಯವಿಲ್ಲ ಎಂದು ರಾಜನಾಥ್ ಹೇಳಿದರು. ಮುಂಬರುವ ಮುಂಗಾರು ಬಿತ್ತನೆ ಋತುವಿನ ಬೇಡಿಕೆ ಪೂರೈಸಲು ಭಾರತದಲ್ಲಿ ರಸಗೊಬ್ಬರ ಸಾಕಷ್ಟು ದಾಸ್ತಾನಿದೆ. ರೈತರು ಅಗತ್ಯಕ್ಕಿಂತ ಹೆಚ್ಚಿನ ಖರೀದಿಯಲ್ಲಿ ತೊಡಗಬಾರದು ಎಂದು ಸರ್ಕಾರ ಮನವಿ ಮಾಡಿದೆ.

ಪ್ರಧಾನಿ ಸಲಹೆಗಳಿಗೆ ವಿಪಕ್ಷಗಳಿಂದ ಆಕ್ಷೇಪ

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಕುಟುಂಬದ ಹಿರಿಯರ/ಸದಸ್ಯರ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರು ತನ್ನ ಕುಟುಂಬದ ಹಿರಿಯರ/ಸದಸ್ಯರ ಮರಣ ದಿನಾಂಕಗಳ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಹೆಸರು	ಮರಣ ಹೊಂದಿದ ವರ್ಷ	ಅರ್ಜಿದಾರರಿಗೆ ಸಂಬಂಧ	ಸ್ಥಳ:
1	ಹಡಗಲಿ ವೀರಪ್ಪ ತಂದೆ ಗಿಡ್ಡಮಲ್ಲಪ್ಪ	04-03-1985	ಅಜ್ಜ	ಮಾಗಳ
2	ಹಡಗಲಿ ಗಂಗಮ್ಮ ಗಂಡ ಹಡಗಲಿ ವೀರಪ್ಪ	15-07-1996	ಅಜ್ಜಿ	ಮಾಗಳ

ಸದರಿಯವರ ಮರಣದ ಬಗ್ಗೆ ಎದುರುದಾರರ ಕಛೇರಿಯಲ್ಲಿ ನೊಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಆಕ್ಷೇಪಣೆ ಅಥವಾ ತಕರಾರು ಇದ್ದಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕವಾಗಲೀ ದಿನಾಂಕ: 3/06/2026 ರಂದು ಬೆಳಿಗ್ಗೆ 11-00 ಗಂಟೆಗೆ ಹೂವಿನಹಡಗಲಿ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ಇಲ್ಲವಾದಲ್ಲಿ ನ್ಯಾಯಾಲಯವು ಏಕತರ್ಫಿ(ಏಕಪಕ್ಷೀಯ) ಆದೇಶ ನೀಡಲಾಗುವುದು.

ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 11/05/2026 ರಂದು ಕೊಡಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರರು, ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಹೂವಿನಹಡಗಲಿ
ಸಹಿ/- ಶ್ರೀ ಹನುಮಂತಪ್ಪ ಆರ್., ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ, ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ, ನಂ. 3, ಬ್ಯಾಹಟ್ಟಿ, ತಾ॥ ಹುಬ್ಬಳ್ಳಿ, ಜಿ॥ ಧಾರವಾಡ - 580 023.
ದೂ. : 0836-2315225, ಇ-ಮೇಲ್ : eemrbcc3byt@gmail.com

ಸಂಖ್ಯೆ : ಕ.ನೀ.ನಿ.ನಿ./ಮ.ಬ.ದ.ವಿ.-3/ಎ.ಇ.-1/ಇ-ಟೆಂಡರ್/2026-27/209
ದಿನಾಂಕ : 11-05-2026

ಟೆಂಡರ್ ಪ್ರಕಟಣೆ (2ನೇ ಕರೆ)

(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ರವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ, ಸಂ. 3, ಬ್ಯಾಹಟ್ಟಿ ವ್ಯಾಪ್ತಿಯ 4701 ಅಡಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರಿನ 01 ಕಾಮಗಾರಿಗೆ ಶೇಕಡಾವಾರು ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

ವರ್ಕ್ ಇಂಡೆಂಟ್ ನಂಬರ್ : 3929.

ಕಾಮಗಾರಿಯ ಅಂದಾಜು ಮೊತ್ತ : ರೂ. 100.00 ಲಕ್ಷಗಳು,
ಇ.ಎಂ.ಡಿ. ಮೊತ್ತ : ರೂ. 1,70,000/-.

ಇ-ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ದಿನಾಂಕ : 30-05-2026 ರ ಸಂಜೆ 4.00 ತನಕ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 02-06-2026 ರ ಬೆಳಿಗ್ಗೆ 11.00 ರಿಂದ. ಹಾಗೂ ಕಾಮಗಾರಿವಾರು ಇತರೆ ವಿವರಗಳನ್ನು ದಿನಾಂಕ : 12-05-2026 ರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ಮುಖೇನ http://kppp.karnataka.gov.in ಮೂಲಕ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ : 0836-2315225 ನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜನೀಯರರು,
ಕ.ನೀ.ನಿ.ನಿ., ಮ.ಬ.ದ.ಕಾ.ನಿ., ವಿಭಾಗ ನಂ. 3,
ಡಿಐಪಿಆರ್/ಧಾರವಾಡ/159/ಮಣಿಪಾಲ್/2026-27 ಬ್ಯಾಹಟಿ.

ಕರ್ನಾಟಕ ಸರ್ಕಾರ

ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಯೋಜನಾ ಅಭಿವೃದ್ಧಿ ಅಧಿಕಾರಿಗಳ ಕಛೇರಿ

ನಂ.308, ಮೂರನೇ ಮಹಡಿ, ಜಿಲ್ಲಾಡಳಿತ ಭವನ, ಶ್ರೀ ಬಿ.ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ ಜಿಲ್ಲೆ - 571313
Email ID: dpdochamarajanagar@gmail.com ದೂರವಾಣಿ ಸಂಖ್ಯೆ: 08226-355162
ಸಂಖ್ಯೆ : ಜಿಆಕುಕ/ಚಾ.ನ/ಸಿ.ಪಿ.ಹೆಚ್.ಸಿ-ಯು.ಹೆಚ್.ಸಿ/01/2026-27, ದಿನಾಂಕ : 07/05/2026

ಇ-ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ರಾಷ್ಟ್ರೀಯ ಆರೋಗ್ಯ ಅಭಿಯಾನ 15ನೇ ಹಣಕಾಸು ಆಯೋಗದಡಿಯಲ್ಲಿ ಚಾಮರಾಜನಗರ ಜಿಲ್ಲೆಯ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಉಪಕರಣಗಳನ್ನು 2026-2027ನೇ ಸಾಲಿಗೆ ಪೂರೈಸಲು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆ, ಇ.ಎಂ.ಡಿ ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್ ಸೈಟ್ www. https://kppp.karnataka.gov.in/ ನಲ್ಲಿ ನೋಡಬಹುದಾಗಿದೆ.

ಟೆಂಡರ್ ಹೆಸರು		15ನೇ ಹಣಕಾಸು ಆಯೋಗದಡಿಯಲ್ಲಿ ಚಾಮರಾಜನಗರ ಜಿಲ್ಲೆಯ ವಿವಿಧ ಆರೋಗ್ಯ ಸಂಸ್ಥೆಗಳಿಗೆ ಅಗತ್ಯವಿರುವ ಉಪಕರಣಗಳನ್ನು ಖರೀದಿಸಲು.
ಟೆಂಡರ್ ಅರ್ಜಿ ಹಾಕಲು ಆರಂಭದ ದಿನಾಂಕ	:	ದಿನಾಂಕ :07.05.2026 ವೇಳೆ:10:30AM
ಫ್ರೀ ಬಿಡ್ ಮೀಟಿಂಗ್ ಮತ್ತು ಮಾದರಿ ಪರಿಶೀಲನೆ	:	ದಿನಾಂಕ :19.05.2026 ವೇಳೆ:11:00AM
ಟೆಂಡರ್ ಅರ್ಜಿ ಹಾಕಲು ಅಂತಿಮ ದಿನಾಂಕ	:	ದಿನಾಂಕ :08.06.2026 ವೇಳೆ:4:00PM
ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	ದಿನಾಂಕ :09.06.2026 ವೇಳೆ:4:10PM
ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ	:	ದಿನಾಂಕ :12.06.2026 ವೇಳೆ:4:00PM
ಟೆಂಡರ್ ತೆರೆಯುವುದು/ಫ್ರೀ ಬಿಡ್ ಮೀಟಿಂಗ್	:	ಜಿಲ್ಲಾ ಆಡಳಿತ ಭವನ, ಮೂರನೇ ಮಹಡಿ, ನಂ.307, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಸಭಾಂಗಣ, ಚಾಮರಾಜನಗರ

ಸಹಿ/- ಸದಸ್ಯ ಕಾರ್ಯದರ್ಶಿ
ಜಿಲ್ಲಾ ಆರೋಗ್ಯ ಮತ್ತು ಕು.ಕ.ಸೊಸೈಟಿ
ಸಂ:ವಾಸಾಸಂಇ:ಚಾ.ನಗರ:97:2026-27 ಚಾಮರಾಜನಗರ

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

E-mail:itstaff_ulb_raichurn@yahoo.com Website:-www.raichurcity.gov.in
Phone No:08532-226768 Fax No:08532-226316

No. CCR/ENG/TS/CF/2026-27 Date :06/05/2026

ಟೆಂಡರ್ ಅಧಿಸೂಚನೆ (KPPP 2.0 ವಿಧಾನದಲ್ಲಿ)

ಕೆಳಕಂಡ ಅನುದಾನದಡಿ ಸೂಚಿಸಲಾದ ಕಾಮಗಾರಿಗಳಿಗೆ KPPP 2.0 ವಿಧಾನದಲ್ಲಿ ಟೆಂಡರ್ ಅಧಿಸೂಚನೆಗಳನ್ನು ಆಹ್ವಾನಿಸಲಾಗುತ್ತಿದೆ ಎಂದು ತಿಳಿಸಲಾಗುತ್ತದೆ. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ತಮ್ಮ ಟೆಂಡರ್ ದರಪತ್ರಗಳನ್ನು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ (www.kppp.karnataka.gov.in) ಮೂಲಕ ಸಲ್ಲಿಸಬಹುದು. ಹೆಚ್ಚಿನ ವಿವರಗಳನ್ನು ರಾಯಚೂರು ಮಹಾನಗರ ಪಾಲಿಕೆ ಅಧಿಕೃತ ಜಾಲತಾಣ (http://www.raichurcity.mrc.gov.in) ದಲ್ಲಿಯೂ ಪಡೆಯಬಹುದು.

Sl. No	Grant Details	Name of Work	Indent Number
1	DC Office GRANT	The Making, Supply and Erection of 12 feet Height bronze Statue of late Dr.B R.Ambedkar in Raichur City. **Estimate Cost Rs. 65.00 Lakhs.**	DMA/2026-27/IND6250
2	SFC Grant	Construction of Tensile Roofing Structure to Existing Gallery at Mahila Samaja Open Auditorium In Raichur City. **Estimate Cost Rs. 76.44 Lakhs.**	DMA/2026-27/OW/WORK_INDENT57404/CALL-2
3	2026-27 Corporation Fund	Operation and Maintenance of street lights in ward no 1 to 35 in Raichur City. Estimate Cost Rs. 248.00 Lakhs.	DMA/2026-27/SE7840
4		LEAKAGE MAINTENANCE OF WATER SUPPLY DISTRIBUTION NETWORK IN RAICHUR CITY CORPORATION. Estimate Cost Rs. 100.00 Lakhs.	DMA/2026-27/WS/WORK_INDENT58184
5		CONSTRUCTION OF DOG SHELTER AND ABC CENTRE IN RAICHUR CITY Estimate Cost Rs. 150.00 Lakhs.	DMA/2026-27/BD/WORK_INDENT58187

ಸಹಿ/- ಕಾರ್ಯಪಾಲಕ ಅಭಿಯಂತರರು,
DIP/RCR/59KSMCA/61/2026-27 ಮಹಾನಗರ ಪಾಲಿಕೆ, ರಾಯಚೂರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜನೀಯರರವರ ಕಛೇರಿ, ತುಂ.ಮೇ.ಯೋ. ವಿಭಾಗ, ಶಿವಮೊಗ್ಗ. ಫೋನ್ ನಂ. 08182-254832

1.ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ತುಂ.ಮೆ.ಯೋ./ವಿ/ಪಿಬಿ-2/ಟೆಂಡರ್/36 Call4 ದಿನಾಂಕ: 07.05.2026
2.ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ತುಂ.ಮೆ.ಯೋ./ವಿ/ಪಿಬಿ-1/ಟೆಂಡರ್/04 ದಿನಾಂಕ: 07.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.-ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 4701-ತುಂಗಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಬರುವ ಎರಡು(02) ಕಾಮಗಾರಿಗಳಿಗೆ ಹಾಗೂ 2700/2701-ಉಬ್ರಾಣಿ ಅಮೃತಾಪುರ ಯೋಜನೆ ಅಡಿಯಲ್ಲಿ ಬರುವ ಒಂದು(01) Consultancy ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ.253.49 ಲಕ್ಷಗಳು (ಇ. ಸಂಖ್ಯೆ 3743 Call4), ರೂ.420.03 ಲಕ್ಷಗಳು(ಇ.ಸಂಖ್ಯೆ 3744 Call4) ಮತ್ತು ರೂ.7.04 ಲಕ್ಷಗಳು(ಇ.ಸಂಖ್ಯೆ 0461) (ಜಿ.ಎಸ್.ಟಿ ಹೊರತುಪಡಿಸಿ)
(2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ/ಸ್ಪಷ್ಟಿಕರಣಗಳಿಗಾಗಿ ಕೊನೆಯ ದಿನಾಂಕ: 13.05.2026 17.30 ಘಂಟೆಯವರೆಗೆ.
(3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 07.05.2026 ರಿಂದ 16.05.2026 ಸಾಯಂಕಾಲ 17.30 ಘಂಟೆಯವರೆಗೆ (ಕಚೇರಿ ವೇಳೆಯಲ್ಲಿ)

ಟೆಂಡರನ್ನು ತೆರೆಯುವ ದಿನಾಂಕ / ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/-
ಕಾರ್ಯಪಾಲಕ ಇಂಜನೀಯರರು,
ಕನೀನಿನಿ, ತುಂ.ಮೆ.ಯೋ. ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ಸಂ.42-05/ಥೀಂಕಾರ್/2026-27

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಛೇರಿ, ವಿದ್ಯುತ್ ಭವನ, ಗೋಪನಕೊಪ್ಪ, ಹುಬ್ಬಳ್ಳಿ-580023.
E-mail: seepmc.hescom@gmail.com
eepmc1.hescom@gmail.com ; eep3.hescom@gmail.com
website: www.hescom.karnataka.gov.in
CIN No: U31401KA2002SGCO30437

No: HESCOM/SEE(PMC)/EE-P1&P3/AEE-2&3/2026-27/CYS-1385 Date: 11-05-2026

ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ. ಮೂಲಕ ಮಾತ್ರ)

ಅಧೀಕ್ಷಕ ಇಂಜನೀಯರ (ವಿ), ಪಿಎಮ್ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿ ರವರಿಂದ ಪೂರ್ಣ ಗುತ್ತಿಗೆ ಆಧಾರದಡಿಯಲ್ಲಿ ಕೆಳಕಂಡ ಕಾಮಗಾರಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.

1) Particulars: 11ಕೆವಿ ವಿದ್ಯುತ್ ಮಾರ್ಗಗಳವಾಹಕ ಬದಲಾವಣೆ ಕಾಮಗಾರಿಗಳು.

Bid indent No for SC Category: HESCOM/2026-27/EL/WORK_INDENT 1120, 1121, 1131, 1149 & 1200 **(5 Packages).**

Bid indent No for ST Category: HESCOM/2026-27/EL/WORK_INDENT 1130 & 1177 **(2 Packages).**

Bid indent No for CAT-II-A: HESCOM/2026-27/EL/WORK_INDENT 1134. 1147 & 1175 **(3 Packages).**

Bid indent No for Others: HESCOM/2026-27/EL/WORK_INDENT 1118, 1119, 1122, 1123, 1124, 1125, 1126, 1127, 1128, 1129, 1132, 1133, 1135, 1136, 1137, 1138, 1139, 1140, 1141, 1142, 1143, 1144, 1145, 1146, 1148, 1176, 1178, 1179, 1180, 1181, 1182, 1183, 1184, 1185, 1186, 1187, 1188, 1189, 1190, 1191, 1192, 1193, 1194, 1195, 1196, 1197, 1198, 1199, 1201, 1202, 1203, 1204, 1205, 1206 & 1207 **(55 Packages).**

2) Particulars: ಹೊಸ 11ಕೆವಿ ವಿದ್ಯುತ್ ಮಾರ್ಗಗಳ ನಿರ್ಮಾಣ

Bid indent No for SC Category: HESCOM/2026-27/EL/WORK_INDENT 1161 **(1Package).**

Bid indent No for CAT-I: HESCOM/2026-27/EL/WORK_INDENT 1163 **(1 Package).**

Bid indent No for CAT-II-A: HESCOM/2026-27/EL/WORK_INDENT 1098 & 1174 **(2 Packages).**

Bid indent No for Others: 1150, 1151, 1153, 1154, 1155, 1156, 1152, 1157, 1158, 1159, 1160, 1162, 1164, 1165, 1166, 1167, 1168, 1169, 1170, 1171, 1172 & 1173 **(22 Packages).**

ಸದರಿ ಟೆಂಡರಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್: **www.kppp.karnataka.gov.in** ರಲ್ಲಿ ದಿನಾಂಕ: **11.05.2026 ರ 5:00 ಗಂಟೆ** ನಂತರ ಪಡೆಯಬಹುದು.

ಅಧೀಕ್ಷಕ ಇಂಜನೀಯರರು(ವಿ)
ವಾಸಾಸಂಇ/ಧಾ/ದಿಶಾ/161/2026-27 (ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.

ಲೋಕೋಪಯೋಗಿ ಇಲಾಖೆ, ಗುಣ ಭರವಸೆ ವಿಭಾಗ, ಹಾಸನ

ಅಲ್ಪಾವಧಿ ಟೆಂಡರ್ ಪ್ರಕಟಣೆ:01/2026-27
ದಿನಾಂಕ: 11.05.2026

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜನಿಯರ್, ಲೋ.ಇ, ಗುಣ ಭರವಸೆ ವಿಭಾಗ, ಹಾಸನ ರವರಿಂದ ಲೋ.ಇ, ಗುಣ ಭರವಸೆ ವಿಭಾಗ ಹಾಸನ ಹಾಗೂ ಉಪವಿಭಾಗಗಳಾದ ಹಾಸನ ಮತ್ತು ಮಂಗಳೂರು ಕಛೇರಿಗಳಿಗೆ ಅಗತ್ಯವಿರುವ ಚಾಲಕ ಸಹಿತ ವಾಹನ ಸೇವೆಗಳನ್ನು ಹಾಗೂ ಮಾನವ ಸಂಪನ್ಮೂಲ ಸೇವೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸಂಸ್ಥೆಯಿಂದ ಪಡೆಯಲು ಏಕ-ಲಕೋಟೆ ಪದ್ಧತಿಯಲ್ಲಿ ಸ್ಪರ್ಧಾತ್ಮಕ ಟೆಂಡರ್‌ನ್ನು - portal ಅಂತರ್ಜಾಲದಲ್ಲಿ ಕರೆಯಲಾಗಿದ್ದು, ದಿನಾಂಕ:19-05-2026 ಸಂಜೆ 5.30 ಗಂಟೆಯವರೆಗೆ ಟೆಂಡರ್‌ನ್ನು ನಿಗದಿತ ನಮೂನೆಗಳನ್ನು https://kppp.karnataka.gov.in ನಲ್ಲಿ Download ಮಾಡಿ ಅವಶ್ಯಕ ಮಾಹಿತಿಗಳೊಂದಿಗೆ ಹಾಗೂ ನಿಗದಿತ EMD ಯೊಂದಿಗೆ Upload ಮಾಡಬಹುದಾಗಿರುತ್ತದೆ. ದಿನಾಂಕ: 18-05-2026 ರವರೆಗೆ ಬಿಡ್ಡುದಾರರು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 21-05-2026 ರಂದು ಬೆಳಿಗ್ಗೆ 11.00 ಗಂಟೆಯ ನಂತರ ಟೆಂಡರ್‌ನ್ನು ತೆರೆಯಲಾಗುವುದು. ಒಂದು ವೇಳೆ ತಿದ್ದುಪಡಿ ಉಂಟಾದಲ್ಲಿ ಸದರಿ, ತಿದ್ದುಪಡಿಯನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಎಲ್ಲಾ ಟೆಂಡರ್‌ಗಳನ್ನು ಅಥವಾ ಯಾವುದಾದರೂ ಒಂದು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/- ಕಾರ್ಯಪಾಲಕ ಇಂಜನಿಯರ್, ಲೋ.ಇ,
ಗುಣ ಭರವಸೆ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/118/ಕೆಎಸ್ಎಂಸಿಎ/2026-27

ಸಾರ್ವಜನಿಕ ನೋಟಿಸ್

ಈ ಮೂಲಕ ನಾನು ಪ್ರಶಾಂತ್ ಎಸ್. ಪಾಟೀಲ (ಬಿ.ಕಾಂ.ಎಲ್.ಎಲ್.ಬಿ) ನ್ಯಾಯವಾದಿಗಳು ಕುಂದಗೋಳ ನಮ್ಮ ಪಕ್ಷಗಾರನಾದ ಶ್ರೀ ಫಕ್ಕೀರೇಶ ತಂದೆ ಬಸಪ್ಪ ರಡ್ಡೆರ ಸಾ॥ ಸಂಶಿ ತಾ॥ ಕುಂದಗೋಳ ಜಿ॥ ಧಾರವಾಡ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ನೋಟಿಸು ಏನೇಂದರೆ.

ಸದರಿ ನಮ್ಮ ಪಕ್ಷಗಾರಗಾರನು ಧಾರವಾಡ ಜಿಲ್ಲಾ ಕುಂದಗೋಳ ತಾಲೂಕ ಪೈಕಿ ಸಂಶಿ ಗ್ರಾಮದ ಹದ್ದಿಯ ರಿ.ಸ.ನಂ: 229/2 ಕ್ಷೇತ್ರ 09ಎ-ಹಿಂಗುಂಟೆ, ಆಕಾರ 27ರೂ-72ಪೈಸೆ ನೇ ಜಮೀನಿನ ಪೈಕಿ ಮಧ್ಯ ಭಾಗದ 02ಎಕರೆ ಜಮೀನು ಇದಕ್ಕೆ ಚಕಬಂದಿ ಪೂರ್ವ- ಇದೆ ಸರ್ವೆ ನಂಬರನ ಉಳಿದ ಆಸ್ತಿ, ಪಶ್ಚಿಮ-ಇದೆ ಸರ್ವೆ ನಂಬರನ ಉಳಿದ ಜಮೀನು, ಉತ್ತರ-ಲಲಿತವ್ವ ಪಾಟೀಲ ಇವರ ಜಮೀನು, ದಕ್ಷಿಣ-ಶಿವರಾಜ ತಾವರಕೊಪ್ಪ ಇವರ ಜಮೀನು ಈ ಪ್ರಕಾರ ಚಕಬಂದಿ ಮಧ್ಯದಲ್ಲಿ ಇರುವ ಜಮೀನನ್ನು, ಸದರ ಜಮೀನಿನ ಮಾಲೀಕರಾದ ಶ್ರೀ ಸೋಮಪ್ಪ ತಂದೆ ಸಂಗಪ್ಪ ಬೇಗೂರ ಸಾ: ಕರಡಿಕೊಪ್ಪ, ತಾ:ಜಿ: ಧಾರವಾಡ, ಇತನಿಂದ ನಮ್ಮ ಪಕ್ಷಕಾರನು ಖರೀದಿಸುವುದನು ಇರುತ್ತಾನೆ. ಕಾರಣ ಮೇಲ್ಕಾಣಿಸಿದ ಆಸ್ತಿ ಕುರಿತು ಯಾರದಾದರೂ ಎನಾದರೂ ಹಕ್ಕು, ಹಿತಾಸಕ್ತಿ, ಋಣಭಾರ, ಸಂಚಗಾರ ವಗೈರೆ ಯಾವುದೆ ರೀತಿಯ ತಂಟೆ ವ ತಕರಾರು ಇದ್ದಲ್ಲಿ ಈ ನೋಟಿಸು ಪ್ರಕಟವಾದ 7(ಏಳು) ದಿನಗಳೊಳಗಾಗಿ ಈ ಕೆಳಕಂಡ ವಿಳಾಸಕ್ಕೆ ಅವಶ್ಯಕ ದಾಖಲಾತಿಗಳೊಂದಿಗೆ ಲಿಖಿತವಾಗಿ ತಿಳಿಸಬೇಕು. ಒಂದು ವೇಳೆ ಯಾವುದೆ ತಕರಾರು ನಿಗದಿತ ಅವಧಿಯೊಳಗೆ ಬಾರದಿದ್ದರೆ ಸದರಿ ಆಸ್ತಿಯು ಯಾವುದೆ ತಕರಾರಿಗೆ ಒಳಪಟ್ಟಿಲ್ಲ ಅಂತಾ ಪರಿಗಣಿಸಿ ನಮ್ಮ ಪಕ್ಷಗಾರರು ಖರೀದಿ ಪತ್ರವನ್ನು ನೊಂದಾಯಿಸಿಕೊಳ್ಳುತ್ತಾರೆ ಹಾಗೂ ಆ ನಂತರ ಬರುವ ತಕರಾರುಗಳು ನಮ್ಮ ಪಕ್ಷಗಾರರಿಗೆ ಯಾವುದೆ ರೀತಿಯಿಂದ ಬಾಂಧಾಯಿಸುವುದಿಲ್ಲಾ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸ್ಥಳ : ಕುಂದಗೋಳ
ದಿನಾಂಕ: 11-05-2026
ಸಹಿ/- ಶ್ರೀ ಪ್ರಶಾಂತ್ ಎಸ್. ಪಾಟೀಲ ವಕೀಲರು
(ಕುಂದಗೋಳ) ಸಾ: ಮಂಡಿಗನಾಳ, ತಾ: ಕುಂದಗೋಳ ಜಿ:ಧಾರವಾಡ,
ಪೋ: ಅತ್ತಿಗೇರಿ-581126. ಮೊ: 9986478958

ಸಾರ್ವಜನಿಕ ನೋಟಿಸ್

ಈ ಮೂಲಕ ನಾನು ಪ್ರಶಾಂತ್ ಎಸ್. ಪಾಟೀಲ (ಬಿ.ಕಾಂ.ಎಲ್.ಎಲ್.ಬಿ) ನ್ಯಾಯವಾದಿಗಳು ಕುಂದಗೋಳ ನಮ್ಮ ಪಕ್ಷಗಾರನಾದ ಶ್ರೀ ಸಿದ್ದಲಿಂಗಪ್ಪ ತಂದೆ ಗದಿಗೆಪ್ಪ ಕೆಳ್ಳಿಹಾಳ ಸಾ॥ ಅಗಡಿ ತಾ॥ ಜಿ॥ ಹಾವೇರಿ. ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇರೆಗೆ ಕೊಡುವ ಸಾರ್ವಜನಿಕ ನೋಟಿಸು ಏನೇಂದರೆ,

ಸದರಿ ನಮ್ಮ ಪಕ್ಷಗಾರಗಾರನು ಧಾರವಾಡ ಜಿಲ್ಲಾ ಕುಂದಗೋಳ ತಾಲೂಕ ಪೈಕಿ ಸಂಶಿ ಗ್ರಾಮದ ಹದ್ದಿಯ ರಿ.ಸ.ನಂ: 229/2 ಕ್ಷೇತ್ರ 09ಎ-0ಗುಂಟೆ, ಆಕಾರ 27ರೂ-72ಪೈಸೆ ನೇ ಜಮೀನಿನ ಪೈಕಿ ಪಶ್ಚಿಮ ಭಾಗದ 02ಎಕರೆ ಜಮೀನು ಇದಕ್ಕೆ ಚಕಬಂದಿ ಪೂರ್ವ- ಇದೆ ಸರ್ವೆ ನಂಬರನ ಉಳಿದ ಆಸ್ತಿ, ಪಶ್ಚಿಮ- ಶಿವಯೋಗಿಗೌಡ ಪಾಟೀಲ ಇವರ ಜಮೀನು, ಉತ್ತರ- ಲಲಿತವ್ವ ಪಾಟೀಲ ಇವರ ಜಮೀನು, ದಕ್ಷಿಣ- ಶಿವರಾಜ ತಾವರಕೊಪ್ಪ ಇವರ ಜಮೀನು ಈ ಪ್ರಕಾರ ಚಕಬಂದಿ ಮಧ್ಯದಲ್ಲಿ ಇರುವ ಜಮೀನನ್ನು, ಸದರ ಜಮೀನಿನ ಮಾಲೀಕರಾದ ಶ್ರೀ ಸೋಮಪ್ಪ ತಂದೆ ಸಂಗಪ್ಪ ಬೇಗೂರ ಸಾ: ಕರಡಿಕೊಪ್ಪ, ತಾ:ಜಿ: ಧಾರವಾಡ, ಇತನಿಂದ ನಮ್ಮ ಪಕ್ಷಕಾರನು ಖರೀದಿಸುವುದನು ಇರುತ್ತಾನೆ. ಕಾರಣ ಮೇಲ್ಕಾಣಿಸಿದ ಆಸ್ತಿ ಕುರಿತು ಯಾರದಾದರೂ ಎನಾದರೂ ಹಕ್ಕು, ಹಿತಾಸಕ್ತಿ, ಋಣಭಾರ, ಸಂಚಗಾರ ವಗೈರೆ ಯಾವುದೆ ರೀತಿಯ ತಂಟೆ ವ ತಕರಾರು ಇದ್ದಲ್ಲಿ ಈ ನೋಟಿಸು ಪ್ರಕಟವಾದ 7(ಏಳು) ದಿನಗಳೊಳಗಾಗಿ ಈ ಕೆಳಕಂಡ ವಿಳಾಸಕ್ಕೆ ಅವಶ್ಯಕ ದಾಖಲಾತಿಗಳೊಂದಿಗೆ ಲಿಖಿತವಾಗಿ ತಿಳಿಸಬೇಕು. ಒಂದು ವೇಳೆ ಯಾವುದೆ ತಕರಾರು ನಿಗದಿತ ಅವಧಿಯೊಳಗೆ ಬಾರದಿದ್ದರೆ ಸದರಿ ಆಸ್ತಿಯು ಯಾವುದೆ ತಕರಾರಿಗೆ ಒಳಪಟ್ಟಿಲ್ಲ ಅಂತಾ ಪರಿಗಣಿಸಿ ನಮ್ಮ ಪಕ್ಷಗಾರರು ಖರೀದಿ ಪತ್ರವನ್ನು ನೊಂದಾಯಿಸಿಕೊಳ್ಳುತ್ತಾರೆ ಹಾಗೂ ಆ ನಂತರ ಬರುವ ತಕರಾರುಗಳು ನಮ್ಮ ಪಕ್ಷಗಾರರಿಗೆ ಯಾವುದೆ ರೀತಿಯಿಂದ ಬಾಂಧಾಯಿಸುವುದಿಲ್ಲಾ ಅಂತಾ ಕೊಟ್ಟ ಸಾರ್ವಜನಿಕ ನೋಟಿಸು.

ಸ್ಥಳ : ಕುಂದಗೋಳ
ದಿನಾಂಕ: 11-05-2026
ಸಹಿ/- ಶ್ರೀ ಪ್ರಶಾಂತ್ ಎಸ್. ಪಾಟೀಲ ವಕೀಲರು
(ಕುಂದಗೋಳ) ಸಾ: ಮಂಡಿಗನಾಳ, ತಾ: ಕುಂದಗೋಳ ಜಿ:ಧಾರವಾಡ,
ಪೋ: ಅತ್ತಿಗೇರಿ-581126. ಮೊ: 9986478958

ಸಾರಸ್ವತ್ ಬ್ಯಾಂಕ್
ಸಾರಸ್ವತ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ವಸೂಲಾತಿ ವಿಭಾಗ: ವಲಯ ಕಚೇರಿ ಕೊಲ್ಹಾಪುರ,
2127-ಸಿ, ಸಿ ವಾರ್ಡ್, ಭಸುಸಿಂಗ್‌ಜೀ ರಸ್ತೆ, ಕೊಲ್ಹಾಪುರ- 416002
ಫೋನ್ ನಂ. +91 231 2644542, 2644478

ಇ-ಹರಾಜು ಮಾರಾಟ ನೋಟಿಸ್

(ವೆಬ್‌ಸೈಟ್: https://sarfaesi.auctiontiger.net ಮೂಲಕ ಮಾತ್ರವೇ ಹರಾಜು ಮಾರಾಟ/ಬಿಡ್ಡಿಂಗ್ ನಡೆಸಲಾಗುತ್ತದೆ)

ಸೆಕ್ಯುರಿಟೈಸೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ-2002 ಅನ್ವಯ ಬ್ಯಾಂಕಿಗೆ ಚಾರ್ಜ್ ಮಾಡಲಾದ ಸ್ಥಿರಸ್ವತ್ತಿಗಳ ಮಾರಾಟ

ಸೆಕ್ಷನ್ 13(2)ರ ಅಡಿಯಲ್ಲಿ ನೀಡಲಾದ ಡಿಮ್ಯಾಂಡ್ ನೋಟಿಸ್‌ಗೆ ಅನುಸಾರ, ಈ ಕೆಳಗೆ ಸಹಿ ಮಾಡಿದ **ಸಾರಸ್ವತ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್**‌ನ ಅಧಿಕೃತ ಅಧಿಕಾರಿಯು ಈ ಕೆಳಗಿನ ಆಸ್ತಿಗಳನ್ನು ಸರ್ಫೇಸಿ ಕಾಯ್ದೆಯ ಸೆಕ್ಷನ್ **13(4)**ರ ಅನ್ವಯ **ಸ್ವಾಧೀನಕ್ಕೆ** ಪಡೆದಿರುತ್ತಾರೆ. ಸಾರ್ವಜನಿಕರಿಗೆ ವಿಸ್ತೃತವಾಗಿ ಮಾಹಿತಿ ನೀಡುವುದೇನೆಂದರೆ ಬ್ಯಾಂಕಿಗೆ ಬಾಕಿ ಇರುವ ಬಾಕಿ ಮೊತ್ತವನ್ನು ವಸೂಲಿ ಮಾಡಿಕೊಳ್ಳುವ ಸಲುವಾಗಿ ಈ ಕೆಳಗೆ ಹೆಸರಿಸಿದ ಪ್ರಕರಣಗಳಲ್ಲಿ ಚಾರ್ಜ್ ಮಾಡಲಾದ ಆಸ್ತಿಗಳನ್ನು **"ಎಲ್ಲಿದೆಯೋ ಅದು ಆಧಾರದಲ್ಲಿ"** **"ಏನಿದೆಯೋ ಅದು ಆಧಾರದಲಿ"** ಮತ್ತು **"ಮರುವಾಪಸ್ಸಾತಿ"** ಇಲ್ಲದ ಆಧಾರದಲ್ಲಿ ಈ ಕೆಳಗೆ ನಿರ್ದಿಷ್ಟಪಡಿಸಿದಂತೆ ಇ-ಹರಾಜು (ಸರ್ಫೇಸಿ ಕಾಯ್ದೆ-2002ರ ಅಡಿಯಲ್ಲಿ) ಮಾಡಲಾಗುತ್ತದೆ.

ಕ್ರ. ಸಂ.	ಸಾಲಗಾರರು, ಸಹ ಸಾಲಗಾರರು/ ಜಾಮೀನುದಾರರು/ ಅಡಮಾನದಾರರು, ಉತ್ತರಾಧಿಕಾರಿಗಳ (ಅನ್ವಯವಾಗುವುದಾದಲ್ಲಿ) ಹೆಸರು	ಎ. ಡಿಮ್ಯಾಂಡ್ ನೋಟಿಸ್ ದಿನಾಂಕ ಬಿ. ಸ್ವಾಧೀನ ವಿಧ/ ದಿನಾಂಕ ಸಿ. ಡಿಮ್ಯಾಂಡ್‌ಮೊತ್ತ	ಆಸ್ತಿಯ ವಿವರಣೆ	1. ಮೀಸಲು ಬೆಲೆ 2. ಇಎಂಡಿ 3. ಬಿಡ್ ಏರಿಕೆ ಮೊತ್ತ ತಪಾಸಣೆಯ ದಿನಾಂಕ/ ಸಮಯ ಇಎಂಡಿ & ಕೆವೈಸಿ ಸಲ್ಲಿಕೆಗೆ ಕೊನೆಯ ದಿನಾಂಕ/ ಸಮಯ ಇ-ಹರಾಜು ದಿನಾಂಕ/ ಸಮಯ
1)	ಸಾಲಗಾರ/ಅಡಮಾನದಾರರು ಶ್ರೀಮತಿ ಗೀತಾ ಹನುಮಂತಪ್ಪ ದೊಡ್ಡಮನಿ ಸಹ ಸಾಲಗಾರರು/ ಅಡಮಾನದಾರರು:- 1. ಭೂಷಣ್ ಫೈರಪ್ಪ ವಾಲ್ಮೀಕಿ	ಎ. 03.10.2024 ಬಿ. ಭೌತಿಕ/ 17.07.2025 ಸಿ. 03.10.2024ಕ್ಕೆ ಇದ್ದಂತೆ ರೂ. 35,47,016.46 ಮತ್ತು ಆ ಬಳಿಕದ ಬಡ್ಡಿ*	ಎನ್‌ಎ ಭೂಮಿ/ ಪ್ಲಾಟ್ ಎನ್.ಎ. ಪ್ಲಾಟ್ ನಂ. 1/ಎ/2ಎ/1ಎ (ವಿಸ್ತೀರ್ಣ ಒಟ್ಟು 17364 ಚದರ ಅಡಿಯ ಪೈಕಿ ಸುಮಾರು 3427 ಚದರ ಅಡಿ ಸ್ಥಿರಾಸ್ತಿಯ ಎಲ್ಲ ತುಂಡು ಮತ್ತು ತುಣುಕುಗಳು. ಇದರಲ್ಲಿ ವಸತಿ ಕಟ್ಟಡ ಮತ್ತು ಮುಕ್ತ ಸ್ಥಳ ಇದೆ. ವಿಳಾಸ: ಅತ್ತಿಕೊಳ್ಳ, ಧಾರವಾಡ, ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ. ಇದರ ಒಡೆತನವನ್ನು ಶ್ರೀಮತಿ ಗೀತಾ ಹನುಮಂತಪ್ಪ ದೊಡ್ಡಮನಿ ಮತ್ತು ಶ್ರೀ ಭೂಷಣ್ ಫೈರಪ್ಪ ವಾಲ್ಮೀಕಿ ಹೊಂದಿದ್ದಾರೆ.	ರೂ. 57.92 ಲಕ್ಷ ರೂ. 5.80 ಲಕ್ಷ ** ರೂ. 0.50 ಲಕ್ಷ 16.05.2026 ಮಧ್ಯಾಹ್ನ 2.00 ರಿಂದ ಸಂಜೆ 4.00 10.06.2026 ಸಂಜೆ 5.00 ಗಂಟೆವರೆಗೆ 12.06.2026 ಮಧ್ಯಾಹ್ನ 2.00 ರಿಂದ ಸಂಜೆ 4.00

* ಪಾವತಿ ಮಾಡುವ ಮತ್ತು/ ಅಥವಾ ವಸೂಲಾತಿಯಾಗುವ ದಿನಾಂಕದವರೆಗೆ ಅನ್ವಯವಾಗುವ ಮುಂದಿನ ಬಡ್ಡಿ, ಸಾಂದರ್ಭಿಕ ವೆಚ್ಚಗಳು, ಖರ್ಚುಗಳು, ಚಾರ್ಜ್‌ಗಳು ಇತ್ಯಾದಿ.
** ಯಶಸ್ವಿ ಬಿಡ್ಡರ್‌ಗಳು ಅಂತಿಮ ಬಿಡ್ ಮೊತ್ತದ ಶೇಕಡ 25ನ್ನು ಯಾವುದೇ ವಿಳಂಬವಿಲ್ಲದೆ ಮಂದಿನ ಕೆಲಸದ ದಿನಗಳ ಒಳಗಾಗಿ ಪಾವತಿಸಬೇಕಾಗುತ್ತದೆ.
ಹರಾಜನ್ನು ಬ್ಯಾಂಕಿನ ಅನುಮೋದಿತ ಸೇವಾ ಪೂರೈಕೆದಾರರಾದ **ಮೆಸರ್ಸ್ ಇ-ಪ್ರೊಕ್ಯೂರ್‌ಮೆಂಟ್ ಟೆಕ್ನಾಲಜೀಸ್ ಲಿಮಿಟೆಡ್ (ಆಕ್ಷನ್ ಟೈಗರ್)** ಮೂಲಕ ನಡೆಸಲಾಗುತ್ತದೆ. ಬಿಡ್ ಫಾರ್ಮ್, ಮೇಲೆ ಹೇಳಿದ ಮಾರಾಟ/ಹರಾಜಿನ ಷರತ್ತು ಮತ್ತು ನಿಬಂಧನೆಗಳು, ಬಿಡ್/ಆಫರ್ ಸಲ್ಲಿಸುವ ವಿಧಿವಿಧಾನಗಳು ಅವರ ವೆಬ್‌ಸೈಟ್:**https://sarfaesi.auctiontiger.net** ನಲ್ಲಿ ಲಭ್ಯವಿರುತ್ತದೆ.

ಸರ್ಫೇಸಿ ಕಾಯ್ದೆ-2002ರ ನಿಯಮ 8(6) ಅನ್ವಯ ಶಾಸನಬದ್ಧ ನೋಟಿಸ್

ಈ ನೋಟಿಸನ್ನು ಮೇಲೆ ಹೇಳಿದ ಮಾರಾಟ ದಿನಾಂಕದ ಮೊದಲು ಸಂಪೂರ್ಣವಾಗಿ ಪಾವತಿಸುವಂತೆ ಸಾಲ ಖಾತೆಯ ಸಾಲಗಾರರು/ ಅಡಮಾನದಾರರು & ಜಾಮೀನುದಾರರಿಗೆ ನೀಡಲಾದ ನೋಟಿಸ್ ಎಂದೂ ಪರಿಗಣಿಸಬೇಕು. ತಪ್ಪಿದಲ್ಲಿ ಆಸ್ತಿಯನ್ನು ಮೇಲೆ ಹೇಳಿದ ದಿನಾಂಕದಂದು ಹರಾಜು ಮಾರಾಟ ಮಾಡಲಾಗುತ್ತದೆ.

ದಿನಾಂಕ: 12.05.2026
ಸ್ಥಳ: ಹುಬ್ಬಳ್ಳಿ
ಅಧಿಕೃತ ಅಧಿಕಾರಿ
ಸಾರಸ್ವತ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಕರ್ನಾಟಕಸರ್ಕಾರ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,ಬೀದರ್.

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವಾವಿದ್ಯಾಲಯ, ಕರ್ನಾಟಕ ಬೆಂಗಳೂರು ರವರಿಗೆ ಸಂಯೋಜನೆಗೊಂಡಿದ್ದು, ಭಾರತ ಸರ್ಕಾರ ನವದೆಹಲಿ ರವರಿಂದ ಅಂಗೀಕೃತಗೊಂಡಿರುತ್ತದೆ.
ದೂರವಾಣಿ ಸಂಖ್ಯೆ : 08482-228366 & ಫ್ಯಾಕ್ಸ್ : 08482-240322
Website :www.bimsbidar.karnataka.gov.in& E-mail Id : directorbrimsbidar2007@gmail.com

ಸಂಖ್ಯೆ : ಬೀವೈವಿಸಂ/ಟೆಂಡರ್/ವಾರ್ತಾಪತ್ರಿಕೆ/ಸಿಆರ್- /2026-27 ದಿನಾಂಕ :07-05-2026

ಟೆಂಡರ್ ಪ್ರಕಟಣೆ

ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೋಧಕ್ ಆಸ್ಪತ್ರೆ ಬೀದರಗೆ ಬೇಕಾಗಿರುವ Supply Equipments, Diet and STP to Brims Teaching Hospital Bidar ಗಳ ಸರಬರಾಜುವಿಗಾಗಿ ಇ-ಟೆಂಡರ್ ಕರೆಯಲಾಗಿದೆ.ಇಚ್ಛೆಯುಳ್ಳ ಏಜೆನ್ಸಿಯವರು ಇ-ಟೆಂಡರ್ ನಲ್ಲಿ ನಮೂದಿಸಿದ ಸಮಯದ ಅನುಗುಣವಾಗಿ ಟೆಂಡರ್ ಭರಿಸಲು ಅವಕಾಶ ವಿರುತ್ತದೆ. ಹಾಗೂ ಇ-ಸಂಗ್ರಹಣೆಯಪೋರ್ಟಲ್ ಮೂಲಕ ಸದರಿ ಟೆಂಡರಿನ ವಿವರ ವಿಕ್ಷೀಸಬಹುದು/ಡೌನಲೋಡ್ ಮಾಡಿಕೊಂಡು ಇ-ಪ್ರೋಕ್ಯೂಮೇರ್ಂಟ್ ಮೂಲಕ ಸಲ್ಲಿಸಬಹುದುwww.kppp.karnataka.gov.in ಮತ್ತು ಟೆಂಡರಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನುಈ ಸಂಸ್ಥೆಯ ಅಂತರ್ಜಾಲ ತಾಣವಾದ www.bimsbidar.karnataka.gov.inನಲ್ಲಿ ಸಹನೋಡಬಹುದಾಗಿದೆ.

ಕ್ರ.ಸಂ	ಟೆಂಡರ್ ವಿವರ	ಇಂಡೆಂಟ್ ಸಂಖ್ಯೆ	ಇ.ಎಂ.ಡಿ.	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1.	SUPPLY OF EQUIPMENTS TO BLOOD BANK DEPARTMENT BRIMS BIDAR	DME/2026-27/IND2298	39,000	16-05-2026 Upto 05:30
2.	Supply, Installation and Commissioning of HD Video Bronchoscope System UNDER KKRDB FOR THE YEAR - 2025-26	DME/2026-27/IND2149 CALL-2	82,425	16-05-2026 Upto 05:30
3.	E -Procurement for Providing Catering Services (Diet Prepared Food) for In patients of Brims Teaching Hospital Bidar for the year 2026-27.	DME/2026-27/SE0737/CALL-2	2,62,500	06-06-2026 Upto 05:30
4.	Operation and Annual Maintenance of 450 KLD STP with allied components for dispose of the sewage and medical waste at BRIMS Attached Teaching Hospital (District Hospital) BIDAR. (Including man power and Chemicals)	DME/2026-27/SE0738	72,500	22-05-2026 Upto 05:30

1. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸು ವವಿಳಾಸ : ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೀದರ್ 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾವಣೆಗಳು ಕೇವಲ ವಿದ್ಯುನ್ಮಾನ ಸಂಗ್ರಹಣೆ www.kppp.karnataka.gov. ವೇದಿಕೆಯಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ನಿರ್ದೇಶಕರು
ವಾ.ಸಾ.ಸಂ.ಇ/ಬೀದರ/31/ಕೆ.ಎಸ್.ಎಂ.ಸಿ.&ಎ/2026-27 ಬೀದರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಬೀದರ.



ಆರೆಂಜ್ ಕ್ಯಾಪ್
ಕ್ಲಾಸೆನ್ (ಹೈದರಾಬಾದ್)
494 ರನ್

ಪರ್ಪಲ್ ಕ್ಯಾಪ್
ಭುವನೇಶ್ವರ್ (ಬೆಂಗಳೂರು)
21 ವಿಕೆಟ್

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	11	7	4	0	14	+1.103
ಹೈದರಾಬಾದ್	11	7	4	0	14	+0.737
ಗುಜರಾತ್	11	7	4	0	14	+0.228
ಪಂಜಾಬ್	10	6	3	1	13	+0.571
ಚೆನ್ನೈ	11	6	5	0	12	+0.185
ರಾಜಸ್ಥಾನ	11	6	5	0	12	+0.082
ಕೆಕೆಆರ್	10	4	5	1	9	-0.169
ದಿಲ್ಲಿ	11	4	7	0	8	-1.154
ಮುಂಬೈ	11	3	8	0	6	-0.585
ಲಖನೌ	11	3	8	0	6	-0.907

ಮುಂಬೈ ವಿರುದ್ಧ ಆರ್‌ಸಿಬಿ, ಲಖನೌ ವಿರುದ್ಧ ಚೆನ್ನೈ ಗೆಲುವು ದಾಖಲಿಸಿರುವ ನಂತರ ಇಂಡಿಯನ್ ಪ್ರೀಮಿಯರ್ ಲೀಗ್ ಕುತೂಹಲ ಹಂತಕ್ಕೆ ತಲುಪಿದೆ. ನಾಲ್ಕೈದು ತಂಡಗಳು ಸಮಾನ ಪ್ರದರ್ಶನ ನೀಡುತ್ತಿರುವ ಬೆನ್ನಲ್ಲೇ ಪಂದ್ಯಾವಳಿಯ ಪ್ಲೇಆಫ್ ಪೈಪೋಟಿ ಹೆಚ್ಚಿದೆ. ಪಂದ್ಯಾವಳಿಯ ಮೊದಲಾರ್ಧದಲ್ಲಿ ಪಂಜಾಬ್, ರಾಜಸ್ಥಾನ, ಬೆಂಗಳೂರು ಮತ್ತು ಹೈದರಾಬಾದ್ ತಂಡಗಳು ಮೇಲುಗೈ ಸಾಧಿಸಿದ್ದವು. 40 ಪಂದ್ಯಗಳ ಮುಕ್ತಾಯಕ್ಕೆ ನಾಲ್ಕು ಸ್ಥಾನಗಳಲ್ಲಿ ತಂಡಗಳು ಫಿಕ್ಸ್ ಅನ್ನುವ ಲೆಕ್ಕಾಚಾರಗಳು ಮೂಡಿದ್ದವು. ಆದರೆ ಇತ್ತೀಚೆಗಿನ 15 ಪಂದ್ಯಗಳು ಮುಕ್ತಾಯಗೊಂಡ ನಂತರ ಅಂಕಪಟ್ಟಿಯೇ ಬದಲಾದಂತಿದೆ. ಹಾಗಿದ್ದರೆ ಲೆಕ್ಕಾಚಾರವೇನು?

ಅಂಕಪಟ್ಟಿ ಸೆಣಸಾಟ ಗೆಲ್ಲುವವರ್ಯಾರು?

ಎರಡನೇ ಅರ್ಧದ ಆರಂಭದಲ್ಲೂ ಪಂಜಾಬ್, ಆರ್‌ಸಿಬಿ ಮತ್ತು ರಾಜಸ್ಥಾನ ತಂಡಗಳೇ ಮೇಲಿದ್ದವು. ನಾಲ್ಕನೇ ಸ್ಥಾನದಲ್ಲಿದ್ದ ಹೈದರಾಬಾದ್ ಗೆಲುವುಗಳೊಂದಿಗೆ ಮೇಲೆದ್ದಿತು. ಸತತ ಮೂರು ಗೆಲುವಿನ ನಂತರ ತಟ್ಟನೆ ಮೊದಲನೇ ಸ್ಥಾನಕ್ಕೇರಿತ್ತು. ಅತ್ತ ರಾಜಸ್ಥಾನ ಸೋಲುಗಳಲ್ಲಿ ಸಿಲುಕಿಕೊಂಡರೆ, ಆರ್‌ಸಿಬಿ ಕೂಡ ಒಂದೆರಡು ಪಂದ್ಯ ಎರಡನೇ ಸುತ್ತಿನ ಪಂದ್ಯಗಳಲ್ಲಿ ಸೋತಿದೆ. ಹೀಗಿರುವಾಗ ಮೊದಲಿಗೆ ಕೆಳಗಿದ್ದ ಗುಜರಾತ್ ಗೆಲುವಿನ ದಂಡಯಾತ್ರೆ ಶುರು ಮಾಡಿತು. ಬಂದ ತಂಡಗಳನ್ನೆಲ್ಲಾ ಸೋಲಿಸುತ್ತಾ ಪ್ರಾಬಲ್ಯ ಪ್ರದರ್ಶಿಸಿದ ಗುಜರಾತ್ ಇದೀಗ ನಂಬರ್ 2 ಸ್ಥಾನಕ್ಕೂ ಫೈಟ್ ಕೊಡುತ್ತಿದೆ. ಮತ್ತೊಂದೆಡೆ ಕೊನೆಯ ಸ್ಥಾನದಲ್ಲಿದ್ದ ಚೆನ್ನೈ ಸೂಪರ್ ಕಿಂಗ್ಸ್ ಹ್ಯಾಟ್ರಿಕ್ ಗೆಲುವುಗಳೊಂದಿಗೆ ಕಂಬ್ಯಾಕ್ ಮಾಡಿದೆ. ಉತ್ತಮ ರನ್‌ರೇಟ್ ಹೊಂದಿದ ನಂತರ ಲಖನೌ ವಿರುದ್ಧ ಗೆದ್ದು, ರಾಜಸ್ಥಾನವನ್ನು ಕೆಳಕ್ಕೆ ನೂಕಿ ಐದನೇ ಸ್ಥಾನದಲ್ಲಿರಿತು. ಎಲ್ಲಾ ಲೆಕ್ಕಾಚಾರಗಳನ್ನು ನೋಡಿದರೆ ಇನ್ನೂ ಟಾಪ್ 4 ತಂಡಗಳು ನಿರ್ಧರಿಸಲಾಗಿಲ್ಲ. 6 ತಂಡಗಳಿಗೆ ಅವಕಾಶ ಹೊಂದಿರುವ ಬೆನ್ನಲ್ಲೇ 16 ಅಂಕವೇ ಪ್ಲೇಆಫ್ ಅವಕಾಶ ಕೊಡುತ್ತದೆ ಎಂಬ ಮಾತೂ ಇಲ್ಲ. ಹೀಗಿರುವಾಗ ಯಾರಿಗೆ ಎಷ್ಟು ಅವಕಾಶವಿದೆ?

ರಾಯಲ್ ಚಾಲೆಂಜರ್ಸ್ ಬೆಂಗಳೂರು

ಮುಂಬೈ ಇಂಡಿಯನ್ಸ್ ವಿರುದ್ಧ ಗೆದ್ದ ನಂತರ ಟೇಬಲ್ ಟಾಪರ್ ಆಗಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಉತ್ತಮ ರನ್‌ರೇಟ್ ಹೊಂದಿರುವುದರಿಂದ 1 ಪಂದ್ಯದಲ್ಲಿ ಗೆದ್ದರೆ ಟಾಪ್ 4 ಸ್ಥಾನ ಖಚಿತವಾಗಲಿದೆ. ಎರಡರಲ್ಲಿ ಗೆದ್ದರೆ, ಟಾಪ್ 2 ಅವಕಾಶ ಪಡೆಯಬಹುದು.

- ಅಂಕಪಟ್ಟಿಯಲ್ಲಿ ಸ್ಥಾನ: 1(14 ಅಂಕ)
- ಉಳಿದ ಪಂದ್ಯ:3; ಕೆಕೆಆರ್, ಪಂಜಾಬ್, ಹೈದರಾಬಾದ್
- ರನ್‌ರೇಟ್: +1.103
- ಪ್ಲೇಆಫ್‌ಗೇರಲು ಬೇಕಾದ ಅಂಕ: 2
- ಟಾಪ್ 2ಗೇರಲು ಬೇಕಾದ ಅಂಕ: 4-6
- ಪ್ಲೇಆಫ್ ಸಾಧ್ಯತೆ: ಶೇ. 94.82

ಗುಜರಾತ್ ಟೈಟಾನ್ಸ್

ಗೆಲುವಿನೋಟ ಮುಂದುವರಿಸಿರುವ ಗುಜರಾತ್ ಇತ್ತೀಚಿಗಿನ ಪಂದ್ಯಗಳಲ್ಲಿ ಬಲಿಷ್ಠ ತಂಡಗಳನ್ನು ಸೋಲಿಸಿದೆ. ಭಾನುವಾರದ ಮೊದಲು ಗುಜರಾತ್ 2ನೇ ಸ್ಥಾನದಲ್ಲಿತ್ತು. ಇನ್ನೂ ಮೂರು ಪಂದ್ಯಗಳನ್ನು ಹೊಂದಿರುವ ಗಿಲ್ ಪಡೆ ಅಗ್ರ ಎರಡಲ್ಲಿರುವ ಅವಕಾಶವನ್ನೂ ಹೊಂದಿದೆ.

- ಅಂಕಪಟ್ಟಿಯಲ್ಲಿ ಸ್ಥಾನ: 3(14 ಅಂಕ)
- ಉಳಿದ ಪಂದ್ಯ:3; ಹೈದರಾಬಾದ್, ಕೆಕೆಆರ್, ಚೆನ್ನೈ
- ರನ್‌ರೇಟ್: +0.228
- ಪ್ಲೇಆಫ್‌ಗೇರಲು ಬೇಕಾದ ಅಂಕ: 2-4
- ಟಾಪ್ 2ಗೇರಲು ಬೇಕಾದ ಅಂಕ: 4-6
- ಪ್ಲೇಆಫ್ ಸಾಧ್ಯತೆ: ಶೇ. 87.53



ಚೆನ್ನೈ ಸೂಪರ್ ಕಿಂಗ್ಸ್

ಮೊದಲಾರ್ಧದ 7 ಪಂದ್ಯಗಳಲ್ಲಿ ಕೇವಲ ಎರಡು ಗೆದ್ದಿದ್ದ ಚೆನ್ನೈ ನಂತರದ ಪಂದ್ಯಗಳಲ್ಲಿ ಸೋತಿದ್ದು ಒಂದರಲ್ಲಿ ಮಾತ್ರ. ಹಿಂದಿನ ಮೂರು ಪಂದ್ಯಗಳಲ್ಲಿ ಗೆದ್ದ ನಂತರ ಪಂದ್ಯಾವಳಿಯ ಪ್ಲೇಆಫ್ ರೇಸ್‌ನಲ್ಲಿ ಸ್ಪರ್ಧಿಯಾಗಿದೆ. ಟಾಪ್ 2ಕ್ಕೂ ಹೋಗುವ ಅವಕಾಶ ಇನ್ನೂ ಹೊಂದಿದೆ.

- ಅಂಕಪಟ್ಟಿಯಲ್ಲಿ ಸ್ಥಾನ: 5(12 ಅಂಕ)
- ಉಳಿದ ಪಂದ್ಯ:3; ಲಖನೌ, ಹೈದರಾಬಾದ್, ಗುಜರಾತ್
- ರನ್‌ರೇಟ್: +0.185
- ಪ್ಲೇಆಫ್‌ಗೆ ಬೇಕಾದ ಅಂಕ: ಕನಿಷ್ಠ 4
- ಟಾಪ್ 2ಗೇರಲು ಬೇಕಾದ ಅಂಕ: 6
- ಪ್ಲೇಆಫ್ ಸಾಧ್ಯತೆ: ಶೇ. 58.47

ಸನ್‌ರೈಸರ್ಸ್ ಹೈದರಾಬಾದ್

ಗೆಲುವಿನ ನಾಗಾಲೋಟದೊಂದಿಗೆ ಎರಡನೇ ಸ್ಥಾನದಲ್ಲಿರುವ ಸನ್ ತಂಡವು, ಒಂದು ಪಂದ್ಯದಲ್ಲಿ ಗೆದ್ದರೆ ಬಹುತೇಕ ಪ್ಲೇಆಫ್‌ಗೇರಲಿದೆ. ರನ್‌ರೇಟ್ ವಿಚಾರವಾಗಿ ಅಲ್ಪ ಹಿಂದಿರುವುದರಿಂದ 2 ಗೆದ್ದರೆ ಪ್ಲೇಆಫ್ ಗ್ಯಾರಂಟಿ. ಟಾಪ್ 2ಗೇರುವ ಅವಕಾಶವನ್ನೂ ಹೊಂದಿದೆ.

- ಅಂಕಪಟ್ಟಿಯಲ್ಲಿ ಸ್ಥಾನ: 2(14 ಅಂಕ)
- ಉಳಿದ ಪಂದ್ಯ:3; ಗುಜರಾತ್, ಚೆನ್ನೈ, ಬೆಂಗಳೂರು
- ರನ್‌ರೇಟ್: +0.737
- ಪ್ಲೇಆಫ್‌ಗೇರಲು ಬೇಕಾದ ಅಂಕ: 2-4
- ಟಾಪ್ 2ಗೇರಲು ಬೇಕಾದ ಅಂಕ: 4-6
- ಪ್ಲೇಆಫ್ ಸಾಧ್ಯತೆ: ಶೇ. 91.74

ಪಂಜಾಬ್ ಕಿಂಗ್ಸ್

ಇನ್ನು ಮೊದಲಾರ್ಧದಲ್ಲಿ ಮೊದಲನೇ ಸ್ಥಾನದಲ್ಲಿ ಗಟ್ಟಿಯಾಗಿ ಕೂತಿದ್ದ ಪಂಜಾಬ್ ಕಿಂಗ್ಸ್ ತಂಡವು ಸತತ ಮೂರು ಪಂದ್ಯಗಳಲ್ಲಿ ಸೋತಿದ್ದು ದೊಡ್ಡ ಹಿನ್ನಡೆ ಅನುಭವಿಸಿದೆ. ತಂಡದ ಸೋಲು ನಾಲ್ಕನೇ ಸ್ಥಾನಕ್ಕೆ ಕೆಡವಿದ್ದು, ಮೇಲೇಳಬೇಕಾದರೆ ಗೆಲುವುಗಳನ್ನು ಸಾಧಿಸಲೇಬೇಕಿದೆ.

- ಅಂಕಪಟ್ಟಿಯಲ್ಲಿ ಸ್ಥಾನ: 4(13 ಅಂಕ)
- ಉಳಿದ ಪಂದ್ಯ:4; ದಿಲ್ಲಿ, ಮುಂಬೈ, ಆರ್‌ಸಿಬಿ, ಲಖನೌ
- ರನ್‌ರೇಟ್: +0.571
- ಪ್ಲೇಆಫ್‌ಗೇರಲು ಬೇಕಾದ ಅಂಕ: 2-4
- ಟಾಪ್ 2ಗೇರಲು ಬೇಕಾದ ಅಂಕ: 4-6
- ಪ್ಲೇಆಫ್ ಸಾಧ್ಯತೆ: ಶೇ. 84.69

ರಾಜಸ್ಥಾನ ರಾಯಲ್ಸ್

ಕಳೆದ ಪಂದ್ಯಗಳಲ್ಲಿ ಸೋತ ನಂತರ ಕೆಳಬಿದ್ದಿರುವ ರಾಜಸ್ಥಾನ ಎಲ್ಲಾ ಪಂದ್ಯಗಳಲ್ಲಿ ಗೆಲ್ಲಲೇಬೇಕಾದ ಒತ್ತಡಕ್ಕೆ ಬಿದ್ದಿದೆ. ಆರನೇ ಸ್ಥಾನದಲ್ಲಿರುವ ರಾಜಸ್ಥಾನ ಮೂರು ಪಂದ್ಯಗಳಲ್ಲಿ ಗೆದ್ದರೆ ಮೇಲೇರುವ ಅವಕಾಶ ಹೊಂದಿದೆ.

- ಅಂಕಪಟ್ಟಿಯಲ್ಲಿ ಸ್ಥಾನ: 6(12 ಅಂಕ)
- ಉಳಿದ ಪಂದ್ಯ:3; ದಿಲ್ಲಿ, ಲಖನೌ, ಮುಂಬೈ
- ರನ್‌ರೇಟ್: +0.082
- ಪ್ಲೇಆಫ್‌ಗೇರಲು ಬೇಕಾದ ಅಂಕ: 4
- ಟಾಪ್ 2ಗೇರಲು ಬೇಕಾದ ಅಂಕ: 6
- ಪ್ಲೇಆಫ್ ಸಾಧ್ಯತೆ: ಶೇ. 54.33

ದಿಲ್ಲಿ ಮತ್ತು ಕೆಕೆಆರ್ ತಂಡಗಳು ಅಧಿಕೃತವಾಗಿ ಹೊರಬೀಳದ ಕಾರಣ ಅವುಗಳೂ ಪ್ಲೇಆಫ್‌ಗೇರುವ ಅವಕಾಶ ಹೊಂದಿವೆ. ಒಂದು ವೇಳೆ ಒಂದು ದೊಡ್ಡ ಮಿರ್‍ಯಾಕಲ್ ಆದಾಗ ಮತ್ತು ರನ್‌ರೇಟ್ ವಿಚಾರದಲ್ಲಿ ದೊಡ್ಡ ಮುನ್ನಡೆ ಸಾಧಿಸಿದಾಗ ಮಾತ್ರ ಸಾಧ್ಯವಾಗಲಿದೆ.

ಹೊರಬಿದ್ದ ಮುಂಬೈ-ಲಖನೌ

ಭಾನುವಾರ ನಡೆದಿರುವ ಪಂದ್ಯಗಳಲ್ಲಿ ಸೋತ ಲಖನೌ ಸೂಪರ್ ಜೈಂಟ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ಪಂದ್ಯಾವಳಿಯಿಂದ ಹೊರಬಿದ್ದಿದ್ದು, ಔಪಚಾರಿಕತೆಗೆ ಪಂದ್ಯಗಳನ್ನಾಡಲಿವೆ. ಐಪಿಎಲ್‌ನಲ್ಲಿ 16 ಅಂಕಗಳು ಪ್ಲೇಆಫ್ ಗ್ಯಾರಂಟಿ ಕೊಡುವುದು ವಾಡಿಕೆಯಾದರೂ ಕಳೆದ ಕೆಲ ವರ್ಷಗಳಲ್ಲಿ ಏಳು ಪಂದ್ಯಗಳನ್ನು ಗೆದ್ದು ಪ್ಲೇಆಫ್ ಗೇರಿರುವ ಉದಾಹರಣೆಗಳೂ ಇವೆ. ಹೀಗಿರುವಾಗ ಒಂದು ಕೊನೆಯ ಮಿರ್‍ಯಾಕಲ್ ಅವಕಾಶಕ್ಕಾಗಿ ಲಖನೌ ಮತ್ತು ಮುಂಬೈ ಕಾಯುತ್ತಿದ್ದವು. ಭಾನುವಾರ 8ನೇ ಸೋಲನ್ನು ಕಂಡಿರುವ ಎರಡೂ ತಂಡಗಳು ಪಂದ್ಯಾವಳಿಯಿಂದ ಹೊರಬಿದ್ದಿವೆ.

ಕಿರುಸುದ್ದಿ

ಏಕದಿನದಲ್ಲೂ ಭಾರತವೇ ನಂಬರ್ 1

ಹೊಸದಿಲ್ಲಿ: ಇತ್ತೀಚೆಗೆ ಯಾವುದೇ ಅಂತಾರಾಷ್ಟ್ರೀಯ ಪಂದ್ಯವಾಡದಿದ್ದರೂ ತನ್ನ ನಂಬರ್ 1 ಸ್ಥಾನದಲ್ಲಿ ಭಾರತ ಬದ್ಧವಾಗಿದೆ. ಏಕದಿನ ರ್‍ಯಾಂಕಿಂಗ್ ಪಟ್ಟಿ ಪರಿಷ್ಕೃತಗೊಂಡಿದ್ದು, ಐಸಿಸಿ ತನ್ನ ವಾರ್ಷಿಕ ಏಕದಿನ ರ್‍ಯಾಂಕಿಂಗ್ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಟೀಂ ಇಂಡಿಯಾ ಯಾವುದೇ ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡದಿದ್ದರೂ, 118 ಅಂಕಗಳೊಂದಿಗೆ ನಂಬರ್ 1 ಸ್ಥಾನದಲ್ಲೇ ರಾರಾಜಿಸುತ್ತಿದೆ. ನ್ಯೂಜಿಲೆಂಡ್ ಎರಡನೇ ಸ್ಥಾನದಲ್ಲಿದ್ದು, ಪಾಕಿಸ್ತಾನ ಐದನೇ ಸ್ಥಾನಕ್ಕೆ ಕುಸಿದಿದೆ. ಕೆಲವು ದಿನಗಳ ಹಿಂದೆ ಟೆಸ್ಟ್ ಮತ್ತು ಟಿ20 ಅಂತಾರಾಷ್ಟ್ರೀಯ ಶ್ರೇಯಾಂಕಗಳಲ್ಲಿ ವಾರ್ಷಿಕ ಬದಲಾವಣೆಗಳನ್ನು ಪ್ರಕಟಿಸಿದ ನಂತರ, ಐಸಿಸಿ ಮೇ 11 ರಂದು ವಾರ್ಷಿಕ ಏಕದಿನ ರ್‍ಯಾಂಕಿಂಗ್ ಪಟ್ಟಿಯನ್ನು ಪ್ರಕಟಿಸಿದೆ. ಪ್ರತಿ ವರ್ಷ, ಮೇ ತಿಂಗಳಲ್ಲಿ, ಐಸಿಸಿ ಶ್ರೇಯಾಂಕ ಪಟ್ಟಿಯನ್ನು ಬಿಡುಗಡೆ ಮಾಡುತ್ತದೆ.

ಸುಬ್ರಹ್ಮಣ್ಯಂ ಬದರಿನಾಥ್ ವಿವಾದಾತ್ಮಕ ಹೇಳಿಕೆ

ಮುಂಬೈ: ಆರ್‌ಸಿಬಿ ಹಾಗೂ ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದ ನಡುವೆ ವೀಕ್ಷಕ ವಿವರಣೆ ನೀಡುತ್ತಿದ್ದ ಮಾಜಿ ಕ್ರಿಕೆಟಿಗ ಸುಬ್ರಹ್ಮಣ್ಯಂ ಬದರಿನಾಥ್ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಆರ್‌ಸಿಬಿ ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಮಧ್ಯದಲ್ಲಿ ಬ್ಯಾಟಿಂಗ್ ಮಾಡುತ್ತಿದ್ದಾಗ, ಅವರು ಸೆಳೆತದಿಂದ ಬಳಲುತ್ತಿದ್ದರು. ಕಾಲು ಹಿಡಿದುಕೊಂಡು ನೆಲಕ್ಕೆ ಬಿದ್ದರು. ಎಂಐ ವಿಕೆಟ್ ಕೀಪರ್ ರಯಾನ್ ರಿಕೆಲ್ಟನ್ ಅವರಿಗೆ ಸಹಾಯ ಮಾಡಲು ಬಂದರು. ಈ ವೇಳೆ ವೀಕ್ಷಕ ವಿವರಣೆ ನೀಡುತ್ತಿದ್ದ ಬದರಿನಾಥ್, ಆಟದ ಸಂದರ್ಭದಲ್ಲಿ ಅವರನ್ನು ಸಾಯಲು ಬಿಡುವ' ಬಗ್ಗೆ ಯೋಚಿಸುತ್ತಿದ್ದೆ ಎಂದಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ.

ಜೂ. ಬ್ಯಾಡ್ಮಿಂಟನ್: ಅಭಿನವ್, ತನ್ವಿಗೆ ಜಯ

ಬೆಂಗಳೂರು: ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಆಶ್ರಯದಲ್ಲಿ ನಡೆದ ಜೂನಿಯರ್ ಬ್ಯಾಡ್ಮಿಂಟನ್ ರ್‍ಯಾಂಕಿಂಗ್ ಪಂದ್ಯಾವಳಿ ಮುಕ್ತಾಯಗೊಂಡಿದೆ. ವಿವಿಧ ವಿಭಾಗಗಳಲ್ಲಿ ರಾಷ್ಟ್ರದ ಯುವ ಆಟಗಾರರು ಮಿಂಚಿ ಗಮನ ಸೆಳೆದರು. ಅಂಡರ್-19 ವಿಭಾಗದಲ್ಲಿ ಅಭಿನವ್ ಗಾರ್ಗ್ ಮೊದಲ ಸ್ಥಾನ ಗಳಿಸಿದರೆ, ಜ್ಞಾನ ಎರಡನೇ ಸ್ಥಾನ ಗಳಿಸಿದರು. ಅಖೀಲ್ ರೆಡ್ಡಿ, ಹಾರ್ದಿಕ್ ಕ್ರಮವಾಗಿ ಮುಂದಿನ ಸ್ಥಾನ ಪಡೆದರು. ಮಹಿಳೆಯರ ಅಂಡರ್-19 ವಿಭಾಗದಲ್ಲಿ ತನ್ವಿ ಪತ್ರಿ ಮೊದಲನೇ ಸ್ಥಾನ ಗಳಿಸಿದರೆ, ಸಹಿನಾ ಮನಿಮುಥು ಎರಡನೇ ಸ್ಥಾನ ಪಡೆದರು. ಅಕ್ಷಿತಾ, ಆದರ್ಶಿನಿ ಮುಂದಿನ ಸ್ಥಾನಗಳನ್ನು ಪಡೆದರು. ಮಿಶ್ರ ಡಬಲ್ಸ್‌ನಲ್ಲಿ ಪುನೀತ್-ಆದಿಥಿ ಜೋಡಿ ಮೊದಲನೇ ಸ್ಥಾನ ಗಳಿಸಿದರೆ, ಸಾಯಿ-ರಿಶಿತಾ ಜೋಡಿ ಎರಡನೇ ಸ್ಥಾನ ಗಳಿಸಿದರು. ಅಲಿ-ಶಾಂಭವಿ, ಜಂಗ್ಜೀತ್-ಏಂಜಲ್ ಮುಂದಿನ ಸ್ಥಾನ ಪಡೆದರು. ಪುರುಷರ ಡಬಲ್ಸ್ ವಿಭಾಗದಲ್ಲಿ ಪವನ್-ಪುನೀತ್ ಮೊದಲನೇ ಸ್ಥಾನ, ಅನನ್ಯಾನ್-ಜೈಸನ್ ಎರಡನೇ ಸ್ಥಾನ ಗಳಿಸಿದರು. ಮಹಿಳೆಯರ ಡಬಲ್ಸ್‌ನಲ್ಲಿ ದಿಯಾ-ಬುರಾನಿ ಗೆದ್ದುಕೊಂಡರೆ, ಅನುಷ್ಕಾ-ದಿಷಿತಾ ರನ್ನರ್-ಅಪ್ ಸ್ಥಾನ ಗಳಿಸಿದರು.

ಆರ್‌ಸಿಬಿ ಕೋಚ್ ಫ್ಲವರ್‌ಗೆ ದಂಡ

ರಾಯ್ಪುರ: ಇಂಡಿಯನ್ ಪ್ರೀಮಿಯರ್ ಲೀಗ್‌ನ 54ನೇ ಪಂದ್ಯದ ವೇಳೆ ಅಸಭ್ಯ ಪದಗಳನ್ನು ಬಳಸಿದ ಕಾರಣಕ್ಕಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಅವರಿಗೆ ಪಂದ್ಯದ ಶುಲ್ಕದ ಶೇ. 15 ರಷ್ಟು ದಂಡ ವಿಧಿಸಲಾಗಿದೆ. ಮುಂಬೈ ವಿರುದ್ಧದ ಪಂದ್ಯದ ವೇಳೆ ಅಂಪೈರ್ ನೀಡಿದ ತೀರ್ಪಿಗೆ ಅಸಮಾಧಾನ ವ್ಯಕ್ತ ಪಡಿಸಿದ ಆ್ಯಂಡಿ, ನಾಲ್ಕನೇ ಅಂಪೈರ್‌ನೊಂದಿಗೆ ಅಸಭ್ಯ ಪದಗಳನ್ನು ಬಳಸಿದ್ದಾರೆ. ಈ ಪಂದ್ಯದ 17ನೇ 2ನೇ ಎಸೆತವನ್ನು ಕೃನಾಲ್ ಪಾಂಡ್ಯ ಸಿಕ್ಸರ್‌ನತ್ತ ಬಾರಿಸಿದ್ದರು. ಆದರೆ ಚೆಂಡು ಬೌಂಡರಿ ಲೈನ್ ದಾಟುವ ಮುನ್ನ ನಮನ್ ಧೀರ್ ಹಿಡಿದಿದ್ದರು. ಅಲ್ಲದೆ ಅದನ್ನು ರಿಲೇ ಕ್ಯಾಚ್‌ಗಾಗಿ ತಿಲಕ್ ವರ್ಮಾರತ್ತ ಎಸೆದಿದ್ದರು.

ಭೇಷ್ ಭುವನೇಶ್ವರ್!



- ಥ್ರಿಲ್ಲಿಂಗ್ ಪಂದ್ಯ ಗೆದ್ದ ಆರ್‌ಸಿಬಿ
- ಕೃನಾಲ್ ಆಟಕ್ಕೆ ಮಣಿದ ಮುಂಬೈ

ರಾಯ್ಪುರ: ಬೌಲಿಂಗ್‌ನಲ್ಲಿ 4 ವಿಕೆಟ್ ಪಡೆದಿದ್ದ ಭುವನೇಶ್ವರ್ ಕುಮಾರ್ ಬ್ಯಾಟಿಂಗ್ ಗಿಳಿದಾಗ ತಂಡ ಸಂಕಷ್ಟದಲ್ಲಿತ್ತು. ಗೆಲ್ಲುವುದಕ್ಕೆ 11 ರನ್ ಬೇಕಿದ್ದವು. ಶೇಫರ್ಡ್ ವಿಕೆಟ್ ಕೊಟ್ಟಿದ್ದರು. ಗೆಲ್ಲಲು ಮಾಡಬೇಕಾದ ಸರ್ವಸ್ವವನ್ನು ಆಗಲೇ ಮಾಡಿದ್ದ ವೇಗಿ ಭುವಿ ಚಮತ್ಕಾರ ರೂಪದಲ್ಲಿ ಸಿಕ್ಸರ್ ಬಾರಿಸಿಬಿಟ್ಟರು. ಕೊನೆಯ ಬಾಲ್‌ನಲ್ಲಿ ಬೇಕಿತ್ತು 2 ರನ್. ರಸೀಖ್ ಹೊಡೆದ ಬಾಲು ಫೀಲ್ಡರ್‌ನಿಂದ ಕೀಪರ್ ಕೈಗೆ ಸೇರುವ ಹೊತ್ತಿಗಾಗಲೇ ಎರಡು ರನ್ ಪೂರೈಸಿದ್ದ ಆರ್‌ಸಿಬಿ ಥ್ರಿಲ್ಲರ್ ಗೆದ್ದು ಬೀಗಿತು.

ಬೌಲಿಂಗ್ ಮಾಡುವಾಗ ಭುವನೇಶ್ವರ್ ಕುಮಾರ್ ದಾಳಿಗೆ ತತ್ತರಿಸಿದ ಮುಂಬೈ ನಮನ್ (47) ಮತ್ತು ತಿಲಕ್ ವರ್ಮಾ(57) ಅವರ ಬ್ಯಾಟಿಂಗ್‌ನೊಂದಿಗೆ 20 ಓವರ್‌ಗಳಲ್ಲಿ 166 ರನ್ ಗಳಿಸಿತು. ಭುವನೇಶ್ವರ್ 4, ಜೋಶ್, ಶೇಫರ್ಡ್, ರಸೀಖ್ ತಲಾ ಒಂದರಂತೆ ಆರ್‌ಸಿಬಿ 7 ವಿಕೆಟ್ ಪಡೆಯಿತು. ಗುರಿ ಬೆನ್ನತ್ತುವಾಗ ಆರ್‌ಸಿಬಿ ಕೂಡ ಆಘಾತದಲ್ಲೇ ಅಲೆದಾಡಿತು. ವಿಕೆಟ್‌ಗಳನ್ನು ಬೇಗನೇ ಕಳೆದುಕೊಂಡ ನಂತರ ತಂಡಕ್ಕೆ ಕೃಣಾಲ್(73) ಆಸರೆಯಾದರು. ಕೊನೆಯ ಓವರ್‌ನಲ್ಲಿ ಭುವಿ ಮತ್ತೆ ಚಮತ್ಕಾರ ಮಾಡಿದರು. ಈ ಬಾರಿ ಬ್ಯಾಟ್‌ಸ್ವಿಂಗ್ ಮಾಡಿದ ಅವರು, ಸಿಕ್ಸರ್ ಬಾರಿಸಿ ಪಂದ್ಯ ಗೆಲ್ಲಿಸಿದರು. 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡ ಆರ್‌ಸಿಬಿ 167 ರನ್‌ಗಳಿಸಿ ಪಂದ್ಯ ಗೆದ್ದಿದೆ. ರಾಯ್ಪುರದ ಪಿಚ್ ಎರಡೂ ತಂಡಕ್ಕೂ ಕಾಟ ನೀಡಿತು. ಬ್ಯಾಟರ್‌ಗಳಿಗೆ ಹೈರಾಣಕ್ಕೆ ಕೆಡವಿತು. ಒಂದೊಂದು ರನ್‌ಗೂ ಪರದಾಟ ನಡೆಸುತ್ತಿದ್ದರು. ಪವರ್‌ಪ್ಲೇನಲ್ಲಿ ಮುಂಬೈ ಇಂಡಿಯನ್ಸ್ 3 ವಿಕೆಟ್ ಕಳೆದುಕೊಂಡು 53 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಮುಂಬೈಗೆ ತಿಲಕ್, ನಮನ್ ಸಾಥ್ ಸಿಕ್ಕಿತು. ಅಲ್ಲಿ 83 ರನ್ ಗಳಿಸಿ 2 ವಿಕೆಟ್ ಕಳೆದುಕೊಂಡಿತು. ಆರ್‌ಸಿಬಿಗೆ ಕೃಣಾಲ್-ಬೆಥೆಲ್ ಆಸರೆಯಾದರು. ಆರ್‌ಸಿಬಿ 84 ರನ್ ಗಳಿಸಿ 3 ವಿಕೆಟ್ ಕಳೆದುಕೊಂಡಿತು. ಕೊನೆಯ ಓವರ್‌ಗಳಲ್ಲಿ ಮುಂಬೈ 30, ಆರ್‌ಸಿಬಿ 36 ರನ್ ಗಳಿಸಿತು. ಈ ಗೆಲುವಿನೊಂದಿಗೆ ಆರ್‌ಸಿಬಿ ಮೊದಲನೇ ಸ್ಥಾನಕ್ಕೇರಿದರೆ, ಮುಂಬೈ ಪಂದ್ಯಾವಳಿಯಿಂದ ಅಧಿಕೃತವಾಗಿ ಹೊರಬಿದ್ದಿತು.

ಪಂಜಾಬ್‌ನಿಂದ ದೊಡ್ಡ ಗುರಿ



ಧರ್ಮಶಾಲಾ: ಪ್ರಿಯಾಂಶ್ ಆರ್ಯ, ಶ್ರೇಯಸ್ ಅಯ್ಯರ್ ಅವರ ಅಬ್ಬರದ ಬ್ಯಾಟಿಂಗ್ ನಂತರ ಸೂರ್ಯಾಂಶ್ ಬಿರುಸಿನ ಫಿನಿಶ್ ಕೊಟ್ಟಿದ್ದು, ಪಂಜಾಬ್ ಕಿಂಗ್ಸ್ ಗೆಲ್ಲಲೇಬೇಕಾದ ಪಂದ್ಯದಲ್ಲಿ ಕಠಿಣ ಗುರಿ ನೀಡಿತು.

ಹ್ಯಾಟ್ರಿಕ್ ಸೋಲಿನ ನಂತರ ಬ್ಯಾಟಿಂಗ್ ಗಿಳಿದ ಪಂಜಾಬ್‌ಗೆ ಪ್ರಿಯಾಂಶ್(56) ಭದ್ರ ಅಡಿಪಾಯ ಹಾಕಿಕೊಟ್ಟರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಗಿಳಿದ ಶ್ರೇಯಸ್ ಅಯ್ಯರ್(59) ಭದ್ರ ಸ್ಕೋರ್ ಅನ್ನು ಕೊನೆಯ ಓವರ್‌ವರೆಗೂ ವಿಸ್ತರಿಸಿದರು. ಕೂಪರ್(37) ಮಿಂಚಿದಂತೆ ಕೊನೆಯ ಓವರ್‌ಗಳಲ್ಲಿ ಸೂರ್ಯಾಂಶ್ (21★) ಅಬ್ಬರಿಸಿದರು. ಪರಿಣಾಮ 20 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡ ಪಂಜಾಬ್ 210 ರನ್ ಗಳಿಸಿದೆ.

ಮಿಂಚಿದ ಶ್ರೇಯಸ್-ಪ್ರಿಯಾಂಶ್: ಟಾಸ್ ಸೋತ ಪಂಜಾಬ್ ಬ್ಯಾಟಿಂಗ್ ಗಿಳಿಯಿತು. ಎರಡು ಸೋಲುಗಳ ನಂತರ ಅಗ್ರ ಕ್ರಮಾಂಕಿತ ಬ್ಯಾಟರು ತಾಳ್ಮೆಯಿಂದ ಬ್ಯಾಟಿಂಗ್ ಮಾಡಿದರು. ಪ್ರಭಸಿಮ್ರನ್ ನಿಂತರೂ ಪ್ರಿಯಾಂಶ್ ಅಲ್ಪ ಸಮಯದ ನಂತರ ತಮ್ಮ ಅಸಲು ಆಟಕ್ಕೆ ಬಂದರು. ಸ್ಫೋಟಕ ಸಿಕ್ಸರ್‌ಗಳನ್ನು ಬಾರಿಸಿದ ಅವರು, ಪವರ್‌ಪ್ಲೇನಲ್ಲಿ ಅರ್ಧಶತಕ ಬಾರಿಸಿದರು. ಅತ್ತ ಪ್ರಭಸಿಮ್ರನ್ 15 ಬಾಲ್‌ಗಳಲ್ಲಿ 18 ರನ್ ಗಳಿಸಿದ್ದರು. ಪವರ್‌ಪ್ಲೇ ಮುಕ್ತಾಯಕ್ಕೆ ಪಂಜಾಬ್ 72 ರನ್ ಗಳಿಸಿತು. ಮೂರನೇ ಕ್ರಮಾಂಕದಲ್ಲಿ ಶ್ರೇಯಸ್ ಅಯ್ಯರ್ ಬಂದರು. ನಿಧಾನವಾಗಿ ಅವರು ಸೆಟ್ ಆಗುತ್ತಲೆ 56 ರನ್ ಗಳಿಸಿದ್ದ ಪ್ರಿಯಾಂಶ್ ವಿಕೆಟ್ ಒಪ್ಪಿಸಿದರು. ಕೂಪರ್-ಶ್ರೇಯಸ್ ಕೊಂಚ ಹೊತ್ತು ಉತ್ತಮ ಬ್ಯಾಟಿಂಗ್ ಮಾಡಿದರು. ನಿಧಾನವಾಗಿ ಸ್ಕೋರ್ ಹಿಗ್ಗಿಸುತ್ತಾ ಬಂದ ಈ ಜೋಡಿ 83 ರನ್ ಜೊತೆಯಾಟ ನಿರ್ಮಿಸಿತು. ಶ್ರೇಯಸ್ ಅಯ್ಯರ್ ಅರ್ಧಶತಕ ಬಾರಿಸಿದರು.

ಮಧ್ಯಮ ಓವರ್‌ಗಳಲ್ಲಿ ಪಂಜಾಬ್ 90 ರನ್ ಗಳಿಸಿತು. ಕೂಪರ್ 38 ರನ್‌ಗೆ ವಿಕೆಟ್ ಒಪ್ಪಿಸಿದರು. ಮುಂದೆ ಬಂದ ಸ್ಟೋಯಿನಿಸ್ 2ನೇ ಬಾಲ್‌ನಲ್ಲಿ, ಶಶಾಂಕ್ ಮೊದಲನೇ ಬಾಲ್‌ನಲ್ಲೇ ವಿಕೆಟ್ ಒಪ್ಪಿಸಿದರು. ಡೆತ್ ಓವರ್‌ನ ಅಂತಿಮ ಎರಡು ಓವರ್‌ನಲ್ಲಿ ಸೂರ್ಯಾಂಶ್ ಅಬ್ಬರಿಸಿದರು. ಬರುತ್ತಲೇ ಬೌಂಡರಿ ಬಾರಿಸಿದ ಅವರು, ಆಡಿದ 8 ಎಸೆತದಲ್ಲಿ 2 ಬೌಂಡರಿ, 2 ಸಿಕ್ಸರ್ ಬಾರಿಸಿದರು. 21 ರನ್ ಗಳಿಸಿ ಸ್ಕೋರ್ ಹಿಗ್ಗಿಸಿದರು. ಕೊನೆಯವರೆಗೂ ಔಟಾಗದೇ ಉಳಿದ ಶ್ರೇಯಸ್ 59 ರನ್ ಗಳಿಸಿದರು. ಇದರಲ್ಲಿ 3 ಸಿಕ್ಸರ್, 5 ಬೌಂಡರಿ ಸೇರಿವೆ.

ಶೂಟಿಂಗ್: ನೂಪುರ್ ಕುಮ್ರಾವತ್ ಚಾಂಪಿಯನ್


ಭೋಪಾಲ್: ಭೋಪಾಲ್‌ನಲ್ಲಿರುವ ಮಧ್ಯಪ್ರದೇಶ ರಾಜ್ಯ ಶೂಟಿಂಗ್ ಅಕಾಡೆಮಿಯಲ್ಲಿ ನಡೆಯುತ್ತಿರುವ 24ನೇ ಕುಮಾರ್ ಸುರೇಂದ್ರ ಸಿಂಗ್ ಸ್ಮಾರಕ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಮಧ್ಯಪ್ರದೇಶದ ನೂಪುರ್ ಕುಮ್ರಾವತ್ ಮಹಿಳೆಯರ 50 ಮೀಟರ್ ರೈಫಲ್ ಪ್ರೋನ್ ಐಎಸ್‌ಎಸ್‌ಎಫ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ನೂಪುರ್ 624.3 ಅಂಕಗಳನ್ನು ಕಲೆಹಾಕಿ ಮಹಿಳಾ ವಿಭಾಗದಲ್ಲಿ ಅಗ್ರಸ್ಥಾನ ಪಡೆದರು. ಆರ್ಮಿ ಮಾರ್ಕ್ಸ್‌ಮ್ಯಾನ್‌ಶಿಪ್ ಯುನಿಟ್‌ನ ಪ್ರಿಯಾ 623.9 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರೆ, ಮಹಾರಾಷ್ಟ್ರದ ಭಕ್ತಿ ಭಾಸ್ಕರ್ ಖಾಮ್ಕರ್ 622.2 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟರು. ಜೂನಿಯರ್ ಮಹಿಳಾ ವಿಭಾಗದಲ್ಲಿ ತಮಿಳುನಾಡಿನ ಎಂ.ಎ. ಅಕ್ಷತಾ ಐಶ್ವರ್ಯ 618.2 ಅಂಕಗಳೊಂದಿಗೆ ಚಿನ್ನದ ಪದಕ ಗೆದ್ದರು. ಪಂಜಾಬ್‌ನ ನಿಮ್ರತ್ ಕೌರ್ ಬ್ರಾರ್ 617.7 ಅಂಕಗಳೊಂದಿಗೆ ಬೆಳ್ಳಿ ಪದಕ ಪಡೆದರೆ, ಮಧ್ಯಪ್ರದೇಶದ ಪ್ರಥಾ ರಾಥೋಡ್ 617.6 ಅಂಕಗಳೊಂದಿಗೆ ಕಂಚಿನ ಪದಕ ಜಯಿಸಿದರು. ಇದೇ ವೇಳೆ ಯುವ ಮಹಿಳಾ ವಿಭಾಗದಲ್ಲೂ ಎಂ.ಎ. ಅಕ್ಷತಾ ಐಶ್ವರ್ಯ ಮತ್ತೊಮ್ಮೆ ಅಗ್ರಸ್ಥಾನ ಪಡೆದು ದ್ವಿತೀಯ ಸಾಧನೆ ಮಾಡಿದರು. 618.2 ಅಂಕಗಳೊಂದಿಗೆ ಅವರು ವಿಭಾಗದಲ್ಲಿ ಮೇಲುಗೈ ಸಾಧಿಸಿದರೆ, ನಿಮ್ರತ್ ಕೌರ್ ಬ್ರಾರ್ ಎರಡನೇ ಮತ್ತು ಪ್ರಥಾ ರಾಥೋಡ್ ಮೂರನೇ ಸ್ಥಾನ ಪಡೆದರು.

ಸ್ಕ್ವ್ಯಾಷ್: ಚೇತ್ರೋನಿಗೆ ಸೋಲು

ಹೊಸದಿಲ್ಲಿ: ನಂಬರ್ 1 ಸ್ಥಾನದ ಮುಸ್ತಫಾ ಅಸಲ್ ವಿರುದ್ಧ ಸೋತ ಭಾರತದ ಭರವಸೆಯ ಸ್ಕ್ವ್ಯಾಷ್ ಆಟಗಾರ ವೀರ್ ಚೇತ್ರೋನಿ ಗಿಜಾದಲ್ಲಿ ನಡೆದ ವಿಶ್ವ ಸ್ಕ್ವ್ಯಾಷ್ ಚಾಂಪಿಯನ್‌ಶಿಪ್‌ನಿಂದ ಹೊರಬಿದ್ದರು. ಮೊದಲಿನಿಂದಲೂ ಹಿಡಿತ ಸಾಧಿಸಿದ ಮುಸ್ತಫಾ, ಮೂರೇ ಸೆಟ್‌ಗಳಲ್ಲಿ ಗೆಲುವು ತಮ್ಮದಾಗಿಸಿಕೊಂಡರು. ಮೊದಲನೇ ಸೆಟ್‌ನಲ್ಲಿ ಉತ್ತಮ ಪ್ರದರ್ಶನದೊಂದಿಗೆ 5-11 ರಿಂದ ಗೆದ್ದ ಮುಸ್ತಫಾ, ಎರಡನೇ ಸೆಟ್‌ನಲ್ಲಿ 11-2, ಮೂರನೇ ಸೆಟ್ ಅನ್ನು 11-4ರಿಂದ ಗೆದ್ದರು.

ಮುಂಬೈ ತಂಡದಿಂದ ದೂರ ಸರಿದರೇ ಹಾರ್ದಿಕ್?



- ಸಾಮಾಜಿಕ ಜಾಲತಾಣದ ಖಾತೆಗೆ ಪಾಂಡ್ಯ ಅನ್‌ಫಾಲೋ
- ತಂಡದೊಂದಿಗೆ ಪ್ರಯಾಣಿಸದ ನಾಯಕ: ಭಾರೀ ಚರ್ಚೆ


ಮುಂಬೈ: ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ, ಮುಂಬೈ ಇಂಡಿಯನ್ಸ್ ಅಧಿಕೃತ ಖಾತೆ, ರೋಹಿತ್ ಶರ್ಮ, ಸೂರ್ಯಕುಮಾರ್ ಯಾದವ್ ಮತ್ತು ಬೂಮ್ರಾ ಅವರನ್ನು ಅನ್‌ಫಾಲೋ ಮಾಡಿದ್ದಾರೆ.

ಪಂದ್ಯಾವಳಿಯುದ್ದಕ್ಕೂ ಭಾರೀ ಹಿನ್ನಡೆ ಅನುಭವಿಸಿರುವ ಮುಂಬೈ ಇಂಡಿಯನ್ಸ್ ತಂಡದಲ್ಲಿ ಭಿನ್ನಾಭಿಪ್ರಾಯಗಳು ಹುಟ್ಟಿರುವ ಸಂಶಯ ಮೂಡಿದೆ. ಆಡಿರುವ ಪಂದ್ಯಗಳಲ್ಲಿ ಬ್ಯಾಟ್ ಅಥವಾ ಬಾಲ್ ಮೂಲಕ ಮಿಂಚಿಲ್ಲ. ಈ ಬೆನ್ನಲ್ಲೇ ಗಾಯವನ್ನೂ ಮಾಡಿಕೊಂಡಿರುವ ಅವರು, 2 ಪಂದ್ಯದಲ್ಲಿ ತಂಡದಲ್ಲಿರಲಿಲ್ಲ. ಗಮನಾರ್ಹವಾಗಿ ತಂಡದೊಂದಿಗೆ ಪ್ರಯಾಣವನ್ನೇ ಮಾಡಿಲ್ಲ. ಗಾಯಗೊಂಡವರು ಸಾಮಾನ್ಯವಾಗಿ ತಂಡದಲ್ಲಿದ್ದರೂ, ಪಾಂಡ್ಯ ಮುಂಬೈ ತಂಡದೊಂದಿಗೆ ಕಾಣಿಸಿಕೊಂಡಿಲ್ಲ.

ಈ ನಡುವೆ ತಂಡದ ಖಾತೆ ಜತೆಗೆ ಪ್ರಮುಖ ಆಟಗಾರರ ಖಾತೆಗಳನ್ನು ಅನ್‌ಫಾಲೋ ಮಾಡಿರುವ ಪಾಂಡ್ಯ ತಂಡದಲ್ಲಿ ಒಳಜಗಳವಿರುವ ಸಂಶಯ ಮೂಡಿಸಿದ್ದಾರೆ. ಇದಲ್ಲದೆ, ಮುಂಬೈನೊಂದಿಗಿನ ತಮ್ಮ ಭವಿಷ್ಯದ ಬಗ್ಗೆಯೂ ಅನುಮಾನಗಳು ಹುಟ್ಟಿವೆ. ಈ ನಡುವೆಯೇ ಮುಂಬೈ ಇಂಡಿಯನ್ಸ್, ಹಾರ್ದಿಕ್ ಅವರ ಜತೆಗೆ ಮೈದಾನದಲ್ಲಿ ಮಾಡಿದ ಅಸಭ್ಯ ವರ್ತನೆಯಿಂದಾಗಿ ಬಿಸಿಸಿಐಗೆ ಸೂಚನೆ ಕೊಟ್ಟಿರುವುದು ತಂಡ ಮತ್ತು ಹಾರ್ದಿಕ್ ನಡುವೆ ವಿವಾದಕ್ಕೆ ಕಾರಣವಾಗಿದೆ ಎಂಬ ಮಾತುಗಳು ಕೇಳಿಬಂದಿವೆ. ಆದಾಗ್ಯೂ ಆರ್‌ಸಿಬಿ ವಿರುದ್ಧದ ಸೋಲಿನ ನಂತರ ಮಾತನಾಡಿರುವ ತಂಡದ ಕೋಚ್, ಮಹೇಲಾ ಜಯವರ್ಧನೆ ಪಾಂಡ್ಯಗೆ ಬೆನ್ನು ನೋವಿದೆ. ಸ್ವಲ್ಪ ಸಮಯ ತೆಗೆದುಕೊಳ್ಳಬಹುದು. ಪಂದ್ಯಗಳ ನಂತರ ನಾವು ಅದರ ಬಗ್ಗೆ ನಿರ್ಧಾರ ಮಾಡುತ್ತೇವೆ ಎಂದು ತಿಳಿಸಿರುವುದು ಕುತೂಹಲ ಮೂಡಿಸಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5981

ಎಡದಿಂದ ಬಲಕ್ಕೆ
1.ದೇವರ ಮಾತುಗಳನ್ನು ಹೀಗೆನ್ನಬಹುದು (4)
3.ನಿತ್ಯಕರ್ಮ-ದಿನದ ಕೆಲಸ (4)
5.ನರಕದ ಮೇಲೂ ಬೆಳಕು ಬೀರುವ ಸೂರ್ಯ (4)
8.ಬಡಗಿಯ ಕೆಲಸ-ಮರಗೆಲಸ (4)
10.ಸೂಚನೆ-ಗುರುತು ಎಂಬರ್ಥದ ಶಬ್ದ (3)
12.ಸೋಮಾರಿಯನ್ನು ಹೀಗೂ ಹೇಳಬಹುದು (3)
14.ದೀತನ ನಡುವೆ ಭಸ್ಮವಡಗಿದೆ (3)
16.ಶ್ರೇಷ್ಠ-ಅನುಗ್ರಹಿತ ಅಭಿನಯಗಾರ (4)
17.ದೇಹವನ್ನು ಧರಿಸು-ಮೈದಾಳು ಎಂಬರ್ಥದ ಶಬ್ದ (4)

ಮೇಲಿನಿಂದ ಕೆಳಕ್ಕೆ
2.ಷಟ್ಪದಿಯ ಹೆಸರಾದ ಮುದಿತನ (3)
4.ದೃಷ್ಟಿಯೂ ಹೌದು-ಕಾಣಿಕೆಯೂ ಹೌದು (3)
6.ಇದು ಮನುಷ್ಯ ಜಾತಿ (4)
7.ಇದು ಸೂಪ್‌ನಂಥಹ ಖಾದ್ಯ (2)
8.ಕೊಡುವ ವ್ಯಕ್ತಿ-ದಾನಿಯೀತ (2)
9.ಭೂಮಿ-ಸಮುದ್ರ ಭೇಟಿಯಾದ ಸ್ಥಳ (4)
11.ಅತ್ಯಂತ ಆತ್ಮೀಯ ಗೆಳೆಯ (5)
12.ಮೃದುಹೃದಯದ ಮನಸ್ಸು (4)
13.ಹೆಚ್ಚಿನ ಹಣ-ಆಸ್ತಿ ಹೊಂದುವುದು (4)
14.ಹತ್ತಿರವಲ್ಲದ ಸಂಬಂಧವಿದು (4)
15.ಅಕ್ಷರಗಳ ಮೇಲಿನ ಸಣ್ಣ ಅಡ್ಡಗೆರೆ (4)

5980 ಉತ್ತರ

ಎಡದಿಂದ ಬಲಕ್ಕೆ:
1.ತೇಲುಗಣ್ಣು 3.ತೆಗಳಿಕೆ
5.ಜಾಲಗಾರ 8.ದಿನಮಣಿ
10.ಪಲ್ಲಟ 11.ಪಣ
12.ಮಗು 14.ಕಾವಲುಗಾರ
16.ಮಹಾನದಿ
17.ಹೊಸಹಾಡು

ಮೇಲಿನಿಂದ ಕೆಳಕ್ಕೆ :
2.ಗಾಣಿಗ 4.ಗಹನ
6.ಲವಣ 7.ಪರ
8.ದಿಟ 9.ಮಲಗು
11.ಪರಶುರಾಮ
13.ಮರಳುಗಾಡು
14.ಕಾಲಮಾನ
15.ಸಹಕಾರ

ಕಿರುಸುದ್ದಿ

ಗಮನ ಸೆಳೆದ ಚಂಡೆ ವಾದ್ಯ ಮೇಳ

ಗದಗ: ಜಿಲ್ಲೆಯ ಮುಂಡರಗಿ ತಾಲೂಕಿನ ಡಂಬಳದಲ್ಲಿ ಕಪ್ಪತ್ತಮಲ್ಲೇಶ್ವರ ಟ್ರಸ್ಟ್ ಕಮೀಟಿ ಸಹಯೋಗದಲ್ಲಿ ಹೇಮರಡ್ಡಿ ಮಲ್ಲಮ್ಮ ಸೇವಾ ಸಮಿತಿ ವತಿಯಿಂದ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮನ 604ನೇ ಜಯಂತ್ಯೋತ್ಸವ ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ಆಚರಣೆ ಮಾಡಲಾಯಿತು.

ಗ್ರಾಮದ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದಿಂದ ಪ್ರಾರಂಭವಾದ ಮೆರವಣಿಗೆಯಲ್ಲಿ ಶಿವಶಕ್ತಿ ಚಂಡೆ ವಾದ್ಯ ಹಾಗೂ ನೂರಾರು ಮಹಿಳೆಯರು ಕುಂಭ ಮೇಳದಲ್ಲಿ ಭಾಗವಹಿಸಿದ್ದರು.

ಬಿಸಿಲಿನ ತಾಪದ ಹಿನ್ನೆಲೆಯಲ್ಲಿ ಶ್ರೀಹೇಮರಡ್ಡಿ ಮಲ್ಲಮ್ಮ ತಾಯಿಯ ಭಾವಚಿತ್ರ ಮೆರವಣಿಗೆ ಹೋಗುವ ರಸ್ತೆಯ ಮಾರ್ಗದಲ್ಲಿ ಟ್ಯಾಂಕರ ಮೂಲಕ ನೀರು ಸಿಂಪಡಿಸಲಾಗಿತ್ತು. ಮೆರವಣಿಗೆಯಲ್ಲಿ ಭಕ್ತರಿಗೆ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು, ಮಜ್ಜಿಗೆ ಮುಂತಾದ ತಂಪು ಪಾನಿಯಗಳ ವ್ಯವಸ್ಥೆಯನ್ನು ಕಮೀಟಿಯವರು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದರು.

ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮರಳಿ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನಕ್ಕೆ ಮೆರವಣಿಗೆ ತಲುಪಿತು. ಮೆರವಣಿಗೆಯಲ್ಲಿ ವಿಶೇಷವಾಗಿ ಶಿವಶಕ್ತಿ ಚಂಡೆ ವಾದ್ಯ ಗಮನ ಸೆಳೆಯಿತು.

ಡಂಬಳದಲ್ಲಿ ಹೇಮರಡ್ಡಿ ಮಲ್ಲಮ್ಮ ಜಯಂತಿ

ಕುಂಭ ಹೊತ್ತ ನೂರಾರು ಮಹಿಳೆಯರು ಬಿರು ಬಿಸಿಲಿನಲ್ಲಿಯು ಮೆರವಣಿಗೆಯಲ್ಲಿ ಅತ್ಯಂತ ಉತ್ಸಾಹ ಮತ್ತು ಸಂಭ್ರಮದಿಂದ ಪಾಲ್ಗೊಂಡಿದ್ದರು. ಅನ್ನಪ್ರಸಾದವನ್ನು ನೂರಾರು ಸಾರ್ವಜನಿಕರು ಭಕ್ತರು ಮಹಿಳೆಯರು ಪ್ರಸಾದ ಸವಿದರು.

ಕಪ್ಪತ್ತಮಲ್ಲೇಶ್ವರ ಸೇವಾ ಕಮೀಟಿ ಹಾಗೂ ಹೇಮರಡ್ಡಿ ಮಲ್ಲಮ್ಮ ಜಯಂತಿಯ ಸೇವಾ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಪ್ಯಾಟಿ, ಉಪಾಧ್ಯಕ್ಷ ಬಸವರಾಜ ಶಿರೋಳ, ಕಾರ್ಯದರ್ಶಿ ಶಿವಕುಮಾರ ಸಣ್ಣಪ್ಯಾಟಿ, ಮುತ್ತಣ್ಣ ಕೊಂತಿಕಲ್, ಮಲ್ಲೇಶ ಚಿಕರಡ್ಡಿ, ಮಹೇಶ ರಾಯರಡ್ಡಿ, ಮಹೇಶ ಗಡಗಿ, ವಿ.ಟಿ.ಮೇಟಿ, ಬಸವರಡ್ಡಿ ಬಂಡಿಹಾಳ, ವಸಂತ ಜಂತ್ಲಿ, ಸುರೇಶ ಗಡಗಿ, ವಿರುಪಾಕ್ಷಪ್ಪ ಲಕ್ಕುಂಡಿ, ಶಿವರಡ್ಡಿ ಕುಸಗಲ್ಲ, ಮಲ್ಲಪ್ಪ ಯರಾಶಿ, ಶರಣು ಬಂಡಿಹಾಳ, ಶಿವು ಪ್ಯಾಟಿ, ಸಿದ್ದು ಗಡಗಿ, ಪರಡ್ಡಿ ಬಾವಿ, ಗವಿಸಿದ್ದಪ್ಪ ಕರಡ್ಡಿ, ಮುದಿಯಪ್ಪ ಗದಗಿನ, ಬಸವರಾಜ ಕೊತಬಾಳ, ಶರಣಪ್ಪ ಪ್ಯಾಟಿ, ಶಂಕ್ರಪ್ಪ ಗಡಗಿ, ಶಿವು ಕೆಂಚರಡ್ಡಿ, ಹನಮಪ್ಪ ಬಾವಿ, ಸಂತೋಷ ಮಾಳೆಕೊಪ್ಪ, ಬಸವರಾಜ ಕುಸಗಲ್ಲ, ಶೇಕಪ್ಪ ಚಿಕರಡ್ಡಿ, ವೆಂಕಣ್ಣ ಗಡಗಿ, ಅಶೋಕ ಮಣ್ಣಾಪೂರ, ಮುತ್ತಣ್ಣ ಅಣ್ಣಿಗೇರಿ ಇದ್ದರು.

ಅರ್ಜಿ ಆಹ್ವಾನ

ಗದಗ: ಡಾ.ಬಿ.ಆರ್. ಅಂಬೇಡ್ಕರ್ ದಲಿತ ಸಮಿತಿ ಜಿಲ್ಲಾ ಘಟಕದ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 80% ಅಂಕ ಪಡೆದ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಂದ ಪುರಸ್ಕಾರಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಅರ್ಜಿಯನ್ನು ಶಿರಸಂಗಿ ಮೊಬೈಲ್ಸ್, ಮಳಿಗೆ ನಂ. 5, ಗಾನಯೋಗಿ ಪಂಡಿತ ಪುಟ್ಟರಾಜ ಬಸ್ ನಿಲ್ದಾಣ (ಹಳೆ ಬಸ್ ನಿಲ್ದಾಣ ಗದಗ), ಗದಗ ಇಲ್ಲಿ ಪಡೆದು ಅರ್ಜಿಯ ಜೊತೆಗೆ ಜಾತಿ ಪ್ರಮಾಣ ಪತ್ರ, ಅಂಕಪಟ್ಟಿ ಹಾಗೂ ಎರಡು ಪಾಸ್‌ಪೋರ್ಟ್ ಅಳತೆಯ ಫೋಟೋಗಳನ್ನು ಲಗತ್ತಿಸಿ ಮೇ.20ರ ಒಳಗಾಗಿ ಅಂಚೆ ಮೂಲಕ ಸಲ್ಲಿಸಬಹುದು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಪತ್ರಿಕಾ ಪ್ರಕಟಣೆಯ ಮೂಲಕ ಹಾಗೂ ಫೋನ್ ಮೂಲಕ ತಿಳಿಸಲಾಗುವುದು.

ಮಾಹಿತಿಗಾಗಿ ಮೊ. 8073909262, 7619454583, 8951537019, 8746014115 ಸಂಪರ್ಕಿಸುವಂತೆ ಜಿಲ್ಲಾಧ್ಯಕ್ಷ ಶಿವಾನಂದ ತಮ್ಮಣ್ಣವರ ಪತ್ರಿಕಾ ಪ್ರಕಟಣೆಯ ಮೂಲಕ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಶೇಂಗಾ	2659-7156
ಗೋದಿ	1955-4321
ಅಲಸಂದಿಕಾಳು	2011-6131
ಕಡಲೆ	1429-5897
ಮಡಿಕೆ	9112-9112
ಹೆಸರು	1659-5414
ಹುರಳಿ	3501-4356
ಜೋಳ	2039-3877
ಗೋವಿನಜೋಳ	1112-1900
ನವಣೆ	2579-2579
ಕುಸಬಿ	1151-5409
ಸೂರ್ಯಕಾಂತಿ	6569-6869
ತೊಗರಿ	4551-4551



ಗದಗ: ಜಿಲ್ಲೆಯ ಮುಂಡರಗಿ ತಾಲೂಕಿನ ಡಂಬಳದಲ್ಲಿ ಕಪ್ಪತ್ತಮಲ್ಲೇಶ್ವರ ಟ್ರಸ್ಟ್ ಕಮೀಟಿ ಸಹಯೋಗದಲ್ಲಿ ಹೇಮರಡ್ಡಿ ಮಲ್ಲಮ್ಮ ಸೇವಾ ಸಮಿತಿ ವತಿಯಿಂದ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮನ 604ನೇ ಜಯಂತ್ಯೋತ್ಸವ ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ಆಚರಣೆ ಮಾಡಲಾಯಿತು.

ಹೇಮರೆಡ್ಡಿ ಮಲ್ಲಮ್ಮನ ಜಯಂತಿ ಆಚರಣೆ

ಗಜೇಂದ್ರಗಡ: ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರು ಕೇವಲ ಒಂದು ಸಮುದಾಯಕ್ಕೆ ಸೀಮಿತವಾದವರಲ್ಲ. ಅವರ ತಾಳ್ಮೆ, ಭಕ್ತಿ ಮತ್ತು ದಾಸೋಹ ಸಂಸ್ಕೃತಿ ಇಡೀ ಮಾನವಕುಲಕ್ಕೆ ಮಾದರಿ ಎಂದು ದಕ್ಷಿಣವಲಯದ ಸಿ.ಆರ್.ಪಿ ಆರ್.ಜಿ.ಮ್ಯಾಕಲ್ ಹೇಳಿದರು.

ಸ್ಥಳೀಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆನಂ 6 ರಲ್ಲಿ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪುಷ್ಪ ಅರ್ಪಣೆ ಸಲ್ಲಿಸಿ ಜಯಂತಿ ಆಚರಣೆ ಮಾಡಲಾಯಿತು ಬಳಿಕ ಅವರು ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಶರಣರ ಜೀವನ ಚರಿತ್ರೆಯನ್ನು ಓದಿ ಸಂಸ್ಕಾರವಂತರಾಗಬೇಕು. ಮಲ್ಲಮ್ಮನವರು ಕೌಟುಂಬಿಕ ಸಂಕಷ್ಟಗಳ ನಡುವೆಯೂ ತೋರಿದ ತಾಳ್ಮೆ ಮತ್ತು ಶಿವನ ಮೇಲಿಟ್ಟಿದ್ದ ಅಚಲ ಭಕ್ತಿ ಇಂದಿನ ಯುವ ಪೀಳಿಗೆಗೆ ಪ್ರೇರಣೆಯಾಗಿದೆ ಎಂದು ತಿಳಿಸಿದರು.

ಬಳಿಕ ಮುಖ್ಯ ಶಿಕ್ಷಕ ಆರ್.ಕೆ.ಕವಡಿಮಟ್ಟಿ ಮಾತನಾಡಿ ವಿಧ್ಯಾರ್ಥಿಗಳು ಮಲ್ಲಮ್ಮನಂತೆ ಎಂತಹ ಕಷ್ಟ ಬಂದರೂ ದೃತಿಗೆಡದೆ ತನ್ನ ಕಾಯಕ ಮತ್ತು ಭಕ್ತಿಯನ್ನು ಮುಂದುವರಿಸಬೇಕು ಹಾಗೂ ಹಸಿದವರಿಗೆ ಅನ್ನ ನೀಡುವುದು ಮತ್ತು ಎಲ್ಲರನ್ನೂ ಪ್ರೀತಿಯಿಂದ ಕಾಣುವುದೇ ನಿಜವಾದ ಭಕ್ತಿ ಎಂದು ಮಲ್ಲಮ್ಮನವರು ತೋರಿಸಿಕೊಟ್ಟಿದ್ದಾರೆ. ಅವರು ಹಾಕಿದ ತತ್ವಾದರ್ಶಗಳನ್ನು ನಾವೆಲ್ಲರೂ ಪಾಲನೆ ಮಾಡೋಣ ಎಂದರು.

ಇದೇ ಸಂದರ್ಭದಲ್ಲಿ ವಿ.ಎಸ್.ನಾಗೂವ, ಎಸ್.ಎ.ರೊಡ್ಡಾ,ಎಫ್.ಕೆ.ಮುಜಾವರ ಸೇರಿದಂತೆ ಇತ್ತರರು ಇದ್ದರು.



ಗಜೇಂದ್ರಗಡ: ಸ್ಥಳೀಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆನಂ 6 ರಲ್ಲಿ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಜಯಂತಿ ಆಚರಿಸಲಾಯಿತು.

ಬಡವರಿಗೆ, ನಿರ್ಗತಿಕರಿಗೆ ಗಗನ ಕುಸುಮವಾದ ಸೂರು
ಕಗ್ಗಂಟ್ಟಾದ ಆಶ್ರಯ ನಿವೇಶನ ಹಂಚಿಕೆ

▸ ಶಿವಲಿಂಗಯ್ಯ ಹೊತಗಿಮಠ

ಲಕ್ಷ್ಮೇಶ್ವರ: ಪಟ್ಟಣದಲ್ಲಿ ಆಶ್ರಯ ನಿವೇಶನ ಹಂಚಿಕೆ ಗಗನ ಕುಸುಮವಾಗಿದೆ. ಜನಪ್ರತಿನಿಧಿಗಳ ಇಚ್ಚಾಶಕ್ತಿ ಕೊರತೆಯಿಂದ, ನಿವೇಶನ ಹಂಚಿಕೆ ಕಗ್ಗಂಟ್ಟಾಗಿ ಮಾರ್ಪಾಡು ಆಗಿದೆ. ಬಡವರಿಗೆ ನಿರ್ಗತಿಕರಿಗೆ ಸೂರು ಇಲ್ಲದವರಿಗೆ, ಮನೆ ಕಟ್ಟುವ ಸೌಭಾಗ್ಯ ಇಲ್ಲದಂತಾಗಿದೆ.

ಬಡವರಿಗೆ ಬಾಡಿಗೆ ಮನೆಯಲ್ಲಿ ಬಾಡಿಗೆ ಕಟ್ಟಲು ಪರದಾಡುವ ಪರಸ್ಥಿತಿ ನಿರ್ಮಾಣ ಆಗಿದ್ದು ಅಂತವರಿಗೆ ಸೂರು ಕೊಟ್ಟು ಬೆಳಕು ಆಗಬೇಕಾಗಿದೆ. ಅರ್ಹ ಫಲಾನುಭವಿಗಳಿಗೆ ಮನೆ ಕಟ್ಟಲು ಅಧಿಕಾರಿಗಳು ಜನಪ್ರತಿನಿಧಿಗಳು ಅವಕಾಶ ಮಾಡಿಕೊಡಬೇಕಾಗಿದೆ,

ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ಕ್ಷೇತ್ರದ ಶಾಸಕರಿದ್ದಾಗ ನಿವೇಶನ ರಹಿತರಿಗೆ ಜಾಗ ಕೊಡಿಸಲು 2016-17ರಲ್ಲಿ ಪ್ರಯತ್ನ ಪಟ್ಟು ಸರ್ಕಾರದಿಂದ ಜಮೀನು ಖರೀದಿ ಮಾಡಲು ಶ್ರಮಿಸಿದ್ದು ಫಲಶ್ರುತಿಯಾಗಿ ವಾಜಪೇಯಿ ನಗರ ನಿವೇಶನ ಅಡಿಯಲ್ಲಿ ಸುಮಾರು ಆಶ್ರಯ ನಿವೇಶನಗಳಿಗೆಂದು ಸುಮಾರು 57 ಎಕರೆ ಜಾಗ ಖರೀದಿ ಮಾಡಿದ್ದರು. ಆದರಲ್ಲಿ ಶಿಗ್ಲಿ ರಸ್ತೆಯ 32ಎಕರೆ 27 ಗುಂಟೆ, ಆದರೆ ಮುಂದಿನ ಬೆಳವಣಿಗೆ ಆಗುವಷ್ಟರಲ್ಲಿ ಕ್ಷೇತ್ರದಲ್ಲಿ ರಾಮಣ್ಣ ಲಮಾಣಿ ಶಾಸಕರಾದರು ಅವರ 5 ವರ್ಷದ ಅವಧಿಯಲ್ಲಿ ಹಗ್ಗ ಜಗ್ಗಾಟದಿಂದ ನಿವೇಶನ ಹಂಚಿಕೆ ಮರೀಚಿಕೆಯಾಯ್ತು. ಆದರೆ, ಅವರ ಶಾಸಕ ಅವಧಿಯಲ್ಲಿ ಭೂಮಿಪೂಜೆ ನೆರವೇರಿಸಿ 1116 ನಿವೇಶನದಲ್ಲಿ 885 ನಿವೇಶನ ಆಯ್ಕೆ ಪ್ರಕ್ರಿಯೆ ನಡೆಸಿದರು. 231 ಆಯ್ಕೆ ಪ್ರಕ್ರಿಯೆ ಆಗಬೇಕಾಗಿದೆ.

ನಂತರ ಸದ್ಯ ಕ್ಷೇತ್ರದ ಶಾಸಕ ಡಾ.ಚಂದ್ರು ಲಮಾಣಿ ಶಾಸಕರಾಗಿ 3 ವರ್ಷ ಕಳೆದರೂ ಈವರೆಗೂ ಸಮಸ್ಯೆಗೆ ಪರಿಹಾರ ದೊರೆತಿಲ್ಲ ಎಂಬುದು



> ನಾನು ಶಾಸಕನಿದ್ದಾಗ ಪಕ್ಷಾತೀತವಾಗಿ 885 ಅರ್ಹ ಫಲಾನುಭವಿಗಳ ಆಯ್ಕೆಯನ್ನು ಮಾಡಿ ಪಟ್ಟಿ ರೆಡಿ ಮಾಡಿದ್ವಿ, ಆದರೆ ಸದ್ಯ ಇರುವ ಹಾಲಿ ಶಾಸಕರು, ಪುರಸಭೆ ಅಧಿಕಾರಿಗಳು, ಆ ಪಟ್ಟಿಯಲ್ಲಿ ಇರುವ ಫಲಾನುಭವಿಗಳಿಗೆ ಹಕ್ಕುಪತ್ರ ಕೊಡುವ ಕೆಲಸ ಮಾಡಬೇಕು, ಬಡವರಿಗೆ ಮನೆ ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಬೇಕು.
>
> ■ ರಾಮಣ್ಣ ಲಮಾಣಿ. ಮಾಜಿ ಶಾಸಕ

ವಿಪರ್ಯಾಸ ಸರಿಯೇ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

32 ಎಕರೆ 27 ಗುಂಟೆಯಲ್ಲಿ ಆ ಆಯ್ಕೆ ಪ್ರಕ್ರಿಯೆಯಲ್ಲಿ ಅನರ್ಹ ಫಲಾನುಭವಿಗಳು ಇದ್ದಾರೆ ಎಂದು ಕೆಲವು ಸಾರ್ವಜನಿಕರು, ರಾಜೀವ ಗಾಂಧಿ ವಸತಿ ನಿಗಮಕ್ಕೆ ಅರ್ಜಿ ಸಲ್ಲಿಸಿದ್ದಾರೆ ಎಂಬ ಮಾಹಿತಿವಿದೆ.

ಈ ಎಲ್ಲಾ ಗೊಂದಲದಿಂದ ಮುಕ್ತಿ ಹೊಂದಿ ಬಡವರಿಗೆ ನಿವೇಶನ ಹಕ್ಕುಪತ್ರ ಸಿಗಬೇಕಾಗಿದೆ,

ಅಭಿವೃದ್ಧಿ ಇಲ್ಲ

ಶಿಗ್ಲಿ ರಸ್ತೆಯ ಆಶ್ರಯ ನಿವೇಶನ ಮೂಲಭೂತ ಸೌಲಭ್ಯವಿಲ್ಲದೆ ಗಿಡಗಂಟೆಗಳ ಬೆಳೆದಿವೆ, ಚರಂಡಿ, ನೀರು, ರಸ್ತೆ ವಿದ್ಯುತ್ ವ್ಯವಸ್ಥೆ ಆಗಬೇಕಾಗಿದೆ, ನಿವೇಶನದ ಕಲ್ಲು ಬಿಟ್ಟರೆ, ಅಭಿವೃದ್ಧಿ ಹೊಂದಿಲ್ಲ.

> ಈ ಹಿಂದೆ ಇದ್ದ ಶಾಸಕರು ಆಯ್ಕೆಮಾಡಿದ ಪಟ್ಟಿಯಲ್ಲಿ ಅನರ್ಹ ಫಲಾನುಭವಿಗಳು ಇದ್ದಾರೆ ಎಂದು ಕೆಲ ಮಾಜಿ ಪುರಸಭೆ ಸದಸ್ಯರು, ಸಾರ್ವಜನಿಕರು, ಸಂಘಟನೆಗಳು ಪ್ರಮುಖರು, ಲೋಪದೋಷಗಳಿಂದ ಪಟ್ಟಿ ಕೂಡಿದೆ ಅಂತಾ ದೂರುಗಳು ಇದ್ದಿದ್ದಕ್ಕೆ, ಆ ಕಾರಣಕ್ಕೆ ಪಟ್ಟಿಯನ್ನು ಪರಿಶೀಲನೆ ಮಾಡಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಸದ್ಯದಲ್ಲಿ ಮಾಡಲಾಗುವುದು.
>
> ■ ಡಾ. ಚಂದ್ರು ಲಮಾಣಿ. ಶಾಸಕ

ಎಲ್ಲಾ ಸಂಘಟನೆಗಳ ಪ್ರಮುಖರು, ರಾಜಕೀಯ ಪಕ್ಷದ ನಾಯಕರು ಬಡವರಿಗೆ ನಿವೇಶನ ಕೊಡಿಸಲು ಮುಂದೆ ಬರಬೇಕಾಗಿದೆ.

ಗುರು ಕಾರುಣ್ಯವೇ ಬದುಕಿನ ಸದಾಚಾರ: ಶ್ರೀಗಳು

ಶಿರಹಟ್ಟಿ: ಗುರು ಶಿಷ್ಯರ ಸಂಬಂಧ ಅತ್ಯಂತ ಪವಿತ್ರವಾದಿದ್ದು, ಗುರು ಕಾರುಣ್ಯವೇ ಸದಾಚಾರ, ಶಿವಾಚಾರ ಮತ್ತು ಪರಮ ಪ್ರಸಾದ, ಸಂತೃಪ್ತಿ, ಗುರು ಇದ್ದರೆ ಮಾತ್ರ ಸಾಧನೆಯ ಶಿಖರ ಏರಲು ಸಾಧ್ಯ ಎಂದು ಮಣಕವಾಡದ ಶ್ರೀ ಅಭಿನವ ಮೃತ್ಯುಂಜಯ ಮಹಾಸ್ವಾಮಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಉತ್ಸವ ಗಾರ್ಡನ್‌ನಲ್ಲಿ 2004-05ನೇ ಸಾಲಿನ ಎಫ್.ಎಮ್. ಡಬಾಲಿ ಹಾಗೂ ಎಮ್.ಎಫ್. ಡಬಾಲಿ ಪ್ರೌಢ ಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮನದ ಅಂಧಕಾರ ಅಳಿಸಿ ಜ್ಞಾನದ ಬೆಳಕು ಚೆಲ್ಲುವಲ್ಲಿ ಗುರುವಿನ ಮಹತ್ವ ದೊಡ್ಡದು, ಕಾರ್ಯಕ್ರಮದಲ್ಲಿ ತಮ್ಮ ವಿದ್ಯಾರ್ಥಿ ಜೀವನದ ನೆನಪುಗಳನ್ನು ಮೆಲುಕು ಹಾಕಿದ ಶ್ರೀಗಳು, ನಾನು ಸಹ ಇದೇ ಶಾಲೆಯ ಹಳೆಯ ವಿದ್ಯಾರ್ಥಿ ಎಂಬ ಹೆಮ್ಮೆ ನನಗಿದೆ. ನಮ್ಮ ಶಿಕ್ಷಕರು ಕೇವಲ ಪಠ್ಯವನ್ನು ಬೋಧಿಸಲಿಲ್ಲ, ಬದಲಾಗಿ ಜೀವನದಲ್ಲಿ ಎದುರಾಗುವ ಕಷ್ಟಗಳನ್ನು ಹೇಗೆ ಎದುರಿಸಬೇಕು ಎಂಬುದನ್ನು ಕಲಿಸಿಕೊಟ್ಟರು. ನಮ್ಮ ಬದುಕನ್ನು ಮಾದರಿಯಾಗಿ ರೂಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಜಗತ್ತಿನಲ್ಲಿ ಗುರು ಸ್ಮರಣೆಯು ಅತಿಶ್ರೇಷ್ಠವಾದ ದಿವ್ಯ ಮಂತ್ರವಾಗಿದೆ. ಹರ ಮುನಿದರು ಗುರು ಕಾಯುವನು ಎಂಬಂತೆ ಗುರುವಿನ ಸ್ಥಾನ ಅತ್ಯುನ್ನತವಾದುದು ಎಂದು ಮಾರ್ಮಿಕವಾಗಿ ನುಡಿದರು.

ಈವೇಳೆ ಮುಗ್ಧಕುಸುಮಗಳ ಹೃದಯಕ್ಕೆ ಅಕ್ಷರದ ಬೀಜ ಬಿತ್ತಿದ ನೆಚ್ಚಿನ ಗುರು ವೃಂದವಾದ ನಾರಾಯಣ ಮಹೇಂದ್ರಕರ, ಎಂ. ಕೆ. ಲಮಾಣಿ, ಗಂಗಮ್ಮ ಕರಕೆಣ್ಣವರ, ಜಯತೀರ್ಥ ಕುಲಕರ್ಣಿ, ಚನ್ನಪ್ಪ ಸಂಕದಾಳ, ಪದಮರಾಜ ಬಸ್ತಿ, ಶಶಿಕಲಾ ಹೊಸಮನಿ, ಶಂಕರ ಕುಂದಿ, ಎಸ್. ಎಸ್. ಪಾಟೀಲ, ಎಮ್. ಎಮ್. ಹುಡ್ಡೆದಮನಿ, ಲಾಲಪ್ಪ ನಾಯಕ, ಬಸವರಾಜ ಚಿಂಚಲಿ, ಬಿ. ಬಿ. ಬಾಬುಖಾನ, ರಮೇಶ ಬಟಗುರ್ಕಿ, ಶಿವಯೋಗಿ ಶೆಟ್ಟರ ಮತ್ತು ನಿಂಗಪ್ಪ ಉಡಚಗೊಂಡ ಗುರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ವೇಳೆ ಹಳೆಯ ವಿದ್ಯಾರ್ಥಿಗಳಾದ ಫಕ್ಕಿರೇಶ ರಟ್ಟಿಹಳ್ಳಿ, ಚಂದ್ರ ಸ್ವಾಮಿ, ಗೂಳಪ್ಪ ಕರಿಗಾರ, ಮಂಜುನಾಥ್ ರಿತ್ತಿ, ಶ್ರೀನಿವಾಸ ಕಪಟಕರ, ವಿಠ್ಠಲ ಬಿಡವೆ, ಮುತ್ತು ತೆಗ್ಗಿನಹಳ್ಳಿ, ಸಂತೋಷ ಕೋಳಿ, ಪರಶುರಾಮ ಗಾಡಿ, ಪ್ರವೀಣ ಮೂರೇಕರ, ಸಿದ್ದಪ್ಪ ಪೂಜಾರ, ಪಕ್ಕಿರೇಶ ನಿಟ್ಟಳೆ, ಇಬ್ರಾಹಿಂ ಮನಿಯಾರ, ವೀರೇಶ ಬೂರಶೆಟ್ಟರ್, ವಿಶಾಲ ಮುದೋಳಕರ, ಮೆಹಬೂಬ್ ಸಾಬ ತಹಶಿಲ್ದಾರ, ಸವಿತಾ ಬಸ್ತಿ, ವಿಜಯಲಕ್ಷ್ಮಿ ಮಜ್ಜಗಿ, ಮಂಗಳಗೌರಿ ಹೂಗಾರ, ಶಬಾನ್ ಕರಬೂದಿ, ರೂಪ ಜಾಧವ ಇದ್ದರು.



ಎರಡು ಬಾರಿ ಹಾಜರಾತಿ ಕಡ್ಡಾಯ: ಇಒ

ಗಜೇಂದ್ರಗಡ: ಸಾಮೂಹಿಕ ಬದು ನಿರ್ಮಾಣ ಕಾಮಗಾರಿ ಸ್ಥಳದಲ್ಲಿ ಕೂಲಿಕಾರರು ಎರಡು ಬಾರಿ ಹಾಜರಾತಿಯನ್ನು ಕಡ್ಡಾಯವಾಗಿ ಹಾಕಿಸಬೇಕು. ಹಾಜರಾತಿ ಹಾಕಿಸದೆ ಹೋದರೆ ಕೂಲಿ ಪಾವತಿಯಾಗುವುದಿಲ್ಲ ಎಂದು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ ಬಿ. ಕಂದಕೂರ ಹೇಳಿದರು.

ತಾಲೂಕಿನ ರಾಜೂರು ಗ್ರಾಪಂ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ನಡೆಯುತ್ತಿರುವ ಮೊದಲನೇ ದಿನದ ಸಾಮೂಹಿಕ ಬದು ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕೂಲಿಕಾರರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಎನ್.ಎಂ.ಆರ್. ನಲ್ಲಿ ಹೆಸರು ಇರುವ ಕೂಲಿಕಾರರು ಮಾತ್ರ ಕೆಲಸಕ್ಕೆ ಬನ್ನಿ ಎನ್.ಎಂ.ಆರ್. ನಲ್ಲಿ ಹೆಸರು ಇಲ್ಲ ಅಂದರೆ ಕೆಲಸಕ್ಕೆ ಬಾರಬಾರದು. ಕೂಲಿಕಾರರು ಎರಡು ಹಾಜರಾತಿ ಹಾಕುವವರೆಗೂ ಕೆಲಸದ ಸ್ಥಳದಲ್ಲಿಯೇ ಇರಬೇಕು. ಒಂದು ಹಾಜರಾತಿ ಎರಡನೇ ಹಾಜರಾತಿ ಹಾಕಿಸದಿದ್ದರೆ ನಿಮ್ಮಗೆ ಕೂಲಿ ಹಣ ಪಾವತಿಯಾಗುವುದಿಲ್ಲ. ತಮಗೆ ಕೊಟ್ಟಿರುವ ಅಳತೆಯಂತೆ ಕೆಲಸ ಮಾಡಿದರೆ ಮಾತ್ರ ಪೂರ್ಣ ಪ್ರಮಾಣದ ಕೆಲಸ ಸಿಗಲಿದೆ. ಆದ್ದರಿಂದ ಎಲ್ಲರೂ ಸರಿಯಾಗಿ ಕೆಲಸ ನಿರ್ವಹಿಸಿ 370 ರೂಪಾಯಿ ಕೂಲಿಮೊತ್ತ ಪಡೆಯಬೇಕು ಎಂದು ತಿಳಿಸಿದರು.

ತಾ.ಪಂ. ಗ್ರಾಮೀಣ ಉದ್ಯೋಗ ಖಾತ್ರಿಯ ಸಾಹಾಯಕ ನಿರ್ದೇಶಕರಾದ ವಿಶ್ವನಾಥ ರಾಠೋಡ ಅವರು ಮಾತನಾಡಿದರು.

ರಾಜೂರು ಗ್ರಾ.ಪಂ. ಪಿಡಿಒ ಎಸ್.ಎಸ್. ತೊಂಡಿಹಾಳ, ಶಾಂತಗೇರಿ ಗ್ರಾ.ಪಂ. ಪಿಡಿಒ ಎಸ್.ಕೆ. ಕವಡೆಲಿ, ಕಾರ್ಯದರ್ಶಿ ರಾಜು ಗಾರಗಿ, ತಾಂತ್ರಿಕ ಸಂಯೋಜಕರ ಪ್ರಕಾಶ ಮ್ಯಾಕಲ್, ಪಂಚಾಯತ್ ಸಿಬ್ಬಂದಿಗಳು, ನರೇಗಾ ಸಿಬ್ಬಂದಿಗಳು, ಕಾಯಕ ಬಂಧುಗಳು, ಕೂಲಿಕಾರರು ಹಾಜರಿದ್ದಾರು.



ಕೂಲಿಕಾರರೊಂದಿಗೆ ಗುದ್ದಲಿ ಹಿಡಿದು ಕಟ್ಟೆ ಕಡಿದ ಇಒ

ರಾಜೂರು ಗ್ರಾಮದಲ್ಲಿ ಸಾಮೂಹಿಕ ಬದು ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ತಾ.ಪಂ. ಇಒ ಚಂದ್ರಶೇಖರ ಕಂದಕೂರ ಅವರು ಕೂಲಿಕಾರರ ಜೊತೆಗೆ ಅವರು ಗುದ್ದಲಿ ಹಿಡಿದು ಕಟ್ಟೆ ಕಡಿದು ಕೂಲಿಕಾರರ ಗಮನ ಸೆಳೆದರು. ಈ ವೇಳೆ ಕೂಲಿಕಾರರ ಜೊತೆಗೆ ಸಂವಾದ ನಡೆಸಿ, ಸರಿಯಾಗಿ ಕೆಲಸ ಮಾಡಿದರೆ ನಿರಂತರ ಕೆಲಸ ಕೊಡುವುದಾಗಿ ಭರವಸೆ ನೀಡಿದರು.

ವಿದ್ಯಾರ್ಥಿನಿಯರಿಗೆ ಸಂಪೂರ್ಣ ಶಿಕ್ಷಣ ಕೊಡಿಸಿ: ಪಾಟೀಲ

ನರಗುಂದ: ಪಂಚಮಸಾಲಿ ಸಮಾಜದ ವಿದ್ಯಾರ್ಥಿಗಳನ್ನಲ್ಲದೇ ಅನ್ಯ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಗೌರವಿಸಬೇಕಾಗಿದೆ. ಪ್ರತಿವರ್ಷ ವಿದ್ಯಾರ್ಥಿನಿಯರೇ ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಿದ್ದಾರೆ. ಅವರನ್ನು ಶಿಕ್ಷಣದಿಂದ ಅರ್ಧಕ್ಕೆ ಮೊಟಕುಗೊಳಿಸದೇ ಸಂಪೂರ್ಣ ಶಿಕ್ಷಣ ಕೊಡಿಸಬೇಕೆಂದು ಸಮಾಜದ ಮುಖಂಡ ಉಮೇಶಗೌಡ ಪಾಟೀಲ ಅವರು ಪೋಷಕರಿಗೆ ಕಿವಿಮಾತು ಹೇಳಿದರು.

ಭಾನುವಾರ ಪಟ್ಟಣದ ವೀರರಾಣಿ ಕಿತ್ತೂರ ಚೆನ್ನಮ್ಮಾಜಿ ಸಮುದಾಯ ಭವನ ನಿರ್ಮಾಣದ ಜಾಗೆಯ ಆವರಣದಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜ ವಿವಿಧೋದ್ದೇಶಗಳ ಸಂಘದಿಂದ 2025-26ನೇ ಸಾಲಿನ ಎಸ್‌ಎಸ್‌ಎಲ್ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ 38 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಿ ಮಾತನಾಡಿದರು.

ಶಾಂತಲಿಂಗ ಮಹಾಸ್ವಾಮಿಗಳು ಮಾತನಾಡಿ, ದಕ್ಷಿಣ ಭಾರತದಲ್ಲಿಯೇ ಕಿತ್ತೂರರಾಣಿ ಚೆನ್ನಮ್ಮಾ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮೊಟ್ಟ ಮೊದಲ ಮಹಿಳೆ ಆಗಿದ್ದಾಳೆ. ಆ ತಾಯಿಯ ಆದರ್ಶಗಳು ಸಮಾಜ ಬಾಂಧವರು ಅಳವಡಿಸಿಕೊಳ್ಳಬೇಕೆಂದು ಹೇಳಿದರು.



ಈ ಸಂದರ್ಭದಲ್ಲಿ ಸಮಾಜದ ಅಧ್ಯಕ್ಷ ಡಾ.ಸಿ ಕೆ ರಾಚನಗೌಡ್ರ ಮಾತನಾಡಿ, ಕೃಷಿಯನ್ನೇ ನಂಬಿಕೊಂಡು ಜೀವನ ಮಾಡುತ್ತಿರುವ ನಮ್ಮ ಸಮಾಜವು ಶೈಕ್ಷಣಿಕ ಕ್ಷೇತ್ರದಲ್ಲಿ ಬೆಳವಣಿಗೆಯನ್ನು ಕಾಣುವುದರ ಜೊತೆಗೆ ವಿವಿಧ ಕ್ಷೇತ್ರದಲ್ಲಿ ಪ್ರಜ್ವಲಿಸಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಎಂ.ಬಿ. ಮೆಣಸಗಿ, ವ್ಹಿ.ಎನ್. ಕೊಳ್ಳಿಯವರ, ರಾಜುಗೌಡ ಪಾಟೀಲ, ಅಜೀತಗೌಡ ಪಾಟೀಲ, ಸಂಗಪ್ಪ ಪೂಜಾರ, ಪ್ರವೀಣ ಅಳಗವಾಡಿ, ಎಚ್.ಎ. ಮುದಿಯಪ್ಪನವರ, ಈಶ್ವರಗೌಡ ಪಾಟೀಲ, ನವೀನಗೌಡ ಪಾಟೀಲ, ಮಹಾಂತೇಶಗೌಡ ಲಿಂಗನಗೌಡ್ರ, ಪರಪ್ಪ ಸಾಹುಕಾರ ಇತರರಿದ್ದರು.

ಸಮರ್ಪಕ ಸಾರಿಗೆ ವ್ಯವಸ್ಥೆ ಕಲ್ಪಿಸಲು ಆಗ್ರಹ

ಶಿರಹಟ್ಟಿ: ಪಟ್ಟಣದಿಂದ ಗದಗ-ಕಲಬುರ್ಗಿ ಬಸವಕಲ್ಯಾಣ ಮಾರ್ಗ ಮತ್ತು ಶಿರಹಟ್ಟಿ, ಸಿದ್ದಾಪುರ-ಮಂಗಳೂರು ಮಾರ್ಗ ಮತ್ತು ಶಿರಹಟ್ಟಿ-ಶಿವಮೊಗ್ಗ ಹಾಗೂ ಶಿರಹಟ್ಟಿ-ಹುಬ್ಬಳ್ಳಿ ಮಾರ್ಗವಾಗಿ ದಾಂಡೇಲಿ ನಗರಗಳಿಗೆ ನೂತನ ಸಾರಿಗೆ ವ್ಯವಸ್ಥೆ ಕಲ್ಪಿಸುವಂತೆ ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣಕುಮಾರ ಶೆಟ್ಟಿ ಬಣ ಹಾಗೂ ಸ್ಥಳೀಯ ಕುಂದುಕೊರತೆ ಹೊರಟ ಸಮಿತಿ ವತಿಯಿಂದ ಆಗ್ರಹಿಸಿ ಪಟ್ಟಣದ ಬಸ್ ಘಟಕದ ಎದುರು ಸೋಮವಾರ ಧರಣಿ ಸತ್ಯಾಗ್ರಹ ಕುಳಿತಿದ್ದಾರೆ.

ಈ ವೇಳೆ ಎರಡು ಸಂಘಟನೆಗಳ ಅಧ್ಯಕ್ಷರಾದ ರಫೀಕ್ ಕೇರಿಮನಿ, ಅಕ್ಬರ್ ಯಾದಗಿರಿ ಮಾತನಾಡಿ, ಪಟ್ಟಣದಿಂದ ಗದಗ ಕಲಬುರ್ಗಿ, ಬಸವಕಲ್ಯಾಣ, ಸಿದ್ದಾಪುರ, ಮಂಗಳೂರು, ಶಿವಮೊಗ್ಗ, ದಾಂಡೇಲಿ ನಗರಗಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸುವಂತೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಉಭಯ ಸಂಘಟನೆಗಳಿಂದ ಹೋರಾಟ ಮಾಡಲಾಗುತ್ತಿದೆ. ಮಗು ಅತ್ತರೆ ಮಾತ್ರ ತಾಯಿ ಹಾಲು ಕುಡಿಸುವಂತೆ ಪಟ್ಟಣದ ಜನತೆ ಹೋರಾಟ ಮಾಡಿದಾಗ ಮಾತ್ರ ಅಧಿಕಾರಿಗಳು ನಮ್ಮ



ಬೇಡಿಕೆಗಳನ್ನು ಈಡೇರಿಸುವಂತಾಗಿರುವುದು ದುರ್ದೈವದ ಸಂಗತಿ ಎಂದು ಕಿಡಿಕಾರಿದರು. ಧರಣಿ ಸತ್ಯಾಗ್ರಹಕ್ಕೆ ಸ್ಪಂದಿಸಿದ ಸಾರಿಗೆ ಇಲಾಖೆ ಜಿಲ್ಲಾಧಿಕಾರಿ ಕೇವಲ 20 ದಿನಗಳ ಒಳಗಾಗಿ ಈ ಎಲ್ಲ ಮಾರ್ಗಗಳನ್ನು ಪ್ರಾರಂಭಿಸುತ್ತೇವೆ ಎಂದು ಭರವಸೆ ನೀಡಿದರು.

ಈ ವೇಳೆ ಸಿಪಿಐ ಬಿ.ವಿ. ನ್ಯಾಮಗೌಡ, ಪಿಎಸ್‌ಐ ಈರಪ್ಪ ರಿತ್ತಿ, ಗೌಸಸಾಬ್ ಕಲಾವಂತ, ಶ್ರೀನಿವಾಸ ಬಾರ್ಬರ, ಕರವೇ ಪ್ರಧಾನ ಕಾರ್ಯದರ್ಶಿ ಈರಣ್ಣ ಬಾಗೇವಾಡಿ, ಮುನ್ನ ಢಾಲಾಯತ, ಮನ್ಸೂರ ಮಕಾದಾರ, ಶ್ರೀನಿವಾಸ ಕಪಟಕರ, ಜಾಕಿರ ಹುಸೇನ ಕೋಳಿವಾಡ, ಮೈನು ಬಾವಾಜಿ , ಗಫಾರ್ ಕುದುರಿ, ಮಲ್ಲಿಕಾರ್ಜುನ ಕಬಾಡಿ ಇದ್ದರು.

ವೀರಶೈವ-ಲಿಂಗಾಯತಗಳಲ್ಲಿ ಸಮಾನ ತತ್ವ ಸಿದ್ಧಾಂತಗಳಿವೆ: ಶ್ರೀಗಳು

ಮುಂಡರಗಿ: ವೀರಶೈವ ಹಾಗೂ ಲಿಂಗಾಯತ ಧರ್ಮಗಳಲ್ಲಿ ಯಾವ ವ್ಯತ್ಯಾಸಗಳಿಲ್ಲ, ವೀರಶೈವ-ಲಿಂಗಾಯತಗಳಲ್ಲಿ ಸಮಾನ ತತ್ವಸಿದ್ಧಾಂತಗಳಿವೆ. ವಿವಿಧಕಾರಣಗಳಿಂದ ವೀರಶೈವ -ಲಿಂಗಾಯತಗಳಲ್ಲಿ ಒಡೆದು ಹೋಗಿರುವ ವಿವಿಧ ಉಪಪಂಗಡಗಳೆಲ್ಲ ಒಂದಾಗಬೇಕು ಎಂದು ಶ್ರೀ ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳವರು ಹೇಳಿದರು.

ಅವರು ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಮುಂಡರಗಿ ತಾಲೂಕಾ ಘಟಕ ಮತ್ತು ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠ ಇವುಗಳ ಸಂಯುಕ್ತ ಆಶ್ರಯದಲ್ಲಿ ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದಲ್ಲಿ ಹಮ್ಮಿಕೊಂಡಿದ್ದ 893 ನೇ ಬಸವ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಸಾನಿಧ್ಯವನ್ನು ವಹಿಸಿ ಆಶೀರ್ವಚನ ನೀಡಿದರು.

ಸಮಾನತೆಯ ಹರಿಕಾರ ಬಸವಣ್ಣನವರು ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದ ಶ್ರೀ ಜ.ಅ.ವಿದ್ಯಾ ಸಮಿತಿಯ ಆಡಳಿತಾಧಿಕಾರಿ



ಡಾ.ಬಿ.ಜಿ.ಜವಳಿ ಜಗತ್ತಿಗೆ ಕಾಯಕ-ದಾಸೋಹ ತತ್ವಗಳನ್ನು ನೀಡಿ ಸಮಾಜದಲ್ಲಿರುವ ಅಸಮಾನತೆಯನ್ನು ಹೊಗಲಾಡಿಸಿ ಸಮಾನತೆಯ ಸಮ ಸಮಾಜವನ್ನು ನಿರ್ಮಿಸುವ ಕಾರ್ಯ ಮಾಡಿದವರು ಅಣ್ಣ ಬಸವಣ್ಣನವರು. ದುಡಿಯುವವನಿಗೆ ಮಾತ್ರ ಉಣ್ಣುವ ಹಕ್ಕಿದೆ ಎಂದು ಹೇಳುವ ಮೂಲಕ ಕಾಯಕವೇ ಕೈಲಾಸ ಎಂದ ಬಸವಣ್ಣ 12 ನೇ ಶತಮಾನದಲ್ಲಿಯೇ ಸಮಾನತೆಯ ಹರಿಕಾರರಾಗಿ ಬೆಳೆದವರು ಈಗಿನ ಸರಕಾರಗಳು ಬಸವಣ್ಣವರ ತತ್ವಗಳನ್ನು ಪಾಲಿಸುವುದನ್ನು ಬಿಟ್ಟು ಪುಕ್ಕಟೆ ಸೌಲಭ್ಯಗಳನ್ನು ನೀಡುವುದರೊಂದಿಗೆ ಜನರನ್ನು ಸೋಮಾರಿಗಳನ್ನಾಗಿ ಮಾಡುತ್ತಿದ್ದಾರೆ. ಕಾಯಕ ಶಕ್ತಿಯನ್ನು ನೀಡಿದರೆ, ದಾಸೋಹಂಬಾವ ಸಂತೃಪ್ತಿಯನ್ನು ನೀಡುತ್ತದೆ. ಅನುಭವ ಮಂಟಪದಲ್ಲಿ ಶೇ 50 ರಷ್ಟು ಶರಣೆಯರಿಗೆ ಅವಕಾಶ ಕೊಟ್ಟು ಹೆಣ್ಣು-ಗಂಡಿನಲ್ಲಿ ಸಮಾನತೆಯನ್ನು ಬಸವಣ್ಣ ಮೂಡಿಸಿದರು ಎಂದರು.

ನಿವೃತ್ತ ಪ್ರಾಧ್ಯಾಪಕಿ ಅಕ್ಕಮಹಾದೇವಿ ಹಿರೇಮಠ ಅವರು ಶರಣ ಚಳುವಳಿಯಲ್ಲಿ ಮಹಿಳಾ ಸ್ವಾತಂತ್ರ್ಯ ಕುರಿತು ಉಪನ್ಯಾಸ ನೀಡಿ 900 ವರ್ಷಗಳ ಹಿಂದೆಯೇ ಶರಣರು ಮಹಿಳೆಯರಿಗೆ ಸ್ವಾತಂತ್ರ್ಯ ಕೊಟ್ಟಿದ್ದರು. ಅನುಭವ ಮಂಟಪದಲ್ಲಿ ಪ್ರತಿಯೊಂದರಲ್ಲಿ ಮಹಿಳೆಯರಿಗೆ ಅವಕಾಶ ಕೊಟ್ಟು ಮಹಿಳಾ ಸಬಲೀಕರಣಕ್ಕೆ ನಾಂದಿಹಾಡಿದ್ದರು ಎಂದರು.

ಕಾರ್ಯಕ್ರಮವನ್ನು ಪುರಸಭೆಯ ಮಾಜಿ ಉಪಾಧ್ಯಕ್ಷ ನಾಗೇಶ ಹುಬ್ಬಳ್ಳಿ ಉದ್ಘಾಟಿಸಿದರು.


ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾದ ಜಿಲ್ಲಾ ಅಧ್ಯಕ್ಷ ಎಸ್.ಎಸ್.ಗುಡಿಮನಿ ,ರಾಜ್ಯ ಘಟಕದ ಉಪಾಧ್ಯಕ್ಷೆ ವಿಜಯಲಕ್ಷ್ಮೀ ಮಾನ್ವಿ ಮುಂತಾದವರು ಮಾತನಾಡಿದರು. ನೇತೃತ್ವವನ್ನು ಕಲಕೇರಿ-ವಿರಪಾಪೂರದ ಗುರು ಮುದುಕೇಶ್ವರ ಶಿವಾಚಾರ್ಯರು ವಹಿಸಿದ್ದರು. ಅಧ್ಯಕ್ಷತೆಯನ್ನು ಮಹಾಸಭಾ ಮುಂಡರಗಿ ತಾಲೂಕಾ ಘಟಕದ ಅಧ್ಯಕ್ಷ ಶಿವನಗೌಡ ಡೋಣಿ ವಹಿಸಿದ್ದರು. ಅತಿಥಿಗಳಾಗಿ ಸಂಗನಗೌಡ ಪಾಟೀಲ, ಶಿವಪ್ಪ ಅಂಕದ,ಎಸ್ .ವಿ.ಪಾಟೀಲ ಮುಂತಾದವರಿದ್ದರು.

ಬಿಇಓ ಗಂಗಾಧರ ಅಣ್ಣಿಗೇರಿ, ಜಾಫರ್ ಬಚ್ಚೇರಿ, ಎಂ.ಪಿ.ಶೀರನಹಳ್ಳಿ, ಎಸ್ .ಡಿ.ಬಸೇಗೌಡ್ರ ಹಾಗೂ ಪಿಯುಸಿ ಮತ್ತು ಎಸ್.ಎಸ್.ಎಲ್.ಸಿ ಪರಿಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಎಸ್.ಬಿ.ಪಾಟೀಲ ಪ್ರಾಸ್ತಾವಿಸಿದರು. ಕವಿತಾ ಉಳ್ಳಾಗಡ್ಡಿ ಸ್ವಾಗತಿಸಿದರು. ನ್ಯಾಯವಾದಿ ಲಿಂಗಶೆಟ್ಟರ ಕಾರ್ಯಕ್ರಮ ನಿರೂಪಿಸಿದರು.

ತೋಂಟದಾರ್ಯ ಮಠದ ಜಾತ್ರೆಯಲ್ಲಿ ಅವಘಡ
ಗಾಯಾಳುಗಳಿಗೆ ಸರ್ಕಾರದಿಂದ ಚಿಕಿತ್ಸಾ ವೆಚ್ಚ ಮಂಜೂರು

ಗದಗ: ನಗರದ ತೋಂಟದಾರ್ಯ ಮಠದ ಆವರಣದಲ್ಲಿ ನಡೆದ ಅವಘಡದಲ್ಲಿ ಗಾಯಗೊಂಡವರ ಆರೋಗ್ಯ ವಿಚಾರಿಸಲು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ ಸೋಮವಾರ ನಗರದ ಕೆ.ಎಚ್.ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಆಸ್ಪತ್ರೆಗೆ ಭೇಟಿ ನೀಡಿದರು.

ಗಾಯಾಳುಗಳನ್ನು ಭೇಟಿಯಾಗಿ ಆರೋಗ್ಯ ಸ್ಥಿತಿ ಕುರಿತು ವೈದ್ಯರಿಂದ ಮಾಹಿತಿ ಪಡೆದ ಬಳಿಕ ಮಾತನಾಡಿ, ಅವಘಡದಲ್ಲಿ ಪ್ರಕರಣದಲ್ಲಿ ಒಟ್ಟು 17 ಜನರು ಗಾಯಗೊಂಡಿದ್ದು, ಎಲ್ಲರನ್ನು ತಕ್ಷಣ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಹಿರಿಯ ವೈದ್ಯರು ಹಾಗೂ ಅಧಿಕಾರಿಗಳು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ. 17 ಜನರಲ್ಲಿ ಒಬ್ಬರನ್ನು ಹೆಚ್ಚಿನ



ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಉಳಿದ 16 ಮಂದಿಯಲ್ಲಿ ಬಹುತೇಕರು ಗುಣಮುಖರಾಗಿದ್ದಾರೆ ಎಂದರು.

ಇಬ್ಬರಿಗೆ ಹೆಚ್ಚಿನ ಆರೈಕೆ ಅಗತ್ಯವಿದ್ದು, ವೈದ್ಯರು ವಿಶೇಷ ನಿಗಾವಹಿಸಿದ್ದಾರೆ. ಸುಮಾರು 11 ಜನರನ್ನು ಶೀಘ್ರದಲ್ಲೇ ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಸಾಧ್ಯತೆ ಇದ್ದು, ಉಳಿದವರು ಮುಂದಿನ ಎರಡು ಅಥವಾ ಮೂರು ದಿನಗಳಲ್ಲಿ ಮನೆಗೆ ಮರಳಲಿದ್ದಾರೆ ಎಂದು ಹೇಳಿದರು.

ಸಿಎಂರಿಂದ ಚಿಕಿತ್ಸಾ ವೆಚ್ಚ ಮಂಜೂರು: ಘಟನೆಯ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ತರಲಾಗಿದೆ. ಗಾಯಾಳುಗಳ ಚಿಕಿತ್ಸಾ ವೆಚ್ಚ ಅಥವಾ ಗರಿಷ್ಠ 50 ಸಾವಿರ ರೂ.ವರೆಗೆ ನೆರವು ನೀಡಲು ಮುಖ್ಯಮಂತ್ರಿಗಳು ಆದೇಶ ನೀಡಿದ್ದಾರೆ. ಅದರಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಚಿಕಿತ್ಸಾ ವೆಚ್ಚ ಹೆಚ್ಚಾದಲ್ಲಿ ಸರ್ಕಾರದಿಂದ ಇನ್ನಷ್ಟು ನೆರವು ನೀಡುವ ಕುರಿತು ಸಹ ಚರ್ಚೆ ನಡೆದಿದೆ. ಗಾಯಾಳುಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಸಚಿವರು ಹೇಳಿದರು.

ತೋಂಟದಾರ್ಯ ಮಠದ ಜಾತ್ರೆಯ ಅವಧಿಯನ್ನು ಸೀಮಿತಗೊಳಿಸುವ ಕುರಿತು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಸಚಿವರು, ತೋಂಟದಾರ್ಯ ಮಠದ ಶ್ರೀಗಳು ಹಾಗೂ ಜಾತ್ರಾ ಸಮಿತಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಿ ಎಂದು ಸಚಿವರು ಹೇಳಿದರು.

ವಿಶ್ವ ಹಿಂದು ಪರಿಷತ್ ರಾಷ್ಟ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ ಪರಾಂಡೆ ಹೇಳಿಕೆ

ಮತಾಂತರ ವಿರುದ್ಧ ವಿಎಚ್‌ಪಿ ಹೋರಾಟ

• **ಧಾರವಾಡ:** ದೇಶದ ಯುವಶಕ್ತಿ ನಾಶಪಡಿಸುವ ಡ್ರಗ್ಸ್ ಮತ್ತು ಹಿಂದು ಸಮಾಜ ಇಕ್ಕಟ್ಟಿಗೆ ಸಿಲುಕಿಸುವ ಷಡ್ಯಂತ್ರದ ಹಾಗೂ ಮತಾಂತರದ ವಿರುದ್ಧ ಹೋರಾಟದ ಜೊತೆಗೆ ಜಾಗೃತಿ ಮೂಡಿಸುವುದಾಗಿ ವಿಶ್ವ ಹಿಂದು ಪರಿಷತ್ ರಾಷ್ಟ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ ಪರಾಂಡೆ ಹೇಳಿದರು.

ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯಲ್ಲಿ ಗೋಷ್ಠಿಯಲ್ಲಿ ಅವರು ಮಾತನಾಡಿ, ಯಾವುದೇ ದೇಶದ ಭವಿಷ್ಯ ಅಲ್ಲಿನ ಯುವಶಕ್ತಿ ಅವಲಂಬಿಸಿದೆ. ಇಂದು ದೇಶದ ಯುವಕರನ್ನು ಶತ್ರು ರಾಷ್ಟ್ರಗಳು, ದೇಶದೊಳಗಿನ ಶತ್ರುಗಳ ಜೊತೆಗೂಡಿ ಡ್ರಗ್ಸ್ ದಾಸರಾಗಿ ಮಾಡುತ್ತಿವೆ ಎಂದು ಎಚ್ಚರಿಸಿದರು.

ಈ ಷಡ್ಯಂತ್ರದಿಂದ ಯುವಶಕ್ತಿಯನ್ನು ಹೊರಗೆ ತರಲು ವಿಶ್ವ ಹಿಂದು ಪರಿಷತ್ ಪ್ರಯತ್ನಿಸುತ್ತಿದೆ. ರಾಷ್ಟ್ರೀಯ ಚಾರಿತ್ರ್ಯ ಗಟ್ಟಿಗೊಳ್ಳಬೇಕಿದೆ. ಅದಕ್ಕೆ ಪೂರಕವಾದ ವಾತಾವರಣ ನಿರ್ಮಿಸಬೇಕು. ಅಲ್ಪಸಂಖ್ಯಾತರ ತುಷ್ಟೀಕರಣದಿಂದ ಇಲ್ಲಿನ ಧರ್ಮಕ್ಕೆ ಅವಮಾನ ಮಾಡುವುದು ಸರಿಯಲ್ಲ ಎಂದರು.

ಗೋಹತ್ಯ ನಿಷೇಧ: ದೇಶದ ನಿಜವಾದ ಶಕ್ತಿ ದೇಶಿ ಗೋವು. ನಿತ್ಯವೂ 2.5 ಲಕ್ಷ ಗೋವು ಹತ್ಯೆ ನಡೆಯುತ್ತಿದೆ. ಇಲ್ಲಿನ ಗೋವುಗಳನ್ನು ಕೊಂದು ಬ್ರೆಜಿಲ್‌ನಿಂದ ನಮ್ಮ ತಳಿ ಮರಳಿ ಪಡೆಯುವುದು ಮೂರ್ಖತನ. ದೇಶಿ ತಳಿ ರಕ್ಷಿಸಬೇಕು. ಸಾವಯವ ಕೃಷಿಗೆ ಸಂಘ ಕೈಜೋಡಿಸಿದೆ ಎಂದರು.

ಕನ್ಯಾಕುಮಾರಿಯೇ ಕ್ರಿಶ್ಚಿಯನ್ ಮಯವಾಗಿದೆ. ಹಿಂದು ಅಲ್ಪಸಂಖ್ಯಾತರು ಆಗುತ್ತಿರುವುದು ಮತಾಂತರದಿಂದ. ಇದನ್ನು ವ್ಯಕ್ತಿಗತವಲ್ಲ ಸಂಘಟನೆಗಳೇ ಮಾಡುತ್ತಿವೆ. 20 ಸಾವಿರಕ್ಕೂ ಅಧಿಕ ಸಂಘ ಸಂಸ್ಥೆಗಳು ಮಾಡುತ್ತಿವೆ. ಇದನ್ನು ವಿಶ್ವ ಹಿಂದು ಪರಿಷತ್ ತಡೆಯುತ್ತಿದೆ ಎಂದರು.

ರಾಜಸ್ಥಾನದಲ್ಲಿ ಬಂದಕರಣ ಕಾನೂನುಗಳು ದೇಶದ ಎಲ್ಲ ರಾಜ್ಯಗಳಲ್ಲಿ ಕೂಡ ಬರಬೇಕು. ಅಂದಾಗ ಮತಾಂತರ ನಿಲ್ಲುತ್ತದೆ. ಇದಕ್ಕಾಗಿ ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣ ದಾಖಲಿಸಿ ಪ್ರಯತ್ನ ಮಾಡುತ್ತಿದ್ದೇವೆ. ಈಗ ಲಕ್ಷ ಲಕ್ಷ ಮುಸ್ಲಿಂರು ಮರಳಿ ಹಿಂದು ಧರ್ಮಕ್ಕೆ ಮರಳಿ ಬರುತ್ತಿದ್ದಾರೆ ಎಂದರು.

ಹಿಂದಿನ ವರ್ಷ ನಡೆದ ಜನಸಂಖ್ಯೆ ಪ್ರಮಾಣ ಕಡಿಮೆಯಾಗುತ್ತಿದೆ. ಹಿಂದುಗಳಿಗೆ ಸಂಕಷ್ಟ ತರುತ್ತಿದೆ. ದೇಶದ ಮೂರು ರಾಜ್ಯಗಳಲ್ಲಿ ಮಾತ್ರ ಹಿಂದುಗಳು ಸರಾಸರಿ ಕೇವಲ ಇಬ್ಬರು ಮಕ್ಕಳನ್ನು ಹೊಂದಿದ್ದಾರೆ. ಇನ್ನುಳಿದ ರಾಜ್ಯಗಳಲ್ಲಿ ಸರಾಸರಿ ಮಕ್ಕಳ ಪ್ರಮಾಣ 1.4ಕ್ಕೆ ಇಳಿದಿದ್ದಾಗಿ ತಿಳಿಸಿದರು.

ವಿಶ್ವ ಹಿಂದು ಪರಿಷತ್ ಉತ್ತರ ಪ್ರಾಂತ್ಯ ಅಧ್ಯಕ್ಷ ಲಿಂಗರಾಜ ಅಪ್ಪ ಮತ್ತು ಮುಖಂಡ ಡಾ.ಎಸ್.ಆರ್.ರಾಮನಗೌಡರ ಅನೇಕ ಮುಖಂಡರು ಇದ್ದರು.



> ಮುಸ್ಲಿಂರು ಜನಸಂಖ್ಯೆ ಹೆಚ್ಚಾಗುತ್ತಿದ್ದಂತೆ ಅಲ್ಲಿ ದೇಶದ್ರೋಹಿ ಕೈಂಕರ್ಯಗಳು ಹೆಚ್ಚುತ್ತವೆ. ಅಲ್ಲಿ ಲಕ್ಷ ಲಕ್ಷ ಹಿಂದುಗಳ ಕಗ್ಗೊಲೆಯಾಗುತ್ತದೆ. ಇದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಈಗಾಗಲೇ ದೇಶದ ಈಶಾನ್ಯ ರಾಜ್ಯಗಳಾ ಕೇರಳ, ನಾಗಾಲ್ಯಾಂಡ್, ಮೀಜರೋಮದಲ್ಲಿ ಶೇ.50ರಷ್ಟು ಹಿಂದುಳಗಳು ಉಳಿದಿದ್ದಾರೆ. ಇದರಂತೆ ಇತರ ರಾಜ್ಯಗಳಲ್ಲಿಯೂ ಹಿಂದುಯೇತರರು ಹೆಚ್ಚಾಗಿದ್ದಾರೆ. ಇದು ಹಿಂದುಗಳ ರಾಷ್ಟ್ರ. ಇಲ್ಲಿಯೇ ಹಿಂದೂಗಳು ಅಲ್ಪಸಂಖ್ಯಾತರಾದರೆ ಹೇಗೆ? ಈ ಬಗ್ಗೆ ಗಂಭೀರವಾಗಿ ಚಿಂತಿಸಬೇಕು.
>
> ■ **ಮಿಲಿಂದ ಪರಾಂಡೆ,** ವಿಎಚ್‌ಪಿ ರಾಷ್ಟ್ರೀಯ ಸಂಘಟನಾ ಮಹಾಮಂತ್ರಿ

ರಾಜ್ಯದಲ್ಲಿ ಲವ್ ಜಿಹಾದ್ ಹೆಚ್ಚಳ

• **ಧಾರವಾಡ:** ರಾಜ್ಯದಲ್ಲಿ ಲವ್ ಜಿಹಾದ್ ಪ್ರಕರಣಗಳು ಹೆಚ್ಚುತ್ತಿದ್ದು, ಪೂರಕವಾಗಿ ಕಾಂಗ್ರೆಸ್ ಸರ್ಕಾರ ಮುಸ್ಲಿಂರ ತುಷ್ಟೀಕರಣ ಮಾಡುತ್ತಿದೆ ಎಂದು ವಿಶ್ವ ಹಿಂದು ಪರಿಷತ್ ರಾಷ್ಟ್ರೀಯ ಸಂಘಟನಾ ಮಹಾಮಂತ್ರಿ ಮಿಲಿಂದ್ ಪರಾಂಡೆ ಆರೋಪ ಮಾಡಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶದಲ್ಲಿ ಇತ್ತೀಚೆಗೆ ಮಹಿಳಾ ದೌರ್ಜನ್ಯ, ಲೈಂಗಿಕ ಶೋಷಣೆ ಜೊತೆಗೆ ಲವ್ ಜಿಹಾದ್, ಲ್ಯಾಂಡ್ ಜಿಹಾದ್, ಕಾರ್ಪೋರೇಟ್ ಜಿಹಾದ್, ಜಿಮ್ ಜಿಹಾದ್‌ಗಳು ನಡೆಯುತ್ತಿವೆ ಎಂದು ಹುಬ್ಬಳ್ಳಿ ಪ್ರಕರಣ ಪ್ರಸ್ತಾಪಿಸಿದರು.

ರಾಜ್ಯದಲ್ಲಿ ಗೋವುಗಳ ರಕ್ಷಣೆ ಇಲ್ಲ. ಕೇರಳ, ತಮಿಳುನಾಡಿಗೆ ಗೋ ಸಾಗಾಟವೂ ನಡೆದಿದೆ. ಇದನ್ನು ರಾಜ್ಯ ಸರ್ಕಾರ ನಿಲ್ಲಿಸಲು ತಪಾಸಣಾ ಕೇಂದ್ರ ತೆರೆಯಬೇಕು.

ಲವ್ ಜಿಹಾದ್, ಅಕ್ರಮ ಗೋಮಾಂಸ ತಡೆಗೆ ಪರಿಷತ್ ಕಠಿಣ ಪಣತೊಟ್ಟಿದೆ ಎಂದರು.

ವಿಎಚ್‌ಪಿ ಉತ್ತರ ಕರ್ನಾಟಕ ಪ್ರಾಂತದ ವಿವಿಧ ಜಿಲ್ಲೆಗಳಲ್ಲಿ 100 ಸಮಿತಿಗಳ ರಚನೆ, ಸದಸ್ಯರ ಕಾರ್ಯಾಗಾರದ ಮೂಲಕ ಸಮಾಜದಲ್ಲಿ ಶಾಂತಿ, ಸಮಾಜದ ಜಾಗೃತಿ ಹಾಗೂ ರಾಷ್ಟ್ರೀಯ ಏಕತೆ ನೆಲೆಸಲು ಕಾರ್ಯಯೋಜನೆ ರೂಪಿಸಿದ್ದಾಗಿ ತಿಳಿಸಿದರು.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲುವು ವಿಚಾರವಾಗಿ, ಬಂಗಾಳದಲ್ಲಿ ಈ ಹಿಂದೆ ನೂರಾರು ಹಿಂದುಗಳ ಮಾರಣಹೋಮವಾಗಿದೆ. ಮಹಿಳೆಯರ ಅತ್ಯಾಚಾರವೂ ಆಗಿದೆ. ನುಸುಳುಕೋರರನ್ನು ಹಿಮ್ಮೆಟ್ಟಿಸಲು ಜನ ಬಿಜೆಪಿಗೆ ಅಧಿಕಾರ ನೀಡಿದ್ದಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವಿಎಚ್‌ಪಿ ಕರ್ನಾಟಕ ಉತ್ತರ ಪ್ರಾಂತ ಅಧ್ಯಕ್ಷ ಲಿಂಗರಾಜ ಅಪ್ಪ, ಕಾರ್ಯದರ್ಶಿ ಶಿವಕುಮಾರ ಬೋಳಶೆಟ್ಟಿ, ಜಿಲ್ಲಾಧ್ಯಕ್ಷ ಡಾ.ಮಹೇಶ ಪಾಟೀಲ, ಗೋವರ್ಧನ್ ರಾವ್, ಸಂಜೀವ್, ಈರೇಶ ಅಂಚಟಗೇರಿ ಸೇರಿದಂತೆ ಅನೇಕರು ಇದ್ದರು.

ಪ್ರಧಾನಿ ಹೇಳಿಕೆಗೆ ಸಮರ್ಥನೆ

ಪ್ರಧಾನಿ ಮೋದಿ ಅವರ ಕಡಿಮೆ ಇಂಧನ ಬಳಕೆ ವಿಚಾರವನ್ನು ಸಮರ್ಥಿಸಿಕೊಂಡ ಪರಾಂಡೆ, ಈ ಹೇಳಿಕೆಯುಲ್ಲೂ ತಪ್ಪೇನಿಲ್ಲ. ಯುದ್ಧದ ವೇಳೆ ಇಂತಹ ಸಂದರ್ಭ ಬರಲಿದೆ. ಹಿಂದಿನ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರೀ ಒಂದು ಹೊತ್ತಿನ ಊಟ ಬಿಡುವಂತೆ ಮನವಿ ಮಾಡಿದ್ದನ್ನು ಸ್ಮರಿಸಿದರು.

ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಸಿರು ನಿಶಾನೆ

ಮೂರು ಹೊಸ ವಿಶೇಷ ರೈಲುಗಳ ಓಡಾಟ ಕಾಯಂ



• **ಹುಬ್ಬಳ್ಳಿ:** ಹುಬ್ಬಳ್ಳಿ ಮತ್ತು ಉತ್ತರ ಕರ್ನಾಟಕ ಭಾಗಕ್ಕೆ ರೈಲ್ವೆ ಇಲಾಖೆ ಕೊಡುಗೆ ನೀಡಿದ್ದು, 3 ಹೊಸ ವಿಶೇಷ ರೈಲುಗಳನ್ನು ಕಾಯಂಗೊಳಿಸಲು ಸೋಮವಾರ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಸಿರು ನಿಶಾನೆ ತೋರಿಸಿದರು.

ಉತ್ತರ ಕರ್ನಾಟಕದ ಜನರ ದಶಕಗಳ ಬೇಡಿಕೆಗೆ ಮನ್ನಣೆ ಸಿಕ್ಕಿದ್ದು, ಈ ಹಿಂದೆ ವಿಶೇಷ ರೈಲುಗಳಾಗಿ ಸಂಚರಿಸುತ್ತಿದ್ದ 3 ರೈಲುಗಳನ್ನು ಈಗ ಕಾಯಂ ಆಗಿ ಓಡಿಸಲು ಹಸಿರು ನಿಶಾನೆ ತೋರಿಸಲಾಗಿದೆ. ಇದರಿಂದ ಹಬ್ಬ ಮತ್ತು ರಜೆಯ ದಿನಗಳಲ್ಲಿ ಟಿಕೆಟ್ ಅಭಾವ ತಗ್ಗಲಿದ್ದು, ಟಿಕೆಟ್ ದರದಲ್ಲೂ ಸುಮಾರು ಶೇ.25-30ರಷ್ಟು ಇಳಿಕೆಯಾಗಲಿದೆ ಎಂದು ಕೇಂದ್ರ ಸಚಿವ ಜೋಶಿ ಹೇಳಿದರು.

ಹೈದರಾಬಾದ್‌ಗೆ ನೇರ ಸಂಪರ್ಕ ಕಲ್ಪಿಸುವ ರೈಲುಗಳು ಸೇರಿದಂತೆ ಒಟ್ಟು 3 ವಿಶೇಷ ರೈಲುಗಳನ್ನು ಕಾಯಂ ಮಾಡಲಾಗಿದೆ. ಈ ರೈಲುಗಳ ಓಡಾಟದಿಂದ ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಕೊಪ್ಪಳ, ವಿಜಯನಗರ, ಬಳ್ಳಾರಿ, ರಾಯಚೂರು, ಯಾದಗಿರಿ ಜಿಲ್ಲೆಗಳ ಪ್ರಯಾಣಿಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಉದ್ಯೋಗಿಗಳಿಗೆ ದೊಡ್ಡ ಅನುಕೂಲವಾಗಲಿದೆ.

ಉತ್ತರ ಕರ್ನಾಟಕದ ಜನರ ಬಹುದಿನಗಳ ಬೇಡಿಕೆಗೆ ಸ್ಪಂದಿಸಿ, ನೈಋತ್ಯ ರೈಲ್ವೆಯ ಪ್ರಮುಖ ವಿಶೇಷ ರೈಲುಗಳನ್ನು ಇಂದಿನಿಂದ 'ನಿಯಮಿತಸೇವೆ' ಗಳನ್ನಾಗಿ (ಛಿಜ್ಞುಟ್ಟಿಖ್ಚಿಜ್ಞ ಖಟ್ಛಿಡಜ್ಚಿಛಿ) ಪರಿವರ್ತಿಸಲಾಗುತ್ತಿದೆ. ಇದು ಉತ್ತರ ಕರ್ನಾಟಕದ ಜಿಲ್ಲೆಗಳ ಸಂಪರ್ಕಕ್ಕೆ ಹೊಸ ವೇಗ ನೀಡಲಿದೆ ಹೇಳಿದರು.

ಹುಬ್ಬಳ್ಳಿ-ವಿಜಯಪುರ ನಡುವೆ ಸಂಚರಿಸುವ (56919/20 ಹಾಗೂ 66501/02) ರೈಲುಗಳು ಇನ್ನೂ ಮುಂದೆ ನಿಯಮಿತವಾಗಿ ಸಂಚರಿಸಲಿದ್ದು ಇದರಿಂದ ಹುಬ್ಬಳ್ಳಿ, ಗದಗ, ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳ ನಿತ್ಯ ಪ್ರಯಾಣಿಕರಿಗೆ, ವ್ಯಾಪಾರಸ್ಥರಿಗೆ ಹಾಗೂ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ.

ರೈಲುಗಳ ಸೇವೆಯಿಂದಾಗಿ ಪ್ರಯಾಣಿಕರಿಗೆ ಆರ್ಥಿಕವಾಗಿಯೂ ದೊಡ್ಡ ಲಾಭವಾಗಲಿದೆ. ಸಾಮಾನ್ಯ ದರ್ಜೆಯ ಪ್ರಯಾಣಿಕರಿಗೆ ಸೂಪರ್ ಫಾಸ್ಟ್ ಹೆಚ್ಚುವರಿ ಶುಲ್ಕವಿರುವುದಿಲ್ಲ, ಮೀಸಲು ದರ್ಜೆಯ ಟಿಕೆಟ್ ದರದಲ್ಲಿ ಸುಮಾರು 30% ರಷ್ಟು ಕಡಿತವಾಗಲಿದ್ದು, ಪ್ರಯಾಣವು ಅತ್ಯಂತ ಸುಲಭ ದರದಲ್ಲಿ ಸಿಗಲಿದೆ ಎಂದು ತಿಳಿಸಿದ್ದಾರೆ.

ಹೃಷಿಕೇಶಕ್ಕೆ ನೇರ ರೈಲು ಸಂಪರ್ಕ ರೈಲು ಸಂಖ್ಯೆ (17363/64) ಹುಬ್ಬಳ್ಳಿ-ಯೋಗ ನಗರಿ ಹೃಷಿಕೇಶ ವಾರಕ್ಕೊಮ್ಮೆ ಸಂಚರಿಸುವ ರೈಲು ಈಗ ನಿಯಮಿತ ಸೇವೆಯಾಗಿದ್ದು, ಉತ್ತರ ಭಾರತಕ್ಕೆ ತೆರಳುವ ಯಾತ್ರಾರ್ಥಿಗಳು ಹಾಗೂ ಪ್ರವಾಸಿಗರಿಗೆ ವರ್ಷಪೂರ್ತಿ ಸುಲಭ ಪ್ರಯಾಣ ಒದಗಿಸಲಿದೆ. ಅಮೃತ ಭಾರತ ಯೋಜನೆಯಡಿಯಲ್ಲಿ ಅಭಿವೃದ್ಧಿಪಡಿಸಿರುವ ಅಳ್ನಾವರ ರೈಲು ನಿಲ್ದಾಣ ಈಗ ಉದ್ಘಾಟನೆಗೆ ಸಿದ್ಧವಾಗಿದೆ ಸದ್ಯದಲ್ಲೇ ಲೋಕಾರ್ಪಣೆಗೊಳ್ಳಲಿದೆ ಎಂದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಭಾರತೀಯ ರೈಲ್ವೆ ವ್ಯವಸ್ಥೆ ದೇಶದ ಅಭಿವೃದ್ಧಿಗೆ ಮತ್ತಷ್ಟು ವೇಗ ತುಂಬುತ್ತಿದ್ದು, ನೂತನ ರೈಲು ಸೇವೆಗಳ ಮೂಲಕ ಸಾಮಾನ್ಯ ಜನರ ಪ್ರಯಾಣ ಸುಗಮ, ಸುರಕ್ಷಿತ ಹಾಗೂ ವೇಗದಾಯಕವಾಗುತ್ತಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನೈಋತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಪಿ.ಅನಂತ, ಸೇರಿದಂತೆ ಇನ್ನಿತರೆ ರೈಲ್ವೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಜನ್ಮದಿನದಂದೇ ವಿದ್ಯಾರ್ಥಿನಿ ಆತ್ಮಹತ್ಯೆ



• **ಬೆಳಗಾವಿ:** ಇಲ್ಲಿನ ಅಜಂ ನಗರದಲ್ಲಿ ಇರುವ ಪರಿಶಿಷ್ಟ ಪಂಗಡಗಳ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ಜನ್ಮದಿನದಂದೇ ವಿದ್ಯಾರ್ಥಿನಿ ನೇಣಿಗೆ ಶರಣಾಗಿರುವ ಘಟನೆ ನಡೆದಿದೆ. ಹುಕ್ಕೇರಿ ತಾಲೂಕಿನ ಕಟಾಬಳ್ಳಿ ಗ್ರಾಮದ ಕಾವೇರಿ ಉಮೇಶ ನಾಯಕ(21) ಬಿಎಸ್‌ಸಿ ಅಂತಿಮ ವರ್ಷದ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ, ಕಳೆದ ಮೂರು ತಿಂಗಳ ಹಿಂದಷ್ಟೇ ಪೊಲೀಸ್ ಪೇದೆಯೊಂದಿಗೆ ಎಂಗೇಜ್ಮೆಂಟ್ ಆಗಿತ್ತು. ಮಗಳನ್ನ ಕಳೆದುಕೊಂಡ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಘಟನಾ ಸ್ಥಳಕ್ಕೆ ಎಪಿಎಂಸಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ.

ಉಪನ್ಯಾಸಕ ಆತ್ಮಹತ್ಯೆ



• **ಸಿಂಧನೂರು:** ಮನೆಯೊಂದರಲ್ಲಿ ಉಪನ್ಯಾಸಕ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಆದರ್ಶ ಕಾಲೋನಿಯಲ್ಲಿ ನಡೆದಿದೆ. ಮನೆಯೊಂದರಲ್ಲಿ ಬಾಡಿಗೆ ಇದ್ದ ಉಪನ್ಯಾಸಕ ಪ್ರಾಣೇಶ ವರ್ಣೇಕರ್ ಎಂಬುವರು ಸಾಲ ಇದ್ದ ಹಿನ್ನೆಲೆಯಲ್ಲಿ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ಎನ್ನಲಾಗುತ್ತಿದೆ. ಈ ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಸಿಂಧನೂರು ಪೊಲೀಸರು, ಶ್ವಾನದಳ, ವಿಶೇಷ ಪೊಲೀಸ್ ತಂಡ ಸ್ಥಳಕ್ಕೆ ಭೇಟಿ ಪರಿಶೀಲನೆ ಮಾಡುತ್ತಿದ್ದಾರೆ.

ಬೆಳಗಾವಿಯಲ್ಲಿ ಬತ್ತಿದ ಕೆರೆಗಳು | ಸಾರ್ವಜನಿಕರ ಆಕ್ರೋಶ


ಭೂಗಳ್ಳರ ಅಕ್ರಮಕ್ಕೆ ಜಿಲ್ಲಾಡಳಿತದ ಮೌನ ಸಾಕ್ಷಿ

• **ಬೆಳಗಾವಿ:** ಜಿಲ್ಲೆಯಲ್ಲಿ ನೀರಿನ ಬವಣೆ ನೀಗಿಸಬೇಕಾದ ಕೆರೆಗಳು ಅಕ್ಷರಶಃ ಬರಡು ಭೂಮಿಯಾಗಿ ಮಾರ್ಪಟ್ಟಿವೆ. ಒಂದೆಡೆ ಒತ್ತುವರಿ ಭೂತ ಕೆರೆಗಳನ್ನು ನುಂಗುತ್ತಿದ್ದರೆ, ಮತ್ತೊಂದೆಡೆ ಹೂಳು ಮತ್ತು ಮಣ್ಣು ಲೂಟಿಯಿಂದ ಕೆರೆಗಳ ಅಸ್ತಿತ್ವವೇ ಇಲ್ಲದಂತಾಗುತ್ತಿದೆ.

ಬೆಳಗಾವಿ ಜಿಲ್ಲೆಯಾದ್ಯಂತ ಒಟ್ಟು 1,132 ಕೆರೆಗಳಿದ್ದು, ಇವುಗಳಲ್ಲಿ ಬಹುತೇಕ ಕೆರೆಗಳು ಇಂದು ಅಳಿವಿನ ಅಂಚಿನಲ್ಲಿವೆ. ಜಿಲ್ಲಾಡಳಿತದ ನಿರ್ಲಕ್ಷ್ಯದಿಂದಾಗಿ ಸುಮಾರು 134 ಕೆರೆಗಳು ಈಗಾಗಲೇ ಸಂಪೂರ್ಣ ಒತ್ತುವರಿಯಾಗಿದ್ದು, ಉಳಿದ 87 ಕೆರೆಗಳ ತೆರವು ಕಾರ್ಯಾಚರಣೆ ಕೇವಲ ಕಾಗದದ ಮೇಲಷ್ಟೇ ಉಳಿದಿದೆ. ಜಿಲ್ಲೆಯ 50ಕ್ಕೂ ಹೆಚ್ಚು ಕೆರೆಗಳನ್ನು ರೈತರು ಮತ್ತು ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿರುವುದು ಜಿಲ್ಲಾಡಳಿತಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

ಅಧಿಕಾರಿಗಳು 'ಲ್ಯಾಂಡ್ ಬೀಟ್' ಆ್ಯಪ್ ಮತ್ತು ನರೇಗಾ ಯೋಜನೆಯಡಿ ಸಂರಕ್ಷಣೆಯ ಮಾತುಗಳನ್ನಾಡುತ್ತಿದ್ದರೂ, ವಾಸ್ತವದಲ್ಲಿ ಚಿಕ್ಕಬಾಗೇವಾಡಿಯಂತಹ ಪ್ರಮುಖ ಕೆರೆಗಳು ನೀರಿಲ್ಲದೇ ಸಂಪೂರ್ಣವಾಗಿ ಬತ್ತಿ ಹೋಗಿರುವುದು ಆಡಳಿತ ಯಂತ್ರದ ವಿಫಲತೆಗೆ ಹಿಡಿದ ಕನ್ನಡಿಯಾಗಿದೆ. ಮತ್ತೊಂದೆಡೆ, ಕೆರೆಗಳ ಸಂರಕ್ಷಣೆಯ ಹೆಸರಿನಲ್ಲಿ ನಡೆಯುತ್ತಿರುವ ಕಾಮಗಾರಿಗಳು ಕಣ್ಣೊರೆಸುವ ತಂತ್ರದಂತಿದೆ.

ಕೆರೆಗಳಲ್ಲಿ ಹೂಳು ತೆಗೆಯುವ ಪ್ರಕ್ರಿಯೆ ನಡೆಯದ ಕಾರಣ ನೀರಿನ ಸಂಗ್ರಹಣಾ ಸಾಮರ್ಥ್ಯ ಕುಸಿದಿದೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಭೂಗಳ್ಳರು ಮತ್ತು ಮಣ್ಣು ಮಾಫಿಯಾ, ರಾತ್ರೋರಾತ್ರಿ ಕೆರೆಗಳಿಂದ ಅಕ್ರಮವಾಗಿ ಮಣ್ಣು ಲೂಟಿ ಮಾಡುತ್ತಿದ್ದಾರೆ.



> ಜಿಲ್ಲೆಯಲ್ಲಿ ಸುಮಾರು 1132 ಕೆರೆಗಳಿದ್ದು, ಅವುಗಳಲ್ಲಿ ನೀರು ಇಲ್ಲದ ಕಾರಣಕ್ಕೆ ಕೆಲವರು ಅಕ್ರಮವಾಗಿ ಮಣ್ಣು ಮಾಫಿಯಾ ದಂಧೆ ನಡೆಸುತ್ತಿದ್ದಾರೆ. ಹಾಗೂ ಭೂ ಗಳ್ಳತನ ಮಾಡುತ್ತಿರುವುದರ ಬಗ್ಗೆ ಮಾಹಿತಿ ಲಭ್ಯವಾಗಿದೆ ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಪರಿಶೀಲನೆ ಮಾಡಿ ವರದಿ ನೀಡುತ್ತಾರೆ. ಜಿಲ್ಲೆಯಲ್ಲಿ ಯಾವ ಭಾಗದಲ್ಲಿ ಈ ರೀತಿ ಅಕ್ರಮದಲ್ಲಿ ಭಾಗಿಯಾಗಿದ್ದಾರೋ ಅವರ ಮೇಲೆ ಕೂಡಲೇ ಕ್ರಮ ಕೈಗೊಳ್ಳುತ್ತೇವೆ.
>
> ■ **ಮಹಮ್ಮದ್ ರೋಷನ್,** ಬೆಳಗಾವಿ ಜಿಲ್ಲಾಧಿಕಾರಿ

ಜಿಲ್ಲಾಧಿಕಾರಿಗಳು ತಾಂತ್ರಿಕ ಸಬೂಬುಗಳನ್ನು ನೀಡುತ್ತಿದ್ದರೂ, ಹನಿ ನೀರಿಲ್ಲದೇ ಬಾಯಾರುತ್ತಿರುವ ಕೆರೆಗಳು ಮತ್ತು ಅತಿಕ್ರಮಣಕ್ಕೊಳಗಾದ ಜಾಗಗಳನ್ನು ನೋಡಿದರೆ ಜಿಲ್ಲಾಡಳಿತವು ಕೆರೆಗಳ ರಕ್ಷಣೆಯಲ್ಲಿ ಸಂಪೂರ್ಣವಾಗಿ ಸೋತಿದೆ ಎಂಬುದು ಸ್ಪಷ್ಟವಾಗುತ್ತಿದೆ. ಈ ಕೂಡಲೇ ಎಚ್ಚೆತ್ತುಕೊಳ್ಳದಿದ್ದರೆ ಜಿಲ್ಲೆಯ ನೀರಿನ ಮೂಲಗಳು ಕೇವಲ ಇತಿಹಾಸದ ಪುಟ ಸೇರುವುದರಲ್ಲಿ ಸಂಶಯವಿಲ್ಲ.

ಜಿಲ್ಲಾಧಿಕಾರಿಗಳು ತಾಂತ್ರಿಕ ಸಬೂಬುಗಳನ್ನು ನೀಡುತ್ತಿದ್ದರೂ, ಹನಿ ನೀರಿಲ್ಲದೇ ಬಾಯಾರುತ್ತಿರುವ ಕೆರೆಗಳು ಮತ್ತು ಅತಿಕ್ರಮಣಕ್ಕೊಳಗಾದ ಜಾಗಗಳನ್ನು ನೋಡಿದರೆ ಜಿಲ್ಲಾಡಳಿತವು ಕೆರೆಗಳ ರಕ್ಷಣೆಯಲ್ಲಿ ಸಂಪೂರ್ಣವಾಗಿ ಸೋತಿದೆ ಎಂಬುದು ಸ್ಪಷ್ಟವಾಗುತ್ತಿದೆ. ಈ ಕೂಡಲೇ ಎಚ್ಚೆತ್ತುಕೊಳ್ಳದಿದ್ದರೆ ಜಿಲ್ಲೆಯ ನೀರಿನ ಮೂಲಗಳು ಕೇವಲ ಇತಿಹಾಸದ ಪುಟ ಸೇರುವುದರಲ್ಲಿ ಸಂಶಯವಿಲ್ಲ ಎಂದು ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದಾರೆ.

ಸಂಭ್ರಮದ ಹುಲಿಗೆಮ್ಮ ದೇವಿ ರಥೋತ್ಸವ



• **ಕೊಪ್ಪಳ/ಮುನಿರಾಬಾದ್:** ಲೋಕಮಾತೆ ಕೊಪ್ಪಳ ಜಿಲ್ಲೆಯ ಐತಿಹಾಸಿಕ ಶ್ರೀ ಹುಲಿಗೆಮ್ಮ ದೇವಿ ರಥೋತ್ಸವ ಸೋಮವಾರ ವಿಜೃಂಭಣೆಯಿಂದ ನೆರವೇರಿತು.

ಕೊಪ್ಪಳ ತಾಲೂಕಿನ ಸುಕ್ಷೇತ್ರ ಹುಲಿಗಿ ಗ್ರಾಮದಲ್ಲಿ ಗೋಧೂಳಿ ಸಮಯ ಸಂಜೆ ಸರಿಯಾಗಿ 5.30ಕ್ಕೆ ಆರಂಭಗೊಂಡ ರಥೋತ್ಸವದ ಚಾಲನಾ ಸಮಾರಂಭಕ್ಕೆ ಕೊಪ್ಪಳ ಸೇರಿದಂತೆ ಗಡಿ ಜಿಲ್ಲೆ ವಿಜಯನಗರ, ಬಳ್ಳಾರಿ, ಗದಗ, ರಾಯಚೂರು ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಆಗಮಿಸಿದ್ದ ಲಕ್ಷಾಂತರ ಭಕ್ತರು ಸಾಕ್ಷಿಯಾಗಿ ಜಯಘೋಷ ಮೊಳಗಿಸಿದರು.

ಜಗನ್ಮಾತೆ ಶ್ರೀ ಹುಲಿಗೆಮ್ಮದೇವಿ ಮೂರ್ತಿಯೊಂದಿಗೆ ಸಾಗಿದ ತೇರು ಪಾದಗಟ್ಟೆ ತಲುಪಿ ಮರಳಿ ಸ್ವಸ್ಥಾನಕ್ಕೆ ಬಂದು ಸೇರುತ್ತಿದ್ದಂತೆ ಭಕ್ತ ಸಮೂಹದಿಂದ ಕರತಾಡನ ಕೇಳಿ ಬಂದಿತು. ಉದೋ ಉದೋ ಊದೋ.. ಹುಲಿಗೆಮ್ಮ ಎಂದು ಭಕ್ತರು ಮತ್ತೆ ಮತ್ತೆ ಘೋಷಣೆ ಮೊಳಗಿಸಿದರು.

ಸಮಾರಂಭದಲ್ಲಿ ಸಂಸದರಾದ ರಾಜಶೇಖರ ಹಿಟ್ನಾಳ, ಪರಿಷತ್ ಶಾಸಕರಾದ ಹೇಮಲತಾ ನಾಯಕ, ಮಾಜಿ ಸಂಸದರಾದ ಸಂಗಣ್ಣ ಕರಡಿ ಸೇರಿದಂತೆ ಅನೇಕ ಹಿರಿಯ ಗಣ್ಯರು ಭಾಗಿಯಾಗಿ ಪೂಜೆ ಸಲ್ಲಿಸಿದರು.

ಎಸ್ಪಿ ಡಾ.ರಾಮ್ ಎಲ್ ಅರಸಿದ್ದಿ ಅವರ ಮಾರ್ಗದರ್ಶನದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಶ್ರೀ ಹುಲಿಗೆಮ್ಮ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರು ಹಾಗೂ ಕಾರ್ಯದರ್ಶಿ ಪ್ರಕಾಶರಾವ್, ವಿಶ್ವ ಪ್ರಾಣಿ ಕಲ್ಯಾಣ ಮಂಡಳಿಯ ಅಧ್ಯಕ್ಷರಾದ ದಯಾನಂದ ಸ್ವಾಮೀಜಿ ಸೇರಿದಂತೆ ಹುಲಿಗಿ ಗ್ರಾಪಂ ಅಧ್ಯಕ್ಷರು ಮತ್ತು ಸದಸ್ಯರು, ಹುಲಿಗಿ ಸೇರಿದಂತೆ ಸುತ್ತಲಿನ ಅನೇಕ ಗ್ರಾಮಗಳ ಸದ್ಭಕ್ತರು ಇದ್ದರು.

ಹಂಪಿ ಅನಧಿಕೃತ ಹೋಂ ಸ್ಟೇಗಳಿಗೆ ಎಸ್ಪಿ ಭೇಟಿ

• **ವಿಜಯನಗರ:** ಹಂಪಿ ಭಾಗದಲ್ಲಿ ಅನಧಿಕೃತವಾಗಿರುವ ಹೋಂ ಸ್ಟೇಗಳ ನೋಂದಣಿಗೆ ಪ್ರವಾಸೋದ್ಯಮ ಇಲಾಖೆ ಸೂಚಿಸಿ ಪ್ರಕಟಣೆ ನೀಡಿರುವ ಬೆನ್ನಲ್ಲೇ ಎಸ್ಪಿ ಜಾಹ್ನವಿ ನೇತೃತ್ವದಲ್ಲಿ ವಿವಿಧ ಇಲಾಖೆ ಅಧಿಕಾರಿಗಳು ಸೋಮವಾರ ಹಂಪಿ ಭಾಗದಲ್ಲಿರುವ ಅನಧಿಕೃತ ಹೋಂ ಸ್ಟೇಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಹಂಪಿ ಗ್ರಾಪಂ ಕಚೇರಿ ಸಮೀಪದಲ್ಲಿರುವ ಅಯೋಧ್ಯಾ ಗೆಸ್ಟ್ ಹೌಸ್, ಪದ್ಮಾ ಹಂಪಿ ವಿಲ್ಲಾ ಮತ್ತಿತರೆ ಗೆಸ್ಟ್ ಹೌಸ್‌ಗಳಿಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿದರು. ಈ ವೇಳೆ ಹಲವು ಹೋಂ ಸ್ಟೇಗಳು ಯಾವುದೇ ಅನುಮತಿಯಿಲ್ಲದೇ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿತು. ಅಂತಹ ಹೋಂ ಸ್ಟೇಗಳನ್ನು ತಕ್ಷಣವೇ ಬಂದ್ ಮಾಡುವಂತೆ ಮಾಲೀಕರಿಗೆ ಕಟ್ಟುನಿಟ್ಟಾಗಿ ಸೂಚಿಸಿದರು.

ಎಎಸ್‌ಪಿ ಮಂಜುನಾಥ ಜಿ., ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕ(ಪ್ರಭಾರಿ) ತಿಪ್ಪೇಸ್ವಾಮಿ, ತಹಶೀಲ್ದಾರ್ ಶೃತಿ ಎಂ., ಹವಾಮಾ ಆಯುಕ್ತ ರಮೇಶ ವಟಗಲ್ ಹಾಗೂ ಸ್ಥಳೀಯ ಪೊಲೀಸ್ ಅಧಿಕಾರಿಗಳು ಇದ್ದರು.

ಸಮಗ್ರ ಶಿಕ್ಷಣಕ್ಕೆ ಹಿಡಿದ ಕನ್ನಡಿ | ಗ್ರಾಮೀಣ ಮಕ್ಕಳ ಬದುಕಿಗೆ ಆಸರೆ

ಆರ್‌ಡಿಎಸ್ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳ ಜೀವನಕ್ಕೆ ದಾರಿದೀಪ

> ಉತ್ತಮ ಫಲಿತಾಂಶಕ್ಕೆ ವಿವಿಧ ರೀತಿಯ ಕಾರ್ಯಾಗಾರಗಳು, ಸುಸಜ್ಜಿತ ಪ್ರಯೋಗಾಲಯಗಳು ಹಾಗೂ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಮತ್ತು ಮಕ್ಕಳ ಪ್ರತಿಭೆಗಳನ್ನು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಅನಾವರಣಗೊಳ್ಳುವಂತೆ ಮಾಡುತ್ತಿದೆ.

• **ಮೂಡಲಗಿ:** ಪಟ್ಟಣದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿರುವ ಆರ್‌ಡಿಎಸ್ ಶಿಕ್ಷಣ ಸಂಸ್ಥೆ ಮೂಡಲಗಿ ತಾಲೂಕಿನಲ್ಲಿ ಕಳೆದ 25 ವರ್ಷಗಳಿಂದ ಸಾವಿರಾರು ವಿದ್ಯಾರ್ಥಿಗಳ ಜೀವನದ ದಾರಿದೀಪವಾಗಿ ಗುರುತಿಸಲ್ಪಟ್ಟಿದ್ದು, ಇಂದು ಈ ವಿದ್ಯಾಸಂಸ್ಥೆಯಲ್ಲಿ ಶ್ರೀ ವಿದ್ಯಾನಿಕೇತನ ಸಿಬಿಎಸ್‌ಇ ಶಾಲೆ, ಶ್ರೀ ವಿದ್ಯಾನಿಕೇತನ ಕನ್ನಡ ಪ್ರಾಥಮಿಕ-ಪ್ರೌಢ ಶಾಲೆ, ಆರ್ ಡಿಎಸ್ ಪಿಯು ಕಾಲೇಜು ಹಾಗೂ ಆರ್ ಡಿಎಸ್ ಡಿಗ್ರಿ ಕಾಲೇಜುಗಳ ಮೂಲಕ ಈ ವಿದ್ಯಾಸಂಸ್ಥೆಯಲ್ಲಿ 3000ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಓದುತ್ತಿರುವುದು ಸಮಗ್ರ ಶಿಕ್ಷಣಕ್ಕೆ ಹಿಡಿದ ಕನ್ನಡಿಯಾಗಿದೆ.

ಈ ವಿದ್ಯಾಸಂಸ್ಥೆ ವಿಶಾಲವಾದ 5 ಎಕರೆ ಜಮೀನಿನಲ್ಲಿ ಭವ್ಯವಾದ ವಿಶಾಲವಾದ ಕಟ್ಟಡವನ್ನು ಹೊಂದಿದ್ದು, ನುರಿತ 110 ಜನ ವಿವಿಧ ಪರಿಣಿತ ಉಪನ್ಯಾಸಕರನ್ನು ವೃತ್ತಿ ಕೌಶಲ್ಯ ಹೊಂದಿರುವ ಶಿಕ್ಷಕರನ್ನು ಒಳಗೊಂಡಿರುತ್ತದೆ. ಉತ್ತಮ ಫಲಿತಾಂಶಕ್ಕೆ ವಿವಿಧ ರೀತಿಯ ಕಾರ್ಯಾಗಾರಗಳು, ಸುಸಜ್ಜಿತ ಪ್ರಯೋಗಾಲಯಗಳು ಹಾಗೂ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಮತ್ತು ಮಕ್ಕಳ ಪ್ರತಿಭೆಗಳನ್ನು ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಅನಾವರಣಗೊಳ್ಳುವಂತೆ ಮಾಡುತ್ತಿದೆ. ವಿದ್ಯಾರ್ಥಿಗಳಿಗೆ ಯೋಗ್ಯ ಉತ್ತಮ ವಸತಿ ವ್ಯವಸ್ಥೆ ಹೊಂದಿದ್ದು, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ಜೊತೆಗೆ ಗ್ರಾಮೀಣ ಮಕ್ಕಳ ಬದುಕಿಗೆ ಆಸರೆಯಾಗಿ ನಿಲ್ಲುವ ವಿದ್ಯಾಸಂಸ್ಥೆಯಾಗಿದೆ.

ವಿದ್ಯಾನಿಕೇತನ ಸಿಬಿಎಸ್‌ಇ ಶಾಲೆ: ಸಿಬಿಎಸ್‌ಇ ಮಂಡಳಿಯಿಂದ ನಡೆದ 10ನೇ ತರಗತಿಯ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಹೊಂದಿದ್ದು, ನೀರಜ್ ಗಾಡವಿ ಶೇ.93.4 ಶಾಲೆಗೆ ಪ್ರಥಮ, ಫಾತಿಮಾ ನದಾಫ್ ಶೇ.92 ದ್ವಿತೀಯ, ಪೂರ್ಣಿಮಾ ಗಾಡವಿ ಶೇ.90 ತೃತೀಯ, ಪ್ರಜ್ವಲ್ ಬಿದರಿ ಶೇ.85 ನಾಲ್ಕನೇ ಸ್ಥಾನ ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ.



ವಿದ್ಯಾನಿಕೇತನ ಕನ್ನಡ ಪ್ರಾಥಮಿಕ-ಪ್ರೌಢ ಶಾಲೆ: ಕಶಾಪಮೌ ಮಂಡಳಿಯಿಂದ ನಡೆದ 10ನೇ ತರಗತಿಯ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದ್ದು, ಅಕ್ಷತಾ ಖನದಾಳೆ ಶೇ.97.2 ಶಾಲೆಗೆ ಪ್ರಥಮ, ಮಲ್ಲಿಕಾರ್ಜುನ ಶಿಗೀಹಳ್ಳಿ ಶೇ.90 ದ್ವಿತೀಯ, ನಿವೇದಿತಾ ಮಡಿವಾಳ ಶೇ.89 ತೃತೀಯ ಸ್ಥಾನ ಪಡೆದಿದ್ದಾರೆ.

ಆರ್‌ಡಿಎಸ್ ಪಿಯು ಕಾಲೇಜು: ಕಶಾಪಮೌ ಮಂಡಳಿಯಿಂದ ನಡೆದ ದ್ವಿತಿಯ ಪಿಯುಸಿ ಫಲಿತಾಂಶದಲ್ಲಿ ಅಮೋಘ ಫಲಿತಾಂಶವನ್ನು ಪಡೆದಿದ್ದು, ವಿಜ್ಞಾನ ವಿಭಾಗದಲ್ಲಿ ಸಾವಿತ್ರಿ ಮಾಳಪ್ಪನವರ 569 (ಶೇ.95), ಕಲಾ ವಿಭಾಗದಲ್ಲಿ ಲಕ್ಷ್ಮೀ ಗುಡೇನ್ನವರ 570 (ಶೇ.95), ವಾಣಿಜ್ಯ ವಿಭಾಗದಲ್ಲಿ ಆಕಾಶ ಬಾಯಪ್ಪಗೋಳ 569 (ಶೇ.95) ಪಡೆದುಕೊಂಡಿದ್ದು, 39 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ 161 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ.

ಆರ್‌ಡಿಎಸ್ ಡಿಗ್ರಿ ಕಾಲೇಜು: ಬಿಎ, ಬಿಕಾಂ, ಬಿಎಸ್ಸಿ, ಬಿಎಸ್‌ಡಬ್ಲ್ಯೂ ಕೋಸ್‌ಗಳನ್ನು ನಡೆಸಲಾಗುತ್ತಿದ್ದು 1,3,5ನೇ ಸೆಮಿಸ್ಟರ್‌ನಲ್ಲಿ ಬಿಎಸ್‌ಸಿಯಲ್ಲಿ ಸಹನಾ ರಂಕನಕೊಪ್ಪ ಶೇ.96, ಬಿಎ ವಿಭಾಗದಲ್ಲಿ ಪ್ರಿಯಾಂಕಾ ಚೌಗಲಾ ಶೇ.96, ಬಿಕಾಂ ವಿಭಾಗದಲ್ಲಿ ಲಕ್ಷ್ಮೀ ಗುಗ್ಗರಿ ಶೇ.85 ಪಡೆದುಕೊಂಡಿದ್ದು, ಪರೀಕ್ಷೆಗೆ ಹಾಜರಾದ ಎಲ್ಲ ವಿದ್ಯಾರ್ಥಿಗಳು ಪಾಸಾಗಿದ್ದು 100ಕ್ಕೆ100ರಷ್ಟು ಫಲಿತಾಂಶ ಪಡೆದಿರುತ್ತದೆ.

ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಪ್ರೇರಣೆ ನೀಡಲು ಖ್ಯಾತ ಶಿಕ್ಷಣತಜ್ಞ ಡಾ.ಗುರುರಾಜ ಖರ್ಜಗಿ, ಖ್ಯಾತ ಹಾಸ್ಯ ಚಲನಚಿತ್ರ ನಟ ಸಂಗೀತ ನಿರ್ದೇಶಕ ಸಾಧುಕೋಕಿಲ, ಧಾರವಾಡ ಖ್ಯಾತ ತಜ್ಞ ಪ್ರಶಾಂತ ಮೋಟಗಿಯಿಂದ ಮಕ್ಕಳಲ್ಲಿ ಆತ್ಮಸ್ಥೈರ್ಯ ನೀಡುವ ಕಾರ್ಯ ಕೈಗೊಳ್ಳುತ್ತಿದೆ.

ಪದವಿ, ಸ್ನಾತಕೋತ್ತರ ಪದವಿ ಶಿಕ್ಷಣವನ್ನು ಕೆಎಸ್‌ಓಯುನಿಂದ ಬಾಹ್ಯ ಕೋರ್ಸ್‌ಗಳ ನಡೆಸಿ ಶೈಕ್ಷಣಿಕ ಅರ್ಹತೆಯ ಕೊರತೆ ಹೊಂದಿರುವ ಯುವಕರಿಗೆ ಶಿಕ್ಷಕರಿಗೆ ಮಾಜಿ ಸೈನಿಕರಿಗೆ ವಿಧವೆಯರಿಗೆ ಅಲ್ಪಸಂಖ್ಯಾತ ಸಮುದಾಯಗಳಿಗೆ ಪ್ರೋತ್ಸಾಹಿಸುವ ಕಾರ್ಯ ಶ್ಲಾಘನೀಯವಾಗಿದೆ.



> ನಮ್ಮ ತಂದೆಯವರಾದ ದಿ.ತಮ್ಮಣ್ಣಾ ಪಾರ್ಶಿಯವರಿಂದ ಪ್ರಾರಂಭವಾದ ಈ ವಿದ್ಯಾಸಂಸ್ಥೆ ಅವರ ಕನಸಿನಂತೆ ಗ್ರಾಮೀಣ ಭಾಗದ ಬಡ ರೈತ ಮಕ್ಕಳು ಕೂಲಿಕಾರ್ಮಿಕರ ಮಕ್ಕಳು ಹಾಗೂ ಸಾಮಾಜಿಕ ವಂಚಿತ ಸಮುದಾಯದ ಮಕ್ಕಳಿಗೆ ಅವರ ಮನೆ ಅಂಗಳದಲ್ಲಿ ವಿವಿಧ ಕೋರ್ಸ್‌ಗಳ ರೂಪದಲ್ಲಿ ಶಿಕ್ಷಣ ದೊರೆಯುವಂತೆ ಮಾಡಿದೆ.
>
> ■ **ಸಂತೋಷ ಪಾರ್ಶಿ,** ಅಧ್ಯಕ್ಷರು, ಆರ್‌ಡಿಎಸ್ ಸಮೂಹ ಶಿಕ್ಷಣ ಸಂಸ್ಥೆ ಮೂಡಲಗಿ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಮೇ 15ರಂದು ಶ್ರದ್ಧಾಂಜಲಿ ಸಭೆ



ಅಂಕೋಲಾ: ಮೇ 7ರಂದು ನಿಧನರಾದ ಜಿ.ಪ ಮಾಜಿ ಅಧ್ಯಕ್ಷ ದಿ. ರಮಾನಂದ ನಾಯಕ ಶ್ರದ್ಧಾಂಜಲಿ ಕಾರ್ಯಕ್ರಮ ಮೇ 15ರಂದು ಪೂರ್ವಾಹ್ನ 10.30ಕ್ಕೆ ಅಂಕೋಲಾದ ನಾಡವರ ಸಂಘದ ಸಭಾಭವನದಲ್ಲಿಇಡಲಾಗಿದೆ. ರಮಾನಂದ ನಾಯಕರ ಅಭಿಮಾನಿ ಬಳಗ ,ಆತ್ಮೀಯರು ಈ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರಕಟನೆ ಕೋರಿದೆ.

ಇಂದು ವಿದ್ಯುತ್ ವ್ಯತ್ಯಯ

ಕಾರವಾರ: ಉಪ ವಿಭಾಗ ವ್ಯಾಪ್ತಿಯಲ್ಲಿ ಹೆಚ್.ಟಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಮೇ 12ರಂದು ಬೆಳಗ್ಗೆ 9.30 ಗಂಟೆಯಿಂದ ಸಂಜೆ 6 ಗಂಟೆಯವರೆಗೂ ಕಾರವಾರ ಟೌನ್ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲ್ಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸ್ ಪಲ್ಟಿ: ಹಲವರಿಗೆ ಗಾಯ



ಯಲ್ಲಾಪುರ: ಮದುವೆ ಸಮಾರಂಭಕ್ಕೆ ತೆರಳಿ ವಾಪಸ್ಸಾಗುತ್ತಿದ್ದ ಮಿನಿ ಬಸ್‌ವೊಂದು ರಾಷ್ಟ್ರೀಯ ಹೆದ್ದಾರಿ 52ರ ಅರಬೈಲ್ ಘಟ್ಟದಲ್ಲಿ ಅಪಘಾತಕ್ಕೀಡಾಗಿ ಹಲವರು ಗಾಯಗೊಂಡ ಘಟನೆ ನಡೆದಿದೆ ಅರಬೈಲ್ ಗ್ರಾಮದಿಂದ ಬೆಳಗಾವಿಯಲ್ಲಿ ನಡೆದ ಮದುವೆ ಸಮಾರಂಭಕ್ಕೆ ತೆರಳಿದ್ದ ಪ್ರಯಾಣಿಕರು ಮದುವೆ ಕಾರ್ಯಕ್ರಮ ಮುಗಿಸಿ ವಾಪಸ್ಸಾಗುತ್ತಿದ್ದರು. ಮನೆ ತಲುಪಲು ಇನ್ನೂ ಎರಡು ಕಿಲೋಮೀಟರ್ ಮಾತ್ರ ಬಾಕಿ ಇರುವಾಗ ಈ ದುರ್ಘಟನೆ ಸಂಭವಿಸಿದೆ ಎನ್ನಲಾಗಿದೆ.
ಚಾಲಕನ ನಿಯಂತ್ರಣ ತಪ್ಪಿದ ಮಿನಿ ಬಸ್ ಹೆದ್ದಾರಿ ಬದಿಯ ಗುಡ್ಡಕ್ಕೆ ಗುದ್ದಿದ ಪರಿಣಾಮ ವಾಹನದಲ್ಲಿದ್ದ ಹಲವರು ಗಾಯಗೊಂಡಿದ್ದಾರೆ. ಈ ಘಟನೆಯಲ್ಲಿ 19 ಜನರು ಗಾಯಗೊಂಡಿದ್ದಾರೆ. ಈ ಕುರಿತು ಅರಬೈಲಿನ ಕೃಷ್ಣ ನಾರಾಯಣ ನಾಯ್ಕ ಅವರು ಮಿನಿ ಬಸ್ ಚಾಲಕ ಬಾಸಲದ ಸಂದೀಪ ತಳೇಕರ್ ಅವರ ವಿರುದ್ಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ನಿಧನ ಸುದ್ದಿ

ರಾಮಚಂದ್ರ ಶೆಟ್ಟಿ



ಮುಂಡಗೋಡ: ಪಟ್ಟಣದ ನಂದೀಶ್ವರ ನಗರದ ನಿವಾಸಿ ಅನಂತ ರಾಮಚಂದ್ರ ಶೆಟ್ಟಿ(82) ವಯೋಸಹಜ ಕಾಯಿಲೆಯಿಂದ ಭಾನುವಾರ ನಿಧನರಾದರು. ಮೃತರು ಓರ್ವ ಪುತ್ರ ಹಾಗೂ ಅಪಾರ ಬಂಧು-ಬಳಗವಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	56569	68500
ಬಿಳಿಗೋಟು	24199	40099
ಕೆಂಪುಗೋಟು	20709	36898
ಬೆಟ್ಟೆ	36099	53699
ರಾಶಿ	48399	57261
ಚಾಲಿ	46099	49799

ಯಲ್ಲಾಪುರ	ಕನಿಷ್ಠ	ಗರಿಷ್ಠ
ರಾಶಿ	50699	56399
ಬೆಟ್ಟೆ	35701	50009
ಕೆಂಪುಗೋಟು	34215	36899
ಬಿಳಿಗೋಟು	18212	37799
ಚಾಲಿ	38698	49019
ಕೋಕಾ	21510	34699
ಕಾಳುಮೆಣಸು	59815	67119



ಶಿರಸಿ: ಕಾರವಾರದಲ್ಲಿ ಆಯೋಜಿಸಲಾಗಿದ್ದ ಎನ್‌ಸಿಸಿ ವಾರ್ಷಿಕ ತರಬೇತಿ ಶಿಬಿರದಲ್ಲಿ ಶಿರಸಿಯ ಎಂ.ಎಂ. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ಎನ್‌ಸಿಸಿ ಕೆಡೆಟ್‌ಗಳು ಅದ್ಭುತ ಪ್ರದರ್ಶನ ನೀಡುವ ಮೂಲಕ ಸತತ ಎರಡನೇ ಬಾರಿಗೆ ಸಮಗ್ರ ಚಾಂಪಿಯನ್ ಶಿಪ್ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಮೇ 15ರಂದು ನದಿ ಜೋಡಣೆ ವಿರೋಧಿ ಸಭೆ

ಸಿದ್ದಾಪುರ: ಅರಣ್ಯವಾಸಿ ಮತ್ತು ಅಘನಾಶಿನಿ ನದಿ ಜೋಡಣೆ ವಿರೋಧಿ ಸಭೆಯನ್ನು ಸ್ಥಳೀಯ ರಾಘವೇಂದ್ರ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಮೇ15ರಂದು ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಹೋರಟಗಾರರ ವೇದಿಕೆಯ ಪ್ರಧಾನ ಸಂಚಾಲಕ ಮಾಬ್ಲೇಶ್ವರ ನಾಯ್ಕ ಬೇಡ್ಕಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
ರಾಜ್ಯ ಸರ್ಕಾರದ ನೀತಿಗೆ ವಿರುದ್ಧವಾಗಿ ಅರಣ್ಯ ಅತಿಕ್ರಮಣದಾರರ ಮಹಜರ್ ಜರುಗುತ್ತಿದೆ. ಅರಣ್ಯವಾಸಿಗಳು ಅತಿಕ್ರಮಿಸಿರುವ ಮೂರು ಎಕರೆ ಸಾಗುವಳಿಗೆ ಆತಂಕ ಮಾಡಬಾರದೆಂದು ರಾಜ್ಯ ಸರ್ಕಾರದ ಆದೇಶವಿದ್ದರೂ ಇದರ ರದ್ದತಿಗೆ ಹೈಕೋರ್ಟನಲ್ಲಿ ಪ್ರಕರಣ ದಾಖಲಾಗಿರುವ ಕುರಿತು ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.ಅಘನಾಶಿನಿ ನದಿ ಜೋಡಣೆ ವಿರೋಧಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲಿಸಿದ ಆಕ್ಷೇಪಣಾ ಪತ್ರದ ಸ್ವೀಕೃತಿ ಪ್ರತಿ ವಿತರಿಸುವ ವಿಧಾನದ ಕುರಿತು ಹಾಗೂ ಯುನೆಸ್ಕೋ ವಿಶ್ವ ಪರಂಪರೆಯ ಕೇಂದ್ರದಿಂದ ಹೋರಾಟಗಾರರ ವೇದಿಕೆಗೆ ಬಂದಿರುವ ಉತ್ತರದ ಮಾಹಿತಿಯ ವಿಷಯವನ್ನ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ತಿಳಿಸಿದ್ದಾರೆ. ಹೋರಾಟಗಾರರ ವೇದಿಕೆಯ ಜಿಲ್ಲಾಧ್ಯಕ್ಷ ರವೀಂದ್ರ ನಾಯ್ಕ ಅಧ್ಯಕ್ಷತೆ ವಹಿಸುವ ಸಭೆಯಲ್ಲಿ ನದಿ ಜೋಡಣೆ ಕುರಿತಂತೆ ಆಯೋಗಕ್ಕೆ ಆಕ್ಷೇಪಣೆ ಸಲ್ಲಿಸುವ ವಿಷಯವಾಗಿ ಸಭೆಯಲ್ಲಿ ಅಭಿಪ್ರಾಯ ಸಂಗ್ರಹಿಸಲಾಗುವುದು ಎಂದು ಅವರು ತಿಳಿಸಿದ್ದಾರೆ. ಸದರಿ ಸಭೆಗೆ ಅರಣ್ಯವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕೋರಲಾಗಿದೆ.



ಮುಂಡಗೋಡ: ಪಟ್ಟಣದ ತಹಶೀಲ್ದಾರ ಕಚೇರಿಯ ಸಭಾಭವನದಲ್ಲಿ 14ನೇ ಶತಮಾನದ ಮಹಾ ಶಿವಶರಣೆ, ಪ್ರಸಿದ್ಧ ಸಂತ,ಕರುಣಾಮಯಿ ಮತ್ತು ದಾಸೋಹಿ ಹೇಮರೆಡ್ಡಿ ಮಲ್ಲಮ್ಮಳ 604ನೇಜಯಂತ್ಯುತ್ಸವವನ್ನು ಸೋಮವಾರ ಆಚರಿಸಲಾಯಿತು. ಸಿಬ್ಬಂದಿ ರಾಘವೇಂದ್ರ ಗಿರಡ್ಡಿ, ಬಿಸಿಎಮ್ ಅಧಿಕಾರಿ ಕರಿಯಪ್ಪ ಎ.ಎಚ್., ಶ್ರೀಕಾಂತ ಹೊಸಮನಿ, ಶಿವಾನಂದ ಭೋವಿ, ನವೀನ ಕುಲಕರ್ಣಿ, ಕಸಾಪ ತಾಲೂಕು ಘಟಕದ ಅಧ್ಯಕ್ಷ ವಸಂತ ಕೊಣಸಾಲಿ, ವಿನಾಯಕ ಶೇಟ್, ಎಸ್ .ಡಿ.ಮುಡೆಣ್ಣವರ, ಎಸ್.ಬಿ.ಹೂಗಾರ, ಮಂಜುನಾಥ ಕಲಾಲ, ಮಹಮ್ಮದ್ ಗೌಸ್ ದುಂಡಶಿ ಇದ್ದರು.

ಪ್ರಗತಿ ಪರಿಶೀಲನಾ ಸಭೆ | ಸಂಸದ ಕಾಗೇರಿ ಸೂಚನೆ

ಕುಡಿಯುವ ನೀರಿನ ಅಭಾವಕ್ಕೆ ಶಾಶ್ವತ ಪರಿಹಾರ ಒದಗಿಸಿ

ಕಾರವಾರ: ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವ ಮರುಕಳಿಸುವ ನಿಶ್ಚಿತ ಗ್ರಾಮಗಳನ್ನು ಗುರುತಿಸಿ, ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆ ಮಾಡಲು ಜೆಜೆಎಂ 2 ಹಂತದಲ್ಲಿ ಶಾಶ್ವತ ಪರಿಹಾರ ಒದಗಿಸಲು ಕ್ರಮವಹಿಸುವಂತೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಸೂಚಿಸಿದರು.
ಅವರು ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ, ಜಲ ಜೀವನ ಮಿಷನ್ ಅಡಿ ಮಂಜೂರಾದ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.
ಜಿಲ್ಲೆಯಲ್ಲಿ ಬೇಸಿಗೆ ಅವಧಿಯಲ್ಲಿ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗುತ್ತಿದ್ದು, ಈಗಾಗಲೇ ಗ್ರಾಮ ಪಂಚಾಯತ, ತಾಲೂಕು ಪಂಚಾಯತ ವತಿಯಿಂದ ಖಾಸಗಿ ಬೋರ್‌ವೆಲ್, ಕೊಳವೆ ಬಾವಿ ಹಾಗೂ ಟ್ಯಾಂಕರ್ ಮೂಲಕ ಕುಡಿಯುವ ನೀರು ಒದಗಿಸಲಾಗುತ್ತಿದೆ. ಜೆಜೆಎಂ ಕಾಮಗಾರಿಗಳ ವಿಳಂಬದ ಕುರಿತು ದೂರುಗಳು ಬರುತ್ತಿದ್ದು, ಜೆಜೆಎಂ ಕಾಮಗಾರಿಗಳ ಕಳಪೆ ಕಾಮಗಾರಿ ಮತ್ತು ಗುಣಮಟ್ಟದಲ್ಲಿ ಲೋಪವಾಗದಂತೆ ಅಧಿಕಾರಿಗಳು ಕ್ರಮವಹಿಸಬೇಕು ಎಂದರು.
ಜಿಲ್ಲೆಯಲ್ಲಿ ಜೆಜೆಎಂ ಯೋಜನೆಯಡಿ 965 ಕಾಮಗಾರಿಗಳ ಪೈಕಿ ಪ್ರಥಮ ಹಂತದಲ್ಲಿ 256, 2ನೇ ಹಂತದಲ್ಲಿ 228, 3 ನೇ ಹಂತದಲ್ಲಿ 26 ಹಾಗೂ 4 ಹಂತದಲ್ಲಿ 232 ಕಾಮಗಾರಿ ಮುಕ್ತಯವಾಗಿದೆ. ಪ್ರಥಮ ಹಂತದಲ್ಲಿ ಬಿಟ್ಟು ಹೋದ 250 ಗ್ರಾಮಗಳಿಗೆ ಜೆಜೆಎಂ 2 ಹಂತದಲ್ಲಿ ಮುಂದುವರಿಸಿಕೊಂಡು ಹೋಗಲು ಅನುಮತಿ ದೊರೆತ್ತಿದ್ದು, ಜೆಜೆಎಂ, ಬಹುಗ್ರಾಮ ಕುಡಿಯುವ ನೀರು ಮತ್ತು ಅಮೃತ ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡುವಲ್ಲಿ ಹಾಗೂ ನಿರ್ವಹಣೆಗೆ ಆದ್ಯತೆ ನೀಡಿದ್ದಲ್ಲಿ ಕುಡಿಯುವ ನೀರನ ಸಮಸ್ಯೆ ಬಗೆಹರಿಸಬಹುದಾಗಿದ್ದು, ಅಧಿಕಾರಿಗಳು ತಳ ಮಟ್ಟದಿಂದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿ, ಜನರಿಗೆ ಯೋಜನೆಯ ಸೌಲಭ್ಯಗಳು ದೊರೆಯುವಂತೆ ಮಾಡಬೇಕು ಎಂದರು.
ಜಿಲ್ಲಾ ಪಂಚಾಯತ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ದಿಲೀಷ್ ಶಶಿ ಮಾತನಾಡಿ, ಹಳಿಯಾಳ, ಮುಂಡಗೋಡನಲ್ಲಿ ಖಾಸಗಿ ಬೋರ್ ವೇಲ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದ್ದು, 31 ಗ್ರಾಮ ಪಂಚಾಯತನಲ್ಲಿ 68 ಕಡೆ ಹಾಗೂ ಮಂಕಿಯ 16 ವಾರ್ಡನಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ ಎಂದರು.
ಸಭೆಯಲ್ಲಿ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ, ಅಪರ ಜಿಲ್ಲಾಧಿಕಾರಿ ಸಾಜೀದ್ ಮುಲ್ಲಾ, ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತಿತ್ತರರು ಇದ್ದರು.



- ಕಳಪೆ ಕಾಮಗಾರಿ ಮತ್ತು ಗುಣಮಟ್ಟದಲ್ಲಿ ಲೋಪವಾಗದಂತೆ ಅಧಿಕಾರಿಗಳು ಕ್ರಮವಹಿಸಿ
- ಜನರಿಗೆ ಯೋಜನೆಯ ಸೌಲಭ್ಯಗಳನ್ನು ಒದಗಿಸಿ

ಅಧಿಕಾರಿಗಳಿಗೆ ಸೂಚನೆ

ಜೆಜೆಎಂ ಕಾಮಗಾರಿಗಳು ವಿಳಂಬವಾಗುತ್ತಿರುವ ಬಗ್ಗೆ ಅಸಮಧಾನ ವ್ಯಕ್ತ ಪಡಿಸಿದ ಅವರು, ಗುತ್ತಿಗೆದಾರರು ಕಾಮಗಾರಿ ಪ್ರಾರಂಭಿಸಲು ವಿನಾಕಾರಣ ವಿಳಂಬ ಮಾಡಿದ್ದಲ್ಲಿ ಅಂತಹ ಗುತ್ತಿಗೆದಾರರಿಗೆ ನೋಟಿಸ್ ನೀಡಿ, ಕಪ್ಪು ಪಟ್ಟಿಗೆ ಸೇರಿಸುವಂತೆ ಸೂಚಿಸಿದ ಅವರು, ಅಗತ್ಯವಿರುವ ಕಡೆ ಆದ್ಯತೆ ಮೇಲೆ ಕುಡಿಯುವ ನೀರಿನ ಸಂಪರ್ಕ ಒದಗಿಸವಂತೆ ಸೂಚಿಸಿದರು.

ಹದಗೆಟ್ಟ ಕಾನೂನು ಸುವ್ಯವಸ್ಥೆ: ಕಾಗೇರಿ

ಅಂಕೋಲಾ: ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ರಾಜ್ಯದ ಕಾನೂನುಸುವ್ಯವಸ್ಥೆ ಸಂಪೂರ್ಣ ಹದಗೆಟ್ಟು ಹೋಗಿದ್ದು, ಉಕ ಜಿಲ್ಲೆಯ ಸಾಮಾಜಿಕ ಸ್ವಾಸ್ಥ್ಯ ಹಾಳಾಗುತ್ತಿದೆ ಅಕ್ರಮ ಚಟುವಟಿಗೆಳು ಹೆಚ್ಚುತ್ತಿವೆ ರಾಜಕೀಯ ಒತ್ತಡದಿಂದ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಕೆಲಸ ಮಾಡಲು ಸಾಧ್ಯವಾಗದಂತ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ಬಿಜೆಪಿ ಪ್ರಮುಖರೂ, ವಕೀಲರೂ ಆಗಿರುವ ನಾಗರಾಜ ನಾಯಕ ಅವರು ಪಟ್ಟಣದಲ್ಲಿ ನಡೆಸುತ್ತಿರುವ ಧರಣಿ ಸತ್ಯಾಗ್ರಹದ ಐದನೇ ದಿನದಂದು ಭೇಟಿ ನೀಡಿ ಅವರೊಂದಿಗೆ ಚರ್ಚಿಸಿದ ಸಂಸದರು ಜಿಲ್ಲಾಡಳಿತ,ತಾಲೂಕು ಆಡಳಿತಗಳಲ್ಲಿ ಅಧಿಕಾರಿಗಳು ಉಸಿರುಗಟ್ಟುವ ವಾತಾವರಣ ಸೃಷ್ಟಿಸುವುದು ಸರಿಯಲ್ಲ ಜಿಲ್ಲೆಯ ಸಂಸದನಾಗಿ ವಿಷಯವನ್ನು ಸರ್ಕಾರದ ಗಮನಕ್ಕೆತಂದು ಗೃಹ ಸಚಿವರಲ್ಲಿ ಚರ್ಚಿಸಲು ಪ್ರಯತ್ನ ನಡೆಸುವುದಾಗಿ ತಿಳಿಸಿದರು. ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ನ್ಯಾಯವಾದಿಯೊಬ್ಬರು ಐದು ದಿನಗಳಿಂದ ಧರಣಿ ನಡೆಸುತ್ತಿರುವುದು ಸಮಸ್ಯೆಯ ಗಂಭೀರತೆ ಅರ್ಥವಾಗುತ್ತದೆ ಅಂಕೋಲಾದ ಜನರು ಸುಸಂಸ್ಕೃತರು ಮತ್ತು ಹೊರಾಟಗಾರರಾಗಿದ್ದು, ಆಡಳಿತ ವ್ಯವಸ್ಥೆ ಮುಕ್ತವಾಗಿ ಒತ್ತಡ ರಹಿತವಾಗಿ ಕಾರ್ಯನಿರ್ವಹಿಸಲು ಸರ್ಕಾರ ಅವಕಾಶ ಮಾಡಿಕೊಡಬೇಕು ಎಂದ ಅವರು ನಾಗರಾಜ ನಾಯಕ ಅವರು ಸಂಘಟಕರ ಆಹ್ವಾನದ ಮೇಲೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಘಟನೆಗೆ ಕಾರಣ ಏನು ಎಂದು ತನಿಖೆಯಾಗಬೇಕು ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳಲು ಅಧಿಕಾರಿಗಳು ಹಿಂಜರಿಯುವಂತ ವಾತಾವರಣ ಇರಬಾರದು ಎಂದು ಹೇಳಿದರು. ಸರ್ಕಾರದಿಂದ ಯಾವುದೇ ಹೋರಾಟಗಳಿಗೆ ಸ್ಪಂದನೆ ಸಿಗುವುದು ಕಷ್ಟ ಆಗಿರುವುದರಿಂದಆರೋಗ್ಯದದೃಷ್ಟಿಯಿಂದ ಅನ್ನನಿರಶನ ಕೈಬಿಡುವಂತೆ ಸಂಸದ ಕಾಗೇರಿ ನಾಗರಾಜ ನಾಯಕ ಅವರಿಗೆ ಮನವಿ ಮಾಡಿದರು. ವಕೀಲ ನಾಗರಾಜ ನಾಯಕ ಮಾತನಾಡಿದರು.ಪ್ರಮುಖರುಗಳಾದ ಜಗದೀಶ ನಾಯಕ ಮೊಗಟ, ಉದಯ ವಾಮನ ನಾಯಕ,ಹನುಮಂತ ಗೌಡ,ಜಯಾ ನಾಯ್ಕ, ನಿತ್ಯಾನಂದ ಗಾಂವಕರ, ಗಣೇಶ ನಾಯ್ಕ, ವಕೀಲ ರಾಜು ಹರಿಕಂತ್ರ, ಬೀರಮ್ಮ ನಾಯಕ ಇದ್ದರು.

> ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರಕ ದಪ್ಪ ಚರ್ಮದ ಸರ್ಕಾರವಾಗಿದ್ದುಕಣ್ಣು, ಕಿವಿ, ಮೆದುಳು ಇಲ್ಲದಂತಾಗಿದೆ. ಜನಸಾಮಾನ್ಯರ ಕಷ್ಟ, ಸಮಸ್ಯೆಗಳು ಸರ್ಕಾರಕ್ಕೆ ಅರ್ಥವಾಗುತ್ತಿಲ್ಲ ರಾಜಕೀಯ ಒತ್ತಡದಿಂದ ಅಧಿಕಾರಿಗಳು ಮುಕ್ತವಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ ಅಕ್ರಮ ಚಟುವಟಿಕೆಗಳು ಹೆಚ್ಚಿವೆ.
> ■ ವಿಶ್ವೇಶ್ವರ ಹೆಗಡೆ ಕಾಗೇರಿ, ಸಂಸದರು ಉಕ





ಹೊನ್ನಾವರ: ತಾಲೂಕಿನ ಕುಳಕೋಡ ದೇವರಕಟ್ಟೆಯ ಶ್ರೀ ಮುದ್ರಿಯಲ್ಲಮ್ಮ ದೇವರ ನೂತನ ಶಿಲಾಬಿಂಬದ ಪ್ರತಿಷ್ಠಾ 19ನೇ ವರ್ಧಂತಿ ಉತ್ಸವ ಸೋಮವಾರ ವಿಜೃಂಭಣೆಯಿಂದ ನಡೆಯಿತು. ವಿವಿಧೆಡೆಯಿಂದ ಭಕ್ತರು ಆಗಮಿಸಿ ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು.ಮುದ್ರಿಯಲ್ಲಮ್ಮ ದೇವಸ್ಥಾನ ಟ್ರಸ್ಟ್ ಅಧ್ಯಕ್ಷ ಮಧುಕರ ಮೇಸ್ತ, ಉಪಾಧ್ಯಕ್ಷ ದಾಮೋದರ ಮೇಸ್ತ, ಕಾರ್ಯದರ್ಶಿ ಮಹೇಶ ಮೇಸ್ತ, ಖಜಾಂಚಿ ಉಮೇಶ ಮೇಸ್ತ, ಸದಸ್ಯರಾದ ಶಂಕರ ಮೇಸ್ತ, ಸೋಮಾ ಮೇಸ್ತ, ರುಕ್ಮಯ್ಯ ಮೇಸ್ತ, ಸತೀಶ ಮೇಸ್ತ, ದೇವಿದಾಸ ಮೇಸ್ತ, ಅನಂತ ಮೇಸ್ತ ಇತರರಿದ್ದರು.

ವಿ.ಎಸ್.ಪಾಟೀಲ ಅವಿರೋಧ ಆಯ್ಕೆ



ಮುಂಡಗೋಡ: ಅಖಿಲಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷರಾಗಿ ಯಲ್ಲಾಪುರ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ವಿ.ಎಸ್.ಪಾಟೀಲಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಮಹಾಸಭಾದ ಚುನಾವಣಾ ಅಧಿಕಾರಿ ಎಸ್.ಬಿ.ಹೂಗಾರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.
ಮಹಿಳಾ ಸದಸ್ಯೆಯರಾಗಿ ಅಮೃತೇಶ್ವರಿ ಹಿರೇಮಠ, ಭಾರತಿ ಮಡಿವಾಳರ, ಉಮಾ ಶೇಮುಡಿ, ಚೇತನಾ ಗೌಡರ, ಅನುಸೂಯ ಬಾಳೆಕಾಯಿ, ತನುಜಾ ಗೌಡರ, ಪ್ರಭಾವತಿ ಗೋವಿ, ಪ್ರೇಮಾ ತೋರದಕಟ್ಟಿ, ವೀಣಾ ಓಶಿಮಠ, ಅಶ್ವಿನಿ ಬಿದರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಾಮಾನ್ಯ ಸದಸ್ಯರಾಗಿ ಸಂಗಪ್ಪ ಕೋಳೂರು, ಮಹೇಶ ಕುಮಾರ ಕೆ ದಾವಣಗೆರೆ, ಗಣೇಶ್ ಎಲ್. ಸಣ್ಣಲಿಂಗಣ್ಣನವರು, ರಾಜಶೇಖರ್ ವಿ. ಗೌಡ, ರೇವಣ ಸಿದ್ದಪ್ಪ ಗೌಡಪಾಟೀಲ, ಪರಮೇಶ್ವರಯ್ಯ ಕಾನಳ್ಳಿಮಠ, ಗುಲಯ್ಯ ಹಿರೇಮಠ, ರವಿ ಪಾಟೀಲ, ಸುಧೀರ್ ಗೌಡರ್, ಮಂಜುನಾಥ ಪಾಟೀಲ, ಪ್ರವೀಣ ಪಾಟೀಲ್ ತಪ್ಪಾರ, ಶಿವಯೋಗಿ ಚ. ಹಂದ್ರಳಾ, ವಿಶ್ವೇಶ ಗೌಡ್ರು, ನಾಗನಗೌಡ ಶಿವನಗೌಡ್ರು, ಮಂಜುನಾಥ್ ಷಣ್ಮುಖ ಹಿರೇಮಠ, ಅಶೋಕ ಪಾಟೀಲ, ಮಡಿವಾಳಪ್ಪ ರುದ್ರಪ್ಪ ವಾಳೆ ಉಮೇಶ್ ಬಲಶೆಟ್ಟಿ, ಪ್ರಕಾಶ ಕಿತ್ತೂರ, ಸಂಗಮೇಶ ಬಿದರಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ನಿನ್ನ ಪ್ರೀತಿಯ ರಾಮಕೃಷ್ಣ ಪುಸ್ತಕ ಬಿಡುಗಡೆ

ಶಿರಸಿ: ಚಿತ್ರನಟ ನೀರ್ನಳ್ಳಿ ರಾಮಕೃಷ್ಣ ಅವರು ಶಿರಸಿಯ ಪ್ರಕೃತಿ ಸೌಂದರ್ಯದ ಸೊಬಗಿನಡಿ ಬಾಲ್ಯ ಕಳೆದಿದ್ದು, ಸಾಂಸ್ಕೃತಿಕ ಚಟುವಟಿಕೆಗಳಿಂದ ಪ್ರೇರಣೆ ಪಡೆದು, ಪುಟ್ಟಣ್ಣ ಕಣಗಾಲ್ ಅವರಂತಹ ನಿರ್ದೇಶಕರ ಅಡಿ ತಮ್ಮ ಕಲಾ ಪ್ರದರ್ಶನವನ್ನು ನೀಡಿ ಸೈ ಅನಿಸಿಕೊಂಡವರು. ಅವರೊಬ್ಬರು ಅಪರೂಪದ ಕಲಾವಿದ ಎಂದು ಸಾಹಿತಿ, ಸಾಂಸ್ಕೃತಿಕ ಚಿಂತಕ ಮಹಾಬಲಮೂರ್ತಿ ಕೊಡ್ಲೆಕೆರೆ ಬಣ್ಣಿಸಿದರು.
ಅವರು ಬೆಂಗಳೂರಿನ ಆನಂದ ರಾವ್ ವೃತ್ತದ ಬಳಿ ಇರುವ ಲೆಕ್ಕಾಧಿಕಾರಿಗಳ ಸಂಘದಲ್ಲಿ ಜರುಗಿದ ನಿನ್ನ ಪ್ರೀತಿಯ ರಾಮಕೃಷ್ಣ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.
ಹಿರಿಯ ಸಾಹಿತಿ, ಬಹುಭಾಷಾ ತಜ್ಞ, ಸಂಘಟಕ ಶಾ. ಮಂ ಕೃಷ್ಣರಾಯ ಅವರು, ಸಾಹಿತ್ಯ ಸೇವೆ ಮಾಡುತ್ತಿರುವ ಸಾಹಿತಿಗಳನ್ನು ಕಲಾವಿದರನ್ನು ಬೆಂಗಳೂರಿಗೆ ಕರೆಸಿ ಪರಿಚಯಿಸುತ್ತಿರುವುದು ಶ್ಲಾಘನೀಯ ಕಾರ್ಯಕ್ರಮ ಎಂದರು. ಇದಕ್ಕೂ ಮುನ್ನ ವಿದುಷಿ ಸೌಮ್ಯ ಪ್ರದೀಪ ಹೆಗಡೆ ಹಾಗೂ ಮನಸ್ವಿ ಭಂಡಾರಿ ಅವರು ಪ್ರಸ್ತುತಪಡಿಸಿದ ಭರತನಾಟ್ಯ ಕಾರ್ಯಕ್ರಮ ಸಭಿಕರಿಗೆ ಮುದ ನೀಡಿತು. ಕಲಾವಿದರನ್ನು ಆತ್ಮೀಯವಾಗಿ ಗೌರವಿಸಲಾಯಿತು.ನಂತರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ, ಡಾ. ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರು ಮಾತನಾಡಿದರು.
ಎಲ್.ಎನ್ ಹೆಗಡೆ, ಗೀತಾ ಹೆಗಡೆ, ರಾಜೇಶ್ವರಿ ಅಜ್ಜಿಬಳ, ಸಂಘದ ಸದಸ್ಯರುಗಳಾದ ಕೆಂಪೇಗೌಡ, ಎಚ್ ಕೆ ಮಧುಸೂದನ, ಎಸ್ ಜೆ ಕೃಷ್ಣಮೂರ್ತಿ, ನಿತ್ಯಾನಂದಪ್ಪ, ಗಿರೀಶ್, ಶ್ರೀವಾಣಿ, ವತ್ಸಲಾ ಆರ್, ಕವಿಗಳಾದ ಸಿದ್ದಣ್ಣ ಸೊನ್ನದ, ಕೊಪ್ಪರಂ ಅನ್ನಪೂರ್ಣ ಅಣಕಟ್ಟು ಮಧುಸೂಧನ್ ರಾವ್, ವಿಶ್ವೇಶ್ವರ ಗಾಯತ್ರಿ ಮುಂತಾದ ಗಣ್ಯರು ಉಪಸ್ಥಿತರಿದ್ದರು.





ಸಿದ್ದಾಪುರ: ತಾಲೂಕಿನ ದೊಡ್ಮನೆಯ ಪ್ರೌಢಶಾಲಾ ಆವರಣದಲ್ಲಿ ನಡೆದ ಪ್ರಥಮ ಯಕ್ಷೋತ್ಸವ ಕಾರ್ಯಕ್ರಮದಲ್ಲಿ ಪೆರ್ಡೂರು ಮೇಳ ಹಾಗೂ ಅತಿಥಿ ಕಲಾವಿದರ ಕೂಡುವಿಕೆಯಲ್ಲಿ ರುದ್ರಕೋಪ, ಮಾಗಧ ಹಾಗೂ ಭದ್ರಸೇನ ಯಕ್ಷಗಾನ ಪ್ರಸಂಗಗಳು ಪ್ರದರ್ಶನಗೊಂಡವು.

ಅಂಗನವಾಡಿ ಶೈಕ್ಷಣಿಕ ವರ್ಷಕ್ಕೆ ಸಂಭ್ರಮದ ಚಾಲನೆ

ಮುಂಡಗೋಡ: ತಾಲೂಕಿನ ಅಂಗನವಾಡಿ ಕೇಂದ್ರಗಳು ಸೋಮವಾರದಿಂದ ಪ್ರಾರಂಭೋತ್ಸವ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ಹಾಗೂ ಆವರಣದ ಮುಂದೆ ಬಣ್ಣ ಬಣ್ಣದ ರಂಗೋಲಿ ಬಿಡಿಸಿ ಅಲಂಕರಿಸಿದ ದೃಶ್ಯ ಕಂಡುಬಂತು.
ಕೆಲವು ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಹೂಗಳನ್ನು ನೀಡಿ ಸಿಹಿ ಹಂಚಿ ಬರಮಾಡಿಕೊಂಡರು. ಮಕ್ಕಳ ಆರಂಭವಾದ ಮೊದಲನೆ ದಿನ ಬಂದ ಮಕ್ಕಳಿಂದ ಅಂಗನವಾಡಿ ಕೇಂದ್ರಗಳಲ್ಲಿ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಯಿತು.



> ತಾಲೂಕಿನಲ್ಲಿ 186 ಅಂಗನವಾಡಿ ಕೇಂದ್ರಗಳು ಇಂದಿನಿಂದ ಆರಂಭಗೊಂಡಿವೆ. ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಗಳವರೆಗೂ ಕೇಂದ್ರಗಳು ತೆರೆದಿರುತ್ತದೆ. ಪ್ರಾರಂಭೋತ್ಸವದ ದಿನವಾದ ಸೋಮವಾರ ಮಕ್ಕಳು ಉತ್ಸಾಹದಿಂದ ಅಂಗನವಾಡಿ ಕೇಂದ್ರಗಳಿಗೆ ಆಗಮಿಸಿದ್ದಾರೆ.
> ■ ಸಂಜೀವ ಸದಲಗಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ

ಪ್ರಾರಂಭೋತ್ಸವದ ದಿನವಾದ ಸೋಮವಾರ ಮಕ್ಕಳ ಜೊತೆ ತಾಯಂದಿರು ಉಪಸ್ಥಿತರಿದ್ದರು.

ಕಾಮಗಾರಿ ಶೀಘ್ರ ಪೂರ್ಣಗೊಳಿಸಿ: ಜಿ.ಮಹೇಶ

ಭಟ್ಕಳ: ಮಳೆಗಾಲ ಇನ್ನು ಕೆಲವೇ ದಿನಗಳಲ್ಲಿ ಆರಂಭಗೊಳ್ಳುವುದರಿಂದತಾಲೂಕಿನಲ್ಲಿನಡೆಯುತ್ತಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ತ್ವರಿತವಾಗಿ ಮಾಡುವಂತೆ ಸಹಾಯಕ ಆಯುಕ್ತ ಜಿ.ಮಹೇಶ ಅಧಿಕಾರಿಗಳಿಗೆ ಸೂಚಿಸಿದರು.
ತಾಲೂಕು ಕಚೇರಿಯಲ್ಲಿ ಸೋಮವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಟ್ಟಣ ವ್ಯಾಪ್ತಿಯಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಪ್ರಸ್ತುತ ಸ್ಥಿತಿ, ಬಾಕಿ ಉಳಿದಿರುವ ಕಾಮಗಾರಿಗಳು, ಮುಂಗಾರು ಆರಂಭಕ್ಕೂ ಮುನ್ನ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳು ಹಾಗೂ ಸಾರ್ವಜನಿಕರಿಂದ ಬಂದಿರುವ ದೂರುಗಳ ಕುರಿತು ಸವಿಸ್ತಾರ ಚರ್ಚೆ ನಡೆಯಿತು.
ಹೆದ್ದಾರಿ ಕಾಮಗಾರಿಯಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ಶೀಘ್ರ ಪರಿಹರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದ ಸಹಾಯಕ ಆಯುಕ್ತರು, ಮಳೆ ನೀರು ಸರಾಗವಾಗಿ ಹರಿದು ಹೋಗಲು ಸಮರ್ಪಕ ಚರಂಡಿ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿದರು. ನೀರು ನಿಲ್ಲುವ ಪ್ರದೇಶಗಳನ್ನು ಗುರುತಿಸಿ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.ಸಭೆಯ ಬಳಿಕ ಸಹಾಯಕ ಆಯುಕ್ತರ ನೇತೃತ್ವದಲ್ಲಿ ಅಧಿಕಾರಿಗಳು ಹೆದ್ದಾರಿ ಕಾಮಗಾರಿ ನಡೆಯುತ್ತಿರುವ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಚತುಷ್ಪಥ ಕಾಮಗಾರಿ ನಿಧಾನಗತಿಯಲ್ಲಿರುವುದು ಹಾಗೂ ಮುಂಗಾರು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಲ್ಲಿ ಆತಂಕ ಹೆಚ್ಚಾಗಿದೆ. ಹೆದ್ದಾರಿ ಪಕ್ಕದಲ್ಲಿ ಸಮರ್ಪಕ ಮಳೆ ನೀರು ಹರಿವಿನ ವ್ಯವಸ್ಥೆ ಇಲ್ಲ ಎಂಬ ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಈ ಪರಿಶೀಲನೆ ನಡೆಸಲಾಯಿತು. ಮಳೆ ಆರಂಭವಾದರೆ ಹೆದ್ದಾರಿಯಲ್ಲಿ ನೀರು ನಿಲ್ಲುವ ಸಾಧ್ಯತೆ ಇರುವುದರ ಜತೆಗೆ ಸಮೀಪದ ಅಂಗಡಿ ಹಾಗೂ ಮನೆಗಳಿಗೆ ನೀರು ನುಗ್ಗುವ ಭೀತಿ ಇದೆ ಎಂದು ಸ್ಥಳೀಯರು ಅಧಿಕಾರಿಗಳ ಗಮನಕ್ಕೆ ತಂದರು.ಕಾಮಗಾರಿ ವಿಳಂಬವಾಗುತ್ತಿರುವುದಕ್ಕೆ ಸಾರ್ವಜನಿಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಮುಂಗಾರು ಆರಂಭಕ್ಕೂ ಮುನ್ನವೇ ಕಾಮಗಾರಿ ಪೂರ್ಣಗೊಳಿಸುವಂತೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರನ್ನು ಒತ್ತಾಯಿಸಿದರು. ಮಳೆ ಬಂದರೆ ಯಾವುದೇ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಹದಿನೈದು ದಿನಗಳಲ್ಲಿ ತ್ವರಿತವಾಗಿ ಹೆದ್ದಾರಿ ಕಾಮಗಾರಿ ಮಾಡಿ ಮುಗಿಸಬೇಕು. ಇಲ್ಲದಿದ್ದಲ್ಲಿ ಜನರು ತೊಂದರೆ ಅನುಭವಿಸುವ ಬಗ್ಗೆ ಅಧಿಕಾರಿಗಳ ಗಮನಕ್ಕೆ ತರಲಾಯಿತು. ತಹಶೀಲ್ದಾರ್ ನಾಗೇಂದ್ರ ಕೋಳ ಶೆಟ್ಟಿ, ಡಿವೈಎಸ್ಪಿ ಬಿ. ಗಿರೀಶ್, ನಗರಸಭೆ ಪೌರಾಯುಕ್ತ ಬಾಬಾಸಾಹೇಬ್ ಮಾನೆ, ಐಆರ್‌ಬಿ ಅಧಿಕಾರಿಗಳು ಹಾಗೂ ತಂಝೀಮ್ ಪ್ರತಿನಿಧಿಗಳು ಇದ್ದರು.



- ಸಂಚಾರಕ್ಕೆ ಯಾವುದೇ ಅಡಚಣೆ ಉಂಟಾಗದಂತೆ ಕಾಮಗಾರಿಯನ್ನು ವೇಗಗೊಳಿಸಿ
- ನೀರು ನಿಲ್ಲುವ ಪ್ರದೇಶಗಳನ್ನು ಗುರುತಿಸಿ ತಕ್ಷಣ ಕ್ರಮ ಕೈಗೊಳ್ಳಿ

ರಮಾನಂದ ನಾಯಕ ನಿಧನಕ್ಕೆ ಸಂಸದ ಕಾಗೇರಿ ಸಂತಾಪ



ಅಂಕೋಲಾ: ಅಭಿವೃದ್ಧಿ ಪರ ಆಸಕ್ತಿ, ಬಡ ಜನರ ಕುರಿತಾದ ಅಪಾರ ಕಾಳಜಿ ಹೊಂದಿದ್ದ ರಮಾನಂದ ನಾಯಕ ಅವರ ಅನಿರೀಕ್ಷಿತ ನಿಧನದಿಂದ ಒಬ್ಬ ನೇರ ನುಡಿಯ ಧೀಮಂತ ನಾಯಕರನ್ನು ಕಳೆದು ಕೊಂಡಂತಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.
ತಾಲೂಕಿಗೆ ಭೇಟಿ ನೀಡಿ ದಿವಂಗತ ರಮಾನಂದ ನಾಯಕ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿದ ಅವರು, ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿ ಹಲವಾರು ಸಂಘ ಸಂಸ್ಥೆಗಳ ಮಾರ್ಗದರ್ಶಕರಾಗಿ ರಮಾನಂದ ನಾಯಕ ಅವರ ಕಾರ್ಯ ಸದಾ ಸ್ಮರಣೀಯ ಎಂದರು.ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ತಮ್ಮನ್ನು ಸದಾ ತೊಡಗಿಸಿಕೊಂಡಿದ್ದ ರಮಾನಂದ ನಾಯಕರು ಒಂದು ಪಕ್ಷದಲ್ಲಿದ್ದರೂ ಪಕ್ಷಾತೀತವ್ಯಕ್ತಿತ್ವದವರಾಗಿದ್ದರುಎಂದ ಕಾಗೇರಿ ಅಂಕೋಲಾ ಕ್ಷೇತ್ರಕ್ಕೆ ಮೂರು ಅವಧಿಗೆ ತಾವು ಶಾಸಕರಾಗಿದ್ದ ಸಂದರ್ಭದಲ್ಲಿ ಸೂಕ್ತ ಸಲಹೆ, ಸೂಚನೆ ಮಾರ್ಗದರ್ಶನದ ಮೂಲಕ ರಮಾನಂದ ನಾಯಕ ಅವರು ಸಹಕಾರ ನೀಡಿದ್ದರು ಎಂದರು. ನಾಯಕರ ಅಭಿನಂದನಾ ಸಮಾರಂಭಕ್ಕೆ ಸಿದ್ಧತೆ ನಡೆಯುತ್ತಿರುವ ನಡುವೆ ಅವರು ಅಗಲಿದ್ದು ದುಃಖದ ವಿಚಾರವಾಗಿದ್ದು ಅವರ ಅಪೇಕ್ಷೆಯ ನಾಡನ್ನು ಕಟ್ಟಲು ಎಲ್ಲರೂ ಒಂದಾಗಿ ಕೆಲಸ ಮಾಡಬೇಕಿದೆ ಎಂದು ಕಾಗೇರಿ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು. ಸ್ಥಳೀಯ ಬಿಜೆಪಿಯ ಪ್ರಮುಖರು ಉಪಸ್ಥಿತರಿದ್ದರು.

ಸಾಣಿ ಅಮ್ಮ ದೇವಿಯ ಅಮೃತ ಮಹೋತ್ಸವ ಸಂಪನ್ನ



ಕುಮಟಾ: ಪಟ್ಟಣದ ಹೆರವಟ್ಟಾದಲ್ಲಿ ದಕ್ಷಿಣೋಭಿಮುಖವಾಗಿ ನೆಲೆಸಿರುವ ಶ್ರೀ ಸಾಣಿ ಅಮ್ಮ ದೇವಸ್ಥಾನದ ಅಮೃತ ಮಹೋತ್ಸವ ಸಂಭ್ರಮ ವಿಜೃಂಭಣೆಯಿಂದ ಸಂಪನ್ನಗೊಂಡಿತು. ಸಾವಿರಾರು ಭಕ್ತರು ಶ್ರೀದೇವಿಗೆ ಯಥಾಸಕ್ತಿ ಸೇವೆ ಸಲ್ಲಿಸಿ, ಪುನೀತರಾದರು.
ಪಟ್ಟಣದ ಹೆರವಟ್ಟಾದ ಸಾಣಿ ಅಮ್ಮ ದೇವಸ್ಥಾನದ ಅಮೃತ ಮಹೋತ್ಸವ ಸಂಭ್ರಮವು ಮೇ 7ರಿಂದ ಆರಂಭವಾಗಿ ಮೇ 11ರ ಸೋಮವಾರ ಮಹಾ ಪೂರ್ಣಾಹುತಿಯೊಂದಿಗೆ ಸಂಪನ್ನಗೊಂಡಿತು.ಬೆಳಗ್ಗೆಯಿಂದಲೇ ಭಕ್ತರು ಸರದಿಯಲ್ಲಿ ಸಾಗಿ ದೇವರ ದರ್ಶನ ಪಡೆದು, ಹಣ್ಣು ಕಾಯಿ ಪೂಜಾ ಸೇವೆ ಸಲ್ಲಿಸಿದರು. 108 ಬ್ರಹ್ಮ ಕಲಶಾಭಿಷೇಕ, ಪ್ರಸನ್ನ ಚಂಡಿಕಾ ಹೋಮದ ಬಳಿಕ ಮಹಾ ಪೂರ್ಣಾಹುತಿ ನಡೆಯಿತು.
ಅಮೃತಮಹೋತ್ಸವಸಮಿತಿಯ ಗೌರವಾಧ್ಯಕ್ಷ ವೆಂಕಟೇಶ ನಾಯಕ , ಕಾರ್ಯದರ್ಶಿ ಬಿ.ಎನ್ ಕೆ.ನಾಗರಾಜ, ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ನಾಗಪ್ಪ ಗೌಡ, ಕಾರ್ಯದರ್ಶಿ ಭಗವಾನ ನಾಯ್ಕ ಸೇರಿದಂತೆ ಮಂಡಳಿ ಸಮಿತಿಯವರು ವಸ್ತ್ರ ಜೋಡುಗಾಯಿ ಸೇರಿದಂತೆ ಫಲಪುಷ್ಪವನ್ನು ಹೋಮ ಕುಂಡಕ್ಕೆ ಅರ್ಪಿಸಿದರು. ಬಳಿಕ ಸಾಣಿ ಅಮ್ಮ ದೇವಿಗೆ ಮಹಾ ಮಂಗಳಾರತಿ ನಡೆಯಿತು. ಸಾವಿರಾರು ಭಕ್ತರು ಈ ಪುಣ್ಯದ ಗಳಿಗೆಯನ್ನು ಕಣ್ತುಂಬಿಕೊಂಡರು. ಬಳಿಕ ತೀರ್ಥ ಪ್ರಸಾಧ ವಿತರಣೆ ನಡೆಯಿತು.
ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ರಾಜಗೋಪಾಲ ಅಡಿ ಗುರೂಜಿ ಅವರು ದೇವಸ್ಥಾನಕ್ಕೆ ಆಗಮಿಸಿ, ದೇವಿಯ ದರ್ಶನ ಪಡೆದರು. ಅವರಿಗೆ ಆಡಳಿತ ಮಂಡಳಿಯ ಪರವಾಗಿ ಗೌರವಿಸಲಾಯಿತು. ಅದರಂತೆ ಮಾಜಿ ಶಾಸಕಿ ಶಾರದಾ ಮೋಹನ ಶೆಟ್ಟಿ, ಕೆಪಿಸಿಸಿ ಮುಖಂಡ ಮಂಜುನಾಥ ಎಲ್ ನಾಯ್ಕ ಸೇರಿದಂತೆ ಅನೇಕ ಗಣ್ಯರು ಭೇಟಿ ನೀಡಿ, ಶ್ರೀದೇವಿಯ ದರ್ಶನ ಪಡೆದು ಆಡಳಿತ ಮಂಡಳಿಯವರಿಂದ ಗೌರವಕ್ಕೆ ಪಾತ್ರರಾದರು. ಮಧ್ಯಾಹ್ನ ನಡೆದ ಅನ್ನ ಸಂತರ್ಪಣೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಪ್ರಸಾದ ಭೋಜನ ಸ್ವೀಕರಿಸಿ, ದೇವಿಯ ಕೃಪೆಗೆ ಪಾತ್ರರಾದರು.

ಕಿರುಸುದ್ದಿ

ಗಾಯಗೊಂಡ ವ್ಯಕ್ತಿಗೆ ಶಾಸಕರಿಂದ ಉಪಚಾರ



ಹಾನಗಲ್ಲ: ತಾಲೂಕಿನ ಹೊಂಕಣ ಗ್ರಾಮದ ಬಳಿ ಎರಡು ಬೈಕ್‌ಗಳ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿಯೊಬ್ಬರಿಗೆ ಉಪಚರಿಸಿ, ತಕ್ಷಣವೇ ತಮ್ಮದೇ ವಾಹನದಲ್ಲಿ ಹಾನಗಲ್ ತಾಲೂಕಾಸ್ಪತ್ರೆಗೆ ದಾಖಲಿಸುವ ಮೂಲಕ ಶಾಸಕ ಶ್ರೀನಿವಾಸ ಮಾನೆ ಮಾನವೀಯತೆ ಮೆರೆದಿದ್ದಾರೆ. ಭಾನುವಾರ ಸಂಜೆ ಹೊಂಕಣದ ಬಳಿ ನಡೆದ ಬೈಕ್ ಅಪಘಾತದಲ್ಲಿ ಶಿವಪುತ್ರಪ್ಪ ದಳವಾಯಿ ಎಂಬುವರು ಗಾಯಗೊಂಡಿದ್ದರು. ಆದೇ ಮಾರ್ಗದಲ್ಲಿ ಸಂಚರಿಸುತ್ತಿದ್ದ ಶಾಸಕ ಶ್ರೀನಿವಾಸ ಮಾನೆ ಕೂಡಲೇ ವಾಹನ ನಿಲ್ಲಿಸಿ, ಗಾಯಾಳುವಿನ ಆರೋಗ್ಯ ಸ್ಥಿತಿ ವಿಚಾರಿಸಿ, ಉಪಚರಿಸಿ ಧೈರ್ಯ ಹೇಳಿದರು. ಅಲ್ಲದೇ ವೈದ್ಯರಿಗೆ ಕರೆ ಮಾಡಿ ಗಾಯಾಳುವಿಗೆ ಅಗತ್ಯ ಚಿಕಿತ್ಸೆ ನೀಡುವಂತೆ ಸೂಚಿಸಿದರು. ಶಾಸಕ ಶ್ರೀನಿವಾಸ ಮಾನೆ ಅವರ ಮಾನವೀಯ ನಡೆಗೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಅರ್ಜಿ ಆಹ್ವಾನ

ರಾಣೇಬೆನ್ನೂರ: ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ ನೂಕಾಪುರ ಹಾಗೂ ರಾಣೇಬೆನ್ನೂರ ಇಲ್ಲಿ 1 ರಿಂದ 5ತರಗತಿಗಳಲ್ಲಿ ಖಾಲಿ ಇರುವ ಸ್ಥಾನಗಳಿಗೆ ಹಾಗೂ ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆ ಮಾಕನೂರ ಇಲ್ಲಿ 1 ರಿಂದ 7ನೇ ತರಗತಿಗಳಲ್ಲಿ ಖಾಲಿ ಇರುವ ಸ್ಥಾನಗಳಿಗೆ 2026–27ನೇ ಸಾಲಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗದ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಆಯಾ ಶಾಲೆಗಳಲ್ಲಿ ಹಾಗೂ ಸಹಾಯಕ ನಿರ್ದೇಶಕರ ಕಾರ್ಯಾಲಯ ರಾಣೇಬೆನ್ನೂರ ಇಲ್ಲಿ ಮೇ 5ರಿಂದ ಅರ್ಜಿಗಳನ್ನು ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಮೇ 25ರಂದು 5.30 ರೊಳಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ ರಾಣೇಬೆನ್ನೂರ ಇಲ್ಲಿ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಕಾವ್ಯಶ್ರೀ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಮನ ಸೆಳೆದ ಚಂಡೆ ವಾದ್ಯ ಮೇಳ

ಗದಗ: ಜಿಲ್ಲೆಯ ಮುಂಡರಗಿ ತಾಲೂಕಿನ ಡಂಬಳದಲ್ಲಿ ಕಪ್ಪತ್ತಮಲ್ಲೇಶ್ವರ ಟ್ರಸ್ಟ್ ಕಮೀಟಿ ಸಹಯೋಗದಲ್ಲಿ ಹೇಮರಡ್ಡಿ ಮಲ್ಲಮ್ಮ ಸೇವಾ ಸಮಿತಿ ವತಿಯಿಂದ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮನ 604ನೇ ಜಯಂತ್ಯೋತ್ಸವ ಸಡಗರ ಸಂಭ್ರಮದಿಂದ ಆದ್ದೂರಿಯಾಗಿ ಆಚರಣೆ ಮಾಡಲಾಯಿತು. ಗ್ರಾಮದ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನದಿಂದ ಪ್ರಾರಂಭವಾದ ಮೆರವಣಿಗೆಯಲ್ಲಿ ಶಿವಶಕ್ತಿ ಚಂಡೆ ವಾದ್ಯ ಹಾಗೂ ನೂರಾರು ಮಹಿಳೆಯರು ಕುಂಭ ಮೇಳದಲ್ಲಿ ಭಾಗವಹಿಸಿದ್ದರು. ಬಿಸಿಲಿನ ತಾಪದ ಹಿನ್ನೆಲೆಯಲ್ಲಿ ಶ್ರೀಹೇಮರಡ್ಡಿ ಮಲ್ಲಮ್ಮ ತಾಯಿಯ ಭಾವಚಿತ್ರ ಮೆರವಣಿಗೆ ಹೋಗುವ ರಸ್ತೆಯ ಮಾರ್ಗದಲ್ಲಿ ಟ್ಯಾಂಕರ ಮೂಲಕ ನೀರು ಸಿಂಪಡಿಸಲಾಗಿತ್ತು. ಮೆರವಣಿಗೆಯಲ್ಲಿ ಭಕ್ತರಿಗೆ ಸಾರ್ವಜನಿಕರಿಗೆ ಶುದ್ಧ ಕುಡಿಯುವ ನೀರು, ಮಜ್ಜಿಗೆ ಮುಂತಾದ ತಂಪು ಪಾನಿಯಗಳ ವ್ಯವಸ್ಥೆಯನ್ನು ಕಮೀಟಿಯವರು ಅಚ್ಚುಕಟ್ಟಾಗಿ ನಿರ್ವಹಣೆ ಮಾಡಿದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮರಳಿ ಹೇಮರಡ್ಡಿ ಮಲ್ಲಮ್ಮ ದೇವಸ್ಥಾನಕ್ಕೆ ಮೆರವಣಿಗೆ ತಲುಪಿತು. ಮೆರವಣಿಗೆಯಲ್ಲಿ ವಿಶೇಷವಾಗಿ ಶಿವಶಕ್ತಿ ಚಂಡೆ ವಾದ್ಯ ಗಮನ ಸೆಳೆಯಿತು. ಕುಂಭ ಹೊತ್ತ ನೂರಾರು ಮಹಿಳೆಯರು ಬಿರು ಬಿಸಿಲಿನಲ್ಲಿಯು ಮೆರವಣಿಗೆಯಲ್ಲಿ ಅತ್ಯಂತ ಉತ್ಸಾಹ ಮತ್ತು ಸಂಭ್ರಮದಿಂದ ಪಾಲ್ಗೊಂಡಿದ್ದರು. ಅನ್ನಪ್ರಸಾದವನ್ನು ನೂರಾರು ಸಾರ್ವಜನಿಕರು ಭಕ್ತರು ಮಹಿಳೆಯರು ಪ್ರಸಾದ ಸವಿದರು. ಪತ್ತಮಲ್ಲೇಶ್ವರ ಸೇವಾ ಕಮೀಟಿ ಹಾಗೂ ಹೇಮರಡ್ಡಿ ಮಲ್ಲಮ್ಮ ಜಯಂತಿಯ ಸೇವಾ ಸಮಿತಿ ಅಧ್ಯಕ್ಷ ಮಲ್ಲಿಕಾರ್ಜುನ ಪ್ಯಾಟಿ, ಉಪಾಧ್ಯಕ್ಷ ಬಸವರಾಜ ಶಿರೋಳ, ಕಾರ್ಯದರ್ಶಿ ಶಿವಕುಮಾರ ಸಣ್ಣಪ್ಯಾಟಿ, ಮುತ್ತಣ್ಣ ಕೊಂತಿಕಲ್, ಮಲ್ಲೇಶ ಚಿಕರಡ್ಡಿ, ಮಹೇಶ ರಾಯರಡ್ಡಿ, ಮಹೇಶ ಗಡಗಿ, ವಿ.ಟಿ.ಮೇಟಿ, ಬಸವರಡ್ಡಿ ಬಂಡಿಹಾಳ, ವಸಂತ ಜಂತ್ಲಿ, ಇದ್ದರು.



ಹಾನಗಲ್ಲ: ಇಲ್ಲಿನ ಪ್ರವಾಸಿ ಮಂದಿರದಲ್ಲಿ ಭಾನುವಾರ ರಾತ್ರಿ ಹಾನಗಲ್ಲ ಮತ್ತು ಅಕ್ಕಿಆಲೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಸಚಿವ ಡಿ.ಸುಧಾಕರ್‌ಗೆ ಸಂತಾಪ ಸಲ್ಲಿಸಿದರು.

ಸಚಿವ ಸುಧಾಕರ್‌ಗೆ ಸಚಿವ ಜಾರಕಿಹೊಳಿ ಸಂತಾಪ

ಹಾನಗಲ್ಲ: ಜಾತಿ, ಮತ ಮೀರಿ 4 ಬಾರಿ ಚುನಾವಣೆಯಲ್ಲಿ ಗೆಲುವು ಕಂಡಿದ್ದ ಸಚಿವ ಡಿ.ಸುಧಾಕರ್ ಅವರ ಅಕಾಲಿಕ ನಿಧನದಿಂದ ರಾಜಕೀಯ ಕ್ಷೇತ್ರಕ್ಕೆ ಹಾನಿಯಾಗಿದೆ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು. ಇಲ್ಲಿನ ಪ್ರವಾಸಿ ಮಂದಿರದಲ್ಲಿ ಭಾನುವಾರ ರಾತ್ರಿ ಹಾನಗಲ್ಲ ಮತ್ತು ಅಕ್ಕಿಆಲೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮೌನಾಚರಣೆ ಸಲ್ಲಿಸಿದ ಅವರು ರಾಜಕೀಯ ಚದುರಂಗದಲ್ಲಿ ಮೊದಲ ಹೆಜ್ಜೆಯಲ್ಲೇ ಯಶಸ್ಸು ಕಂಡಿದ್ದ ಸುಧಾಕರ್ ಅಪಾರ ಜನಪ್ರಿಯತೆಗಳಿಸಿದ್ದರು. ಸಾರ್ವಜನಿಕ ಸೇವೆಯ ಬಗ್ಗೆ ಅವರಲ್ಲಿ ಅಪಾರ ಕಾಳಜಿ, ಕಳಕಳಿ ಇತ್ತು. ಅಂಥವರು ಹೆಚ್ಚು ಕಾಲ ಜನರ ನಡುವೆ ಇರಬೇಕಿತ್ತು ಎಂದರು. ಶಾಸಕ ಶ್ರೀನಿವಾಸ ಮಾನೆ ಮಾತನಾಡಿ, ಅಲ್ಪಸಂಖ್ಯಾತ ಜೈನ ಸಮುದಾಯವನ್ನು ಪ್ರತಿನಿಧಿಸುತ್ತಿದ್ದ ಡಿ.ಸುಧಾಕರ್ ಅವರ ಸಮುದಾಯದ ಮತಗಳು ಬೆರಳೆಣಿಕೆಯಷ್ಟು ಇದ್ದರೂ ಗೆದ್ದು ಬರುತ್ತಿದ್ದರು. ವಿಶೇಷವಾಗಿ ರೈತರು, ಬಡವರ ಪರವಾಗಿ ಸಾಕಷ್ಟು ಕೆಲಸ ಮಾಡಿದ್ದರು. ಅವರ ಅಕಾಲಿಕ ನಿಧನದ ದುಃಖ ತಡೆದುಕೊಳ್ಳುವ ಶಕ್ತಿಯನ್ನು ಭಗವಂತ ಕುಟುಂಬಕ್ಕೆ ಹಾಗೂ ಅಭಿಮಾನಿಗಳಿಗೆ ನೀಡಲಿ ಎಂದರು. ಶಿಗ್ಗಾಂವಿ, ಸವಣೂರು ಕ್ಷೇತ್ರದ ಶಾಸಕ ಯಾಸೀರ್ ಖಾನ ಪಠಾಣ, ಮಾಜಿ ಸಚಿವ ಅಮರೇಗೌಡ ಬಯ್ಯಾಪೂರ, ಮುಖಂಡ ಆನಂದಸ್ವಾಮಿ ಗಡ್ಡದೇವರಮಠ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ದರ್ಶನ ಲಮಾಣಿ, ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮಂತಪ್ಪ ಮರಗಡಿ, ಮಂಜು ಗೊರಣ್ಣನವರ ಸೇರಿದಂತೆ ಇದ್ದರು.



ಗದಗ: ಜಿಲ್ಲೆಯ ಮುಂಡರಗಿ ತಾಲೂಕಿನ ಡಂಬಳದಲ್ಲಿ ಕಪ್ಪತ್ತಮಲ್ಲೇಶ್ವರ ಟ್ರಸ್ಟ್ ಕಮೀಟಿ ಸಹಯೋಗದಲ್ಲಿ ಹೇಮರಡ್ಡಿ ಮಲ್ಲಮ್ಮ ಸೇವಾ ಸಮಿತಿ ವತಿಯಿಂದ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮನ 604ನೇ ಜಯಂತ್ಯೋತ್ಸವ ಸಡಗರ ಸಂಭ್ರಮದಿಂದ ಅದ್ದೂರಿಯಾಗಿ ಆಚರಣೆ ಮಾಡಲಾಯಿತು.

64 ಶಾಲೆಗಳ ವಿಲೀನಕ್ಕೆ ಸಿದ್ಧತೆ

▸ ಕಿರಣ ಮಾಸಣಗಿ



ದಿಗಂತ ವಿಶೇಷ

ಹಾವೇರಿ: ಗುಣಮಟ್ಟದ ಶಿಕ್ಷಣ ನೀಡುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಹೊಸದಾಗಿ 18 ಕೆಪಿಎಸ್ (ಕರ್ನಾಟಕ ಪಬ್ಲಿಕ್ ಸ್ಕೂಲ್) ಆರಂಭಿಸಲು ತಯಾರಿ ನಡೆಸುತ್ತಿರುವುದು ಸಂತಸದ ಸಂಗತಿಯಾದರೆ, ಇದರ ಜೊತೆಯಲ್ಲೇ 64 ಸರ್ಕಾರಿ ಶಾಲೆಗಳನ್ನು ವಿಲೀನ ಮಾಡಲು ಶಿಕ್ಷಣ ಇಲಾಖೆ ಪಟ್ಟಿ ಸಿದ್ಧಪಡಿಸಿರುವುದು ಜಿಲ್ಲೆಯ ಜನರಲ್ಲಿ ಹಾಗೂ ಹಲವು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.

ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟ ಕುಸಿಯುತ್ತಿರುವ ಕಾರಣಕ್ಕೆ ಕೆಪಿಎಸ್ ಶಾಲೆಗಳನ್ನು ಸರ್ಕಾರ ಆರಂಭಿಸಲು ಮುಂದಾಗಿದೆ. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳನ್ನು ಕೆಪಿಎಸ್ ಶಾಲೆಯಲ್ಲಿ ವಿಲೀನಗೊಳಿಸಿ ಗುಣಮಟ್ಟದ ಮತ್ತು ಸ್ಪರ್ಧಾತ್ಮಕತೆ ಹೆಚ್ಚಿಸುವುದು ಇದರ ಉದ್ದೇಶವಾಗಿದೆ. ಆದರೆ, ಈಗ ಹಲವು ಕನ್ನಡ ಶಾಲೆಗಳು ಖಾಯಂ ಆಗಿ ಮುಚ್ಚುವ ಭೀತಿಯನ್ನು ಎದುರಿಸುವಂತಾಗಿದೆ. ಶಾಲೆಗಳ ವಿಲೀನ ಕ್ರಮಕ್ಕೆ ಜಿಲ್ಲೆಯ ಹಲವು ಗ್ರಾಮಗಳಲ್ಲಿ ವಿರೋಧ ವ್ಯಕ್ತವಾಗುತ್ತಿದ್ದು, ಗ್ರಾಮಸ್ಥರು ರಸ್ತೆಗೆ ಇಳಿದು ಪ್ರತಿಭಟನೆಗೆ ಮುಂದಾಗಿದ್ದಾರೆ.

ಜಿಲ್ಲೆಯಲ್ಲಿಯೂ 18 ಕೆಪಿಎಸ್ ಶಾಲೆಗಳು ಆರಂಭವಾಗುತ್ತಿದ್ದು, ಈ ಶಾಲೆಗಳ ಸುತ್ತಮುತ್ತಲಿನ ಅರ್ಧ ಕಿಮೀನಿಂದ 5 ಕಿಮೀ ವ್ಯಾಪ್ತಿಯೊಳಗಿನ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಇಲಾಖೆಯ ಹಿರಿಯ ಅಧಿಕಾರಿಗಳು ಒಪ್ಪಿಗೆ ನೀಡುತ್ತಿದ್ದಂತೆ, ಶಾಲೆಗಳು ವಿಲೀನವಾಗಲಿವೆ. 5ಕಿ.ಮೀ.ನಿಂದ 12 ಕಿಮೀ ದೂರದಲ್ಲಿರುವ ಸರ್ಕಾರಿ ಶಾಲೆಗಳನ್ನು, ಕೆಪಿಎಸ್ ಜೊತೆ ವಿಲೀನ ಮಾಡುವ ಬಗ್ಗೆಯೂ ಚಿಂತನೆ ನಡೆಸಲಾಗಿದೆ. ಆದರೆ, ಗ್ರಾಮೀಣ ಭಾಗದಲ್ಲಿ ಇದು ಮಕ್ಕಳಿಗೆ ಹೋಗಿ ಬರಲು ಸಮಸ್ಯೆಯಾಗುತ್ತದೆ ಎಂಬ ಕಾರಣಕ್ಕೆ ಅಷ್ಟು ದೂರದ ಶಾಲೆಗಳ ವಿಲೀನ ಪ್ರಕ್ರಿಯೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ. ಆದರೂ ಕೆಲವು ಕಡೆಗಳಲ್ಲಿ 12 ಕಿಮೀ ದೂರವಿರುವ ಶಾಲೆಗಳನ್ನು ವಿಲೀನ ಮಾಡಲು ಒಪ್ಪಿಗೆ ಸಿಕ್ಕಿರುವುದಕ್ಕೆ ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಒಂದು ಶಾಲೆ ಆರಂಭಿಸಿ ನಾಲ್ಕು ಶಾಲೆ ಬಂದ್ ಮಾಡುವುದರಿಂದ ಏನು ಪ್ರಯೋಜನ ಎಂದು ಪ್ರಶ್ನಿಸುತ್ತಿದ್ದಾರೆ. ಸರ್ಕಾರ ಕನ್ನಡ ಶಾಲೆಗಳನ್ನು ಉಳಿಸುವುದನ್ನು ಬಿಟ್ಟು ಈ ರೀತಿ ಮುಚ್ಚಲು ಹೊರಟಿರುವುದು ಸರಿಯಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ.

ಶಿಗ್ಗಾವಿ ತಾಲೂಕಿನ ಸೂರಪಗಟ್ಟಿ ಗ್ರಾಮದಲ್ಲಿ ಇತ್ತೀಚೆಗೆ ಪ್ರತಿಭಟನೆ ನಡೆಸಿದ್ದ ಗ್ರಾಮಸ್ಥರು, ತಮ್ಮೂರಿನ ಶಾಲೆಗಳನ್ನು ಕೋಣನಕೇರಿಯ ಕೆಪಿಎಸ್ ಜತೆಗೆ ವಿಲೀನ ಮಾಡಬಾರದು ಎಂದು ಆಗ್ರಹಿಸಿದ್ದಾರೆ. ಹಿರೇಬೆಂಡಿಗೇರಿ ಶಾಲೆಗೆ ಬೆಳವಲಕೊಪ್ಪ, ಸುರುಪಗಟ್ಟಿ, ಬಳಗಲಿ, ಚಿಕ್ಕಬೆಂಡಿಗೇರಿ ಕನ್ನಡ, ಚಿಕ್ಕಬೆಂಡಿಗೇರಿ ಉರ್ದು, ಹಿರೇಬೆಂಡಿಗೇರಿ ಪ್ಲಾಟ್ ಸೇರಿ ಆರು ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಲಾಗುತ್ತಿದೆ.

> **ಹಿರಿಯ ಅಧಿಕಾರಿಗಳ ನಿರ್ದೇಶನದಂತೆ, ಕೆಪಿಎಸ್ ಶಾಲೆಗಳ ಜತೆಯಲ್ಲಿ ವಿಲೀನ ಮಾಡಬಹುದಾದ ಸರ್ಕಾರಿ ಶಾಲೆಗಳ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಲಾಗಿದೆ. ಅಧಿಕಾರಿಗಳು ಪರಿಶೀಲನೆ ನಡೆಸಿ, ಪಟ್ಟಿಗೆ ಒಪ್ಪಿಗೆ ನೀಡಿದ ನಂತರವೇ ಶಾಲೆಗಳು ಆಡಳಿತಾತ್ಮಕವಾಗಿ ವಿಲೀನವಾಗಲಿವೆ. ವಿಲೀನ ಎಂದರೆ ಶಾಲೆಗಳನ್ನು ಮುಚ್ಚುವುದಲ್ಲ.**
> ■ **ಮೋಹನ ದಂಡಿನ, ಡಿಡಿಪಿಐ ಹಾವೇರಿ**

ಕನ್ನಡ ಶಾಲೆಗಳ ಅವನತಿ

ಕೆಪಿಎಸ್ ಶಾಲೆಗಳ ಜತೆಗೆ, ಸುತ್ತಮುತ್ತಲಿನ ಗ್ರಾಮಗಳ ಶಾಲೆಗಳನ್ನು ವಿಲೀನ ಮಾಡುತ್ತಿರುವುದು ಕೆಲ ಗ್ರಾಮಸ್ಥರ ಆಕ್ರೋಶಕ್ಕೆ ಕಾರಣವಾಗಿದೆ. ವಿಲೀನ ಮಾಡಿದರೆ, ಸರ್ಕಾರಿ ಶಾಲೆಗಳು ಬಾಗಿಲು ಮುಚ್ಚಲಿವೆ. ಇದರಿಂದ ಕನ್ನಡ ಶಾಲೆಗಳ ಅವನತಿ ಆಗಲಿದೆ ಎಂದು ದೂರುತ್ತಿದ್ದಾರೆ. ಶಾಲೆಗಳನ್ನು ವಿಲೀನ ಮಾಡಿದರೆ, ಎಲ್ಲ ವಿದ್ಯಾರ್ಥಿಗಳು ಕೆಪಿಎಸ್ ಶಾಲೆಗೆ ಹೋಗುತ್ತಾರೆ. ಹಳ್ಳಿಯಲ್ಲಿರುವ ಶಾಲೆಗಳು ವಿದ್ಯಾರ್ಥಿಗಳ ಕೊರತೆಯಿಂದ ಬಾಗಿಲು ಮುಚ್ಚಬೇಕಾಗುತ್ತದೆ. ಇದರಿಂದ ಕನ್ನಡ ಶಾಲೆಗಳು ಒಂದೊಂದಾಗಿ ಬಾಗಿಲು ಮುಚ್ಚುತ್ತವೆ ಎಂದು ಪಾಲಕರು ಅಳಲು ತೋಡಿಕೊಳ್ಳುತ್ತಿದ್ದಾರೆ.

ಕೋಣನಕೇರಿ ಶಾಲೆಗೆ ಭದ್ರಾಪುರ, ಮುಳ್ಳೇರಿ ಮತ್ತು ಶ್ಯಾಬಾಳ ಸರ್ಕಾರಿ ಶಾಲೆಗಳನ್ನು ವಿಲೀನ ಮಾಡಲಾಗುತ್ತಿದೆ ಎಂದು ಗ್ರಾಮಸ್ಥರು ಮಾಹಿತಿ ನೀಡಿದ್ದಾರೆ. ಒಟ್ಟಿನಲ್ಲಿ ಬರುವ ಶೈಕ್ಷಣಿಕ ಸಾಲಿನಲ್ಲೇ ಹಲವು ಕನ್ನಡ ಶಾಲೆಗಳು ಮುಚ್ಚುವ ಆತಂಕವಂತೂ ಎದುರಾಗಿದೆ.

ಕಸಾಪ ಕಟ್ಟಡದ ಆಸ್ತಿ ತೆರಿಗೆ ಕೈ ಬಿಡುವಂತೆ ಒತ್ತಾಯ

ಬ್ಯಾಡಗಿ: ತಾಲೂಕ ಕನ್ನಡ ಸಾಹಿತ್ಯ ಪರಿಷತ್ ಕಟ್ಟಡದ ಆಸ್ತಿ ತೆರಿಗೆಯನ್ನು ಆಕರಣೆ ಮಾಡದಂತೆ ಸಾಹಿತ್ಯ ಪರಿಷತ್ ಪದಾಧಿಕಾರಿಗಳು ಹಾಗೂ ಸಾಹಿತಿಗಳು ಪುರಸಭೆ ಮುಖ್ಯಾಧಿಕಾರಿ ವಿನಾಯಕುಮಾರ ಹೊಳೆಪ್ಪಗೋಳ ಅವರಿಗೆ ಮನವಿ ಸಲ್ಲಿಸಿದರು.

ತಾಲೂಕ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ಎಂ ಜಾಗಾಪುರ ಮಾತನಾಡಿ, ತಾಲೂಕಿನಲ್ಲಿ ಸಾಹಿತ್ಯ ಪರಿಷತ್ತಿಗೆ ಸ್ವಂತ ಕಟ್ಟಡವೇ ಇರಲಿಲ್ಲ, ಇಂತಹ ದುಸ್ಥಿತಿಯಲ್ಲಿ ದಾನಿಗಳು ಹಾಗೂ ಸಾಹಿತಿಗಳ ನೆರವಿನಿಂದ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭ ಮಾಡಿದ್ದೆವು. ಮುಂದೆ ಕಟ್ಟಡ ನಿರ್ಮಾಣ ಕಾರ್ಯ ನಿಂತಾಗ ನಾನೂ ಹಾಗೂ ಕೆಲವರು ಕೈಯಿಂದ ಹಣ ಹಾಕಿ ಕಟ್ಟಡ ನಿರ್ಮಾಣ ಆಗಿದೆ. ಈಗ ಧರ್ಮಸ್ಥಳ ಸಂಘದವರು ಶೌಚಾಲಯ ನಿರ್ಮಾಣ ಮಾಡಲು ಸಹಾಯ ಮಾಡುವದಾಗಿ ಭರವಸೆ ನೀಡಿದ್ದು, ನಿರ್ಮಾಣ ಕಾರ್ಯ ಪ್ರಾರಂಭ ಆಗಿದೆ.

ಹೀಗಾಗಿ ಆಸ್ತಿ ತೆರಿಗೆಯಿಂದ ಕನ್ನಡದ ಭಾಷೆ ಹಾಗೂ ಅಭಿವೃದ್ಧಿಗೆ ಶ್ರಮಿಸುತ್ತಿರುವ ಪರಿಷತ್ ಕಟ್ಟಡದ ಆಸ್ತಿ ತೆರಿಗೆ ಕೈ ಬಿಡುವಂತೆ ಆಗ್ರಹಿಸಿದರು.

ಪರಿಷತ್ ಗೌರವ ಕಾರ್ಯದರ್ಶಿ ಎಸ್.ಬಿ.ಇಮ್ಮಡಿ, ಉಪಾಧ್ಯಕ್ಷೆ ಸಂಧ್ಯಾ ರಾಣಿ ದೇಶಪಾಂಡೆ, ಸಂಘ ಟನಾ ಕಾರ್ಯದರ್ಶಿ ರಾಜಣ್ಣ ಹೊಸಳ್ಳಿ, ನಿಕಟಪೂರ್ವ ಅಧ್ಯಕ್ಷ ಮಾಲತೇಶ ಅರಳಿಮಟ್ಟಿ, ಸಾಹಿತಿಗಳಾದ ಜೀವ ರಾಜ ಛತ್ರದ, ಮಾಲತೇಶ ಚಳಗೇರಿ, ನಿವೃತ್ತ ಪ್ರಾ. ಆನಂದ ಮುದು ಕಮ್ಮನವರ, ಕೃಷ್ಣಾ ಬಡಿಗೇರ, ಪಠಾಣ ಹಾಗೂ ಇತರರು ಉಪಸ್ಥಿತರಿದ್ದರು.



64 ಸರ್ಕಾರಿ ಶಾಲೆ ಮುಚ್ಚುವ ತೀರ್ಮಾನ ಖಂಡನೀಯ

ಹಾವೇರಿ: ಜಿಲ್ಲೆಯಲ್ಲಿ 18 ಕೆಪಿಎಸ್ ಶಾಲೆ ಮಂಜೂರು ಹಿನ್ನೆಲೆಯಲ್ಲಿ 64 ಸರ್ಕಾರಿ ಶಾಲೆಗಳನ್ನು ಮುಚ್ಚುವ ಕಾಂಗ್ರೆಸ್ ಸರ್ಕಾರದ ತೀರ್ಮಾನ ಖಂಡನೀಯ ಎಂದು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ಜಿಲ್ಲಾಧ್ಯಕ್ಷ ಬಸವರಾಜ ಎಸ್., ಆಕ್ರೋಶ ವ್ಯಕ್ತಪಡಿಸಿದರು.

ಸ್ಥಳೀಯ ಶಿವಾಜಿ ನಗರದಲ್ಲಿರುವ ಎಸ್‌ಎಫ್‌ಐ ಕಚೇರಿಯಲ್ಲಿ ನಡೆದ ಜಿಲ್ಲಾ ಕೇಂದ್ರ ಪದಾಧಿಕಾರಿಗಳ ಸಭೆಯಲ್ಲಿ ಫಲಕಗಳನ್ನು ಹಿಡಿದು ಆಕ್ರೋಶ ವ್ಯಕ್ತಪಡಿಸಿದ ಅವರು, ಸರ್ಕಾರಿ ಕನ್ನಡ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚುವ ರಾಜ್ಯ ಸರ್ಕಾರದ ಹುನ್ನಾರ ವಿರೋಧಿಸಿ ಎಸ್‌ಎಫ್‌ಐ ನೇತೃತ್ವದಲ್ಲಿ ಈಗಾಗಲೇ ದುಂಡು ಮೇಜಿನ ಸಭೆಗಳು, ಬೃಹತ್ ಪ್ರತಿಭಟನೆಗಳನ್ನು ನಡೆಸಿ, ಸರ್ಕಾರಿ ಶಾಲೆಗಳ ಉಳಿವಿಗಾಗಿ ಜನರನ್ನು ಜಾಗೃತಗೊಳಿಸಿ, ರಾಜ್ಯಾದ್ಯಂತ ಜಾಥಾ, ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಬೆಳಗಾವಿ ಚಲೋ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ರಾಜ್ಯ ಸರ್ಕಾರದ ಗಮನ ಸೆಳೆಯಲಾಗಿದೆ.

ಇದರ ಮಧ್ಯೆಯು ರಾಜ್ಯ ಸರ್ಕಾರದ ನಿರ್ದೇಶನದಂತೆ ಹಾವೇರಿ ಜಿಲ್ಲೆಯಲ್ಲಿ 18 ಕೆಪಿಎಸ್ ಶಾಲೆಗಳಿಗೆ ವಿಲೀನದ ಹೆಸರಿನಲ್ಲಿ 64 ಸರ್ಕಾರಿ ಶಾಲೆಗಳನ್ನು ಮುಚ್ಚುವ ತೀರ್ಮಾನವನ್ನು ಸಹಿಸಲು ಸಾಧ್ಯವಿಲ್ಲ. ಶಾಲೆ ಮುಚ್ಚುವ ತೀರ್ಮಾನವನ್ನು ನೀವೆ ಮಾಡಿಸಿ ಎಲ್ಲಿಗೆ? ಹೋಗಿದ್ದಿರಿ? ಎಂದು ಪ್ರಶ್ನಿಸಿದ ಅವರು, ಯಾವುದೇ ಕಾರಣಕ್ಕೂ ಒಂದೇ ಶಾಲೆಗಳನ್ನು ಮುಚ್ಚಲು ಎಸ್‌ಎಫ್‌ಐ ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು.

ಎಸ್‌ಎಫ್‌ಐ ಮುಖಂಡ ಅರುಣ್ ನಗವತ್ ಮಾತನಾಡಿದರು.

ಕಾಲೇಜ್ ಘಟಕ ಅಧ್ಯಕ್ಷೆ ಚೈತ್ರಾ ಕೊರವರ, ಮುಖಂಡ ಕೃಷ್ಣ ನಾಯ್ಕ್, ಧನುಷ್ ದೊಡ್ಡಮನಿ ಮಾತನಾಡಿ, ಕಾಂಗ್ರೆಸ್ ಸರ್ಕಾರವು ಕೆಪಿಎಸ್ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಮುಂದಾಗಿದೆ. ಶಾಲೆಗಳನ್ನು ಮುಚ್ಚುವ ನಿರ್ಧಾರವನ್ನು ಕೈಬಿಡಬೇಕು ಇಲ್ಲದಿದ್ದರೆ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಾಗುತ್ತದೆ. ಸರ್ಕಾರಿ ಕನ್ನಡ ಶಾಲೆಗಳನ್ನು ನೇರವಾಗಿ ಕೊಲೆ ಮಾಡುವ ಬದಲಾಗಿ ಸಮಾನ ಶಿಕ್ಷಣ ಜಾರಿಗೆ ತನ್ನಿ. ರಾಜ್ಯ ಎಲ್ಲಾ ಶಾಲೆಗಳನ್ನು ಪಬ್ಲಿಕ್ ಶಾಲೆಗಳ ರೀತಿಯ ಅಭಿವೃದ್ಧಿ ಪಡಿಸಿ ಎಂದು ಆಗ್ರಹಿಸಿದರು.



ಸುಧಾಕರ್ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ತುಂಬಲಾರದ ನಷ್ಟ

ಹಾವೇರಿ: ರಾಜ್ಯ ಸರ್ಕಾರದ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ.ಸುಧಾಕರ ನಿಧನರಾದ ಹಿನ್ನೆಲೆಯಲ್ಲಿ ಸೊಮವಾರ ಸಂಜೆ ನಗರದ ಎಂ.ಜಿ ವೃತ್ತದಲ್ಲಿ ಜಿಲ್ಲಾ ಕಾಂಗ್ರೆಸ್‌ನ ಮುಖಂಡರು ಹಾಗೂ ಪದಾಧಿಕಾರಿಗಳು ಶ್ರದ್ಧಾಂಜಲಿ ಸಲ್ಲಿಸಿದರು.



ಮಹಾತ್ಮಾ ಗಾಂಧಿ ವೃತ್ತದಲ್ಲಿ ಸಚಿವ ಡಿ.ಸುಧಾಕರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಗೌರವ ಸಲ್ಲಿಸಲಾಯಿತು. ಈ ವೇಳೆ ಮಾತನಾಡಿದ ವಿಧಾನಸಭೆ ಉಪಸಭಾಧ್ಯಕ್ಷ, ಶಾಸಕ ರುದ್ರಪ್ಪ ಲಮಾಣಿ, ಸಚಿವ ಡಿ.ಸುಧಾಕರ ಅಗಲಿಕೆಯಿಂದ ರಾಜಕೀಯ ಕ್ಷೇತ್ರಕ್ಕೆ ತುಂಬಲಾರದ ದೊಡ್ಡ ನಷ್ಟವಾಗಿದೆ. ದಶಕಗಳ ಕಾಲ ರಾಜಕಾರಣದಲ್ಲಿದ್ದ ಸುಧಾಕರ ಅವರು ನಾಲ್ಕು ಬಾರಿ ಶಾಸಕರಾಗಿ, ಎರಡು ಬಾರಿ ಸಚಿವರಾಗಿದ್ದರು. ಮೊಣಕಾಲು ನೋವಿನಿಂದ ಬಳಲುತ್ತಿದ್ದ ಅವರು, ಕಳೆದ ಒಂದೂವರೆ ತಿಂಗಳಿನಿಂದ ಅನಾರೋಗ್ಯಕ್ಕೆ ತುತ್ತಾಗಿದ್ದರು. ಮೊಣಕಾಲು ನೋವಿನ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರೂ ಸಹಿತ ಆರೋಗ್ಯ ಸುಧಾರಿಸದ ಕಾರಣ ಚಿಕಿತ್ಸೆ ಫಲಕಾರಿಯಾಗದೆ ವಿವಶರಾಗಿದ್ದಾರೆ. ಭಗವಂತ ಡಿ.ಸುಧಾಕರ ಆತ್ಮಕ್ಕೆ ಚಿರಶಾಂತಿ ಕರುಣಿಸಲಿ ಹಾಗೂ ಅವರ ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಮಾತನಾಡಿದರು. ಈ ವೇಳೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್‌ಎಫ್‌ಎನ್ ಗಾಜೀಗೌಡ್ರ, ಶಹರ ಕಾಂಗ್ರೆಸ್ ಅಧ್ಯಕ್ಷ ಪ್ರಭು ಬಿಷ್ಟನಗೌಡ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಂಕರ ಮೆಹರವಾಡೆ ಸೇರಿದಂತೆ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಹಾಜರಿದ್ದರು.

ಭಕ್ತಿ, ತಾಳ್ಮೆಯ ಪ್ರತೀಕ ಹೇಮರೆಡ್ಡಿ ಮಲ್ಲಮ: ಡಾ. ಕೋಡಿಹಾಳ

ರಾಣೇಬೆನ್ನೂರ: ಭಕ್ತಿಯ ಮೂಲಕವೇ ಮುಕ್ತಿಯನ್ನು ಪಡೆದು ಮಹಾ ಸಾಧ್ವಿಯಾದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಮನುಕುಲದ ಶ್ರೇಷ್ಠ ಆದರ್ಶ ಮಹಿಳೆಯಾಗಿದ್ದಾಳೆ. ಎಂದು ಹಿರೇಕೆರೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಡಾ. ಕಾಂತೇಶರೆಡ್ಡಿ ಗೋಡಿಹಾಳ ಹೇಳಿದರು.



ನಗರದ ವೇಮನ ವಿದ್ಯಾವರ್ಧಕ ಸಂಘದಲ್ಲಿ ಶಿವಶಂರಣೆ ಹೇಮರಡ್ಡಿ ಮಲ್ಲಮ್ಮನ 604ನೇ ಜಯಂತಿಯಲ್ಲಿ ಮಾತನಾಡಿದ ಅವರು, ಮಲ್ಲಮ್ಮ ತನ್ನ ಸರಳ ಗುಣ ಮತ್ತು ಆಚರಣೆಗಳಿಂದ ಏನೆ ಕಷ್ಟಗಳು ಬಂದರು ಸಹಿಸಿಕೊಂಡು ಶ್ರೀಶೈಲ ಚನ್ನಮಲ್ಲಿಕಾರ್ಜುನನ ಮೇಲಿನ ಭಕ್ತಿಯಿಂದ ಎಲ್ಲವನ್ನು ಸಹಿಸಿಕೊಂಡಳು. ಆದ್ದರಿಂದ ಪವಾಡದ ರೀತಿಯಲ್ಲಿ ಮಲ್ಲಮ್ಮ ಕಾರ್ಯಗಳು ಜನಸಾಮಾನ್ಯರ ಕಷ್ಟಗಳನ್ನು ದೂರಮಾಡಿದವು. ಮೈದುನ ವೇಮನನನ್ನು ಯೋಗಿಯನ್ನಾಗಿ ಮಾಡಿ ಆದರ್ಶ ಪ್ರಾಯಯಳಾದಳು ಎಂದರು.

ವೇಮನ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಮನೋಜ್ ಸಾವಕಾರ ಮಾತನಾಡಿ, ಮಲ್ಲಮ್ಮನ ಆದರ್ಶ ಮತ್ತು ಕಾಯಕ ತತ್ವ 12ನೇ ಶತಮಾನದ ಶರಣರ ಮಾದರಿಯಾಗಿದ್ದು, ದುಡಿದು ಉಣ್ಣುವ ಸಂಸ್ಕೃತಿಯನ್ನು ಹೊಂದಿದೆ ಎಂದರು.

ರಾಮಚಂದ್ರಪ್ಪ ರಾಯರೆಡ್ಡಿ, ಎಲ್‌ವಿ ಸಾವಕಾರ, ಭೋಗೇಶರೆಡ್ಡಿ, ಅಶೋಕ ಮೇಲಗಿರಿ, ಸೋಮಣ್ಣ ಮೈದೂರು, ಶಾಮರಡ್ಡಿ ನ್ಯಾಮತಿ, ಮೋಹನ್ ಬಲ್ಲೂರ, ಎಂ ಎಲ್ ಎರೆಸೀಮೆ, ರಮೇಶ ಹೊಂಬರಡಿ, ನಿವೃತ್ತ ಶಿಕ್ಷಕ ಆರ್.ಡಿ.ಹೊಂಬರಡಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಸಮರ್ಪಕವಾಗಿ ಬಸ್ ಓಡಿಸುವಂತೆ ವಿದ್ಯಾರ್ಥಿಗಳ ಪ್ರತಿಭಟನೆ

ಹಾವೇರಿ: ದೇವಗಿರಿಯ ಸರ್ಕಾರಿ ಇಂಜನೀಯರಿಂಗ್ ಕಾಲೇಜು, ಮಹಿಳಾ ಕಾಲೇಜು ಸೇರಿದಂತೆ ಈ ಮಾರ್ಗದಲ್ಲಿ ಸಂಚರಿಸುವ ಬಸ್‌ಗಳನ್ನು ಸಕಾಲಕ್ಕೆ ಓಡಿಸುವಂತೆ ಆಗ್ರಹಿಸಿ ವಿದ್ಯಾರ್ಥಿಗಳು ಬಸ್ ನಿಲ್ದಾಣದ ಎದುರು ಎಲ್ಲಾ ಮಾರ್ಗದ ಬಸ್‌ಗಳನ್ನು ಹೊರಹೋಗದಂತೆ ತಡೆದು ಪ್ರತಿಭಟನೆ ನಡೆಸಿ, ತಮ್ಮ ಆಕ್ರೋಶ ಹೊರಹಾಕಿದರು.



ಈ ಕುರಿತು ಇಂಜನೀಯರಿಂಗ್ ಕಾಲೇಜಿನ ವಿದ್ಯಾರ್ಥಿ ಅಭಿಷೇಕ ಮಾತನಾಡಿ, ಕಳೆದ ಕೆಲವು ದಿನಗಳಿಂದ ಸರ್ಕಾರಿ ಇಂಜನೀಯರಿಂಗ್ ಕಾಲೇಜು, ಮಹಿಳಾ ಕಾಲೇಜು ಸೇರಿದಂತೆ ಈ ಮಾರ್ಗದಲ್ಲಿ ಸಂಚರಿಸುವ ಬಸ್‌ಗಳು ಸಕಾಲಕ್ಕೆ ಓಡಾಡುತ್ತಿಲ್ಲ, ಈ ಬಗ್ಗೆ ಸಂಬಂಧಿಸಿದ ಬಸ್ ನಿಲ್ದಾಣದ ಅಧಿಕಾರಿಗಳನ್ನು ಯಾವಾಗ ಕೇಳಿದರೂ ಮೂರು ಬಸ್ ಬಿಡಲಾಗಿದೆ. ಈಗಾಗಲೇ ಹೋಗಿವೆ, ಇನ್ನೇನು ಬರಬೇಕಿದೆ. ಬಂದ ಕೂಡಲೇ ಹತ್ತಿ ಎಂಬ ಹಾರಿಕೆ ಉತ್ತರ ನೀಡುತ್ತಿದ್ದಾರೆ. ಆದರೆ ಬಸ್‌ಗಳ ಅನಾನುಕೂಲದಿಂದ ನಮಗೆ ಸಾಕಷ್ಟು ತೊಂದರೆ ಆಗಿದೆ. ಬಸ್ ತಡವಾಗುತ್ತಿರುವುದರಿಂದ ದಿನನಿತ್ಯ ಎರಡು ಅವಧಿಗಳನ್ನು ಕಳೆದುಕೊಳ್ಳಬೇಕಾಗಿದೆ ಎಂದು ದೂರಿದರು.

ಮಹಿಳಾ ಕಾಲೇಜಿನ ವಿದ್ಯಾರ್ಥಿನಿ ಸುಕನ್ಯಾ ಮಾತನಾಡಿ, ಈಗಾಗಲೇ ಬೆಳಗ್ಗೆ 8 ಮತ್ತು 8.30ರ ಸಮಯಕ್ಕೆ ಓಡಾಡುತ್ತಿದ್ದ ಕೆಲವು ಬಸ್‌ಗಳನ್ನು ಅರ್ಧ ಗಂಟೆ ತಡವಾಗಿ ಓಡಿಸುತ್ತಿದ್ದು ಇದರಿಂದ ದಿನನಿತ್ಯ ಬೆಳಗಿನ ಒಂದು ಅವಧಿಯ ತರಗತಿಯನ್ನು ಕಳೆದುಕೊಳ್ಳುತ್ತಿದ್ದೇವೆ. ಇದರಿಂದ ಅಧ್ಯಯನದಲ್ಲಿ ಹಿನ್ನಡೆ ಆಗುತ್ತಿದೆ. ಇದರಿಂದ ನಮ್ಮ ಭವಿಷ್ಯದಲ್ಲಿ ತೊಂದರೆಯಾಗಲಿದೆ. ಈ ಕುರಿತು ಕಾಲೇಜಿನಲ್ಲಿಯೂ ಸಹ ತಡವಾಗುತ್ತಿರುವ ಹಿನ್ನೆಲೆಯಲ್ಲಿ ಉಪನ್ಯಾಸಕರಿಂದ ಬೈಸಿಕೊಳ್ಳುವಂತಾಗಿದೆ. ಈ ಬಗ್ಗೆ ಹಲವಾರು ಬಾರಿ ಮೌಖಿಕವಾಗಿ ದೂರು ನೀಡಿದ್ದು ಅದಕ್ಕೆ ಬಸ್ ನಿಲ್ದಾಣದ ಸಿಬ್ಬಂದಿ ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ ಎಂದು ಆತಂಕ ಹೊರಹಾಕಿದರು.

ಹಾವೇರಿ ಕೇಂದ್ರ ಬಸ್ ನಿಲ್ದಾಣದಿಂದ ಬೆಂಗಳೂರು, ಹುಬ್ಬಳ್ಳಿ, ಹಾನಗಲ್ಲ, ಶಿವಮೊಗ್ಗ, ಶಿರಸಿ ಹೀಗೆ ಹೊರಹೋಗುವ ಎಲ್ಲಾ ಮಾರ್ಗದ ಬಸ್‌ಗಳನ್ನು ತಡೆದು ನಿಲ್ಲಿಸಿ ದೇವಗಿರಿ ಮಾರ್ಗದ ಬಸ್‌ಗಳನ್ನು ಸಕಾಲಕ್ಕೆ ಓಡಿಸಬೇಕು ಮತ್ತು ಈ ಮಾರ್ಗದಲ್ಲಿ ಬಸ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಈ ಮಾರ್ಗದಲ್ಲಿ ಬಹುತೇಕ ಸರ್ಕಾರಿ ಶಾಲೆ ಕಾಲೇಜುಗಳ ಸಂಖ್ಯೆಯೇ ಹೆಚ್ಚಿದ್ದು, ಬಡ, ಪ್ರತಿಭಾನ್ವಿತ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಿಕೊಂಡಿದ್ದು, ಬಸ್‌ಗಳ ರೂಟ್ ಮತ್ತು ಬಸ್‌ಗಳನ್ನು ಹೆಚ್ಚಿಸುವಂತೆ ಆಗ್ರಹಿಸಿದರು.

ಈ ವೇಳೆ ಸಾರಿಗೆ ಇಲಾಖೆಯ ಹಲವು ಸಿಬ್ಬಂದಿ ಮತ್ತು ಪೊಲೀಸರು ವಿದ್ಯಾರ್ಥಿಗಳನ್ನು ಮನವೊಲಿಸಲು ಮಾಡಿದ ಪ್ರಯತ್ನಕ್ಕೆ ವಿದ್ಯಾರ್ಥಿಗಳು ಸ್ಪಂದಿಸದೇ ಕೂಡಲೇ ಬಸ್‌ಗಳನ್ನು ಬಿಡಿ ಎಂದು ಆಗ್ರಹಿಸಿದರು. ಆಗ ಸಾರಿಗೆ ಇಲಾಖೆಯ ಡಿಟಿಒ ಪಾಟೀಲ ಘಟನಾ ಸ್ಥಳಕ್ಕೆ ಆಗಮಿಸಿ, ವಿದ್ಯಾರ್ಥಿಗಳ ಸಮಸ್ಯೆ ಆಲಿಸಿದರು. ನಿಮಗೆ ಆಗುತ್ತಿರುವ ಸಮಸ್ಯೆಗಳ ಕುರಿತು ಸವಿವರವಾದ ಮನವಿಯನ್ನು ಬರೆದು ಕೊಡಿ ಎಂದರಲ್ಲದೇ, ತಕ್ಷಣಕ್ಕೆ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದರು. ಇದರ ಬೆನ್ನಲ್ಲೇ ವಿದ್ಯಾರ್ಥಿಗಳು ಪ್ರತಿಭಟನೆ ವಾಪಸ್ ಪಡೆದರು.

ಈ ವೇಳೆ ಪ್ರತಿಭಟನೆಯಲ್ಲಿ ಇಂಜನೀಯರಿಂಗ್ ಕಾಲೇಜು, ಮಹಿಳಾ ಕಾಲೇಜು ಸೇರಿದಂತೆ ವಿವಿಧ ಕಾಲೇಜುಗಳ ನೂರಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಬುದ್ಧ, ಬಸವ, ಅಂಬೇಡ್ಕರ್ ಮಹಾನ್ ಮಾನವತಾವಾದಿಗಳು

ಹಾವೇರಿ: ಬುದ್ಧನ ಸಾಮಾಜಿಕ ಪರಿವರ್ತನೆಯ ಹಣತೆ ಬಸವನಿಂದ 12ನೇ ಶತಮಾನದಲ್ಲಿ ಕಾಣಿಸಿಕೊಂಡು, 20ನೇ ಶತಮಾನದ ಅಂಬೇಡ್ಕರ್ ಅವರ ಚಿಂತನೆಗಳವರೆಗೆ ವ್ಯಾಪಕವಾಗಿ ವಿಸ್ತರಿಸಿವೆ. ಅವರು ಮಾನವತಾವಾದಿಗಳು, ಪ್ರಜಾಪ್ರಭುತ್ವ ವಾದಿಗಳಾಗಿದ್ದರು ಎಂದು ಸಾಹಿತಿ ಹನುಮಂತಗೌಡ ಗೊಲ್ಲರ ಹೇಳಿದರು.



ಸ್ಥಳೀಯ ವಿನಾಯಕನಗರದ ಉದ್ಯಾನವನದಲ್ಲಿ ನಾಗರಿಕ ವೇದಿಕೆ ಹಾಗೂ ಮಹಿಳಾ ಘಟಕ ಏರ್ಪಡಿಸಿದ್ದ ಬುದ್ಧ, ಬಸವ, ಅಂಬೇಡ್ಕರ್, ಚಿಂತನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಯುದ್ಧೋನ್ಮಾದ ದೇಶಗಳಿಗೆ, ಜಾಗತಿಕ ತಲ್ಲಣಗಳಿಗೆ ಬುದ್ಧ, ಬಸವ, ಅಂಬೇಡ್ಕರ್ ಮಾರ್ಗಗಳು ಪರಿಹಾರ ಸೂಚಿಸಬಲ್ಲವು. ಪ್ರಜಾಪ್ರಭುತ್ವದ ಕೊಂಬೆಗಳು ಕವಲೊಡೆದದ್ದೆ ಬುದ್ಧನಿಂದ, ವಿಜ್ಞಾನದ ವಿರುದ್ಧವಾದದನ್ನು ಏನನ್ನು ಹೇಳಿಲ್ಲ, ಏಕಕಾಲಕ್ಕೆ ವೈದ್ಯನು ಹೌದು, ಸಾಮಾಜಿಕ ಹೋರಾಟಗಾರರು ಹೌದು. ಧರ್ಮದ ಸ್ವಾತಂತ್ರ್ಯ, ಸಮಾನತೆ, ಸಹೋದರತೆ, ಮಾನವೀಯತೆ ಮುಂತಾದ ಜೀವ ದ್ರವ್ಯಗಳಿಂದ ನಮ್ಮ ಸಂವಿಧಾನ ರೂಪ ತಳಿದಿದೆ ಎಂಬುದನ್ನು ಮರೆಯಬಾರದು ಎಂದು ಹನುಮಂತಗೌಡ ಹೇಳಿದರು,

ಬಸವಣ, ಅಂಬೇಡ್ಕರ್ ಚಿಂತನೆಗಳು ಮುಖ್ಯವಾಗಿ ಮಾನವನ ಕಲ್ಯಾಣವನ್ನು ಬಯಸುತ್ತವೆ, ಅವರ ಹೋರಾಟ ಮಾನವೀಯ ನೆಲೆಯಲ್ಲಿ ಸಮಾನತೆ ನಿರ್ಮಿಸುವುದಾಗಿತ್ತು. ಭಾರತೀಯ ವರ್ಣಾಶ್ರಮ ಪದ್ಧತಿಯ ಸಮಾಜದಲ್ಲಿ ಇವರೀರ್ವರು ಹುಟ್ಟಿ ಆ ಸಮಾಜದ ಮೂಢ ನಂಬಿಕೆ, ಅಂಧಶ್ರದ್ಧೆ, ಅಸಮಾನತೆಯಿಂದ ರೋಷಿಹೋಗಿ ಹೊರಬರಲು ಅವರು ಮಾಡಿದ ಹೋರಾಟಗಳು, ವಿಚಾರಧಾರೆಗಳು, ಚಿಂತನೆಗಳು ಒಂದಕ್ಕೊಂದು ಪೂರಕವಾಗಿವೆ ಎಂದು ಹನುಮಂತಗೌಡ ತಿಳಿಸಿದರು.

ಧನುಷ್, ಧೃತಿ, ಭುವನ್, ಕೃತಿಕಾ ಬಾಲ ಪ್ರತಿಭೆಗಳು ವಚನಗಳನ್ನು ಹಾಡಿದರು, ಮಹಿಳಾ ವೇದಿಕೆಯ ಶಾಂತಕ್ಕ ಉಳ್ಳಾಗಡ್ಡಿ ಉದ್ಘಾಟಿಸಿದರು. ವೇದಿಕೆ ಉಪಾಧ್ಯಕ್ಷೆ ಭಾರತಿ ಶೆಟ್ಟರ್ ಮಾತನಾಡಿ, ಈ ದಾರ್ಶನಿಕರ ತತ್ವ, ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದರು.

ನಾಗರಿಕ ವೇದಿಕೆಯ ಎಸ್. ಬಿ. ಗಂಜಿಗಟ್ಟಿ ಅಧ್ಯಕ್ಷತೆವಹಿಸಿ ಮಾತನಾಡಿದರು. ಕೋಶಾಧ್ಯಕ್ಷ ಬಸವರಾಜ್ ಬೆಲ್ಲದ, ಪ್ರಾಚಾರ್ಯ ಶಶಿಧರ್ ಕಾರಗಿ, ಮಲ್ಲಿಕಾರ್ಜುನ ಅಗಡಿ, ಪ್ರವೀಣ, ಅಕ್ಕಮ್ಮ ಎಲಿಗಾರ್, ಕವನ ಚನವೀರಪ್ಪನವರ, ಸುಜಾತ ತೆಪ್ಪದ್, ಮೇಘನಾ ಮತ್ತಿತರರು ಉಪಸಿತರಿದ್ದರು,

ಸಾವಿತ್ರಿಬಾಯಿ ಹೆಜೀಬ್, ಸರೋಜಾ ದೇವಿಹೊಸೂರ್, ಭಾರತಿ ಪ್ರಾರ್ಥಿಸಿದರು. ಸುಧಾ ಮರಳಿಹಳ್ಳಿ ಸ್ವಾಗತಿಸಿದರು. ಮಲ್ಲಿಕಾರ್ಜುನ ಹಿಂಚಿಗೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಂಕರ್ ಬಡಿಗೇರ್ ಸ್ವರಚಿತ ಕವನ ವಾಚಿಸಿ, ನಿರೂಪಿಸಿದರು. ಮಹಿಳಾ ವೇದಿಕೆಯ ಕಾರ್ಯದರ್ಶಿ, ಸುಮಂಗಲ ಕಾರಗಿ ವಂದಿಸಿದರು.

ಕಿರುಸುದ್ದಿ

ಅರ್ಜಿ ಆಹ್ವಾನ

ಬೆಳಗಾವಿ : ಕಾಗವಾಡ ತಾಲೂಕು ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಅಂಗನವಾಡಿ ಕಂ. ಕ್ರೀಚ್ ಕಾರ್ಯಕರ್ತೆಯರ, ಅಂಗನವಾಡಿ ಕಂ. ಕ್ರೀಚ್ ಸಹಾಯಕಿಯರ ಹೊಸದಾಗಿ ಪ್ರಾರಂಭಿಸುವ ಅಂಗನವಾಡಿ ಕಂ. ಕ್ರೀಚ್ ಕೇಂದ್ರಗಳ ಹುದ್ದೆಗಳನ್ನು ಗೌರವಧನದ ಆಧಾರದ ಮೇಲೆ ಗುರುತಿಸಲು ಅರ್ಹ ಸ್ಥಳೀಯ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.ಅರ್ಜಿ ನಮೂನೆಯನ್ನು ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಿಂದ ಪಡೆದುಕೊಂಡು ಮೇ 25ಸಂಜೆ 5.30ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಾಗವಾಡ ತಾಲೂಕು ಕಚೇರಿ ಸಂಪರ್ಕಿಸಬಹುದಾಗಿದೆ ಎಂದು ಅಥಣಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದು

ಬೆಳಗಾವಿ : ಕ.ವಿ.ಪ್ರ.ನಿ.ನಿ. ವತಿಯಿಂದ ತುರ್ತು ನಿರ್ವಹಣಾ ಕಾರ್ಯದ ಪ್ರಯುಕ್ತ ಮೇ 12ರಂದು ಬೆಳಿಗ್ಗೆ 11 ಗಂಟೆಯಿಂದ ಸಂಜೆ 3 ಗಂಟೆಯವರೆಗೆ 33/11ಕೆವ್ಹಿ ಫೋರ್ಟ ಬೆಳಗಾವಿ ನಗರ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಬೆಳಗಾವಿ ಆರ್ಖಾದ ನಗರ ಪ್ರದೇಶ, ಹಳೆ ಗಾಂಧಿ ನಗರ, ದೀಪಕ ಗಲ್ಲಿ, ಸಂಕಮ್ ಹೊಟೇಲ್, ಬಾಗಲಕೋಟ ರಸ್ತೆ, ಫೋರ್ಟ ರೋಡ ಕಲ್ಮಠ ರಸ್ತೆ, ಹಳೆ ಪಿಬಿ ರಸ್ತೆ, ಫೂಲ್ಬಾಗ್ಗಲ್ಲಿ, ತಹಶೀಲ್ದಾರ ಗಲ್ಲಿ, ಬಾಂದೂರಗಲ್ಲಿ, ಪಾಟೀಲ ಗಲ್ಲಿ, ಐ.ಬಿ. ಶೇಂಟರ್, ಬಸ್ ಸ್ಟ್ಯಾಂಡ್, ಶೆಟ್ಟಿಗಲ್ಲಿ, ಚಾವಟ್ಗಲ್ಲಿ, ನಾನಾ ಪಾಟೀಲ್ಚೌಕ್, ದರಬಾರಗಲ್ಲಿ, ಜಾಲಗಾರಗಲ್ಲಿ, ಕಶಾಯಿ ಗಲ್ಲಿ, ಕೀರ್ತಿ ಹೊಟೇಲ್, ಆರಣ್ಯಕಛೇರಿ, ಆರ್.ಟಿ.ಓ.ಕಛೇರಿ, ಕೋತವಾಲ ಗಲ್ಲಿ, ಡಿ.ಸಿಸಿ ಬ್ಯಾಂಕ, ಖಡೆಬರ್ಝಾರ ಪ್ರದೇಶ, ಶೀತಲ್ ಹೊಟೇಲ ವರೆಗೆ ಹಾಗೂ ಕಾಕತಿವೇಸ್, ಶನಿವಾರಕೂಟ್, ಕಡೆಬಜಾರ, ಸಮಾದೇವ ಗಲ್ಲಿ, ಗೋಂದಳಿ ಗಲ್ಲಿ, ನರವೇರಕರ ಗಲ್ಲಿ, ಕಛೇರಿ ಗಲ್ಲಿ, ಉಜ್ವಲ್ ನಗರ, ಗಾಂದಿ ನಗರ, ಅಮನ್ ನಗರ, ಎಸ್.ಸಿ ಮೋಟೊರಸ ಪದೇಶ, ಮಾರಿತಿ ನಗರ, ದರಬಾರಗಲ್ಲಿ, ತೆಂಗಿನಕೇರಿಗಲ್ಲಿ, ಆಜಾದಗಲ್ಲಿ, ಪಾಂನಗೂಳ ಗಲ್ಲಿ, ಭುವಿ ಗಲ್ಲಿ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಹು.ವಿ.ಸ.ಕಂ.ನಿ ಕಾ ಮತ್ತು ಪಾ ಗ್ರಾಮೀಣ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಶಸ್ತಿಗೆ ಆಯ್ಕೆ

ಹುಬ್ಬಳ್ಳಿ: ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ತು 'ಭಾಗವತ ಪ್ರೀಯ- ಮಧ್ವ ಕಿಂಕರ' ಪ್ರಶಸ್ತಿಗೆ ಉಡುಪಿಯ ಪರ್ಯಾಯ ಶೀರೂರು ಮಠದ ವೇದವರ್ಧನ ತೀರ್ಥ ಶ್ರೀಪಾದರನ್ನು ಆಯ್ಕೆ ಮಾಡಿದೆ ಎಂದು ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ ತಿಳಿಸಿದ್ದಾರೆ.ಅಧಿಕಮಾಸದ ಸಂದರ್ಭದಲ್ಲಿ ಮೇ 24 ಬೆಳಿಗ್ಗೆ 9 ಗಂಟೆಗೆ ಉಡುಪಿಯ ಕೃಷ್ಣಮಠದ ರಾಜಾಂಗಣ ಸಭಾಂಗಣದಲ್ಲಿ ಜರುಗುವ ಅರ್ಹ 50 ದಂಪತಿಗಳಿಗೆ ಪುಸ್ತಕದಾನ ಸಮಾರಂಭದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತಿದೆ. ಉಡುಪಿ ಶಾಸಕ ಯಶಪಾಲ್ ಆನಂದ್ ಸುವರ್ಣ ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆಂದು ಪ್ರಸಾರಾಂಗ ನಿರ್ದೇಶಕ ಚನ್ನಬಸಪ್ಪ ಧಾರವಾಡಶೆಟ್ರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.



ನಿಧನ ಸುದ್ದಿ

ಬಾಬುರಾವ ಕೋಳಿ



ರಾಯಬಾಗ: ತಾಲೂಕಿನ ಕೋಳಿ ಸಮಾಜದ ಅಧ್ಯಕ್ಷರಾದ ಬಾಬುರಾವ ಕೋಳಿ (75) ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಮರಿ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಗಿರಿಜಾದೇವಿ ಮುನ್ನೋಳಿಮಠ



ಮೂಡಲಗಿ: ತಾಲೂಕಿನ ಕಲ್ಲೋಳಿ ಪಟ್ಟಣದ ಜಂಗಮ ಸಮಾಜದ ಹಿರಿಯರಾದ ಗಿರಿಜಾದೇವಿ ಶಿವಾನಂದ ಮುನ್ನೋಳಿಮಠ (84) ಶನಿವಾರ ನಿಧನರಾಗಿದ್ದಾರೆ. ಮೃತರು ಓರ್ವ ಪುತ್ರ,ಆರು ಜನ ಪುತ್ರಿಯರು ಸೇರಿದಂತೆ ಸೊಸೆ,ಮೊಮ್ಮಕ್ಕಳು, ಅಳಿಯಂದಿರನ್ನು ಬಿಟ್ಟು ಅಗಲಿದ್ದಾರೆ.



ಗೋಕಾಕ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಶ್ರಯದಲ್ಲಿ ಶ್ರೀ ಪಂಚಲಿಂಗೇಶ್ವರ ನಾಟ್ಯ ಸಂಘದವರು ಹಮ್ಮಿಕೊಂಡ ''ಸಂದಿಮನಿ ಸಂಗವ್ವ ನಾಟಕ ಪ್ರದರ್ಶನದಲ್ಲಿ ಪ್ರಖ್ಯಾತ ರಂಗ ಕಲಾವಿದರಾದ ದಯಾನಂದ ಬಿಳಗಿ ಹಾಗೂ ಸ್ವೇತಾ ಬಿಳಗಿ ಅವರನ್ನು ಕಲಾಭಿಮಾನಿಗಳು ನಗರದ ಚಿತ್ರಾ ಟಾಕೀಸ್ ಸಭಾಭವನದಲ್ಲಿ ಸತ್ಕರಿಸಿದರು. ಈ ಸಂದರ್ಭದಲ್ಲಿ ತಹಶೀಲದಾರ ಡಾ.ಮೋಹನ ಭಸ್ಮೆ, ಅಶೋಕ ಪೂಜಾರಿ, ಮಹಾಂತೇಶ ತಾಂವಶಿ, ರಜನಿ ಜಿರಗ್ಯಾಳ, ಚಂದ್ರಶೇಖರ ಕೊಣ್ಣೂರ, ಮನೋಹರ ಗಡಾದ, ಚಂದನ ಮಗದುಮ, ಹಿರಿಯ ಕಲಾವಿದ ಹನುಮಂತಪ್ಪ ಬಾಗಲಕೋಟ ಇದ್ದರು.

ಗ್ರಾಮಕ್ಕೆ ಬಸ್: ಸಿಹಿ ಹಂಚಿದ ಗ್ರಾಮಸ್ಥರು

ಯರಗಟ್ಟಿ: ಸಮೀಪದ ನುಗ್ಗಾನಟ್ಟಿ ಗ್ರಾಮಕ್ಕೆ ಈಚಗೆ ನೂತನ ಬಸ್ ಸಂಚಾರ ಆರಂಭವಾಗಿದ್ದು, ಬಸ್‌ಗೆ ಗ್ರಾಮಸ್ಥರು ಪೂಜೆ ಸಲ್ಲಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಎಪಿಎಂಸಿ ಅಧ್ಯಕ್ಷ ನೀಲಕಂಠ ಸಿದ್ದಬಸನವರ ಮಾತನಾಡಿ, ಗ್ರಾಮಕ್ಕೆ ಮುಖ್ಯ ಹೆದ್ದಾರಿಯಿಂದ 1 ಕಿ.ಮೀ ದೂರ ಇದ್ದು, ಬಹುದಿನಗಳಿಂದ ಶಾಲಾ ಕಾಲೇಜು ಮಕ್ಕಳು, ವೃದ್ಧರಿಗೆ ತುಂಬ ತೊಂದರೆ ಆಗುತ್ತಿತ್ತು. ಹೀಗಾಗಿ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಮಾಡಲಾಗಿತ್ತು.

ಶಾಸಕ ವಿಶ್ವಾಸ ವೈದ್ಯ ಅವರು ಸಮಸ್ಯೆಗೆ ಸ್ಪಂದಿಸಿ ಬಸ್ ವ್ಯವಸ್ಥೆ ಕಲ್ಪಸಿದ್ದಾರೆ ಎಂದು ಹೇಳಿದ್ದಾರೆ. ಚಾಲಕ ಹಾಗೂ ನಿರ್ವಾಹಕರನ್ನು ಗ್ರಾಮಸ್ಥರು ಸನ್ಮಾನಿಸಿದರು.

ಮುಖಂಡ ರಾಘವೇಂದ್ರ, ಗಿಡ್ಡಮಲ್ಲಪ್ಪಗೋಳ, ಬಸಲಿಂಗಯ್ಯ ಹಿರೇಮಠ, ಅದೃಶ ಶೀಲವಂತರ, ರಾಮನಗೌಡ ಪಾಟಿಲ. ಮುದಕಪ್ಪ ಅರಸಿಗುಡಿ, ಮಾರುತಿ ಕೊದನ್ನವರ, ಗಂಗಪ್ಪ ಶೀಲವಂತರ, ಮಹಂತೇಶ ಹಡಪದ, ದೇವಪ್ಪ ಸನ್ನಮ್ಮನವರ, ಶಿವಾನಂದ ಮುರಗೋಡ, ಮಹಾಂತೇಶ ನೇಸರಗಿ, ಶೇಖರ ಶೀಲವಂತರ ಮತ್ತಿತರಿದ್ದರು.



ನುಗ್ಗಾನಟ್ಟಿ ಗ್ರಾಮಕ್ಕೆ ನೂತನ ಬಸ್ ಸಂಚಾರ ಆರಂಭವಾಗಿದ್ದು ಬಸ್‌ಗೆ ಗ್ರಾಮಸ್ಥರು ಪೂಜೆ ಸಲ್ಲಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ನೀಲಕಂಠ ಸಿದ್ದಬಸನವರ, ರಾಘವೇಂದ್ರ ಗಿಡ್ಡಮಲ್ಲಪ್ಪಗೋಳ, ಬಸಲಿಂಗಯ್ಯ ಹಿರೇಮಠ ಇದ್ದರು.

ರಾಜ ವೀರ ಮದಕರಿ ನಾಯಕ ಮೂರ್ತಿ ಅನಾವರಣ

ಮಹಾತ್ಮರನ್ನು ಜಾತಿಗೆ ಸೀಮಿತಗೊಳಿಸದಿರಿ

ರಾಮದುರ್ಗ: ದೇಶದ ಸ್ವಾತಂತ್ರಕ್ಕಾಗಿ ಹೋರಾಡಿದ ಮಹಾನ್ ಪುರುಷರನ್ನು ಸಂಕುಚಿತ ಭಾವನೆಯಿಂದ ಒಂದೇ ಜಾತಿಗೆ ಸೀಮಿತಗೊಳಿಸುತ್ತಿರುವುದು ವಿಷಾದನೀಯ ಮುಂದಿನ ಪೀಳಿಗೆಯಲ್ಲಿ ಈ ಭಾವನೆ ಮೂಡದಂತೆ ಜಾಗೃತಿ ವಹಿಸುವದು ಅಗತ್ಯ ಎಂದು ಅರಭಾವಿ ಶಾಸಕ, ಬೆಮುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಹೇಳಿದರು.

ತಾಲೂಕಿನ ಚಿಪ್ಪಲಕಟ್ಟಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ರಾಜ ವೀರ ಮದಕರಿ ನಾಯಕ ಮೂರ್ತಿಯನ್ನು ಭಾನುವಾರ ಅನಾವರಣಗೊಳಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಾತಿ ಜಾತಿ ಎಂದು ಹೋರಾಟ ಮಾಡಿದ್ದರೆ ನಮಗೆ ಸ್ವಾತಂತ್ರ್ಯ ಸಿಗುತ್ತಿರಲಿಲ್ಲ ಅದನ್ನೆಲ್ಲ ಮೀರಿ ಒಂದಾಗಿ ಹೋರಾಡಿದ ಫಲವೇ ಸ್ವಾತಂತ್ರ ದೊರಕಿದೆ ಎಂದರು.

ದೇಶದ ಸ್ವಾತಂತ್ರ್ಯ ಮತ್ತು ಏಕತೆಗಾಗಿ ಶ್ರಮಿಸಿದ್ದಾರೆ ಮದಕರಿ ನಾಯಕ, ಸಂಗೊಳ್ಳಿ ರಾಯಣ್ಣ, ರಾಣಿ ಚೆನ್ನಮ್ಮ, ಭಗೀರಥರು, ಬಾಬಾಸಾಹೇಬ್ ಅಂಬೇಡ್ಕರ್, ಶಿವಾಜಿ ಮಹಾರಾಜರಂತಹ ಮಹಾನ್ ಪುರುಷರನ್ನು ಕೇವಲ ಒಂದೇ ಜಾತಿಗೆ ಸೇರಿಸಬಾರದು. ಅವರೆಲ್ಲರೂ ಮನುಕುಲದ ಆಸ್ತಿಯಾಗಿದ್ದಾರೆ. ಆದ್ದರಿಂದ ಎಲ್ಲರನ್ನೂ ಗೌರವಿಸೋಣ ಎಂದು ಹೇಳಿದರು.

ರಾಮದುರ್ಗ ತಾಲೂಕಿನ ಅಭಿವೃದ್ಧಿಗೆ ನಾವು ಬದ್ಧರಿದ್ದೇವೆ. ಈ ದಿಸೆಯಲ್ಲಿ ನಮ್ಮ ತಂಡ ಕಾರ್ಯ ಮಾಡುತ್ತಿದೆ. ಈಗಾಗಲೇ ಧನಲಕ್ಷ್ಮೀ ಸಕ್ಕರೆ ಕಾರ್ಖಾನೆ, ಟಿಎಪಿಸಿಎಂಎಸ್, ಪಿಕಾರ್ಡ್ ಚುನಾವಣೆಗಳನ್ನು ಎದುರಿಸಿ ನಮ್ಮ ಅಭ್ಯರ್ಥಿಗಳು ಜಯ ಗಳಿಸಿದ್ದಾರೆ.

ನೀರಾವರಿ, ಶಿಕ್ಷಣ, ರಸ್ತೆಗಳ ಅಭಿವೃದ್ಧಿಗೆ ಕ್ರಮಗಳನ್ನು ಕೈಗೊಳ್ಳುತ್ತೇವೆ. ಈ ತಾಲೂಕಿನ ಪ್ರಗತಿಗಾಗಿ ಶಕ್ತಿಮೀರಿ ದುಡಿಯಲು ನಾವೆಲ್ಲರೂ ಉತುಸ್ಕರಾಗಿದ್ದೇವೆ. ಅಭಿವೃದ್ಧಿ ಕಾರ್ಯಗಳಲ್ಲಿ ಎಂದಿಗೂ ಪಕ್ಷಪಾತ, ಜಾತಿಬೇಧ ಮಾಡುವುದಿಲ್ಲವೆಂದು ಅವರು ಸ್ಪಷ್ಟಪಡಿಸಿದರು.

ಚಿಪ್ಪಲಕಟ್ಟಿಯ ಕಲ್ಮೇಶ್ವರ ಮಹಾಸ್ವಾಮಿಗಳು, ಭಾಗೋಜಿಕೊಪ್ಪದ ಡಾ. ಶಿವಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ತೊಂಡಿಕಟ್ಟಿಯ ವೆಂಕಟೇಶ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಮಾಜದ ಹಿರಿಯ ಭೀಮಪ್ಪ ಸಿಂಗಾರಿ ವಹಿಸಿದ್ದರು.

ವೇದಿಕೆಯಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಡಾ. ಕೆ.ವಿ.ಪಾಟೀಲ, ಸಿ.ಬಿ.ಪಾಟೀಲ, ಪಿ.ಎಫ್.ಪಾಟೀಲ, ಗೋಪಾಲ ಸಂಸಿ, ಶಂಕರಗೌಡ ಪಾಟೀಲ, ಬಸವರಾಜ ಸೋಮಗೊಂಡ, ಪಿ.ಎಫ್. ಜಗತಾಪ್, ರಮೇಶ ಅಣ್ಣಿಗೇರಿ, ಬಿ.ಎಸ್. ಬೆಳವಣಕಿ, ಪರುತಗೌಡ ಪಾಟೀಲ, ರಮೇಶ ದೇಶಪಾಂಡೆ, ಭೀಮಶೆಪ್ಪ ಬಸಿಡೋಣಿ, ಎಸ್.ಎಸ್. ಢವಣ, ವೆಂಕನಗೌಡ ಪಾಟೀಲ, ರಾಜಶೇಖರ ತಳವಾರ, ಪ್ರಕಾಶ ತಳವಾರ, ಮಹಾದೇವ ಗೊಡೇರ, ಬಸು ನಾಯಿಕ ಸೇರಿದಂತೆ ಹಲವರು ಉಪಸ್ಥಿತರಿದ್ದರು.



2028ರಲ್ಲಿ ಬಿಜೆಪಿ ಸರ್ಕಾರ ಫಿಕ್ಸ್

ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲ. ಜನ ಬೇಸತ್ತಿದ್ದು, ಮುಂದಿನ 2028 ರಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ನಮ್ಮ ಬಿಜೆಪಿ ರಾಜ್ಯದಲ್ಲಿ ಸರ್ಕಾರ ರಚಿಸಲಿದೆ. ರಾಮದುರ್ಗದಲ್ಲಿ ಬಿಜೆಪಿ ಶಾಸಕರು ಆಯ್ಕೆ ನಿಶ್ಚಿತ ಎಂದು ಶಾಸಕ ಬಾಲಚಂದ್ರ ಜಾರಕಿಹೊಳಿಯವರು ವಿಶ್ವಾಸ ವ್ಯಕ್ತಪಡಿಸಿದರು.

ಸಮಯ ಪಾಲನೆ, ಕಠಿಣ ಪರಿಶ್ರಮ ಮುಖ್ಯ

ಸಂಕೇಶ್ವರ: ಸಾಮಾಜಿಕ ಕಾರ್ಯಗಳನ್ನು ಮಾಡುವುದರ ಜತೆಗೆ ಶೈಕ್ಷಣಿಕ ಕ್ಷೇತ್ರದಲ್ಲಿಯು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಕೆಲಸವನ್ನು ಸಂಕೇಶ್ವರ ಫ್ರೆಂಡ್ಸ್ ಫೌಂಡೇಶನ್ ದವರು ಮಾಡುತ್ತಿರುವುದು ಶ್ಲಾಘನೀಯ ಶಿಕ್ಷಣ ಇಲಾಖೆಯ ಸಮನ್ವಯಾಧಿಕಾರಿ ಎ.ಎಸ್. ಪದ್ಮನ್ನವರ ಹೇಳಿದರು.

ಪಟ್ಟಣದ ಎಲ್.ಕೆ.ಫೀಟ್ನೇಸ್ ಹಾಲ್ ನಲ್ಲಿ ಫ್ರೆಂಡ್ಸ್ ಫೌಂಡೇಶನ್ ವತಿಯಿಂದ ಆಯೋಜಿಸಲಾಗಿದ್ದ ಎಸ್ಎಸ್ಎಲ್‌ಸಿ ಸಾಧಕ ವಿದ್ಯಾರ್ಥಿಗಳಿಗೆ ವಿಶೇಶ ಸತ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯಲ್ಲಿ ಸಮಯಪಾಲನೆ ಹಾಗೂ ಕಠಿಣ ಪರಿಶ್ರಮ ಮುಖ್ಯವಾಗಿದ್ದು,

ನಿರಂತರ ಕಲಿಕೆ ಮತ್ತು ಸಿಗುವ ಅವಕಾಶಗಳನ್ನು ಬಳಸಿಕೊಂಡಲ್ಲಿ ಉನ್ನತ ಸ್ಥಾನಕ್ಕೇರಲು ಸಾಧ್ಯವಾಗತ್ತದೆ ಎಂದರು.

ಡಾ. ಸುನೀಲ ಕಾಂಬಳೆ ಮಾತನಾಡಿ,ಸಂಕೇಶ್ವರ ಫ್ರೆಂಡ್ಸ್ ಫೌಂಡೇಶನ್ ಕೇವಲ ಪ್ರತಿಭಾ ಪುರಸ್ಕಾರ ಮಾತ್ರವಲ್ಲದೆ, ಸಂಕಷ್ಟದಲ್ಲಿರುವವರಿಗೆ ನೆರವು ನೀಡುವುದು ಹಾಗೂ ಸಾರ್ವಜನಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಬದಲಾವಣೆ ತರುತ್ತಿದೆ ಎಂದರು.

ಈ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆಗೈದ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ ಸತ್ಕರಿಸಿ ಪ್ರೋತ್ಸಾಹ ಧನ ನೀಡಲಾಯಿತು.

ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ದ್ವಿತೀಯ ರ್ಯಾಂಕ್ ಗಳಿಸಿದ ನಿಡಸೋಸಿ ಮೊರಾರ್ಜಿ ದೇಸಾಯಿ ಪದವಿಪೂರ್ವ ಕಾಲೇಜಿನ ಅಂಕಿತ ಕಾರತಗಿ (ಶೇ.99.66) ಅವರನ್ನು ವಿಶೇಷವಾಗಿ ಸತ್ಕರಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಫೌಂಡೇಶನ್ ಅಧ್ಯಕ್ಷ ಉಮೇಶ ಗೋಟೂರೆ, ಉಪಾಧ್ಯಕ್ಷ ಪ್ರಕಾಶ ಶಿಂಧೆ, ಖಜಾಂಚಿ ರಾಜಕುಮಾರ ಸಂಸುದ್ದಿ, ಸದಸ್ಯರಾದ ಮಯೂರ ಮಾಳಗಿ, ಪ್ರಭಾಕರ ಪಾಟೀಲ, ವಿನಯ ಭಕಾಯಿ, ಅಸ್ಲಮ್ ಮುಲ್ತಾನಿ, ದಯಾನಂದ ಆಲೂರೆ, ಮುತ್ತುರಾಜ ಕೋಳಿ, ಯಾಸೀನ ಜಕಾತೆ, ದೀಪಕ ಬಾರಾಮತಿ, ರೋಹಿತ ದೊಡ್ಡಲಿಂಗ, ರಮೇಶ ಬಡಿಗೇರ, ಸಿಆರ್ ಪಿ ಮಹೇಶ ಪೂಜಾರ,ಶಿಕ್ಷಕರಾದ ಶಂಕರ ಚುನಮುರಿ ಸೇರಿದಂತೆ ವಿದ್ಯಾರ್ಥಿಗಳ ಪಾಲಕರು ಇದ್ದರು.



ಬಾರ್, ರೆಸ್ಟೋರೆಂಟ್‌ಗೆ ವಿರೋಧ

ಬೈಲಹೊಂಗಲ: ನಗರದ ಮೃತ್ಯುಂಜಯ ನಗರದಲ್ಲಿರುವ ಚನ್ನಮ್ಮ ಬ್ಯಾಂಕ್ ಪಕ್ಕ ಆರಂಭಿಸಲು ಉದ್ದೇಶಿಸಿರುವ ನೂತನ ಬಾರ್ ಮತ್ತು ರೆಸ್ಟೋರೆಂಟ್‌ಗೆ ಸ್ಥಳೀಯ ನಿವಾಸಿಗಳು ತೀವ್ರ ವಿರೋಧ ವ್ಯಕ್ತಪಡಿಸಿ ಉಪವಿಭಾಗಾಧಿಕಾರಿ, ನಗರಸಭೆ ನಗರಾಯುಕ್ತರಿಗೆ ಸೋಮವಾರ ಮನವಿ ಸಲ್ಲಿಸಿದರು.

ಮೃತ್ಯುಂಜಯ ನಗರ ಸಂಪೂರ್ಣ ವಸತಿ ಪ್ರದೇಶವಾಗಿದೆ. ಮಹಿಳೆಯರು, ಮಕ್ಕಳು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ಈ ಪ್ರದೇಶದ ಸುತ್ತಮುತ್ತ ಶಾಲೆಗಳು, ದೇವಸ್ಥಾನಗಳು, ಸಾರ್ವಜನಿಕ ಸಂಸ್ಥೆಗಳಿದ್ದು, ಈ ಸ್ಥಳದಲ್ಲಿ ಬಾರ್ ಮತ್ತು ರೆಸ್ಟೋರೆಂಟ್ ಆರಂಭವಾದರೆ ಸಾರ್ವಜನಿಕ ಶಾಂತಿ, ನೆಮ್ಮದಿಗೆ ಧಕ್ಕೆಯಾಗುವ ಸಾಧ್ಯತೆ ಇದೆ.

ಬಾರ್ ಆರಂಭವಾದಲ್ಲಿ ರಾತ್ರಿ ವೇಳೆ ಗದ್ದಲ, ಮದ್ಯಪಾನದಿಂದ ಉಂಟಾಗುವ ಅಶಾಂತಿ, ವಾಹನ ಸಂಚಾರ ತೊಂದರೆ, ಅನೈತಿಕ ಚಟುವಟಿಕೆಗಳು ಹೆಚ್ಚಾಗುವ ಸಾಧ್ಯತೆ ಇದೆ. ಇದರಿಂದ ಮಹಿಳೆಯರು, ವಿದ್ಯಾರ್ಥಿಗಳ ಸುರಕ್ಷತೆಗೆ ತೊಂದರೆಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು. ಸರ್ಕಾರದ ನಿಯಮಾನುಸಾರ ವಸತಿ ಪ್ರದೇಶದಲ್ಲಿ ಬಾರ್ ಮತ್ತು ರೆಸ್ಟೋರೆಂಟ್‌ಗೆ ಅನುಮತಿ ನೀಡುವ ಮೊದಲು ಸ್ಥಳೀಯ ನಿವಾಸಿಗಳ ಅಭಿಪ್ರಾಯ ಪಡೆದು ಪರಿಶೀಲನೆ ನಡೆಸಬೇಕು. ಆದರೆ, ಯಾವುದೇ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆ ಮಾಡದೇ ಅನುಮತಿ ನೀಡಲು ಮುಂದಾಗಿರುವುದು ಸರಿಯಲ್ಲ ಎಂದು ದೂರಿದರು. ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟ ಇಲಾಖೆಗಳು ಸ್ಥಳ ಪರಿಶೀಲನೆ ನಡೆಸಿ ಅನುಮತಿ ತಕ್ಷಣವೇ ರದ್ದುಪಡಿಸಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸಾರ್ವಜನಿಕರೊಂದಿಗೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪುರಸಭೆ ಮಾಜಿ ಅಧ್ಯಕ್ಷರಾದ ರಾಜು ಜನ್ಮಟ್ಟಿ, ವಿಜಯ ಬೋಳಣ್ಣವರ, ಸಂತೋಷ ಪಾಟೀಲ, ಅಶೋಕಮಜಗನ್ನವರ, ಬಸವರಾಜ ಕಪ್ಪಣ್ಣವರ, ಆನಂದ ಕೋಣ್ಣೂರಮಠ, ಅಮರೇಶ ಹೊಸಮಠ, ಬಬಲಿ ಹಿರೇಮಠ, ಮಹಾಂತೇಶ ಕಿಲೆದಾರ, ಮಹಾಂತೇಶ ರಾಮಣ್ಣವರ, ಪ್ರಕಾಶ ಹಲಮನವರ, ನಾಗರಾಜ ಹಲಮನವರ, ಗುರು ಕಾಟಕರ, ಪ್ರಭಾಕರ ಪೋಣಣ್ಣವರ, ಗಿರೀಶ ಪೋಣಣ್ಣವರ, ಮಹಾಂತೇಶ ಕೂಡಲಗಿಮಠ, ಪ್ರಕಾಶ ಕಣ್ಣೂರಳ್ಳಿ, ಪರಮೇಶ್ವರ ರಾಮಣ್ಣವರ ಸೇರಿದಂತೆ ಮೃತ್ಯುಂಜಯ ನಗರದ ಅನೇಕ ನಿವಾಸಿಗಳು ಇದ್ದರು.



ಸವದತ್ತಿ ಜಾತ್ರೆಯಲ್ಲಿ ಪಾಲ್ಗೊಂಡ ಚನ್ನರಾಜ ಹಟ್ಟಿಹೊಳಿ

ಸವದತ್ತಿ: ಸವದತ್ತಿ ಪಟ್ಟಣದಲ್ಲಿ 44 ವರ್ಷಗಳ ಬಳಿಕ ನಡೆಯುತ್ತಿರುವ ಶ್ರೀ ಗ್ರಾಮದೇವಿ ಜಾತ್ರಾ ಮಹೋತ್ಸವದಲ್ಲಿ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಸೋಮವಾರ ಪಾಲ್ಗೊಂಡು, ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಅತ್ಯಂತ ಭಕ್ತಿ, ಸಡಗರದಿಂದ ಗ್ರಾಮದೇವಿಯ ಜಾತ್ರೆ ನಡೆಯುತ್ತಿದ್ದು, ಲಕ್ಷಾಂತರ ಭಕ್ತರು ಪಾಲ್ಗೊಂಡಿದ್ದಾರೆ. ಗ್ರಾಮ ದೇವಿ ಸವದತ್ತಿ ಪಟ್ಟಣಕ್ಕೆ ಹಾಗೂ ಭಕ್ತರಿಗೆ ಸನ್ಮಂಗಳವನ್ನುಂಟು ಮಾಡಲಿ, ಮಳೆ, ಬೆಳೆ ಉತ್ತಮವಾಗಿ ಜನರು ಸುಖದಿಂದ ಬಾಳುವಂತಾಗಲಿ ಎಂದು ಚನ್ನರಾಜ ಹಟ್ಟಿಹೊಳಿ ಪ್ರಾರ್ಥಿಸಿದರು. ಈ ವೇಳೆ ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.



ಹನುಮಾನ ಓಕುಳಿ ಉತ್ಸವ: ಭವ್ಯ ಮೆರವಣಿಗೆ

ಮುಗಳಖೋಡ: ಪಟ್ಟಣದಲ್ಲಿ ಹನುಮಾನ ದೇವಸ್ಥಾನದ ಓಕುಳಿ ನಿಮಿತ್ತ ಶನಿವಾರ ಸಂಜೆ ಕೊಂಡ ಪೂಜೆ, ಭಾನುವಾರ ಸಂಜೆ ನಡು ಓಕುಳಿ ಸೋಮವಾರ ಬೆಳಿಗ್ಗೆ ಆಂಜನೇಯ ಸ್ವಾಮಿಗೆ ಅಭಿಷೇಕ ಜೊತೆ ವಿಶೇಷವಾಗಿ ಎಲೆ ಪೂಜೆ ಮಾಡಲಾಯಿತು.

ಸಂಜೆ 3 ಗಂಟೆಗೆ ಶ್ರೀ ವಿಠ್ಠಲ ಮಂದಿರದಿಂದ ಹನುಮಾನ ಮಂದಿರದವರೆಗೆ ಹನುಮಾನ್ ಕಮೀಟಿ, ಸಿದ್ದರಾಮೇಶ್ವರ ವಾಹನ ಚಾಲಕರ ಮತ್ತು ಮಾಲೀಕರ ಸಂಘ ಹಾಗೂ ಕರ್ನಾಟಕ ಚಾಲಕರ ಒಕ್ಕೂಟ, ಅಪ್ಪಾಜಿ ಹಮಾಲರ ಸಂಘ ಸೇರಿದಂತೆ ಸಕಲ ಸದ್ಭಕ್ತರಿಂದ ಧ್ವನಿವರ್ಧಕ, ಡೊಳ್ಳು ಕುಣಿತ, ಜಾಂಜಪತಾಕ, ಹಾಗೂ ವಿವಿಧ ವಾದ್ಯ ಮೇಳಗಳೊಂದಿಗೆ ಬೆಳ್ಳಿ ರಥದಲ್ಲಿ ಹಾಗೂ ಎಲ್ಲ ವಾಹನಗಳ ಸಮೇತ ವಾಯುಪುತ್ರನ ಭಾವಚಿತ್ರದ ಭವ್ಯ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜರುಗಿತು.ಪಟ್ಟಣದ ಭಕ್ತಾದಿಗಳು ಸೋಮವಾರ ನಸುಕಿನಜಾವ ದಂಡೊತ್ತ ಹಾಕಿ ಹನುಮನ ಹರಕೆಯನ್ನು ತಿರಿಸಿದರು.

ಪಟ್ಟಣದ ವಾಹನಗಳ ಚಾಲಕರ ಸಂಘದವರು ದರೂರ ಗ್ರಾಮದ ಕೃಷ್ಣಾ ನದಿಯಿಂದ ನೀರು ತಂದು ಓಕುಳಿ ಕೊಂಡಕ್ಕೆ ಹಾಕಿದರು. ಜನರೆಲ್ಲಮನೆಯಿಂದನೀರುತಂದು ಕೊಂಡಕ್ಕೆ ಹಾಕಿ ತಮ್ಮ ಭಕ್ತಿಯನ್ನು ಸಮರ್ಪಿಸಿದರು. 6, ಗಂಟೆಗೆ ಪಲ್ಲಕ್ಕಿ ಉತ್ಸವದೊಂದಿಗೆ ಕಡೆ ಓಕುಳಿಗೆ ಮಂಗಲ ಹಾಡಲಾಯಿತು.

ಈ ಸಂದರ್ಭದಲ್ಲಿ ಹನುಮಾನ ದೇವಸ್ಥಾನ ಕಮೀಟಿಯ ಎಲ್ಲ ಸದಸ್ಯರು, ಪಟ್ಟಣದ ಹಿರಿಯರು, ಮುಖಂಡರು ಹಾಗೂ ಮಹಿಳೆಯರು ಸೇರಿದಂತೆ ಭಕ್ತಾದಿಗಳು ಉಪಸ್ಥಿತರಿದ್ದರು.



ಮನ ಶುದ್ಧ ಬುದ್ಧ ಕೃತಿಗೆ ಬಹುಮಾನ

ಬೆಳಗಾವಿ: ಗಣಕರಂಗ(ರಿ)ಧಾರವಾಡ ಅವರು ಆಯೋಜಿಸಿದ್ದ ಬುದ್ಧ ಯುದ್ಧ ಕವನ ಸ್ಪರ್ಧೆ-2026ರ ಫಲಿತಾಂಶ ಪ್ರಕಟವಾಗಿದ್ದು, ಬೆಳಗಾವಿಯ ಸಾಹಿತಿಗಳಾದ ಕಿರಣ ಕ ಗಣಾಚಾರಿ ಮುತ್ತಿನಪೆಟ್ಟಿಗೆ(ಇಟಗಿ) ಅವರ ಕವನ 'ಮನ ಶುದ್ಧ ಬುದ್ಧ' ಸ್ವರಚಿತ ಕವನವು 'ಪ್ರಥಮ ಬಹುಮಾನ' ಕ್ಕೆ ಪಾತ್ರವಾಗಿದೆ. ದ್ವಿತೀಯ ಬಹುಮಾನ ದೀಪಾ ಪಾಟೀಲ್ ಟಿ ಗುಂಡೂರು, ತೃತೀಯ ಬಹುಮಾನ ಜಗದೀಶ್ ಮುಗಳಿ ಬೆಂಡವಾಡ ಮತ್ತು ನಾಲ್ವರು ಮೆಚ್ಚುಗೆ ಬಹುಮಾನಕ್ಕೆ ಪಾತ್ರರಾಗಿರುತ್ತಾರೆ ಎಂದು ಗಣಕರಂಗ(ರಿ)ಧಾರವಾಡ ಅಧ್ಯಕ್ಷ ಹಾಗೂ ರಂಗಕರ್ಮಿ-ಸಂಚಟಕರಾದ ಸಿದ್ದರಾಮಯ್ಯ ಹಿಪ್ಪರಗಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ರಾಯಬಾಗ: ತಾಲೂಕಿನ ನಿಲಜಿ ಗ್ರಾಮದ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಸತತ 32 ವರ್ಷಗಳ ಕಾಲ ಕಾರ್ಯ ನಿರ್ವಹಿಸಿ ವರ್ಗಾವಣೆಗೊಂಡ ಶಿಕ್ಷಕಿ ವಿದ್ಯಾವತಿ ಮೊಸಳೆ ಅವರನ್ನು ಅದ್ದೂರಿಯಾಗಿ ಬೀಳ್ಕೊಡಲಾಯಿತು. ಪ್ರೌಢಶಾಲೆ ಪ್ರಾಚಾರ್ಯ ಐ.ಆರ್. ನದಾಫ, ಎಸ್‌ಡಿಎಂಸಿ ಅಧ್ಯಕ್ಷ ಅಜಿತ್ ಹಸರೆ, ಮಾಯಗೌಡ ಪಾಟೀಲ, ಅಮಿತ ಮಾಳಗೆ, ಶೋಭಾ ಕಾನಡೆ, ಪ್ರದೀಪ ಪಾಟೀಲ, ಮಾಯಾ ಸೌದತ್ತಿ, ಗಿರಿಜಾ ಸೋನಾರ, ಆರತಿ ಮೋರೆ, ಎಸ್ಡಿಎಂಸಿ ಸದಸ್ಯರು, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

ಸಂಸ್ಕಾರ ಕಲಿಸುವುದು ಮುಖ್ಯ: ಸಾಂಗಲಿ

ಗೋಕಾಕ: ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಪಾಲಕರು ಮಕ್ಕಳಿಗೆ ಕಲಿಸುವುದು ಅಗತ್ಯವಾಗಿದೆ ಎಂದು ನಿವೃತ್ತ ಮುಖ್ಯೋಪಾಧ್ಯಾಯ ಜಿ.ಎನ್. ಸಾಂಗಲಿ ಅಭಿಪ್ರಾಯಪಟ್ಟರು.

ಅವರು ತಾಲೂಕಿನ ಶಿಂದಿಕುರಬೇಟ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಸಮತಾ ಶಿಕ್ಷಣ ಸಮಿತಿಯ ಮಾಧ್ಯಮಿಕ ಶಾಲೆಯ ಎಸ್‌ಎಸ್‌ಎಲ್‌ಸಿ ಸನ್ 1995/1996ಸಾಲಿನ ವಿದ್ಯಾರ್ಥಿಗಳ ಗುರು ವಂದನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ಪಾಲಕರು ತಮ್ಮ ಬದುಕಿನ ಜೊತೆಗೆ ಮಕ್ಕಳ ಬದುಕನ್ನು ರೂಪಿಸಿಕೊಳ್ಳಬೇಕು. ಶಿಕ್ಷಣ ಸಂಸ್ಥೆಯು ತಮಗೆ ಒಳ್ಳೆಯ ಮೌಲ್ಯಗಳನ್ನು ನೀಡಿದೆ. ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಯಾವತ್ತೂ ಕೈ ಬೀಡುವುದಿಲ್ಲ. ನಾವು ಸದಾ ಸಾಧಕರಾಗಬೇಕು. ಇಂದಿನ ಯುಗದಲ್ಲಿ ಮಕ್ಕಳಿಗೆ ಮೊಬೈಲ್ ಹಾಗೂ ಟಿ.ವಿ ಗಳಿಂದ ದೂರ ಉಳಿಯಲು ಪಾಲಕರು ಮುಂದಾಗಬೇಕು ಎಂದರಲ್ಲದೇ ಶಿಕ್ಷಣ ಸಂಸ್ಥೆ ಬೆಳೆದು ಬಂದ ದಾರಿಯನ್ನು ವಿವರಿಸಿದರು. ಸಮಾಜ ನಮಗೆ ಏನು ಕೊಟ್ಟಿದೆ ಎನ್ನುವುದಕ್ಕಿಂತ ನಾವು ಸಮಾಜಕ್ಕೆ ಏನು ಕೊಟ್ಟಿದ್ದೇನೆ ಎನ್ನುವುದು ಮುಖ್ಯ ಎಂದು ಹೇಳಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ನಿವೃತ್ತ ಪ್ರಧಾನಗುರು ಎಸ್.ಎನ್. ಉರಜಿಂಗಗೋಳ ಅವರು ಕಳೆದ 30 ವರ್ಷಗಳ ಹಿಂದೆ ನಮ್ಮ ಶಾಲೆಯಲ್ಲಿ ಶಿಕ್ಷಣ ಕಲಿತು, ಇಂದು ವಿದ್ಯೆ ಹಾಗೂ ಜ್ಞಾನ ನೀಡಿದ ಗುರುಗಳನ್ನು ಒಂದೇ ವೇದಿಕೆಯಲ್ಲಿ ಅವರನ್ನು ಅಭಿಮಾನ ಹಾಗೂ ಗೌರವದಿಂದ ಸನ್ಮಾನಿಸಿದ ಕ್ಷಣ ನಮ್ಮ ಜೀವನದಲ್ಲಿ ಎಂದೂ ಮರೆಯಲಾಗದ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅವರ ಭವಿಷ್ಯವನ್ನು ಉಜ್ವಲಗೊಳಿಸಬೇಕು ಎಂದು ಹೇಳಿದರು.

ವೇದಿಕೆ ಮೇಲೆ ಬಿ.ಎಂ.ಕಳಸನ್ನವರ, ಕೆ.ವಿ.ಕಡ್ಡಿ, ಆರ್,ವೈ.ಬೆಳಗಲಿ, ಆರ್.ಎಸ್. ಸೊಗಲಿ, ಎಫ್.ಜಿ.ಕರನಾಚಿ, ಎಂ.ಎಸ್.ಪಾಟೀಲ, ಸಿ.ಬಿ.ಡೂಗನವರ, ಎಂ.ಎಸ್.ಬೆಳಗಲಿ, ಪಿ.ಎಚ್. ಗೋಸಬಾಳ, ಆರ್.ಬಿ.ಕರೆಪ್ಪಗೋಳ, ವಿಠ್ಠಲ ಕರೋಶಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ತಮ್ಮ ಶಾಲೆಯ ದಿನಗಳನ್ನು ಸ್ಮರಿಸಿಕೊಂಡರು. ವಿದ್ಯೆ ಕಲಿಸಿದ ಮಾಧ್ಯಮಿಕ ಹಾಗೂ ಪ್ರಾಥಮಿಕ ಶಾಲೆಯ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಿದರು. ಪ್ರಭಾಕರ ಕಾರ್ಯಾಗೋಳ ಸ್ವಾಗತಿಸಿದರು. ಪಂಚಾಕ್ಷರಿ ಪಂಚಯ್ಯನವರಮಠ ನಿರೂಪಿಸಿದರು. ಮಹಾಂತೇಶ ಪವಾರ್ ವಂದಿಸಿದರು.





ಹಾರೂಗೇರಿ: ಇತ್ತೀಚೆಗೆ ರಸ್ತೆ ಅಪಘಾತದಲ್ಲಿ ಮೃತಪಟ್ಟ ವಿದ್ಯಾರ್ಥಿ ಮಲ್ಲಯ್ಯ ಈರಯ್ಯ ಮಠಪತಿ ಅವರ ಮನೆಗೆ ಪಟ್ಟಣದ ಜನತಾ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ರಾಜಶೇಖರ ಬ ಪಾಟೀಲ ಹಾಗೂ ಅವರ ಧರ್ಮಪತ್ನಿ ಜಯಶ್ರೀ ಪಾಟೀಲ ಭೇಟಿ ನೀಡಿ, ಅವರ ಕುಟುಂಬಕ್ಕೆ ಸಾಂತ್ವನ ಹೇಳಿದರು. ಅವರ ಕುಟುಂಬ ನಿರ್ವಹಣೆಗೆ ಧನ ಸಹಾಯ ಮಾಡುವುದರ ಮೂಲಕ ಆರ್ಥಿಕ ಸಹಕಾರ ನೀಡಿದರು. ಈ ಸಂದರ್ಭದಲ್ಲಿ ಮಠಪತಿ ಕುಟುಂಬದವರು, ಹಿರೇಮಠ ಕುಟುಂಬದವರು ಹಾಗೂ ಪಟ್ಟಣದ ಹಿರಿಯರು ಉಪಸ್ಥಿತರಿದ್ದರು.

ಕಿರುಸುದ್ದಿ

ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ಬೆಳಗಾವಿ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಸದಾಶಿವ ನಗರದ ರೆಡ್ಡಿ ಭವನದಲ್ಲಿ ಶಿವಶರಣೆ ಮಹಾ ಸಾಧ್ವಿ ಹೇಮರಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ರೆಡ್ಡಿ ಸಂಘದ ಗೌರವಾಧ್ಯಕ್ಷರಾದ ಇಂದಿರಾ ಬಾಯಿ ಮಳಲಿ, ಬೆಳಗಾವಿ ರೆಡ್ಡಿ ಸಂಘದ ಅಧ್ಯಕ್ಷ ರಾಮಣ್ಣ ಮಳ್ಳೂರ, ರೆಡ್ಡಿ ಸಂಘದ ಉಪಾಧ್ಯಕ್ಷರಾದ ಕಾಂತು ಜಾಲಿಬೇರಿ, ರೆಡ್ಡಿ ಸಂಘದ ಟ್ರಸ್ಟ್ ನ ಸದಸ್ಯರಾದ ತಿಪ್ಪೇಸ್ವಾಮಿ, ಸಾಹಿತಿಗಳಾದ ಡಾ.ರೇಣುಕಾ ಕಠಾರಿ, ಶಶಿಕಲಾ ನಾಡಗೌಡರ ಹಾಗೂ ಸಮುದಾಯದ ಗಣ್ಯರು ಉಪಸ್ಥಿತರಿದ್ದರು.

10 ಕೆಜಿ ಅಕ್ಕಿ ವಿತರಣೆ

ಬೆಳಗಾವಿ : ಬೆಳಗಾವಿ ಗ್ರಾಮೀಣ ತಾಲೂಕಿನ ಎಲ್ಲ ನ್ಯಾಯಬೆಲೆ ಅಂಗಡಿಕಾರರ ಆದ್ಯ ಗಮನಕ್ಕೆ ಸರಕಾರದಿಂದ ಮೇ-2026 ನೇ ಮಾಹೆಯಲ್ಲಿ (ಕೇಂದ್ರ ಸರಕಾರದ) ಮೇ-2026ನೇ ಮಾಹೆಯ ಹಾಗೂ ಜೂನ-2026ನೇ ಮಾಹೆಯ ಅಕ್ಕಿಯನ್ನು ಒಟ್ಟಿಗೆ ವಿತರಿಸಲಾಗುವುದು. ಅಂತ್ಯೋದಯ ಪಡಿತರ ಚೀಟಿ ಪ್ರತಿ ಕಾರ್ಡಿಗೆ=35 ಕೆ.ಜಿ. ಅಕ್ಕಿ (ಮೇ-2026) + 35 ಕೆ.ಜಿ.ಅಕ್ಕಿ (ಜೂನ-2026) ಒಟ್ಟು 70 ಕೆ.ಜಿ.ಅಕ್ಕಿ ಬಿಪಿಎಲ್ ಪಡಿತರ ಚೀಟಿ ಪ್ರತಿ ಸದಸ್ಯರಿಗೆ = 5 ಕೆ.ಜಿ.ಅಕ್ಕಿ (ಮೇ-2026) + 5 ಕೆ.ಜಿ.ಅಕ್ಕಿ (ಜೂನ-2026) ಒಟ್ಟು 10 ಕೆ.ಜಿ.ಅಕ್ಕಿ ವಿತರಿಸಲಾಗುವುದು. ವಿಶೇಷ ಸೂಚನೆ: ಪ್ರತಿ ಕಾರ್ಡಿಗೆ ಮೊದಲನೆಯದಾಗಿ ಮೇ-2026ನೇ ಮಾಹೆಯ ಬಯೋ ಪಡೆದುಕೊಂಡು ಪಡಿತರ ವಿತರಣೆ ಮಾಡಿ ಅದೇ ಪಡಿತರ ಚೀಟಿಯನ್ನು ಇನ್ನೊಮ್ಮೆ ಜೂನ-2026ನೇ ಮಾಹೆಯ ಬಯೋ ಪಡೆದುಕೊಂಡು ಪಡಿತರ ವಿತರಿಸತಕ್ಕದ್ದು, ಪ್ರತಿ ಪಡಿತರ ಚೀಟಿದಾರರಿಂದ 2 ಬಾರಿ (ಮೇ-2026 ಹಾಗೂ ಜೂನ-2026ನೇ ಮಾಹೆಯ) ಬಯೋ ಪಡೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ತಪ್ಪಿದ್ದಲ್ಲಿ ಮುಂದಿನ ಆಗು ಹೋಗುಗಳಿಗೆ ಸಾರ್ವಜನಿಕರೇ ನೇರ ಹೊಣೆಗಾರರು ಎಂದು ಬೆಳಗಾವಿ ತಹಶೀಲ್ದಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಲ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಬೆಳಗಾವಿ : 2026-27ನೇ ಸಾಲಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾಗುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಅರಿವು ಸಾಲ ಯೋಜನೆಯಲ್ಲಿ ಎಂ.ಬಿ.ಬಿ.ಎಸ್. ಬಿ.ಡಿ.ಎಸ್. ಬಿ.ಇ. ಬಿ.ಆರ್ಕ್. ಬಿ.ಟೆಕ್. ಮತ್ತು ಬಿ.ಆಯುಷ್ ಫಾರ್ಮಸಿ, ಕೃಷಿ ವಿಜ್ಞಾನ ಮತ್ತು ಪಶು ವೈದ್ಯಕೀಯ ಇಂತಹ ಕೋರ್ಸುಗಳಿಗೆ ಅರಿವು ಯೋಜನೆಯಡಿಯಲ್ಲಿ ಸಾಲ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು (ಕ್ರಿಶ್ಚಿಯನ್ ಸಮುದಾಯವನ್ನು ಹೊರತು ಪಡಿಸಿ) ಈ ಯೋಜನೆಯಲ್ಲಿ ಸಾಲ ಸೌಲಭ್ಯ ಪಡೆಯಲು ಆನ್ಲೈನ ಮುಖಾಂತರ kmdconline.karnataka.gov.in ಈ ವೆಬ್ ಸೈಟ್ನಲ್ಲಿ ಮೇ.8 ರಿಂದ ಮೇ 30 ರವರೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರ ಕಚೇರಿ ಮೌಲಾನಾ ಆಝಾದ ಅಲ್ಪಸಂಖ್ಯಾತರ ಭವನ, ಕೆ.ಎಸ್.ಸಿ.ಎ. ಕ್ರಿಕೇಟ್ ಕ್ರೀಡಾಂಗಣ ಎದುರುಗಡೆ, ರಾಮತೀರ್ಥ ನಗರ, ಬೆಳಗಾವಿ ಕಚೇರಿಗೆ ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಟಕಗಳಲ್ಲಿ ನೈತಿಕತೆ ಅಡಕ

ಧಾರವಾಡ: ಗ್ರೀಕ್ ನಾಟಕಗಳು ಪ್ರಾಚೀನ ಸಂಸ್ಕೃತಿ, ರಂಗಭೂಮಿ ಜೊತೆ ತತ್ವಶಾಸ್ತ್ರ ಮತ್ತು ಮಾನವ ಶಾಸ್ತ್ರದ ತಳಹದಿಯಾಗಿ ಇಂದಿಗೂ ಗ್ರೀಕ್ ನಾಟಕಗಳು ತಮ್ಮ ಪ್ರಸ್ತುತತೆ ಉಳಿಸಿಕೊಂಡಿವೆ ಎಂದು ಹಾಸನ ವಿವಿಯ ಕುಲಪತಿ ಪ್ರೊ. ತರಕೇರಿ ತಾರಾನಾಥ ಹೇಳಿದರು.

ಧಾರವಾಡ ಕಟ್ಟೆ ಮತ್ತು ಹಾಸನ ವಿವಿಯ ಸಹಯೋಗದಲ್ಲಿ ನಗರದ ಕೆಎಲ್‌ಇ ಸಂಸ್ಥೆಯ ಮೃತ್ಯುಂಜಯ ಕಲಾ-ವಾಣಿಜ್ಯ ಭವನದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿದ ಅವರು, ಗ್ರೀಕ್ ನಾಟಕಗಳಲ್ಲಿ ಧರ್ಮ, ನ್ಯಾಯ, ನೈತಿಕ ಅಡಕ ಆಗಿದ್ದಾಗಿ ತಿಳಿಸಿದರು. ಮೃತ್ಯುಂಜಯ ಕಾಲೇಜಿನ ಪ್ರಾಚಾರ್ಯೆ ಡಾ.ನೀಲಕ್ಕ ಪಾಟೀಲ ಮಾತನಾಡಿ, ಗ್ರೀಕ್ ನಾಟಕಗಳು ಸಂಗೀತದಿಂದ ಆರಂಭವಾಗಿ ಸಂಭಾಷಣೆಯ ಮೂಲಕ ಅಭಿವೃದ್ಧಿ ಹೊಂದಿದ್ದು, ಅವು ಧಾರ್ಮಿಕ ಆಚರಣೆಗಳಿಂದ ಹುಟ್ಟಿಕೊಂಡಿದ್ದಾಗಿ ಹೇಳಿದರು.

ಲೇಖಕ ಡಾ. ವಿ.ಟಿ.ನಾಯಕ ಮಾತನಾಡಿ, ಗ್ರೀಕ್ ನಾಟಕಗಳು ಸಮಾಜ ಮತ್ತು ದೈವ ಹಿನ್ನಲೆ ಒಳಗೊಂಡಿವೆ. ಯುದ್ಧ, ಅರಾಜಕತೆ ಮತ್ತು ಮಾನವ ಜೀವನದ ಸಂಕಷ್ಟಗಳನ್ನು ಹಾಗೂ ಸಾಮಾಜಿಕ ಮಾನವೀ ಮೌಲ್ಯಗಳನ್ನು ಕೂಡ ಎತ್ತಿ ತೋರಿಸುವೆ ಎಂದರು.



ಬೆಳಗಾವಿ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಇವರ ಸಂಯುಕ್ತ ಆಶ್ರಯದಲ್ಲಿ ನಗರದ ಸದಾಶಿವ ನಗರದ ರೆಡ್ಡಿ ಭವನದಲ್ಲಿ ಶಿವಶರಣೆ ಮಹಾ ಸಾಧ್ವಿ ಹೇಮರಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಯಿತು.

ಶ್ರದ್ಧೆ, ಆಸಕ್ತಿಯಿಂದ ಯಶಸ್ಸು ಸಾಧ್ಯ

ಯರಗಟ್ಟಿ: ವಿದ್ಯಾರ್ಥಿಗಳು ಶ್ರದ್ಧೆ ಮತ್ತು ಆಸಕ್ತಿಯಿಂದ ಓದಿದರೆ ಖಂಡಿತವಾಗಿಯೂ ಶೈಕ್ಷಣಿಕವಾಗಿ ಯಶಸ್ಸು ಪಡೆಯಬಹುದು ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಸಮೀಪದ ಜಾಲಿಕಟ್ಟಿ ಗ್ರಾಮದಲ್ಲಿ ಬುಧವಾರ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಸಾಧಕ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿ, ವಿದ್ಯಾರ್ಥಿಯ ಭವಿಷ್ಯದ ಜೀವನಕ್ಕೆ ವಿದ್ಯೆ ಬಹಳ ಅವಶ್ಯಕತೆ ಇರುವದರಿಂದ ಪೋಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎಂದರು.ಗ್ರಾಪಂ ಮಾಜಿ ಅಧ್ಯಕ್ಷ ಬಸವರಾಜ ಕಡಬಿ ಮಾತನಾಡಿ, ಶಿಕ್ಷಣ ಎಂದರೆ ಮಕ್ಕಳ ಸರ್ವೋತೊಮುಖ ಬೆಳವಣಿಗೆ. ಪ್ರತಿಯೊಬ್ಬ ವಿದ್ಯಾರ್ಥಿಯು ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ, ಶಿಕ್ಷಣ, ಎಲ್ಲ ಚಟುವಟಿಕೆಗಳಲ್ಲೂ ಭಾಗವಹಿಸಿದರೆ ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆ ಹೊರತರಲು ಸಾಧ್ಯ ಎಂದರು. ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.ಸವದತ್ತಿ ಎಪಿಎಂಸಿ ಅಧ್ಯಕ್ಷ ಚಂದ್ರು ಜಂಬ್ರಿ, ಮಾಜಿ ಎಪಿಎಂಸಿ ಅಧ್ಯಕ್ಷ ಪ್ರಕಾಶ ನರಿ, ಗ್ರಾಪಂ ಮಾಜಿ ಸದಸ್ಯ ಚೆನ್ನಯ್ಯ ಪೂಜೇರ, ವಿರೂಪಾಕ್ಷಯ್ಯ ಪೂಜೇರ, ವೈ.ಎಫ್.ನಾಯ್ಕರ, ಮಲ್ಲಿಕಾರ್ಜುನ ಯಡಳ್ಳಿ, ಮಲ್ಲನಾಯ್ಕ ನಾಯ್ಕರ, ಬಸವರಾಜ ಕಂಬಾರ, ಬಸಪ್ಪ ಬಡ್ರೊಳ್ಳಿ, ಈರಯ್ಯ ಗೌಡರ, ಗೌಡಪ್ಪ ನಾಯ್ಕರ, ವೇಂಕಣ್ಣ ಯರಡ್ಡಿ, ವೇಂಕಣ್ಣ ಕಮಕೇರಿ, ಕಲ್ಮೇಶ ಯಡಳ್ಳಿ, ಗಂಗಯ್ಯ ಗೌಡರ, ಪ್ರಕಾಶ ನಾಯ್ಕರ, ನಿಂಗಪ್ಪ ಬೀರಪ್ಪನವರ ಕಲ್ಮೇಶ ಬಾಲರೆಡ್ಡಿ ಮತ್ತಿತರಿದ್ದರು.



ಯರಗಟ್ಟಿ ಸಮೀಪದ ಜಾಲಿಕಟ್ಟಿ ಗ್ರಾಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಸಾಧಕ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಶಾಸಕ ವಿಶ್ವಾಸ ವೈದ್ಯ, ಸವದತ್ತಿ ಎಪಿಎಂಸಿ ಅಧ್ಯಕ್ಷ ಚಂದ್ರು ಜಂಬ್ರಿ, ಅವರನ್ನು ಸನ್ಮಾಸಲಾಯಿತು. ಬಸವರಾಜ ಕಡಬಿ, ಚಂದ್ರು ಜಂಬ್ರಿ, ಪ್ರಕಾಶ ನರಿ, ಚೆನ್ನಯ್ಯ ಪೂಜೇರ ಮತ್ತಿತರಿದ್ದರು.

ಕಪಿಲೇಶ್ವರ ಹೊಂಡ ಪರಿಶೀಲಿಸಿದ ಅಧಿಕಾರಿಗಳು

ಸುರಕ್ಷತೆಗೆ ಒತ್ತು ನೀಡಲು ಸೂಚನೆ

ಬೆಳಗಾವಿ: ದಕ್ಷಿಣ ಕಾಶಿ ಎಂದು ಹೆಸರಾಗಿರುವ ಕಪಿಲೇಶ್ವರ ಮಂದಿರದ ಹಿಂಭಾಗದ ಕೆರೆಯ ಗೋಡೆ ಕುಸಿದು ಇಬ್ಬರು ಬಾಲಕರು ಬಲಿಯಾದ ಬೆನ್ನಲ್ಲೇ ಮಹಾನಗರ ಪಾಲಿಕೆ ಅಧಿಕಾರಿಗಳು ಎಚ್ಚೆತ್ತುಕೊಂಡಿದ್ದಾರೆ.

ಸೋಮವಾರ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಪಾಲಿಕೆ ಆಯುಕ್ತರ ತಂಡ ಪರಿಶೀಲನೆ ನಡೆಸಿ, ಮುಂದಿನ ಕ್ರಮಗಳ ಬಗ್ಗೆ ಮಾಲೀಕರೊಂದಿಗೆ ಚರ್ಚೆ ನಡೆಸಿದೆ.

ಈ ಭೀಕರ ದುರಂತದ ಬೆನ್ನಲ್ಲೇ ಮಹಾನಗರ ಪಾಲಿಕೆಯ ಆಯುಕ್ತರಾದ ಕಾರ್ತಿಕ್ ಎಂ., ನಗರಸೇವಕ ರಾಜು ಭಾತಕಾಂಡೆ ಹಾಗೂ ಅಭಿಯಂತರರ ತಂಡ ಸ್ಥಳಕ್ಕೆ ಭೇಟಿ ನೀಡಿದರು. ಕೆರೆಯ ಸದ್ಯದ ಸ್ಥಿತಿಗತಿಯನ್ನು ಅವಲೋಕಿಸಿದ ತಂಡವು, ಕೂಡಲೇ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಮಾಲೀಕರೊಂದಿಗೆ ಗಂಭೀರ



ಸಮಾಲೋಚನೆ ನಡೆಸಿತು.

ಬಳಿಕ ಸ್ಥಳೀಯರೊಂದಿಗೆ ಮಾತನಾಡಿದ ಅವರು, ಕೆರೆಯ ಜಾಗವು ಖಾಸಗಿ ಆಸ್ತಿಗೆ ಸೇರಿದೆ ಎಂದು ಸ್ಪಷ್ಟಪಡಿಸಿದರು. ಇತ್ತೀಚಿನ ಮಳೆಯಿಂದಾಗಿ ಕೆರೆಯ ಮತ್ತೊಂದು ಪಾರ್ಶ್ವದ ಗೋಡೆಯೂ ಕುಸಿದಿದ್ದು, ಅಪಾಯದ ಮುನ್ಸೂಚನೆ ನೀಡುತ್ತಿದೆ. ಹೀಗಾಗಿ ಮುಂಜಾಗ್ರತಾ ಕ್ರಮವಾಗಿ ಕೆರೆಯ ಸುತ್ತಮುತ್ತ ವಾಸವಿದ್ದ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲು ಸೂಚಿಸಲಾಗಿದೆ. ಕಂದಾಯ ಇಲಾಖೆ ಹಾಗೂ ಹೆಚ್ಚಿನ ಅಪಾಯ ತಪ್ಪಿಸಲು ಕ್ರಮ ವಹಿಸಿ ಎಂದು ಹೇಳಿದರು.

ಕೆರೆಯ ಮಾಲೀಕರೊಂದಿಗೆ ಸಭೆ ನಡೆಸಿ ಇಲ್ಲಿ ಸಾರ್ವಜನಿಕಸುರಕ್ಷತೆಗೆಒತ್ತು ನೀಡುವಂತೆತಿಳಿಸಲಾಗಿದೆ. ಮುಂದಿನ ದಿನಗಳಲ್ಲಿ ಕೆರೆಯ ಜೀರ್ಣೋದ್ಧಾರ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೂಲಕ ಇಂತಹ ಅಹಿತಕರ ಘಟನೆಗಳು ಮರುಕಳಿಸದಂತೆ ನೋಡಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು. ಶೀಘ್ರದಲ್ಲೇ ಈ ಭಾಗದಲ್ಲಿ ತಡೆಗೋಡೆ ನಿರ್ಮಾಣ ಸೇರಿದಂತೆ ಅವಶ್ಯಕ ಕಾಮಗಾರಿಗಳು ಆರಂಭವಾಗಲಿವೆ ಎಂದು ಅವರು ತಿಳಿಸಿದರು.

ಈ ವೇಳೆ ಮಹಾನಗರ ಪಾಲಿಕೆಯ ಅಧಿಕಾರಿಗಳು, ನಗರ ಸೇವಕರು, ಸ್ಥಳೀಯರು ಸೇರಿದಂತೆ ಇತರರು ಇದ್ದರು.

ರಕ್ತದಾನ, ಅಪಘಾತ, ಸುರಕ್ಷಿತ ಬಗ್ಗೆ ಜಾಗೃತಿ ಮೂಡಿಸುವುದು ಅವಶ್ಯ

ಮೂಡಲಗಿ : ಯುವ ವಿದ್ಯಾರ್ಥಿ ವಿದ್ಯಾರ್ಥಿನಿಯರಲ್ಲಿ ಪ್ರಸ್ತುತ ದಿನಗಳಲ್ಲಿ ಯುವಕರಿಗೆ ಅದರಲ್ಲೂ ಯುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಗೆ ಅಪಘಾತ ಸುರಕ್ಷಿತ, ರಕ್ತದಾನ ಅರಿವು ಮೂಡಿಸುವದು ಅವಶ್ಯಕತೆ ಇದೆ ಎಂದು ಬಸವೇಶ್ವರ ಶಿಕ್ಷಣ ಸಂಸ್ಥೆಯ ಆಡಳಿತ ಅಧಿಕಾರಿ ಪ್ರಕಾಶ್ ಗರಗಟ್ಟಿ ಹೇಳಿದರು.

ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಹಮ್ಮಿ ಕೊಂಡ ರೆಡ್‌ಕ್ರಾಸ್ ದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅತಿಥಿಗಳಾಗಿ ಪ್ರಾಚಾರ್ಯ ಡಾ, ಸಂಗಮೇಶ ಹೂಗಾರ್ ಮಾತನಾಡಿ, ರೆಡ್ ಕ್ರಾಸ್ ಮಹತ್ವದ ಬಗ್ಗೆ ಮಾಹಿತಿ ನೀಡಿದರು,ಪ ಪೂ ಮಹಾವಿದ್ಯಾಲಯದ ಪ್ರಾಚಾರ್ಯ ವಿ ಜಿ ಕಟ್ಟಿಮನಿ, ಉಪನ್ಯಾಸಕಿ ವಿದ್ಯಾ ಬಡಿಗೇರ್, ಉಪನ್ಯಾಸಕಿ ಲಕ್ಷ್ಮೀ ಬೂದಿಹಾಳ ಉಪಸ್ಥಿತರಿದ್ದರು, ಉಪನ್ಯಾಸಕ ಲಕ್ಕಪ್ಪ ಕುಮರೇಶಿಯವರು ಸ್ವಾಗತಿಸಿ ವಿದ್ಯಾರ್ಥಿನಿ ಸವಿತಾ ಕೊಡ್ಲಿಕರ್ ಕಾರ್ಯಕ್ರಮ



ನಿರ್ವಹಿಸಿದರು. ಗುರು ಖಿಡಕಭಾವೀಸರ್ ವಂದಿಸಿದರು.

ನಗರದಲ್ಲಿ ಅದ್ದೂರಿ ಶೋಭಾಯಾತ್ರೆ

ಚೌಕದ ಶ್ರೀದತ್ತ-ಸಾಯಿ ಮಂದಿರಕ್ಕೆ ನೂತನ ಮೂರ್ತಿಗಳ ಆಗಮನ

ಬೆಳಗಾವಿ : ಬೆಳಗಾವಿಯ ಹೇಮು ಕಲಾನಿ ಚೌಕದ ಶ್ರೀ ದತ್ತ ಸಾಯಿ ಮಂದಿರದಲ್ಲಿ ನೂತನ ಮೂರ್ತಿಗಳ ಪ್ರತಿಷ್ಠಾಪನಾ ಮಹೋತ್ಸವಕ್ಕೆ ಚಾಲನೆ ಸಿಕ್ಕಿದೆ. ಧರ್ಮವೀರ ಸಂಭಾಜಿ ವೃತ್ತದಿಂದ ಆರಂಭವಾದ ಭವ್ಯ ಶೋಭಾಯಾತ್ರೆಯಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ಸಂಭ್ರಮಿಸಿದರು.

ಬೆಳಗಾವಿಯ ಹೇಮು ಕಲಾನಿ ಚೌಕದಲ್ಲಿರುವ ಶ್ರೀದತ್ತ, ಶ್ರೀಸಾಯಿ ಮಂದಿರದ ಜೀರ್ಣೋದ್ಧಾರ ಕಾರ್ಯ ಪೂರ್ಣಗೊಂಡಿದ್ದು, ನೂತನ ಮೂರ್ತಿಗಳ ಪ್ರತಿಷ್ಠಾಪನೆಗೆ ಅದ್ದೂರಿ ಚಾಲನೆ ನೀಡಲಾಗಿದೆ. ಛತ್ರಪತಿ ಧರ್ಮವೀರ ಸಂಭಾಜೀ ಮಹಾರಾಜ್ ವೃತ್ತದಿಂದ ಮಂದಿರದವರೆಗೆ ಭವ್ಯ ಶೋಭಾಯಾತ್ರೆ ಜರುಗಿತು. ಕಾಂಗಲೆ ಗಲ್ಲಿ, ಬಾಂಧೂರ್ ಗಲ್ಲಿ, ತಾಶೀಲ್ದಾರ್ ಲ್ಲಿ ಸೇರಿದಂತೆ ವಿವಿಧ ಗಲ್ಲಿಗಳ ಸಾವಿರಾರು ಭಕ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಡೋಲ್-ತಾಶಾ ಪಥಕಗಳ ನಿನಾದ ಮತ್ತು ಮಹಿಳೆಯರ ಕುಂಭಮೇಳ ಶೋಭಾಯಾತ್ರೆಗೆ ವಿಶೇಷ ಕಳೆ ತಂದಿತು.

ಈ ಮಂದಿರದ ವಿಶೇಷತೆ ಎಂದರೆ ಇಲ್ಲಿನ ಮೂರ್ತಿಗಳನ್ನು ಜೈಪುರದ ಖ್ಯಾತ ಮೂರ್ತಿಕಾರ ಪಾಂಡೆ ಅವರು ಕೆತ್ತಿದ್ದಾರೆ. ಅಯೋಧ್ಯೆಯ ಶ್ರೀರಾಮ ಮಂದಿರದಲ್ಲಿ ರಾಮಲಲ್ಲಾನ ಮೂರ್ತಿಯ ಪ್ರಾಣಪ್ರತಿಷ್ಠಾಪನೆ ನೆರವೇರಿಸಿದ್ದ ಅಪ್ರತಿಮ ವಿದ್ವಾಂಸ ಶ್ರೀ ಜ್ಞಾನೇಶ್ವರ ಶಾಸ್ತ್ರೀ ಅವರೇ ಇಲ್ಲಿಯೂ ಮೂರ್ತಿಗಳ ಪ್ರತಿಷ್ಠಾಪನಾ ವಿಧಿವಿಧಾನಗಳನ್ನು ನೆರವೇರಿಸುತ್ತಿರುವುದು ಭಕ್ತರ ಸೌಭಾಗ್ಯವಾಗಿದೆ. ಸಾಂಸ್ಕೃತಿಕ ನಗರಿಯಲ್ಲಿ ಅಯೋಧ್ಯೆಯಷ್ಟೇ ಪವಿತ್ರವಾದ ವಾತಾವರಣ ನಿರ್ಮಾಣವಾಗಿದೆ.

ಮೂರು ದಿನಗಳ ಕಾಲ ಮಂದಿರದ ಆವರಣದಲ್ಲಿ ವಿವಿಧ ಧಾರ್ಮಿಕ ವಿಧಿವಿಧಾನಗಳು, ಹೋಮ-ಹವನಗಳು ಜರುಗಲಿವೆ. ಕೊನೆಯ ದಿನ ಸಂಜೆ 7 ಗಂಟೆಗೆ ಭಕ್ತಾದಿಗಳಿಗೆ ಭವ್ಯ ಮಹಾಪ್ರಸಾದ ವ್ಯವಸ್ಥೆ ಮಾಡಲಾಗಿದೆ ಎಂದು ಮಂದಿರದ ಸಮಿತಿಯ ಪ್ರಮುಖರು ತಿಳಿಸಿದ್ದಾರೆ. ಬೈಟ್ ಹಿರಿಯರು, ಮಹಿಳೆಯರು ಮತ್ತು ಯುವಕರು ಉತ್ಸಾಹದಿಂದ ಭಾಗವಹಿಸಿದ್ದು, ಇಡೀ ಪರಿಸರ ಭಕ್ತಿ ಸಂಭ್ರಮದಲ್ಲಿ ಮುಳುಗಿದೆ.



ಸವದತ್ತಿ ಜಾತ್ರೆಯಲ್ಲಿ ಸಚಿವೆ ಭಾಗಿ

ಬೆಳಗಾವಿ: ಜಿಲ್ಲೆಯ ಸವದತ್ತಿ ತಾಲೂಕಿನಲ್ಲಿ ಸುಮಾರು 45 ವರ್ಷಗಳ ಬಳಿಕ ಅದ್ದೂರಿಯಾಗಿ ಆಯೋಜಿಸಲಾದ ಸವದತ್ತಿ ಪಟ್ಟಣದ ಆರಾಧ್ಯ ದೇವತೆ ಶ್ರೀ ಗ್ರಾಮದೇವಿ ಜಾತ್ರಾ ಮಹೋತ್ಸವದಲ್ಲಿ ಭಾನುವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಕುಟುಂಬ ಸಮೇತರಾಗಿ ಭಾಗವಹಿಸಿ ವಿಶೇಷ ಪೂಜೆ ಸಲ್ಲಿಸಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಪುತ್ರ ಮೃಣಾಲ್ ಹೆಬ್ಬಾಳಕರ್ ಹಾಗೂ ಸೊಸೆ ಹಿತಾ ಹೆಬ್ಬಾಳ್ಕರ್ ಅವರೊಂದಿಗೆ ದೇವಾಲಯಕ್ಕೆ ಭೇಟಿ ನೀಡಿ, ಶ್ರೀ ಗ್ರಾಮ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು. ಜಾತ್ರಾ ಮಹೋತ್ಸವದ ಅಂಗವಾಗಿ ದೇವಾಲಯ ಹಾಗೂ ಸುತ್ತಮುತ್ತಲಿನ ಪ್ರದೇಶ ಭಕ್ತರಿಂದ ಕಿಕ್ಕಿರಿದು ತುಂಬಿದ್ದು, ಭಕ್ತಿ ಹಾಗೂ ಸಂಭ್ರಮದ ವಾತಾವರಣ ನಿರ್ಮಾಣವಾಗಿತ್ತು.

ಈ ಸಂಧರ್ಭದಲ್ಲಿ ಸಚಿವೆ ಅವರು ಜಾತ್ರೆಯ ಕುರಿತು ಮಾತನಾಡಿದ ಅವರು, ಸವದತ್ತಿ ಪಟ್ಟಣದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಶ್ರೀ ಗ್ರಾಮದೇವಿ ಜಾತ್ರೆ ಜನರ ಭಕ್ತಿ ಭಾವದ ಪ್ರತೀಕವಾಗಿದೆ. ಇಂತಹ ಜಾತ್ರೆಗಳು ಸಮಾಜದಲ್ಲಿ ಏಕತೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ'' ಎಂದು ಹೇಳಿದರು.

ಈ ವೇಳೆ ಸ್ಥಳೀಯ ಶಾಸಕ ವಿಶ್ವಾಸ ವೈದ್ಯ, ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಅಪಾರ ಸಂಖ್ಯೆಯ ಭಕ್ತರು ಉಪಸ್ಥಿತರಿದ್ದರು. ಲಕ್ಷ್ಮೀ ಹೆಬ್ಬಾಳ್ಕರ್ ಅವರು ಭಕ್ತರೊಂದಿಗೆ ಬೆರೆತು ಕೆಲಹೊತ್ತು ಸಂಭ್ರಮಿಸಿದರು.

ಹಲವು ವರ್ಷಗಳ ಬಳಿಕ ನಡೆಯುತ್ತಿರುವ ಈ ಜಾತ್ರೆ ಜನರಲ್ಲಿ ವಿಶೇಷ ಉತ್ಸಾಹ ಮೂಡಿಸಿದ್ದು, ಅಪಾರ ಸಂಖ್ಯೆಯಲ್ಲಿ ಭಕ್ತರು ದೇವಿಯ ದರ್ಶನ ಪಡೆದು ಹರಕೆ ತೀರಿಸಿದರು.



ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ

ಬೆಳಗಾವಿ: ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡುವ ಹಾಗೂ ಅರ್ಹ ವಿದ್ಯಾರ್ಥಿಗಳನ್ನು ಬೆಂಬಲಿಸುವ ನಿಟ್ಟಿನಲ್ಲಿ ಶಾಂತಾಯಿ ವಿದ್ಯಾ ಆಧಾರ ಅವರು ಗೊಗಟೆ ಕಾಲೇಜಿನ ವೇಣುಗೋಪಾಲ ಸಭಾಂಗಣದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಇಬ್ಬರು ಬಡ ನಿರ್ಗತಿಕ ವಿದ್ಯಾರ್ಥಿಗಳ ಶೈಕ್ಷಣಿಕ ಶುಲ್ಕವನ್ನು ಪ್ರಾಯೋಜಿಸಿದರು.

ಕಾರ್ಯಕ್ರಮದ ಸಂದರ್ಭದಲ್ಲಿ ಶುಲ್ಕದ ಸಹಾಯವನ್ನು ಅಧಿಕೃತವಾಗಿ ಹಸ್ತಾಂತರಿಸಲಾಯಿತು. ಹಿಂದುಳಿದ ವಿದ್ಯಾರ್ಥಿಗಳಿಗೆ ಆರ್ಥಿಕ ಹೊರೆಯಿಲ್ಲದೆ ತಮ್ಮ ಶೈಕ್ಷಣಿಕ ಪ್ರಯಾಣವನ್ನು ಮುಂದುವರಿಸಲು ಸಹಾಯ ಮಾಡುವ ಶಾಂತಾಯಿ ವಿದ್ಯಾ ಆಧಾರ ಅವರ ಬದ್ಧತೆಯನ್ನು ಪುನರುಚ್ಚರಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ಮೇಯರ್



ವಿಜಯ್ ಮೋರೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಅವರು, ಶಿಕ್ಷಣದ ಮಹತ್ವ ಮತ್ತು ಅಗತ್ಯವಿರುವ ವಿದ್ಯಾರ್ಥಿಗಳನ್ನು ಬೆಂಬಲಿಸುವಲ್ಲಿ ಸಮಾಜದ ಹೆಚ್ಚಿನ ಆಧ್ಯತೆಯನ್ನು ನೀಡಬೇಕು ಎಂದು ಹೇಳಿದರು.

ಇದೇ ವೇಳೆ ವೇದಿಕೆಯಲ್ಲಿ ಶಿರೀಶ ಚಿಂಚೋಳಿಮಠ, ಗೊಗೆಟೆ ಕಾಲೇಜಿನ ಪ್ರಾಚಾರ್ಯ ಡಾ.ವೇಣುಗೋಪಾಲ ಜಾಲಿಹಾಳ್, ಎಚ್.ಓ.ಡಿ.ದೇಶಪಾಂಡೆ ಮೇಡಂ ಜಂಟಿಯಾಗಿ ಚೆಕ್ ಹಸ್ತಾಂತರಿಸಿದರು.

ಈ ವೇಳೆ ಅಲನ್ ವಿಜಯ್ ಮೋರೆ, ಗಂಗಾಧರ ಪಾಟೀಲ, ಸೂರಜ್ ಗವಳಿ, ಮುಖ್ಯ ಅತಿಥಿ ಶಿರೀಶ ಚಿಂಚೋಳಿಮಠ. ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಇತರ ಗಣ್ಯ ಅತಿಥಿಗಳು ಪಾಲ್ಗೊಂಡಿದ್ದರು.

ಕಲಿಕಾ ಸಾಮಗ್ರಿ ವಿತರಣೆ

ಮೂಡಲಗಿ : ಸಮೀಪದ ಕಲ್ಲೋಳಿಯ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಒಂದರಿಂದ ಹತ್ತನೇ ತರಗತಿಯ ವರೆಗೆ ಉಚಿತ ಶಿಕ್ಷಣ ನೀಡಲು ಪುಸ್ತಕ,ಸಮುವಸ್ತ್ರ, ನೋಟಬುಕ್ ಸಾಕ್ಷರತೆಗೆ ಅವಶ್ಯ ಇರುವ ಸರಕಾರ ನೀಡುವಂತೆ ಒಳ್ಳೆಯ ಗುಣಮಟ್ಟದ ಮೂಲ ಸೌಲಭ್ಯಗಳನ್ನು ಉಚಿತವಾಗಿ ನೀಡುತ್ತಿದ್ದೇವೆ ಎಂದು ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ರಮೇಶ ಬೆಳಕೂಡ ಹೇಳಿದರು.

ಸೋಮವಾರ ವಿದ್ಯಾರ್ಥಿಗಳಿಗೆ ನೋಟಬುಕ್ ಬ್ಯಾಗ ವಿತರಿಸಿ ಮಾತನಾಡಿದರು,ಕಾರ್ಯದರ್ಶಿ ಡಾ ಭೋಜರಾಜ ಬೆಳಕೂಡ ಮಾತನಾಡಿ, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪಿಯುಸಿ, ಪ್ರಥಮ ಡಿಗ್ರಿ ಪ್ರಥಮ ವರ್ಷದಲ್ಲಿ ಪ್ರವೇಶ ಪಡೆದುಕೊಂಡವರಿಗೆ ಒಂದು ಸಾವಿರ ರೂಪಾಯಿ ಉಚಿತ ಗಿಫ್ಟ್, ಒಂದು ಕಾಲೇಜ್ ಬ್ಯಾಗ್ ಆರು ವಿಷಯಗಳಿಗೆ ಆರು ನೋಟ್ ಬುಕ್ ಉಚಿತವಾಗಿ ನೀಡುವುದರೊಂದಿಗೆ



ಗುಣಮಟ್ಟದ ಶಿಕ್ಷಣ ನೀಡುವದಾಗಿ ಹೇಳಿದರು. ಆಧುನಿಕ ತಂತ್ರಜ್ಞಾನ ಸ್ಮಾರ್ಟ್ ಬೋರ್ಡ್‌ನಲ್ಲಿ ಬೋಧನೆ ಮಾಡುವ ಮೂಲಕ ಸಾಫ್ಟವೇರ್ ತಂತ್ರಜ್ಞಾನ ಮೂಲಕ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪಾಲಕರಿಗೆ ಪ್ರತಿ ದಿನ ಗೈರು, ಹಾಜರ್ ಮಾಹಿತಿ ನೀಡಿ, ಇಡೀ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಮಗ್ರ ಮಾಹಿತಿ ಕಲಿಸುವುದುಂಟು, ಈ ವ್ಯವಸ್ಥೆ ಸಾಮಾನ್ಯವಾಗಿ ಸುತ್ತಲಿನ ಗ್ರಾಮಗಳ ಜನರಿಗೆ ಅತೀ ಮೆಚ್ಚುಗೆ ಆಗಿದೆ ಎಂದು ಆಡಳಿತ ಅಧಿಕಾರಿ ಪ್ರಕಾಶ್ ಗರಗಟ್ಟಿ ತಿಳಿಸಿದ್ದಾರೆ.

ಗಣತಿ ಯಶಸ್ವಿ : ಸಿಬ್ಬಂದಿ ಅಭಿನಂದಿಸಿದ ಮಹಾನಗರ ಪಾಲಿಕೆ ಆಯುಕ್ತ ಕಾರ್ತಿಕ್

ಬೆಳಗಾವಿ : ಸರ್ಕಾರದ ಅತ್ಯಂತ ಮಹತ್ವದ ಗಣತಿ ಕಾರ್ಯವನ್ನು ಒಂದು ವಾರ ಮುಂಚಿತವಾಗಿಯೇ ಮುಗಿಸಿ ಯಶಸ್ವಿಗೊಳಿಸಿದ ಮಹಾನಗರ ಪಾಲಿಕೆಯ ಗಣತಿ ಅಧಿಕಾರಿಗಳನ್ನು ಆಯುಕ್ತ ಕಾರ್ತಿಕ್ ಎಂ. ಅಭಿನಂದನಾ ಪತ್ರ ನೀಡಿ ಗೌರವಿಸಿದರು.

ಪಾಲಿಕೆಯ ಕಾರ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರಿ ನೌಕರರಿಗೆ ಗಡಿಗೆ ಹೋಗಿ ದೇಶ ಕಾಯುವ ಹೋರಾಡುವ ಅವಕಾಶವಿಲ್ಲದಿದ್ದರೂ ಒಳಗಿನ ಆಡಳಿತ ವ್ಯವಸ್ಥೆಯಲ್ಲಿ ಗಣತಿ, ಚುನಾವಣೆ, ಪಲ್ಸ್ ಪೋಲಿಯೋ ಕೊರೋನಾದಂತಹ ಸಂದರ್ಭದಲ್ಲಿ ನೌಕರರೂ ಸಹ ಯೋಧರಂತೆ ಕಾರ್ಯನಿರ್ವಹಿಸಿದ್ದಾರೆ. ಇದು ದೇಶ ಸೇವೆಯೇ ಆಗಿದೆ. ಈ ಹಿನ್ನಲೆಯಲ್ಲಿ ಅತ್ಯಂತ ಕಡಿಮೆ ಅವಧಿಯಲ್ಲಿ ಗಣತಿ ಅಧಿಕಾರಿಗಳು, ಮೇಲ್ವಿಚಾರಕರು ಹಾಗೂ ಸಿಬ್ಬಂದಿ ಅನೇಕ ತಾಂತ್ರಿಕ ತೊಂದರೆಗಳು ಹಾಗೂ ಬಿರುಬಿಸಿಲನ್ನೂ ಲೆಕ್ಕಿಸದೆ ಪರಸ್ಪರ ಸಹಕಾರದಿಂದ ಅಚ್ಚುಕಟ್ಟಾಗಿ ಗಣತಿ ಕಾರ್ಯ ನಿರ್ವಹಿಸಿ ಯಶಸ್ವಿಗೊಳಿಸಿದ್ದು, ಅವರೆಲ್ಲರೂ ಅಭಿನಂದನಾರ್ಹರು ಎಂದು ಹೇಳಿದರು.

ಗಣತಿಯಲ್ಲಿ ಸಾವಿರ ಸಿಬ್ಬಂದಿ , 150 ಮೇಲ್ವಿಚಾರಕರು



ಗಣತಿ ಕಾರ್ಯದಲ್ಲಿ ಒಟ್ಟು ಒಂದು ಸಾವಿರದಾ ಎರಡು ನೂರು ಸಿಬ್ಬಂದಿ ಕಾರ್ಯನಿರ್ವಹಿಸಿದ್ದು, ಎಂಟು ಬ್ಲಾಕ್ ಗಳನ್ನು ಮಾಡಲಾಗಿತ್ತು 50 ರ ಒಂದು ಬ್ಯಾಚ್ ಮಾಡಿ 3 ದಿನಗಳ ಕಾಲ 7 ಅಧಿಕಾರಿಗಳು ತರಬೇತಿ ನೀಡಿದ್ದಾರೆ. ಏಳು ಜನ ಚಾರ್ಜ್ ಅಧಿಕಾರಿಗಳು ಮೇಲ್ವಿಚಾರಕರಾಗಿದ್ದರು. ಆಯುಕ್ತರ ಮಾರ್ಗದರ್ಶನ ಹಾಗೂ ಸಿಬ್ಬಂದಿಯ ಉತ್ತಮ ಸಂಯೋಜನೆಯಿಂದಾಗಿ ಕಾರ್ಯ ಯಶಸ್ವಿಯಾಗಿದೆ ಎಂದು ನಗರ ಗಣತಿ ಅಧಿಕಾರಿ, ಉಪ ಆಯುಕ್ತ (ಕಂದಾಯ) ಡಾ. ಸಿದ್ದು ಹುಲ್ಲೋಳಿ ಹೇಳಿದರು.

ಆಡಳಿತ ವಿಭಾಗದ ಉಪ ಆಯುಕ್ತ ಉದಯಕುಮಾರ ತಳವಾರ ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಮೇ 16ರಿಂದ ಸಾಹಿತ್ಯ ಮೇಳ

ಹುಬ್ಬಳ್ಳಿ: 12 ನೇ ಮೇ ಸಾಹಿತ್ಯ ಮೇಳ ನಗರದ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಮೇ 16 ಹಾಗೂ 17 ರಂದು ಹಮ್ಮಿಕೊಳ್ಳಲಾಗಿದೆ ಎಂದು ಎಂದು ಪ್ರಗತಿಪರ ಚಿಂತಕ, ಸಾಹಿತಿ ಬಸವರಾಜ ಸೂಳಿಭಾವಿ ಹೇಳಿದರು.ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗದುಗಿನ ಲಡಾಯಿ ಪ್ರಕಾಶನ, ಧಾರವಾಡದ ಚಿತ್ತಾರ ಕಲಾ ಬಳಕ, ಕವಲಕ್ಕಿಯ ಕವಿ ಪ್ರಕಾಶನ ಹಾಗೂ ಮೇ ಸಾಹಿತ್ಯ ಮೇಳ ಹುಬ್ಬಳ್ಳಿ ಬಳಗದ ಸಹಯೋಗದಲ್ಲಿ ಮೇಳ ನಡೆಯಲಿದೆ ಎಂದರು. ಮೇ 16ರಂದು ಬೆಳಿಗ್ಗೆ 10 ಕ್ಕೆ ಉದ್ಘಾಟನಾ ಗೋಷ್ಠಿಯನ್ನು ಸನತಕುಮಾರ ಬೆಳಗಲಿ, ಬಿ.ಎಸ್. ಸೊಪ್ಪಿನ, ಕೆ.ಎಸ್. ಶರ್ಮಾ, ವಿವೇಕಾನಂದ ದೊಡಮನಿ, ಬೀಬೀಜಾನ್ ಮುಲ್ಲಾ, ಫರೀದಾ ಕರ್ನೂಲ್ ಮತ್ತು ಲಿನೆಟ್ ಡಿಸಿಲ್ವ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು. ಸಾಂವಿಧಾನಿಕ ಪ್ರಜಾಸತ್ತೆ: ಸ್ವರೂಪ-ಸಂಘರ್ಷದ ಇತಿಹಾಸ, ವರ್ತಮಾನ ಭಾರತದಲ್ಲಿ ಸಾಂವಿಧಾನಿಕ ಪ್ರಜಾಸತ್ತೆ: ಏನು ಎತ್ತ, ಪ್ರಜಾಸತ್ತೆಯ ಮೇಲಿನ ದಾಳಿ: ಸೃಜನಶೀಲ ಸ್ಪಂದನೆ, ಪ್ರಜಾಸತ್ತೆ ಅಡಿಯಲ್ಲಿ ಅಸ್ಮಿತೆಯ ರಾಜಕಾರಣ, ಎಸ್‌ಐಆರ್: ಸಮಸ್ಯೆ-ಜನಾಂದೋಲನ ಹಾಗೂ ಇತರ ವಿಷಯಗಳ ಕುರಿತು ಗೋಷ್ಠಿಗಳು ನಡೆಯಲಿವೆ. ಮೇ 17ರಂದು ಬೆಳಿಗ್ಗೆ 8.30ಕ್ಕೆ ಚನ್ನಮ್ಮ ವೃತ್ತದಿಂದ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದವರೆಗೆ ಎಸ್‌ಐಆರ್ ರದ್ದುಗೊಳಿಸುವ ಕುರಿತು ಪ್ರತಿಭಟನಾ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದರು.ಕನ್ನಡ ಸಾಹಿತ್ಯ ಬಂಡವಾಳಶಾಹಿಗಳ ಹಿತಾಸಕ್ತಿಗೆ ಒಳಗಾಗಿ, ಪ್ರಭುತ್ವದ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವತ್ತ ಸಾಗಿದೆ. ಜನರ ಧ್ವನಿಯಾಗಿರುವ ಸಾಹಿತ್ಯದ ಪರಂಪರೆ ಹಾಗೆಯೇ ಮುಂದುವರಿಯಬೇಕು, ಪುನರುತ್ಥಾನ ದಾರಿಯಲ್ಲಿ ಸಾಗಬೇಕು ಎನ್ನುವುದು ನಮ್ಮ ಆಶಯವಾಗಿದೆ ಎಂದರು.ಶ್ಯಾಮಲಾ ಗುರುಪ್ರಸಾದ, ಇಸಬೆಲ್ಲ ದಾಸ್, ಗುರುನಾಥ ಉಳ್ಳಿಕಾಶಿ, ನಾಗರಾಜ ಗುರಿಕಾರ, ಲಿಂಗರಾಜ ಅಂಗಡಿ, ಮಹೇಶ ಪತ್ತಾರ, ಸುನಂದಾ ಕಡಮೆ ಹಾಗೂ ಇತರರು ಇದ್ದರು.

ಮಾರುಕಟ್ಟೆ ವಿಲೀನಕ್ಕೆ ಆಗ್ರಹಿಸಿ ವ್ಯಾಪಾರಸ್ಥರಿಂದ ಪ್ರತಿಭಟನೆ

ಬೆಳಗಾವಿ: ಇಲ್ಲಿನ ಜೈ ಕಿಸಾನ್ ಖಾಸಗಿ ಮಾರುಕಟ್ಟೆಯನ್ನು ಉಳಿಸಿಕೊಳ್ಳುವುದಕ್ಕೆ ಕಾನೂನು ಹೋರಾಟದಲ್ಲಿ ಸೋತರೂ ಜೈ ಕಿಸಾನ್ ತರಕಾರಿ ಮಾರುಕಟ್ಟೆಯವರಿಗೆ ಸರ್ಕಾರಿ ಎಪಿಎಂಸಿಯಲ್ಲಿ ವಿಶೇಷ ಸೌಲಭ್ಯ ನೀಡಿ ವ್ಯಾಪಾರಕ್ಕೆ ಅನುಕೂಲ ಮಾಡಿಕೊಟ್ಟಿದ್ದು, ಎಪಿಎಂಸಿಯ ಮೂಲ ವ್ಯಾಪಾರಿಗಳು ಮತ್ತು ರೈತರ ಅನಾನುಕೂಲಕ್ಕೆ ಕಾರಣವಾಗುತ್ತಿದ್ದು, ಕೂಡಲೇ ಅವರನ್ನು ಮುಖ್ಯ ಮಾರುಕಟ್ಟೆಯಲ್ಲಿ ವಿಲೀನಗೊಳಿಸಬೇಕೆಂದು ಆಗ್ರಹಿಸಿ ವ್ಯಾಪಾರಸ್ಥರಿಂದ ಎಪಿಎಂಸಿ ಮಾರುಕಟ್ಟೆ ಎದುರು ಪ್ರತಿಭಟನೆ ನಡೆಸಿದರು.

ಬೆಳಗಾವಿಯ ಸರ್ಕಾರಿ ಎಪಿಎಂಸಿಯಲ್ಲಿ ವಿಶೇಷ ಸೌಲಭ್ಯ ನೀಡಿ ವ್ಯಾಪಾರಕ್ಕೆ ಅನುಕೂಲ ಮಾಡಿಕೊಟ್ಟಿದ್ದು, ಎಪಿಎಂಸಿಯ ಮೂಲ ವ್ಯಾಪಾರಿಗಳು ಮತ್ತು ರೈತರಿಗೆ ಆಗುತ್ತಿರುವ ಸಮಸ್ಯೆಯನ್ನು ಖಂಡಿಸಿ ಶನಿವಾರ ಎಪಿಎಂಸಿಯ ಮೂಲ ವ್ಯಾಪಾರಿಗಳು ಎಪಿಎಂಸಿ ಕಾರ್ಯಾಲಯದ ಎದುರು ಪ್ರತಿಭಟನೆಯನ್ನು ನಡೆಸಿದರು.

ಗಾಂಧಿ ನಗರದಲ್ಲಿರುವ ಖಾಸಗಿ ತರಕಾರಿ ಮಾರುಕಟ್ಟೆ ಬಂದ್ ಆದ ಹಿನ್ನೆಲೆ ಅಲ್ಲಿನ ವ್ಯಾಪಾರಿಗಳಿಗೆ ಕಳೆದ 8 ತಿಂಗಳುಗಳಿಂದ ಖಾಸಗಿ ಮಾರುಕಟ್ಟೆಯ ವ್ಯಾಪಾರಿಗಳಿಗೆ ರವಿವಾರದ ರೈತರ ಸಂತೆಯಲ್ಲಿನ ಮಳಿಗೆಗಳನ್ನು ನೀಡಲಾಗಿದೆ. ಇದರಿಂದಾಗಿ ಎಪಿಎಂಸಿಯಲ್ಲಿಯೇ ಎರಡು ಮಾರುಕಟ್ಟೆಗಳು ಸೃಷ್ಟಿಯಾಗಿ ರೈತರಿಗೆ ದರಗಳಲ್ಲಿ ವ್ಯತ್ಯಾಸಗಳು ಕಾಣಿಸುತ್ತಿವೆ. ಜಿಲ್ಲಾಡಳಿತವು ಮಧ್ಯಸ್ಥಿಕೆ ವಹಿಸಿ ಪ್ರಮುಖ ಮಾರುಕಟ್ಟೆಯಲ್ಲಿಯೇ ಖಾಸಗಿಯವರನ್ನು ವಿಲೀನಗೊಳಿಸಬೇಕೆಂದು ಒತ್ತಾಯಿಸಿದರು.

ಖಾಸಗಿ ತರಕಾರಿ ಮಾರುಕಟ್ಟೆಯವರಿಗೆ ನ್ಯಾಯಾಲಯದ



ತೀರ್ಪು ಬರುವವರೆಗೂ ಎಪಿಎಂಸಿಯ ರವಿವಾರದ ರೈತರ ಸಂತೆಯಲ್ಲಿ ಅವಕಾಶ ಮಾಡಿ ಕೊಟ್ಟಿದ್ದು, ಆದರೆ, ಖಾಸಗಿ ತರಕಾರಿ ಮಾರುಕಟ್ಟೆಯವರು ಕಾನೂನು ಹೋರಾಟದಲ್ಲಿ ಸೋತಿದ್ದು, ಅವರಿಗೆ ವಿಶೇಷ ಮಾರುಕಟ್ಟೆಯ ಸೌಲಭ್ಯವನ್ನು ನೀಡದೇ, ಅವರನ್ನು ಕೂಡ ಮುಖ್ಯ ಮಾರುಕಟ್ಟೆಯಲ್ಲಿ ವಿಲೀನಗೊಳಿಸಬೇಕು. ಎಪಿಎಂಸಿ ಕಾರ್ಯದರ್ಶಿಗಳು ಖಾಸಗಿ ಮಾರುಕಟ್ಟೆ ರದ್ದಾದ ಹಿನ್ನೆಲೆ ರವಿವಾರದ ರೈತರ ಸಂತೆಯಲ್ಲಿ ಅಲ್ಲಿನ ವ್ಯಾಪಾರಿಗಳಿಗೆ ಅವಕಾಶವನ್ನು ನೀಡಲಾಗಿತ್ತು. ಅದರ ಅವಧಿಯನ್ನು ಈಗ ವಿಸ್ತರಿಸಲಾಗಿದೆ. ಜಿಲ್ಲಾಡಳಿತದ ಆದೇಶದಂತೆ ಮುಖ್ಯ ಮಾರುಕಟ್ಟೆಯ ಪ್ರಾಂಗಣದಲ್ಲಿ ಅವರನ್ನು ಸ್ಥಳಾಂತರಿಸಲು ಪ್ರಯತ್ನಿಸುತ್ತೇವೆ. ಖಾಸಗಿ ಮಾರುಕಟ್ಟೆಯ ವ್ಯಾಪಾರಿಗಳಿಂದ ವಿದ್ಯುತ್ ಸೇರಿದಂತೆ ಇನ್ನುಳಿದ ಬಿಲ್'ಗಳನ್ನು ಆಕರಿಸಲಾಗುತ್ತಿದೆ ಎಂದರು.

ಈ ವೇಳೆ ಎಪಿಎಂಸಿಯ ಮಾಜಿ ಅಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರು, ವ್ಯಾಪಾರಿಗಳು ಸೇರಿದಂತೆ ಇತರರು ಇದ್ದರು.

ಕಿರುಸುದ್ದಿ



ಬಾದಾಮಿ: ಪಟ್ಟಣದ ಕೆಇಬಿ ಎದುರು ಕೆನರಾ ಬ್ಯಾಂಕ್ ಹತ್ತಿರ ಬಾದಾಮಿ ಮತಕ್ಷೇತ್ರದ ಜೆಡಿಎಸ್ ಪಕ್ಷದ ನೂತನ ಕಾರ್ಯಾಲಯದ ಉದ್ಘಾಟನಾ ಸಮಾರಂಭ ಜರುಗಿತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ, ತಾಲೂಕಾಧ್ಯಕ್ಷ ಹುಚ್ಚೇಶ ಹದ್ದನ್ನವರ, ಎಂ.ಎಸ್.ಹಿರೇಹಾಳ, ಬಸವರಾಜ ಅಮರಗೋಳ, ಪ್ರಕಾಶ ಕೋಟಿ, ಮಲ್ಲು ಹಡಪದ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಇಂದು ತರಬೇತಿ

ಬಾಗಲಕೋಟೆ: ಜಿಲ್ಲಾ ಕೃಷಿ ತರಬೇತಿ ಕೇಂದ್ರದಿಂದ ರೈತರ ಅನುಕೂಲಕ್ಕಾಗಿ ಮೇ 12ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 12ರ ವರೆಗೆ ಗೂಗಲ್ ಮೀಟ್ ಮೂಲಕ ಮುಂಗಾರು ಹಂಗಾಮಿನಲ್ಲಿ ಬೀಜಗಳ ಆಯ್ಕೆ ಬೀಜೋಪಚಾರದ ಮಹತ್ವ ಕುರಿತು ತರಬೇತಿ ಹಮ್ಮಿಕೊಳ್ಳಲಾಗಿದೆ. ಆಸಕ್ತ ರೈತರು ಗೂಗಲ್ ಮೀಟ್ ಲಿಂಕ್ ಮೂಲಕ ತರಬೇತಿಗೆ ಹಾಜರಾಗಿ ತರಬೇತಿಯ ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಮೇ 16ರಿಂದ ಯೋಗ ಶಿಬಿರ

ರಬಕವಿ-ಬನಹಟ್ಟಿ: ಜಮಖಂಡಿ ಅರುಣಜೀ ನೇತೃತ್ವದಲ್ಲಿ ರಬಕವಿಯ ಬ್ರಹ್ಮಾನಂದ ಆಶ್ರಮದಲ್ಲಿ ಮೇ 16ರಿಂದ ಸಿದ್ಧ ಸಮಾಧಿ ಯೋಗ ಕಾರ್ಯಕ್ರಮ ಜರುಗಲಿದೆ ಎಂದು ಬಸವರಾಜ ಮೋಟಗಿ ತಿಳಿಸಿದ್ದಾರೆ. ಅಂದು ಸಂಜೆ 6ಕ್ಕೆ ಪರಿಚಯ ಕಾರ್ಯಕ್ರಮ ಜರುಗಲಿದೆ. ಮೇ 17ರಿಂದ ಪ್ರತಿ ದಿನ ಬೆಳಗ್ಗೆ 6ಕ್ಕೆ ಶಿಬಿರ ತರಗತಿ ನಡೆಯಲಿವೆ. ಆಸಕ್ತರು 9611733288, 9845492001 ಗೆ ಸಂಪರ್ಕಿಸಬಹುದು ಎಂದು ತಿಳಿಸಿದರು.

ರಾಜ್ಯಮಟ್ಟದ ಪ್ರಶಸ್ತಿಗೆ ಆಹ್ವಾನ

ಬಾಗಲಕೋಟೆ: ಕೈಮಗ್ಗ ನೇಕಾರರಿಗೆ ಪ್ರತಿ ವರ್ಷ ರಾಷ್ಟ್ರೀಯ ಕೈಮಗ್ಗ ದಿನಾಚರಣೆಯಂದು ಕೈಮಗ್ಗ ಉತ್ಪನ್ನಗಳ ಅಭಿವೃದ್ಧಿಗಾಗಿ ಕೈಮಗ್ಗ ನೇಯ್ಗೆ ವೃತ್ತಿಯಲ್ಲಿ ನೈಪುಣ್ಯತೆ, ಶ್ರೇಷ್ಠತೆ, ತಾಂತ್ರಿಕತೆ ಹೊಂದಿರುವ ಉತ್ಪನ್ನಗಳ ಕೈಮಗ್ಗ ನೇಕಾರರಿಗೆ 2026-27ನೇ ಸಾಲಿನಲ್ಲಿ ರಾಜ್ಯ ಮಟ್ಟದ ಪ್ರಶಸ್ತಿ ನೀಡಲು ಸರ್ಕಾರ ಆದೇಶಿಸಿದ್ದು, ಅರ್ಹ ಕೈಮಗ್ಗ ನೇಕಾರರಿಂದ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಯಲ್ಲಿರುವ ಅಪ್ಪಟ ಕೈಮಗ್ಗ ನೇಕಾರರು ಜಿಲ್ಲಾ ಕಚೇರಿಯಿಂದ ಅರ್ಜಿಗಳನ್ನು ಪಡೆದು ಮೇ 22ರೊಳಗಾಗಿ ಅಗತ್ಯ ದಾಖಲಾತಿಗಳೊಂದಿಗೆ ಭರ್ತಿ ಮಾಡಿ ಅರ್ಜಿ ಮತ್ತು ಅರ್ಜಿದಾರರು ತಯಾರಿಸಿದ ಕೈಮಗ್ಗ ಉತ್ಪನ್ನದ ಮಾದರಿಗಳನ್ನು ಸಲ್ಲಿಸುವಂತೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354-235463 ಹಾಗೂ ಕಚೇರಿ ಅಧಿಕಾರಿ ಸಿದ್ದಣ್ಣ ಕವಲಗಿ (9900391684), ಸತೀಶ ಕಮಲದಿನ್ನಿ (9620304021) ಇವರನ್ನು ಸಂಪರ್ಕಿಸಬಹುದಾಗಿದೆ.

ಸಾಲ ಸೌಲಭ್ಯ

ಬಾಗಲಕೋಟೆ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 2026-27ನೇ ಸಾಲಿಗೆ ಅರಿವು ಸಾಲ ಯೋಜನೆಯಡಿ ವಿದ್ಯಾಭ್ಯಾಸ ಸಾಲಕ್ಕಾಗಿ ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಜೈನ, ಬೌದ್ಧಧರ್ಮಿಯರು, ಶಿಖ್ಖರು ಮತ್ತು ಪಾರ್ಶಿ ಜನಾಂಗದವರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ, ನೀಟ್ ಮೂಲಕ ಆಯ್ಕೆಯಾಗುವ ಸ್ನಾತಕೋತ್ತರ ಕೋರ್ಸಗಳಾದ ವೈದ್ಯಕೀಯ, ಎಂ.ಬಿ.ಬಿ.ಎಸ್, ಬಿಡಿಎಸ್, ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್, ಬಿ.ಆಯುಷ್, ಫಾರ್ಮಸಿ, ಕೃಷಿ ವಿಜ್ಞಾನ ಮತ್ತು ಪಶು ವೈದ್ಯಕೀಯ ದಂತಹ ಕೋರ್ಸಗಳಲ್ಲಿ ಅರಿವು ಸಾಲ ಯೋಜನೆಯಡಿ ಸಾಲ ಪಡೆಯಲು ವೆಬ್‌ಸೈಟ್ http://kmdconline.karnataka.gov.in ಮೂಲಕ ಮೇ 30 ರೊಳಗಾಗಿ ಅರ್ಜಿ ಸಲ್ಲಿಸುವಂತೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಸವ್ವ ಗುಡ್ಡದ ನಿಧನ



ಗುಳೇದಗುಡ್ಡ: ಪಟ್ಟಣದ ಬಣಗಾರ ಸಮಾಜದ ಬಸವ್ವ ನೂರಂದಪ್ಪ ಗುಡ್ಡದ (85) ಸೋಮವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಬಳಗ ಇದ್ದಾರೆ.



ಬಾಗಲಕೋಟೆ: ಚರಂತಿಮಠ ಹಾಗೂ ವಸ್ತ್ರದ ಫೌಂಡೇಶನ್ ಅಧ್ಯಕ್ಷ ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡ ಮಲ್ಲಿಕಾರ್ಜುನ ಚರಂತಿಮಠ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿಯಾಗಿ ಬಾಗಲಕೋಟೆ ಉಪಚುನಾವಣೆಯ ಗೆಲುವಿಗೆ ಅಭಿನಂದಿಸಿದರು. ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು, ಶಾಸಕ ಬಸವರಾಜ ರಾಯರೆಡ್ಡಿ ಉಪಸ್ಥಿತರಿದ್ದರು.

ಹಳ್ಳ ಸ್ವಚ್ಛತೆಗೆ ನಾಗರಿಕರ ಆಗ್ರಹ

ರಬಕವಿ-ಬನಹಟ್ಟಿ: ಬನಹಟ್ಟಿ ಹೃದಯ ಭಾಗಶ್ರೀ ಕಾಡಸಿದ್ಧೇಶ್ವರ ದೇವಸ್ಥಾನದ ಬಲಭಾಗದ ಇಳಿಜಾರು ಪ್ರದೇಶದಲ್ಲಿ ಹಾಯ್ದು ಹೋಗುವ ಹಳ್ಳ ಸ್ವಚ್ಛತೆಗೊಳಿಸದೆ ಗಲೀಜನಿಂದ ಕೂಡಿ ಗಬ್ಬೆದ್ದು ನಾರುತ್ತಿದೆ.

ಹಲವು ವರ್ಷಗಳಿಂದ ಈ ಹಳ್ಳದ ಸ್ವಚ್ಛತೆಯತ್ತ ಗಮನ ಹರಿಸದ ನಗರಸಭೆ ಅಧಿಕಾರಿಗಳು, ಈಗ ಎರಡೂ ಬದಿಯಲ್ಲಿ ಗಿಡಗಂಟಿಗಳು ಬೆಳೆದು ನೀರು ಸಹ ಸರಾಗವಾಗಿ ಹರಿದು ಹೋಗದ ಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ನಗರದ ಜನರು ಬಳಸಿದ ತ್ಯಾಜ್ಯ ಕೂಡಾ ಇದರಲ್ಲೇ ಎಸೆಯುತ್ತಾರೆ. ಅವಳಿ ನಗರದ ಮೂಲ ಕಸಬು ನೂಲಿಗೆ ಬಣ್ಣ ಹಾಕೋದು. ಸಾಕಷ್ಟು ಕೆಮಿಕಲ್ ಬಳಸಿದ ಬಣ್ಣದ ನೀರು ಕೂಡಾ ಇದೇ ಹಳ್ಳಕ್ಕೆ ಸೇರುತ್ತದೆ. ಜಮಖಂಡಿ-ಕುಡಚಿ ರಾಜ್ಯ ಹೆದ್ದಾರಿಗೆ ಅಂಟಿಕೊಂಡಿರುವ ಈ ಹಳ್ಳದ ಸುತ್ತಲೂ ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳಿವೆ. ಇಲ್ಲಿಯೇ ಮಾಸಾಂಹಾರಿ ವ್ಯಾಪಾರಿಗಳು ಸಹ ಬಳಸಿದ ಮಾಂಸದ ತುಂಡುಗಳನ್ನು ಸಹ ಇದೇ ರಸ್ತೆ ಬದಿಯ ಹಳ್ಳಕ್ಕೆ ಎಸೆದು ಹೋಗುತ್ತಾರೆ. ಇದರಿಂದ ದಿನಂಪ್ರತಿ ಸಂಚರಿಸುವ ವಾಯುವಿಹಾರಿಗಳು ಮೂಗು ಮುಚ್ಚಿಕೊಂಡೇ ಹೋಗುವಂತಾಗಿದೆ.

ಸಂಬಂಧಿಸಿದ ಅಧಿಕಾರಿಗಳು ಕೂಡಲೆ ಎಚ್ಚೆತ್ತುಕೊಂಡು ಹಳ್ಳವನ್ನು ಸ್ವಚ್ಛಗೊಳಿಸುವ ಯೋಜನೆಯನ್ನು ಕೂಡಲೆ ಮಾಡಬೇಕೆಂದು ಸ್ಥಳೀಯ ನಾಗರಿಕರು ಒತ್ತಾಯಿಸಿದ್ದಾರೆ.



ಬಾಗಲಕೋಟೆ: ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಮೈಸೂರಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾನಿಲಯದಿಂದ 2025-26ನೇ ಸಾಲಿನ ವಿಶೇಷ ಸಂಗೀತ ನೃತ್ಯ ಹಾಗೂ ತಾಳವಾದ್ಯಗಳ ಪರೀಕ್ಷೆಗಳು ನಡೆದಿವೆ. ಭರತನಾಟ್ಯ ಪರೀಕ್ಷೆಗಳಲ್ಲಿ ಜ್ಯೂನಿಯರ್ 50, ಸಿನಿಯರ್ 16 ಅಭ್ಯರ್ಥಿಗಳು ಭಾಗವಹಿಸಿದ್ದಾರೆ. ಎಲ್ಲ ಪರೀಕ್ಷಾರ್ಥಿಗಳು ಬಣ್ಣ ಬಣ್ಣದ ಭರತನಾಟ್ಯ ಉಡುಪಿನಲ್ಲಿ ಎಲ್ಲರ ಗಮನ ಸೆಳೆದರು.

ವಿಶ್ರಾಂತ ಉಪಕುಲಪತಿ ಡಾ.ಮೀನಾ ಚಂದಾವರಕರ ಅಭಿಪ್ರಾಯ

ಯುವಕರಿಂದ ಭಾರತ ವಿಶ್ವಗುರು

ಬಾಗಲಕೋಟೆ: ದೇಶದ ಒಟ್ಟು ಜನಸಂಖ್ಯೆಯಲ್ಲಿ ಸಿಂಹಪಾಲು ಹೊಂದಿರುವ ಯುವ ಸಮುದಾಯ ಭಾರತವನ್ನು ವಿಶ್ವಗುರುವನ್ನಾಗಿ ಮಾಡಲು ಸಾಧ್ಯ ಎಂದು ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಉಪಕುಲಪತಿ ಡಾ.ಮೀನಾ ಚಂದಾವರಕರ ಅಭಿಪ್ರಾಯಪಟ್ಟರು.

ಸ್ಥಳೀಯ ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಹಳೆಯ ವಿದ್ಯಾರ್ಥಿಗಳ ಸಮಾವೇಶ ನೆನಪಿನ ದೋಣಿಯಲಿ ಮತ್ತು ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಮಾಜದ ಪ್ರಗತಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುವ ಯುವಕರು ಸಾಧಿಸುವ ಛಲವನ್ನು ಬೆಳೆಸಿಕೊಳ್ಳಬೇಕು. ಯಶಸ್ಸು ಸಹಜವಾಗಿ ಸಿಗುವ ವಸ್ತುವಲ್ಲ. ಅದಕ್ಕೆ ಪ್ರಾಮಾಣಿಕ ಪ್ರಯತ್ನ ಮತ್ತು ಪರಿಶ್ರಮ ಬೇಕು ಎಂದರು.

ಹಳೆಯ ವಿದ್ಯಾರ್ಥಿಗಳು ಸಂಸ್ಥೆಯ ನಿಜವಾದ ಆಸ್ತಿ. ಸಾಧನೆಯ ಮೂಲಕ ಕಲಿತಕಾಲೇಜಿಗೆ ಹೆಮ್ಮೆತಂದಿರುವ ಅವರು ಸಂಸ್ಥೆಯ ಪ್ರಗತಿಯಲ್ಲಿ ಕೈಜೋಡಿಸಬೇಕು. ಹಲವರ ತ್ಯಾಗದಿಂದ ಸಂಸ್ಥೆ ಬೆಳೆದಿದೆ ಎಂಬಅಂಶವನ್ನು ಗಮನದಲ್ಲಿಟ್ಟುಕೊಂಡು ಸಂಸ್ಥೆ ಇನ್ನಷ್ಟು ಬೆಳೆಯಲು ಸಹಕರಿಸಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಗೌರವ ಕಾರ್ಯದರ್ಶಿ ಡಾ.ಗಿರೀಶ ಮಸೂರಕರ ಹಳೆಯ ವಿದ್ಯಾರ್ಥಿಗಳು ಆಗಾಗ ಆಗಮಿಸಿ ಕಾಲೇಜಿನ ಪ್ರಗತಿಯ ಅವಲೋಕನ ಮಾಡಬೇಕು. ಉತ್ತಮ ಸಲಹೆಗಳನ್ನು ನೀಡುವುದರ ಮೂಲಕ ಪ್ರಗತಿಗೆ ಸಹಕರಿಸಬೇಕು ಎಂದರು.



ಪ್ರಾಚಾರ್ಯ ಶ್ರೀನಿವಾಸ ನರಗುಂದ ಮಾತನಾಡಿ, ಇದು ಬರೀ ಸಮಾವೇಶವಲ್ಲ, ನೆನಪುಗಳ, ಸಾಧನೆಗಳ, ಗೆಳೆತನದ ಮತ್ತು ಸಂಸ್ಥೆಯ ಜೊತೆಗಿನ ಬಾಂಧವ್ಯದ ಸಂಭ್ರಮಾಚರಣೆಯಾಗಿದೆ. ಕಾಲೇಜಿನ ನಿಜವಾದ ರಾಯಭಾರಿಗಳಾಗಿರುವ ಹಳೆಯ ವಿದ್ಯಾರ್ಥಿಗಳು ತಮ್ಮ ಅನುಭವ, ಸಾಧನೆ, ಯಶೋಗಾಥೆಯನ್ನು ಈಗಿನ ವಿದ್ಯಾರ್ಥಿಗಳೊಂದಿಗೆ ಹಂಚಿಕೊಂಡು ಅವರಿಗೆ ಪ್ರೇರಣೆ ನೀಡಬೇಕು. ಜ್ಞಾನ,ಜೀವನ ಮೌಲ್ಯ ಹಾಗೂ ಸಂಸ್ಕಾರ ನೀಡಿರುವ ಮಾತೃಸಂಸ್ಥೆಯ ಬಗ್ಗೆ ಧನ್ಯತಾಭಾವ ಹೊಂದಬೇಕು ಎಂದರು.

ಯುಜಿಸಿ ನೆಟ್, ಸೆಟ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಮತ್ತು ಪಿಎಚ್‌ಡಿ ಪಡೆದ ಹಳೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಡಾ.ಎಸ್.ಆರ್.ನಾಗಣ್ಣವರ, ಡಾ.ಎಸ್.ಎಂ.ಖೋತ, ಪಿ.ಬಿ.ಭಜಂತ್ರಿ, ರವಿ ಕುಲಕರ್ಣಿ, ಎಸ್.ಟಿ.ಸಿದ್ದಲಿಂಗಪ್ಪನವರ, ಸಿ.ಎಲ್.ಹೂಗಾರ, ನಾಗಲಕ್ಷ್ಮೀ ರಾಯಚೂರ ಮತ್ತು ಪರಶುರಾಮ ಜಾಧವ, ನಿವೃತ್ತ ಪ್ರಾಧ್ಯಾಪಕ ಎಸ್.ಬಿ.ಪರ್ವತೀಕರ ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರ್ಯಾಧ್ಯಕ್ಷೆ ಶ್ರೀಲತಾ ಹೆರಂಜಲ ಸಂಸ್ಥೆಯನ್ನು ಇನ್ನಷ್ಟು ಬೆಳೆಸಲು ಹಲವು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಅದಕ್ಕೆ ಪ್ರಯತ್ನಗಳೂ ನಡೆದಿವೆ. ಹುನ್ನೂರು ಸಹೋದರರು, ಮಾಜಿ ಸಚಿವ ಅರವಿಂದ ಲಿಂಬಾವಳಿ ಸಹಿತಅನೇಕರು ಆರ್ಥಿಕ ಬೆಂಬಲ ನೀಡಿದ್ದನ್ನು ಸ್ಮರಿಸಿದರು. ನವನಗರದಲ್ಲಿ ಒದಗಿಸಲಿರುವ ಶೈಕ್ಷಣಿಕ ಸೌಲಭ್ಯಗಳಿಗೆ ಹಳೆಯ ವಿದ್ಯಾರ್ಥಿಗಳು ಸಹಾಯ-ಸಹಕಾರ ನೀಡಬೇಕು ಎಂದರು.

ಕೀರ್ತಿದಾಸರ ಹಾಗೂ ಶ್ವೇತಾ ಕುಲಕರ್ಣಿ ಪ್ರಾರ್ಥಿಸಿದರು. ಡಾ.ಎಸ್.ಎಸ್.ಹಂಗರಗಿ ಪರಿಚಯಿಸಿದರು. ಸಂಯೋಜಕ ಎಸ್.ವೈ.ಬೊಮ್ಮಣ್ಣವರ ವಂದಿಸಿದರು. ಎಂ.ಡಿ.ಕೋರವಾರ ನಿರೂಪಿಸಿದರು. ಕಾಲೇಜು ನಡೆದು ಬಂದ ಬಗೆ ಕುರಿತಕಿರುಚಿತ್ರ ಗಮನ ಸೆಳೆಯಿತು.

ಕಾಲೇಜು ಉಪವಿಭಾಗದ ಅಧ್ಯಕ್ಷ ಡಾ.ಪಿ.ಆರ್.ಜೋಶಿ, ಉಪಾಧ್ಯಕ್ಷ ಜಿ.ಎನ್.ಕುಲಕರ್ಣಿ, ನಿವೃತ್ತ ಪ್ರಾಧ್ಯಾಪಕರಾದ ಡಾ.ಪಿ.ಎಸ್.ಹುಯಿಲ ಗೋಳ, ಆರ್.ಆರ್.ದೇಶಮುಖ, ಜಿ.ಜಿ.ಮೊರಬ, ಎಂ.ವಿ.ಮಹಾಡೀಕರ, ವಿ.ಎಸ್.ಮಠ, ಎಸ್.ಕೆ.ದೇಸಾಯಿ, ಆರ್.ಎಸ್.ದೇಸಾಯಿ ಉಪಸ್ಥಿತರಿದ್ದರು.

ಮೇ 14ರಂದು ವೀರಪುಲಿಕೇಶಿ ಬ್ಯಾಂಕಿನ ಪ್ರಧಾನ ಕಚೇರಿಯ ಕಟ್ಟಡ ಉದ್ಘಾಟನೆ

ಬಾದಾಮಿ: ಮೇ 14ರಂದು ಗುರುವಾರ ಬೆಳಗ್ಗೆ 11 ಗಂಟೆಗೆ ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆಯ ಆವರಣದಲ್ಲಿ ವೀರಪುಲಿಕೇಶಿ ಬ್ಯಾಂಕಿನ ಪ್ರಧಾನ ಕಛೇರಿಯ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಬ್ಯಾಂಕಿನ ಅಧ್ಯಕ್ಷ, ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ ತಿಳಿಸಿದರು.

ಅವರು ಸೋಮವಾರ ಪಟ್ಟಣದ ವೀರಪುಲಿಕೇಶಿ ಬ್ಯಾಂಕಿನ ಸಭಾಭವನದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಗ್ರಾಹಕರಿಗೆ ಅನುಕೂಲಕ್ಕಾಗಿ ರೂ.2.00 ಕೋಟಿ ವೆಚ್ಚದಡಿ 5400 ಚ.ಅ.ವ್ಯಾಪ್ತಿಯಲ್ಲಿ ನಿರ್ಮಾಣ ಮಾಡಿರುವ ಈ ಕಟ್ಟಡದಲ್ಲಿ ಕೆಳಮಹಡಿ ಪಾರ್ಕಿಂಗ್, ಒಂದನೇ ಮಹಡಿ ಕಚೇರಿ ಎರಡನೇ ಮಹಡಿ ಸಭಾಭವನವನ್ನು ನಿರ್ಮಾಣ ಮಾಡಿ ಹವಾನಿಯಂತ್ರಿತ(ಎ.ಸಿ) ಅಳವಡಿಸಲಾಗಿದೆ. ಮೂರು ಸಾವಿರ ಮಠದ ಜಗದ್ಗುರು ಗುರುಸಿದ್ಧ ರಾಜಯೋಗೇಂದ್ರ ಮಹಾಸ್ವಾಮಿಗಳು, ಹಾಲಕೆರೆ ಅನ್ನದಾನೇಶ್ವರಮಠದ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು, ಹಾವೇರಿ ಹುಕ್ಕೇರಿಮಠದ ಡಾ.ಸದಾಶಿವ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸುವರು. ಮಾಜಿಮುಖ್ಯಮಂತ್ರಿ, ಸಂಸದ ಜಗದೀಶ ಶೆಟ್ಟರ ಹೊಸ ಕಟ್ಟಡವನ್ನು ಉದ್ಘಾಟಿಸುವರು. ಸಂಸ್ಥಾಪಕ ಅಧ್ಯಕ್ಷರ ಪುತ್ಥಳಿ ಅನಾವರಣವನ್ನು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಅನಾವರಣ ಮಾಡುವರು. ಕಾರ್ಯಕ್ರಮವನ್ನು ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಉದ್ಘಾಟಿಸುವರು. ಲಿಂ.ಸದಾಶಿವ ಮಹಾಸ್ವಾಮಿಗಳು ಭಾವಚಿತ್ರವನ್ನು ಡಾ.ಮುರುಗೇಶ ನಿರಾಣಿ, ಹಿಂದಿನ ಅಧ್ಯಕ್ಷರ ಭಾವಚಿತ್ರಗಳನ್ನು ಮಾಜಿ ಸಚಿವ ಬಿ.ಶ್ರೀರಾಮುಲು ಅನಾವರಣ ಮಾಡುವರು.

ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಬಾಂಡಗೆ, ವಿಪ ಸದಸ್ಯರಾದ ಪಿ.ಎಚ್.ಪೂಜಾರ, ಹನಮಂತ ನಿರಾಣಿ, ಅಜಯಕುಮಾರ ಸರನಾಯಕ, ಜಯಣ್ಣ ಮಮದಾಪೂರ ಸೇರಿದಂತೆ ಸಹಕಾರಿ ಸಂಘಗಳ ಅಧಿಕಾರಿಗಳು ಭಾವಹಿಸುವರು ಎಂದು ಎಂ.ಕೆ.ಪಟ್ಟಣಶೆಟ್ಟಿ ತಿಳಿಸಿದರು.

ನಿರ್ದೇಶಕರಾದ ಎ.ಸಿ.ಪಟ್ಟಣದ, ಡಿ.ಎಂ.ಪೈಲ್, ವಿ.ಕೆಬಾಗಲೆ, ಬಿ.ಎಂ.ಟೆಂಗಿನಕಾಯಿ, ಎಂ.ಎಸ್.ಹಿರೇಹಾಳ, ಚನ್ನಪ್ಪ ಪಟ್ಟಣದ, ಎಂ.ಎಸ್.ತೆಗ್ಗಿನಮನಿ, ವಿ.ಆರ್.ಪಾಟೀಲ, ಎಚ್.ಕೆ.ಬೆಳ್ಳಿಗುಂಡಿ, ಎಂ.ಆರ್.ತಳವಾರ, ಪ್ರಧಾನ ವ್ಯವಸ್ಥಾಪಕಿ ಎಂ.ಬಿ.ದೇಶನ್ನವರ ಉಪಸ್ಥಿತರಿದ್ದರು.



ಜಾತ್ರೆ-ಉತ್ಸವಗಳು ಸಂಸ್ಕೃತಿಯ ಪ್ರತೀಕ

ಮಹಾಲಿಂಗಪುರ: ಪ್ರತಿವರ್ಷ ನಡೆಯುವ ಜಾತ್ರೆ-ಉತ್ಸವಗಳು ನಮ್ಮ ಸನಾತನ ಹಿಂದೂ ಸಂಸ್ಕೃತಿಯ ಪ್ರತೀಕವಾಗಿವೆ ಎಂದು ಜಿಲ್ಲಾ ಕಾನಿಪ ಸದಸ್ಯ ಚಂದ್ರಶೇಖರ ಮೋರೆ ಹೇಳಿದರು.

ಪಟ್ಟಣದ ಬುದ್ನಿಪಿಡಿ ಬಡಾವಣೆಯ ದುರ್ಗಾದೇವಿಯ ಜಾತ್ರಾ ಮಹೋತ್ಸವದ ನಿಮಿತ್ತ ನಡೆದ ರಸಮಂಜರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಜಾತ್ರೆ-ಉತ್ಸವಗಳು ಪರಸ್ಪರ ಪ್ರೀತಿ, ವಿಶ್ವಾಸ, ಭಕ್ತಿಯನ್ನು ಬೆಳೆಸುವದರ ಜೊತೆಗೆ ನಮ್ಮ ಹಿಂದೂ ಧರ್ಮದ ಪರಂಪರೆ, ಆಚರಣೆ, ರೂಢಿ, ಪದ್ಧತಿ, ಸಂಪ್ರದಾಯಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ಸಹಕಾರಿಯಾಗಿವೆ. ಯುವ ಜನತೆ ಜಾತ್ರಾ ಮಹೋತ್ಸವದ ಸಮಯದಲ್ಲಿ ದುಶ್ಚಟಗಳಿಂದ ದೂರವಿರುವ ಸಂಕಲ್ಪ ಮಾಡಿ, ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಿದರೆ ಜಾತ್ರಾ-ಮಹೋತ್ಸವ ಆಚರಣೆಗಳು ಸಾರ್ಥಕವಾಗುತ್ತವೆ ಎಂದರು.

ರಮೇಶ ಕೆಸರಗೊಪ್ಪ ಮಾತನಾಡಿ, ಮಹಾಲಿಂಗೇಶ್ವರ ಪುಣ್ಯಭೂಮಿ ಮಹಾಲಿಂಗಪುರ ಹಿಂದೂ ಮುಸ್ಲಿಂ ಭಾವೈಕ್ಯತೆಯ ಮಾದರಿ ಪಟ್ಟಣವಾಗಿದೆ. ಇಲ್ಲಿ ನಡೆಯುವ ಪ್ರತಿಯೊಂದು ಜಾತ್ರೆ ಉತ್ಸವಗಳು ವಿಶೇಷತೆಯಿಂದ ಕೂಡಿರುತ್ತವೆ. ಬುದ್ನಿಪಿಡಿ ಬಡಾವಣೆಯ ದುರ್ಗಾದೇವಿ ದೇವಸ್ಥಾನದ ಹಿರಿಯರು ಅದ್ದೂರಿಯಾಗಿ ಜಾತ್ರಾ ಮಹೋತ್ಸವ ಆಚರಿಸಿ, ಬೃಹತ್ ರಸಮಂಜರಿ ಕಾರ್ಯಕ್ರಮ ಆಯೋಜಿಸಿದ್ದು ಶ್ಲಾಘನೀಯ ಎಂದರು.

ದುರ್ಗಾದೇವಿ ದೇವಸ್ಥಾನದ ಹಿರಿಯರಾದ ಅಶೋಕ ಮಳಲಿ ಅಧ್ಯಕ್ಷತೆ ವಹಿಸಿದ್ದರು.



ಸುರೇಶ ಬೂದಿಹಾಳ ಮಾತನಾಡಿದರು. ಶ್ರೀಶೈಲ ಪೂಜೇರಿ, ಪ್ರತಾಪ ಗೌಡಪ್ಪಗೋಳ, ಅಪ್ಪಾಸಾಬ ನಾಲಬಂದ, ಹಣಮಂತ ಆರೇನವರ, ಯಲ್ಲಪ್ಪ ಕರಿಗಾರ, ಮಹಾಂತೇಶ ಗೌಡಪ್ಪಗೋಳ, ವಿಠ್ಠಲ ಮಳಲಿ, ಮಹಾಲಿಂಗ ಗೌಡಪ್ಪಗೋಳ, ಅಭಿಷೇಕ ಮಳಲಿ, ಆನಂದ ಗೌಡಪ್ಪಗೋಳ, ಮಹಾಲಿಂಗ ಕಂಕನವಾಡಿ, ಕಿರಣ ಮೇಟಿ ಅವರನ್ನು ಸನ್ಮಾನಿಸಲಾಯಿತು.

ದುರ್ಗಾದೇವಿ ಜಾತ್ರಾ ಮಹೋತ್ಸವದ ನಿಮಿತ್ಯ ಮನು ಅಂಬಿ(ಮಹಾಲಿಂಗಪುರ) ಮತ್ತು ಪರಸು ಕೋಲುರ ತಂಡದ ಕಲಾವಿದರು ತಡರಾತ್ರಿವರೆಗೆ ನಡೆಸಿಕೊಟ್ಟ ರಸಮಂಜರಿ ಕಾರ್ಯಕ್ರಮವು ಎಲ್ಲರ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು. ದೇವಸ್ಥಾನದ ಅರ್ಚಕ ಕಾಶಿನಾಥ ಮಳಲಿ, ಹಿರಿಯರಾದ ಕೆಂಪಣ್ಣ ಗೌಡಪ್ಪಗೋಳ, ಕಲ್ಲಪ್ಪ ಯಡ್ರಾಂವಿ, ನಾಗಪ್ಪ ಮಾಳಗಿಮನಿ, ಮಹಾದೇವ ಮೇತ್ರಿ, ಶಿವು ಯಡ್ರಾಂವಿ, ವಿಶ್ವನಾಥ ಮೇತ್ರಿ, ರಾಹುಲ ಸಂಗಾನಟ್ಟಿ, ನವೀನ ಗೌಡಪ್ಪಗೋಳ, ಪ್ರಜ್ವಲ ಖಟಾಂವಿ, ಪ್ರಜ್ವಲ ಚಿಂಚಲಿ, ಪ್ರವೀಣ ಖಟಾಂವಿ ಸೇರಿದಂತೆ ಹಲವರು ಇದ್ದರು.

ಈರುಳ್ಳಿ ದರ ಕುಸಿತ: ರೈತರ ನೆರವಿಗೆ ಧಾವಿಸಲು ಹಿರೇಮಠ ಒತ್ತಾಯ

ಬೀಳಗಿ: ಉತ್ತರ ಕರ್ನಾಟಕದಲ್ಲಿ ವಾಣಿಜ್ಯ ಬೆಳೆಯಾದ ಈರುಳ್ಳಿ ಬೆಳೆ ಫಸಲು ಚನ್ನಾಗಿ ಬಂದಿದ್ದು, ಈ ಬೆಳೆಯನ್ನು ಬೆಳೆಯಲು ಪ್ರತಿ ಎಕರೆಗೆ ಕನಿಷ್ಠ 50ರಿಂದ 60 ಸಾವಿರ ರೂ. ವರೆಗೆ ಸಾಲಾ ಮಾಡಿ ಖರ್ಚು ಮಾಡಿದ್ದು, ಆದರೆ ಮಾರ್ಕೆಟ್‌ನಲ್ಲಿ ಅದರ ದರ ಕುಸಿತದಿಂದಾಗಿ ರೈತರು ಪರಿಸ್ಥಿತಿ ಚಿಂತಾಜನಕವಾಗಿದ್ದು, ಸರ್ಕಾರ ರೈತರ ನೆರವಿಗೆ ಧಾವಿಸಿ ಪರಿಹಾರ ನೀಡಬೇಕು ಎಂದು ಭಾರತೀಯ ಕಿಸಾನ ಸಂಘದ ಕರ್ನಾಟಕ ಪ್ರದೇಶ ಉತ್ತರ ಪ್ರಾಂತ ಬಾಗಲಕೋಟೆ ಜಿಲ್ಲಾಧ್ಯಕ್ಷ ವಿರುಪಾಕ್ಷಯ್ಯ ಹಿರೇಮಠ ಒತ್ತಾಯಿಸಿದ್ದಾರೆ.



ಅತಿವೃಷ್ಟಿಯಿಂದ ರೈತರ ಈರುಳ್ಳಿ ಸೇರಿದಂತೆ ಅನೇಕ ಬೆಳೆಗಳು ನೀರು ಪಾಲಾಗಿ ಅಪಾರ ಪ್ರಮಾಣದಲ್ಲಿ ಹಾನಿಯಾದರೂ ಕೃಷಿ, ತೋಟಗಾರಿಗಾರಿಕೆ, ಕಂದಾಯ ಇಲಾಖೆ ಕೆಲವುಅಧಿಕಾರಿಗಳದಿವ್ಯ ನಿರ್ಲಕ್ಷ್ಯದಿಂದಾಗಿ ಸರಿಯಾಗಿ ಪರಿಹಾರ ವಿತರಣೆಯಾಗಲಿಲ್ಲ, ಫಸಲ್ ಭೀಮಾ ಯೋಜನೆಡಿಯಲ್ಲಿ ಬೆಳೆ ವಿಮಾ ಪ್ರೀಮಿಯಂ ಪಾವತಿಸಿದರೂ ಆದರಿಂದ ರೈತರಿಗೆ ಸರಿಯಾಗಿ ಕ್ಲೇಮ್ ದೊರಕಲಿಲ್ಲ, ವಿಮಾ ಅಧಿಕಾರಿಗಳು ನಿಜವಾದ ಫಲಾನುಭವಿಗಳಿಗೆ ಹಂಚದೇ, ಫಲಾನುಭವಿಗಳಲ್ಲದವರಿಗೆ ನೀಡಿ ಭ್ರಷ್ಟಾಚಾರವೆಸಗಿ ರೈತರಿಗೆ ಅನ್ಯಾಯ ಮಾಡಿದ್ದಾರೆ. ಸರಕಾರ ತಕ್ಷಣ ಇಂತಹ ಪ್ರಕರಣಗಳಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದರು.

ಪ್ರಸಕ್ತ ಸಾಲಿನಲ್ಲಿ ಈರುಳ್ಳಿ ಬೆಳೆಗಾರರು ಬೆಲೆ ಕುಸಿತದಿಂದಾಗಿ ಕಂಗಾಲಾಗಿದ್ದು, ಬಿತ್ತನೆಗೆ ರಸಗೊಬ್ಬರ, ಔಷಧಿ, ಕೂಲಿ ಕಾರ್ಮಿಕರ ವೇತನಕ್ಕೆ ಸಾಲ ಮಾಡಿದ್ದು, ಅದನ್ನು ತಿರಿಸಲಾಗದೇ ರೈತರು ಸಂಕಷ್ಟ ಪರಸ್ಥಿತಿ ಎದುರಿಸಿ ಆತ್ಮಹತ್ಯೆಯಂತಹ ಘಟನೆಗಳು ಜರುಗಬಹುದಾಗಿದ್ದು, ಅವುಗಳನ್ನು ತಪ್ಪಿಸಲು ಈರುಳ್ಳಿ ಬೆಳೆಗಾರರಿಗೆ ಸರಕಾರ ಕೂಡಲೇ ಹಾನಿಯಾದ ರೈತರಿಗೆ ಪರಿಹಾರ ನೀಡಿ ನ್ಯಾಯ ಒದಗಿಸಬೇಕು. ಇಲ್ಲದಿದ್ದರೆ ರೈತರ ಜೊತೆಗೂಡಿ ಭಾರತೀಯ ಕಿಸಾನ ಸಂಘ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಸಂಚಾರಕ್ಕೆ ಅಡ್ಡಿಯಾದ ರಸ್ತೆ ತಗ್ಗುಗಳು

ಗುಳೇದಗುಡ್ಡ: ಪಟ್ಟಣದ ಬಾಗಲಕೋಟೆ ನಗರಕ್ಕೆ ಸಂಪರ್ಕಿಸುವ ಮುಖ್ಯ ರಸ್ತೆಯಲ್ಲಿ ಕುಡಿಯುವ ನೀರಿಗಾಗಿ ಪೈಪ್‌ಲೈನ್ ಹಾಕಲು ಎರಡು ಕಡೆಗಳಲ್ಲಿ ಅಗೆದು ಹಾಗೆ ಬಿಟ್ಟಿದ್ದರಿಂದ ರಸ್ತೆ ಮಧ್ಯೆ ಎರಡೂ ಕಡೆ ತಗ್ಗುಬಿದ್ದು, ಸಂಚಾರಕ್ಕೆ ತೊಂದರೆಯಾಗುತ್ತಿತ್ತು. ಹೀಗೆ ಹಲವಾರು ತಿಂಗಳಿಂದ ರಸ್ತೆಯ ಮಧ್ಯದಲ್ಲಿ ಅಗೆದು ಬಿಟ್ಟಿದ್ದ ತಗ್ಗು ಬೆಳೆಯುತ್ತಾ ಬೆಳೆಯುತ್ತಾ ಸಂಚಾರಕ್ಕೆ ತೀವ್ರ ತೊಂದರೆಯಾಗಿದೆ.

ರಸ್ತೆಯ ಮಧ್ಯದ ತಗ್ಗಿನಿಂದಾಗಿ ವಾಹನ ಸವಾರರಿಗೆ ಸಂಕಷ್ಟ ಎದುರಾಗಿತ್ತು. ಆದರೂ ಸಂಬಂದಿಸಿದ ಇಲಾಖೆ ಈ ಬಗ್ಗೆ ಯಾವುದೇ ಗಮನ ನೀಡದೇ ರಸ್ತೆಯನ್ನು ದುರಸ್ತಿ ಮಾಡದೇ ಬಿಟ್ಟಿದೆ. ನಿತ್ಯ ಈ ರಸ್ತೆಯಲ್ಲಿ ಸಾಕಷ್ಟು ವಾಹನಗಳು, ಬಸ್, ಟಂಟಂ, ದ್ವಿಚಕ್ರವಾಹನಗಳು ಸಂಚರಿಸುತ್ತಿದ್ದು ಈ ಬಾರಿ ತಗ್ಗಿನಿಂದಾಗಿ ಅಪಾಯಕ್ಕೆ ಆಹ್ವಾನ ನೀಡುತ್ತಿದೆ. ನಿತ್ಯ ಇಲ್ಲಿ ವಾಹನ ಸಂಚಾರರು ಇಲಾಖೆಗೆ ಹಿಡಿ ಶಾಪ ಹಾಕುವಂತಾಗಿದೆ. ಕೂಡಲೇ ರಸ್ತೆಯನ್ನು ದುರಸ್ತಿ ಮಾಡಿ, ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ಇಂದು ಪುಣ್ಯಸ್ಮರಣೆ

ಬಾದಾಮಿ: ಪುರಸಭೆ ಮಾಜಿ ಸದಸ್ಯ ದಿಂ.ಬಸವರಾಜ ತೀರ್ಥಪ್ಪನ್ನವರ ಇವರ ಪ್ರಥಮ ಪುಣ್ಯಸ್ಮರಣೆ ಅಂಗವಾಗಿ ಮೂರ್ತಿ ಅನಾವರಣ ಕಾರ್ಯಕ್ರಮ ಮೇ 12ರಂದು ಮಂಗಳವಾರ ಬೆಳಗ್ಗೆ 10 ಗಂಟೆಗೆ ಪಟ್ಟಣದ ರಾಮದುರ್ಗ ರಸ್ತೆ ತೀರ್ಥಪ್ಪನ್ನವರ ಲೇ ಔಟ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಅಭಿನವ ಒಪ್ಪತ್ತೇಶ್ವರ ಮಹಾಸ್ವಾಮಿಗಳು ಮೂರ್ತಿ ಅನಾವರಣ ಮಾಡುವರು. ಮುಖ್ಯ ಅತಿಥಿಗಳಾಗಿ ಸಂಸದ ಪಿ.ಸಿ.ಗದ್ದಿಗೌಡರ, ಶಾಸಕ ಭೀಮಸೇನ ಚಿಮ್ಮನಕಟ್ಟಿ, ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹಾಂತೇಶ ಮಮದಾಪೂರ, ಹನಮಂತ ಮಾವಿನಮರದ, ಕುಮಾರಗೌಡ ಜನಾಲಿ, ಶಾಂತಗೌಡ ಪಾಟೀಲ ಭಾಗವಹಿಸುವರು ಎಂದು ಬಸವರಾಜ ತೀರ್ಥಪ್ಪನ್ನವರ ಅಭಿಮಾನಿ ಬಳಗದ ಪ್ರಕಟಣೆ ತಿಳಿಸಿದೆ.

ಕುಮಾರೇಶ್ವರ ಆಸ್ಪತ್ರೆಯಲ್ಲಿ ಥಲಸ್ಸೆಮಿಯಾಗೆ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ

ಬಾಗಲಕೋಟೆ: ಕುಮಾರೇಶ್ವರ ಆಸ್ಪತ್ರೆಯಲ್ಲಿ 100 ಹಾಸಿಗೆಗಳ ಥಲಸ್ಸೆಮಿಯಾ ಘಟಕ ಹೊಂದಿದ್ದು ಕಡಿಮೆ ವೆಚ್ಚದಲ್ಲಿ ಶಸ್ತ್ರಚಿಕಿತ್ಸೆ ನೀಡಲಾಗುತ್ತಿದೆ ಡಾ.ಭುವನೇಶ್ವರಿ ಯಳಮಲಿ ಹೇಳಿದರು.

ನಗರದ ಬವಿವ ಸಂಘದ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಚಿಕ್ಕಮಕ್ಕಳ ಶುಶ್ರೂಷಾ ವಿಭಾಗದ ವತಿಯಿಂದ ಸೋಮವಾರ ಹಾನಗಲ್ ಕುಮಾರೇಶ್ವರ ಆಸ್ಪತ್ರೆಯ ಓಪಿಡಿ ಸಭಾಂಗಣದಲ್ಲಿ ವಿಶ್ವ ಥಲಸ್ಸೆಮಿಯಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಭಾರತದಲ್ಲಿ ಅಂದಾಜು ಸರಾಸರಿ 3-4 ಪ್ರತಿಶತ ಬಿ.ಥಲಸ್ಸೆಮಿಯಾ ವಾಹಕಗಳ ಹರಡುವಿಕೆ ಇದೆ. ಹಾನಗಲ್ ಕುಮಾರೇಶ್ವರ ಆಸ್ಪತ್ರೆಯೂ ಕೂಡ 100 ಹಾಸಿಗೆಗಳ ಥಲಸ್ಸೆಮಿಯಾ ಘಟಕವನ್ನು ಹೊಂದಿದ್ದು, ಈ ವಿಭಾಗಕ್ಕೆ ಚಿಕಿತ್ಸೆಗೆ ಎಲ್ಲ ಮಕ್ಕಳಿಗೆ ಗುಣಮಟ್ಟದ ಹಾಗೂ ಕಡಿಮೆ ವೆಚ್ಚದಲ್ಲಿ ಶಸ್ತ್ರಚಿಕಿತ್ಸೆ ನೀಡಲಾಗುತ್ತದೆ. ಈ ವಿಭಾಗದ ಸೇವೆಗಾಗಿ 2022ರಲ್ಲಿ ಆಸ್ಪತೆಗೆ ಹಾಗೂ ವಿಭಾಗದ ಮುಖ್ಯಸ್ಥರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಬಂದಿದ್ದು ಶ್ಲಾಘನೀಯವಾಗಿದೆ ಎಂದರು.



ಅಧ್ಯಕ್ಷತೆ ವಹಿಸಿದ್ದ ಬ.ವಿ.ವ ಸಂಘದ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯ ಪ್ರಾಚಾರ್ಯ ಡಾ.ದೀಲಿಪ್ ಎಸ್.ನಾಟೇಕಾರ ಮಾತನಾಡಿ, ಆರೋಗ್ಯ ಶುಶ್ರೂಷಕರು ಹಾಗೂ ಆರೋಗ್ಯ ಶುಶ್ರೂಷಾ ಬೋಧಕ ಸಿಬ್ಬಂದಿಗಳು ಸಮುದಾಯಕ್ಕೆ ಭೇಟಿ ನೀಡಿ, ಥಲಸ್ಸೆಮಿಯಾ ರೋಗವನ್ನು ತಡೆಗಟ್ಟುವಿಕೆ, ಗುಣಪಡಿಸುವ ವಿಧಾನಗಳು ಮತ್ತು ಥಲಸ್ಸೆಮಿಯಾ ರೋಗಿಗಳ ಆರೈಕೆಯ ಬಗ್ಗೆ ಹಾಗೂ ಥಲಸ್ಸೆಮಿಯಾ ಬಾಧಿತ ಮಕ್ಕಳಿಗೆ ಸಾಧ್ಯವಾದಷ್ಟು ಉತ್ತಮವಾದ ಆರೈಕೆ ಮತ್ತು ಚಿಕಿತ್ಸೆ ನೀಡುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಎಚ್.ಎಸ್.ಕೆ ಆಸ್ಪತ್ರೆಯ ಚಿಕ್ಕಮಕ್ಕಳ ವಿಭಾಗದ ಮುಖ್ಯಸ್ಥ ಡಾ.ಅಶೋಕ ಬಡಕಲಿ ಮಾತನಾಡಿ, ಥಲಸ್ಸೆಮಿಯಾ ರೋಗದ ಹೊಸ ಚಿಕಿತ್ಸಾ ವಿಧಾನಗಳು ಮತ್ತು ರೋಗ ನಿಯಂತ್ರಿಸುವ ಕುರಿತು ಅನೇಕ ಸಂಶೋಧನೆಗಳನ್ನು ನಡೆಸುವುದು ಅತ್ಯವಶ್ಯಕವಾಗಿದೆ ಎಂದರು.

ಮಹಾವಿದ್ಯಾಲಯದ ಚಿಕ್ಕಮಕ್ಕಳ ಶುಶ್ರೂಷಾ ವಿಭಾಗದ ಮುಖ್ಯಸ್ಥ ಡಾ.ದಾನೇಶ್ವರಿ ಹಿರೇಮಠ, ಚಿಕ್ಕಮಕ್ಕಳ ಶುಶ್ರೂಷಾ ವಿಭಾಗದ ಪ್ರಾಧ್ಯಾಪಕರಾದ ಡಾ.ನಿಂಗನಗೌಡ ಜಿ. ಪಾಟೀಲ, ಡಾ.ಪ್ರಶಾಂತಕುಲಕರ್ಣಿ, ಸಂತೋಷಸಜ್ಜನ, ಸಹಪ್ರಾಧ್ಯಾಪಕರು, ಚಂದ್ರಾ ಜತ್, ರೇಣುಕಾ ಜಾಲಿಹಾಳ, ರಾಜಶೇಖರ ಕಾಬನೂರ, ಶಿವಾನಂದ ಡಿ. ಮಹಾಂತೇಶಗೌಡ ಹಾಗೂ ಪುಷ್ಪಾ ಮಹಾವಿದ್ಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ಭಗವಂತನ ನಾಮಸ್ಮರಣೆಯಿಂದ ಶಕ್ತಿ ವೃದ್ಧಿ: ಉತ್ತಂಗಿ

ಮಹಾಲಿಂಗಪುರ: ಭಾರತದಲ್ಲಿ ಮಹಿಳೆಯನ್ನು ದುರ್ಗೆ, ಕಾಳಿ, ಆದಿಶಕ್ತಿ, ಅನ್ನಪೂರ್ಣೆಯ ಅವತಾರವೆಂದು ಗೌರವಿಸಲಾಗುತ್ತದೆ. ಮಾತೆಯರಿಂದ ಸುಭದ್ರ ರಾಷ್ಟ್ರನಿರ್ಮಾಣ ಸಾಧ್ಯ ಹಾಗಾಗಿ ಪ್ರತಿ ಮಹಿಳೆಯರು ನಿತ್ಯವೂ ಭಗವಂತನ ನಾಮಸ್ಮರಣೆ ಮಾಡಿ ತಮ್ಮ ದೈವ ಶಕ್ತಿ ವೃದ್ಧಿಸಿಕೊಂಡು, ಮಕ್ಕಳಲ್ಲಿಯೂ ಅಂಥ ಸಂಸ್ಕಾರ ಬೆಳೆಸಿದಾಗ ಉತ್ತಮ ಸಮಾಜ ನಿರ್ಮಾಣ ಮತ್ತು ಸುಭದ್ರ ರಾಷ್ಟ್ರ ನಿರ್ಮಾಣ ಸಾಧ್ಯ ಎಂದು ರಾಷ್ಟ್ರೋತ್ಥಾನ ಪರಿಷತ್ ಸಂಪನ್ಮೂಲ ವ್ಯಕ್ತಿ ನಾರನಗೌಡ ಉತ್ತಂಗಿ ಹೇಳಿದರು.

ತಾಯಂದಿರ ದಿನಾಚರಣೆ ಪ್ರಯುಕ್ತ ಸ್ಥಳೀಯ ಕುಬಸದ ಗಲ್ಲಿಯಲ್ಲಿ ವಿದ್ಯಾಶ್ರೀ ಸ್ವಸಹಾಯ ಸಂಘದ ವತಿಯಿಂದ ಗಿರಿಮಲ್ಲಪ್ಪ ಯರಗಟ್ಟಿ ಮತ್ತು ಚಂದ್ರು ಯರಗಟ್ಟಿ ಅವರ ನೇತೃತ್ವದಲ್ಲಿ ಭಾನುವಾರ ರಾತ್ರಿ ಜರುಗಿದ ಮಾತೃವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಉಳಿವು ಆ ದೇಶದ ಜನರ ಸಂಸ್ಕೃತಿ ಅವಲಂಬಿಸಿರುತ್ತದೆ. ಹಾಗಾಗಿ



ಮಕ್ಕಳಿಗೆ ಸಂಸ್ಕೃತಿ ಕಲಿಸಿ ಸುಸಂಸ್ಕೃತ ಸಮಾಜ, ಸುಭದ್ರ ದೇಶ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಅವರ್ಣನೀಯ, ಮಾತೆ ಜೀಜಾಬಾಯಿಯಿಂದ ಶಿವಾಜಿ ಉದಯಿಸಿದಂತೆ ಸುಸಂಸ್ಕೃತ ಮಾತೆಯರಿಂದ ಮಹಾನ್ ವ್ಯಕ್ತಿಗಳು ನಿರ್ಮಾಣವಾಗುತ್ತಾರೆ. ಮಾತೆಯರು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗದೆ ಮೊಬೈಲ್, ಟಿವಿಗಳಿಂದ ದೂರವಿದ್ದು, ಮಕ್ಕಳಿಗೆ ಮಾದರಿಯಾಗಿ ಮಕ್ಕಳಲ್ಲಿ ದೇಶಾಭಿಮಾನದ ಜೊತೆ ಧರ್ಮಾಭಿಮಾನ ಬೆಳೆಯುವಂತೆ ನಿತ್ಯವೂ ಮನೆಯಲ್ಲಿ ಭಗವಂತನ ನಾಮಸ್ಮರಣೆ ಮಾಡುವುದರೊಂದಿಗೆ ಮಕ್ಕಳೂ ನಾಮಸ್ಮರಣೆಯಲ್ಲಿ ತೊಡಗುವಂತೆ ಮಾಡಬೇಕಾಗಿದೆ ಎಂದರು. ಅನ್ಯಧರ್ಮೀಯರು ನಿತ್ಯವೂ ದಿನಕ್ಕೆ ಮೂರು ಬಾರಿ ಸಮಯಕ್ಕೆ ಸರಿಯಾಗಿ ಪ್ರಾರ್ಥನೆಯಲ್ಲಿ ತೊಡಗಿ ಶಕ್ತಿ ವೃದ್ಧಿಸಿಕೊಳ್ಳುತ್ತಿರುವಾಗ ಹಿಂದುಗಳು ಭಗವಂತನ ನಾಮ ಸ್ಮರಣೆಯಿಂದ ದೂರವಾಗಿ ದುರ್ಬಲರಾಗುತ್ತಿರುವುದು ಆತಂಕಕಾರಿ ಹಾಗಾಗಿ ಮಾತೆಯರು ಎಚ್ಚೆತ್ತುಕೊಂಡು ನಿತ್ಯವೂ ಮನೆಯಲ್ಲಿ ನಾಮಸ್ಮರಣೆ ಮಾಡುತ್ತಾ ಮಕ್ಕಳಿಗೆ ನಮ್ಮ ಸಂಸ್ಕಾರ ಕಲಿಸಿದರೆ ಸುಸಂಸ್ಕೃತ ಕುಟುಂಬ, ಸಮಾಜ, ಸುಭದ್ರ ರಾಷ್ಟ್ರ ನಿರ್ಮಾಣವಾಗಲು ಸಾಧ್ಯ ಎಂದರು.

ಜೆಸಿ ಆಂಗ್ಲ ಮಾಧ್ಯಮ ಶಾಲೆಯ ಉಪಾಧ್ಯಕ್ಷ ಶಿವಾನಂದ ತಿಪ್ಪಾ ಮಾತನಾಡಿ, ಮಕ್ಕಳಲ್ಲಿ ಮಾತೃಪೂಜ್ಯ ಭಾವನೆಯ ಸಂಸ್ಕಾರ ಕಲಿಸುವ ಶ್ರೇಷ್ಠ ಕಾರ್ಯ ಕುಬಸದ ಗಲ್ಲಿಯಲ್ಲಿ ನಡೆಯುತ್ತಿರುವುದು ಶ್ಲಾಘನೀಯ ಇದು ದೇಶಕ್ಕೆ ಮಾದರಿ ಎಂದರು.

ಸಂಗಪ್ಪ ಜಮಖಂಡಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾಳಿಕಾದೇವಿ ಮಂದಿರದ ಅರ್ಚಕ ದಯಾನಂದ ಆಚಾರ್ಯ ಅವರ ಮಾರ್ಗದರ್ಶನದಲ್ಲಿ ನೂರಾರು ಮಕ್ಕಳು ತಾಯಂದಿರ ಪಾದಪೂಜೆ ಮಾಡಿ ಆಶೀರ್ವಾದ ಪಡೆದರು, ಮಕ್ಕಳ ಭಕ್ತಿ ಭಾವ ಕಂಡ ತಾಯಂದಿರು ಹೃದಯ ತುಂಬಿ ಹರಿಸಿದರು. ಹಿರಿಯರಾದ ಶಂಕ್ರೆವ್ವ ಹನಗಂಡಿ, ಕಲ್ಲವ ಗಲಗಲಿ, ಸಿದ್ದು ಹಾವನಳ್ಳಿ, ಮಲ್ಲಪ್ಪ ಹುಣಶ್ಯಾಳ, ಚೈತ್ರಾ ಯರಗಟ್ಟಿ, ಶೃತಿ ಯರಗಟ್ಟಿ, ಅನುಪಮಾ ಗಲಗಲಿ, ಅಶ್ವಿನಿ ಗಲಗಲಿ, ಭಾರತಿ ನಡಕಟ್ನಿ, ದಾಕ್ಷಾಯಿಣಿ ನಡಕಟ್ನಿ, ದಾನಮ್ಮ ಹುಣಶ್ಯಾಳ ಸೇರಿದಂತೆ ನೂರಾರು ಮಾತೆಯರು ಭಾಗವಹಿಸಿದ್ದರು. ಶಿಕ್ಷಕ ಸಿ.ವಿ.ಹುಣಶ್ಯಾಳ ನಿರೂಪಿಸಿದರು.

ಕಿರುಸುದ್ದಿ



ವಿಜಯಪುರ: ಇಲ್ಲಿನ ಬರಹಗಾರ ಸಂತೋಷ ಬಿರಾದಾರ ಬರೆದ ಕನ್ನಡ ಲೇಖನಗಳ ಸಂಕಲನ ಅವ್ವ ನಮ್ ಮನೆ ವಾರೆನ್ ಬಫೆಟ್ ಪುಸ್ತಕವನ್ನು ತಾಯಂದಿರ ವಿಶೇಷ ದಿನದ ನಿಮಿತ್ತ ಲಂಡನ್ ನಗರದ ಟೌವರ್ ಬ್ರಿಡ್ಜ್ ಮುಂಭಾಗದಲ್ಲಿ ಪುಸ್ತಕದ ಮುಖಪುಟವನ್ನು ವಿಭಿನ್ನವಾಗಿ ಅನಾವರಣಗೊಳಿಸಲಾಯಿತು. ಸದ್ಯ ಲಂಡನ್ ನಗರದಲ್ಲಿರುವ ಕಿರಣ ಬಿರಾದಾರ ಅವರು ಮುಖಪುಟ ಅನಾವರಣಗೊಳಿಸಿದರು.

ಇಂದಿನಿಂದ ಪ್ರಶಸ್ತಿ ಪ್ರದಾನ

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದ ಸಂಸ್ಥಾನ ಹಿರೇಮಠದ ಶತಾಯುಷ ಸಂಗನಬಸವ ಶಿವಾಚಾರ್ಯ ಮಹಾಸ್ವಾಮೀಜಿಯವರ 43ನೇ ಪುಣ್ಯಸ್ಮರಣೋತ್ಸವ ಪಂಚಭಾಷಾ ಪಂಡಿತರು 2008 ಲಿಂ.ಜಗದ್ಗುರು ಡಾ.ಮಹಾಂತ ಶಿವಾಚಾರ್ಯ ಮಹಾಸ್ವಾಮೀಜಿಯವರ 13ನೇ ಯಾತ್ರಾ ಮಹೋತ್ಸವದ ನಿಮಿತ್ತ ರಾಜ್ಯಮಟ್ಟದ ಸಂಗನಬಸವಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಮೇ 12ರಂದು ಸಂಜೆ 7ಗಂಟೆಗೆ ಶಿವಶರಣೆ ಅಕ್ಕಮಹಾದೇವಿಯ ಪುರಾಣ ಮಹಾಮಂಗಲ ಹಾಗೂ ಧರ್ಮಚಿಂತನ ಸಮಾರಂಭದಲ್ಲಿ ವಿಜಯಪುರ ಜಾಲಹಳ್ಳಿ ಬ್ರಹನಮಠದಜಯಶಾಂತಲಿಂಗೇಶ್ವರ ಶಿವಾಚಾರ್ಯರು ಪಾವನ ಸಾನಿಧ್ಯ ವಹಿಸುವರು, ಯರನಾಳ ವಿರಕ್ತಮಠದ ಗುರುಸಂಗನಬಸವ ಸ್ವಾಮೀಜಿ, ಪಟ್ಟಕಂಥಿ ಹಿರೇಮಠದ ಡಾ.ಮಹಾಂತಲಿಂಗ ಶಿವಾಚಾರ್ಯರು, ಕಲಕೇರಿ ಸಂಸ್ಥಾನ ಹಿರೇಮಠದ ಗುರುಮರಳಾಧ್ಯ ಸಿದ್ಧಾರಾಮ ಶಿವಾಚಾರ್ಯರು ಸಾನಿಧ್ಯ ವಹಿಸುವರು, ಹಿರೇಮಠದ ಅಭಿನವ ಸಂಗನಬಸವ ಶಿವಾಚಾರ್ಯರು ನೇತೃತ್ವವಹಿಸುವರು, ಗುಡ್ಡಾಪುರ ದಾನಮ್ಮದೇವಿ ಟ್ರಸ್ಟ್ ಕಮಿಟಿ ಅಧ್ಯಕ್ಷ ವಿಜುಗೌಡ ಪಾಟೀಲ ಅಧ್ಯಕ್ಷತೆ ವಹಿಸುವರು. ಶಾಸಕ ಭೀಮನಗೌಡ(ರಾಜುಗೌಡ) ಪಾಟೀಲ, ಹಣಮಂತ ನಿರಾಣಿ ಸಮ್ಮುಖ ವಹಿಸುವರು. ಮೇ 13ರಂದು ಬೆಳಗ್ಗೆ 7ಗಂಟೆಗೆ ಕುಂಭೋತ್ಸವ ಬಸವೇಶ್ವರ ದೇವಸ್ಥಾನದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬೆ.8-30ಕ್ಕೆ ಉಭಯ ಶ್ರೀಗಳ ಕರ್ತೃ ಗದ್ದುಗೆಗೆ ಮಹಾರುದ್ರಾಭಿಷೇಕ, ಅಯ್ಯಾಚಾರ, ಶಿವದೀಕ್ಷೆ ಪೂಜಾ ಕಾರ್ಯಕ್ರಮ, ಡಾ.ಮಹಾಂತ ಶಿವಾಚಾರ್ಯರ ರಜತ ಮೂರ್ತಿಗಳ ಅಡ್ಡ ಪಲ್ಲಕ್ಕಿ ಮಹೋತ್ಸವ ಸಕಲ ವಾದ್ಯ ವೈಭವಗಳೊಂದಿಗೆ ನೆರವೇರಲಿದೆ. ಮಧ್ಯಾಹ್ನ 12.45ಕ್ಕೆ ರಾಜ್ಯಮಟ್ಟದ ಸಂಗನಬಸವಶ್ರೀ ಪ್ರಶಸ್ತಿ ಪ್ರದಾನ ಹಾಗೂ ಧರ್ಮ ಜಾಗೃತಿ ಸಮಾರಂಭದಲ್ಲಿ ಬಬಲೇಶ್ವರದ ಡಾ.ಮಹಾದೇವ ಶಿವಾಚಾರ್ಯರು ಪಾವನ ಸಾನ್ನಿಧ್ಯ ವಹಿಸುವರು, ಮುತ್ತಗಿ ವೀರರುದ್ರಮುನಿ ಶಿವಾಚಾರ್ಯರು, ಕನ್ನೋಳ್ಳಿಯ ಸಿದ್ಧಲಿಂಗ ಶಿವಾಚಾರ್ಯರು ಸಾನಿಧ್ಯವಹಿಸುವರು, ಸಚಿವ ಶಿವಾನಂದ ಪಾಟೀಲ ಅಧ್ಯಕ್ಷತೆ ವಹಿಸುವರು, ಶಾಸಕ ಅಶೋಕ ಮನಗೂಳಿ, ಬಿಡಿಎ ಅಧ್ಯಕ್ಷ ಗಂಗಾಧರ ಸಂಬನ್ನಿ ಉದ್ಘಾಟಿಸುವರು, ಸೋಮನಗೌಡ ಪಾಟೀಲ ಸಮ್ಮುಖವಹಿಸುವರು. ಸಂಜೆ 5.30ಕ್ಕೆ ಮಹಿಳೆಯರಿಂದ ರಥೋತ್ಸವ ಜರಗುವುದು. ಸಂಜೆ 7ಗಂಟೆಗೆ ಪಂಚಾರ್ಯ ಧ್ವಜರೋಹಣ ಸಿಂದಗಿ ಆಧಿಶೇಷ ಸಂಸ್ಥಾನ ಹಿರೇಮಠದ ನಾಗರತ್ನ ರಾಜಯೋಗಿ ವೀರರಾಜೇಂದ್ರ ಸ್ವಾಮೀಜಿ ದಿವ್ಯ ಸಾನಿಧ್ಯವಹಿಸುವರು, ಪಪಂ ಅಧ್ಯಕ್ಷ ಶೇಖಪ್ಪಗೌಡ ಬಿರಾದಾರ ಧರ್ಮ ಧ್ವಜಾರೋಹಣ ನೆರವೇರಿಸುವರು, ಮುಖ್ಯಾಧಿಕಾರಿ ನೀಖಿಲ ಪಾಟೀಲ ಉಪಸ್ಥಿರಿರುವರು ಎಂದು ಹಿರೇಮಠದ ಅಭಿನವ ಸಂಗನಬಸವ ಶ್ರೀಗಳು ತಿಳಿಸಿದರು.

ಮೇ 24ರಂದು ವಿದ್ಯಾರ್ಥಿಗಳಿಗೆ ಪುರಸ್ಕಾರ

ಸಿಂದಗಿ: ವಿಜಯಪುರದ ಕಿತ್ತೂರು ರಾಣಿ ಚನ್ನಮ್ಮ ವಿಜಯೋತ್ಸವ ಸಮಿತಿ ವತಿಯಿಂದ ಪಂಚಮಸಾಲಿ ಸಮಾಜದ ಪ್ರತಿಭಾವಂತ ಮಕ್ಕಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಜಿಲ್ಲಾಮಟ್ಟದಲ್ಲಿ ಮೊದಲ ಬಾರಿಗೆ ಮೇ 24ರಂದು ವಿಜಯಪುರದ ಕಿತ್ತೂರು ರಾಣಿ ಚನ್ನಮ್ಮ ಸಮುದಾಯ ಭವನದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಂಡಿದ್ದಾರೆ ಎಂದು ತಾಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ಎಂ.ಎಂ.ಹಂಗರಗಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪ್ರಸಕ್ತ ಸಾಲಿನ ಎಸ್ಎಸ್ಎಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ರಷ್ಟು ಹಾಗೂ ಸಿಬಿಎಸ್ಇ, ಕೇಂದ್ರೀಯ ವಿದ್ಯಾಲಯ ಶಾಲೆಯಲ್ಲಿ ಶೇ.85ರಷ್ಟು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸುಮಾರು 4 ಸಾವಿರಕ್ಕೂ ಅಧಿಕ ಮಕ್ಕಳನ್ನು ಗುರುತಿಸಿ, ಅವರಿಗೆ ಸನ್ಮಾನಿಸುವ ಗುರಿ ಹೊಂದಿದೆ. ಕಾರಣ ತಾಲೂಕಿನ ಸಮಾಜದ ವಿದ್ಯಾರ್ಥಿಗಳು ಮೇ 15ರೊಳಗಾಗಿ ತಮ್ಮ ಅಂಕಪಟ್ಟಿ ಹಾಗೂ 2 ಬಾವಚಿತ್ರ ಮತ್ತು ದಾಖಲೆಗಳನ್ನು 9008041500 ಸಂಖ್ಯೆಗೆ ನೇರವಾಗಿ ಸಂಪರ್ಕಿಸಿ ದಾಖಲಾತಿಗಳನ್ನು ತಲುಪಿಸಬೇಕು ಎಂದು ತಿಳಸಿದ್ದಾರೆ.



ಮುದ್ದೇಬಿಹಾಳ: ನಗರದ ಪ್ರವಾಸಿ ಮಂದಿರದಲ್ಲಿ ಸೋಮವಾರ ನಡೆದ ಶರಣ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರ ಸಮ್ಮುಖದಲ್ಲಿ ತಾಲೂಕು ನೂತನ ಅಧ್ಯಕ್ಷರಾಗಿ ಚಂದ್ರಶೇಖರ ಜಿ.ನಾಗರಾಳ ಅವರನ್ನು ನೇಮಕ ಮಾಡಲಾಯಿತು. ಬಸವರಾಜ ನಲತವಾಡ, ಬಾಪುಗೌಡ ಪಾಟೀಲ ಮಲ್ಲಿಕಾರ್ಜುನ ಬೆಳಗಲ್, ಎನ್.ಆರ್. ಮೊಕಾಶಿ, ಅಶೋಕ ಮಣಿ, ಚಂದ್ರಶೇಖರ ಪಾಟೀಲಗೌಡ ಸೇರಿದಂತೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಪದಾಧಿಕಾರಿಗಳು, ಮಹಾಮನೆ ಬಳಗದ ಸದಸ್ಯರು ಉಪಸ್ಥಿತರಿದ್ದರು.

ಕುಲಕರ್ಣಿ ಅಮೃತ ನಮನ ಸಮಾರಂಭ

ವಿಜಯಪುರ: ಜೀವನದಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸುವುದು ನಮ್ಮ ಪರಂಪರೆಯಾಗಿದೆ ಎಂದು ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದ ಕಾರ್ಯದರ್ಶಿ ಡಾ.ಎಂ.ಎಸ್.ಮದಭಾವಿ ಹೇಳಿದರು. ನಗರದ ಅನಂತಲಕ್ಷ್ಮೀ ಮಂಗಲ ಕಾರ್ಯಾಲಯದಲ್ಲಿ ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಗಡಿನಾಡು ಚೇತನ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಹಾಗೂ ಶ್ರೇಷ್ಠ ಸಮಾಜ ಚಿಂತಕ ಎನ್.ಆರ್. ಕುಲಕರ್ಣಿ ಅವರ ಅಮೃತ ನಮನ ಸಮಾರಂಭ ಉದ್ಘಾಟಿಸಿ, ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು. ಮಾಸ್ತರ ಎಂದು ಸಂಬೋಧಿಸುವುದಕ್ಕೆ ಒಂದು ಗೌರವ ಸೂಚಕವಾಗಿದೆ ಹಾಗೂ ಸರ್ವಶ್ರೇಷ್ಠವಾಗಿದೆ. ಈ ಹಿನ್ನೆಲೆ ಬೇಂದ್ರೆ-ಸಿಂಪಿ ಲಿಂಗಣ್ಣನವರ ಮಾಸ್ತರ ಎಂದೇ ಜನಜನೀತರಾಗಿರುವರು. ಪ್ರಾಥಮಿಕ ಶಾಲಾ ಶಿಕ್ಷಕರು ಜಿಲ್ಲೆಯಲ್ಲಿ ಮಾಡಿದ ಸೇವೆ ಅಪಾರ ಎಂದರು. ಎನ್.ಆರ್.ಕುಲಕರ್ಣಿಯವರು ಜಾತ್ಯತೀತತೆ ಅಪ್ಪಿಕೊಂಡ ವ್ಯಕ್ತಿಯಾಗಿದ್ದು ಅವರ ಹೃದಯ ವೈಶಾಲ್ಯತೆ ವರ್ಣನಾತೀತ ಎಂದರು. ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ವಿ.ಸಿ.ನಾಗಠಾಣ ಮಾತನಾಡಿ, ಎನ್.ಆರ್.ಕುಲಕರ್ಣಿಯವರು ಗಡಿ ಭಾಗದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸುವುದರ ಮೂಲಕ ನ್ಯಾಯ ದೇವತೆಯಾಗಿ ಕಾರ್ಯ ನಿರ್ವಹಿಸಿದವರು ಎಂದರು. ಎನ್.ಆರ್.ಕುಲಕರ್ಣಿ ರಚಿತ ಹಣ್ಣೆಲೆಯ ಹಸಿರು ನೆನಪುಗಳು ಕೃತಿ ಕುರಿತು ಉಪನ್ಯಾಸಕ ಪ್ರೊ.ಯು.ಎನ್.ಕುಂಟೋಜಿ ಮಾತನಾಡಿ, ಎನ್.ಆರ್.ಕುಲಕರ್ಣಿಯವರು ಭಾವೈಕ್ಯತೆಯ ಕೇಂದ್ರ ಬಿಂದು ಎಂದರು.



ಪಂಡಿತ ಪ್ರಕಾಶಾಚಾರ್ಯ ಮದಭಾವಿ, ಎನ್.ಆರ್. ಕುಲಕರ್ಣಿ, ಪಂಡಿತರಾವ ಪಾಟೀಲ, ಜಿ.ಎಸ್.ಕುಲಕರ್ಣಿ, ಶಂಕರ ಬಸವಪ್ರಭು, ರುಕ್ಮಾಂಗದ ಗುಡಿ, ಮೋಹನ ಕುಲಕರ್ಣಿ, ಸೋಮಶೇಖರ ಕುರ್ಲೆ, ರಾಘವೇಂದ್ರ ಕುಲಕರ್ಣಿ, ಜಿ.ಆರ್.ಕುಲಕರ್ಣಿ, ನ್ಯಾಯವಾದಿ ಕೆ.ಎಫ್.ಅಂಕಲಗಿ, ವಿ.ಡಿ.ಐಹೊಳ್ಳಿ, ಜಂಬುನಾಥ ಕಂಚಾಣಿ, ಮ.ಗು.ಯಾದವಾಡ ಅಮೃತ ಮಹೋತ್ಸವ ಸಮಿತಿ ಗೌರವಾಧ್ಯಕ್ಷ ಡಾ.ಜಿ.ಡಿ.ಕೊಟ್ನಾಳ ಸ್ವಾಗತಿಸಿದರು. ಅಧ್ಯಕ್ಷ ವಿ.ಎಸ್.ಖಾಡೆ ಮಾತನಾಡಿದರು. ನ್ಯಾಯವಾದಿ ವಿದ್ಯಾವತಿ ಅಂಕಲಗಿ, ಸುಜಾತಾ ಪಟ್ಟಣಶೆಟ್ಟಿ, ಎಸ್.ಬಿ.ಬಾಗೇವಾಡಿ ಇದ್ದರು.

ಬೂದಿಹಾಳ-ಪೀರಾಪೂರ ಏತ ನೀರಾವರಿ ಯೋಜನೆ ನನೆಗುದಿಗೆ: ಕುಲಕರ್ಣಿ ಆರೋಪ

ವಿಜಯಪುರ: ಬೂದಿಹಾಳ-ಪೀರಾಪೂರ ಏತ ನೀರಾವರಿ ಯೋಜನೆಯ ಬಾಕಿ ಉಳಿದ ಕಾಮಗಾರಿ ನನೆಗುದಿಗೆ ಬಿದ್ದಿದ್ದು, ಧರಣಿ ಸಂದರ್ಭದಲ್ಲಿ ನೀಡಿದ ಭರವಸೆ ಕೇವಲ ಮೂಗಿಗೆ ತುಪ್ಪ ಸವರಿ ಹೋದಂತಾಗಿದೆ. ಜಿಲ್ಲಾ ಉಸ್ತುವಾರಿ ಸಚಿವರು ಕೊಟ್ಟ ಮಾತು ಉಳಿಸಿಕೊಳ್ಳಲು ವಿಫಲರಾಗಿದ್ದಾರೆ. ಅವರು ಕೇವಲ ಭರವಸೆ ನೀಡುತ್ತ ರೈತರಿಗೆ ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರದಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಗುರುರಾಜ ಪಡಶೆಟ್ಟಿ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೂದಿಹಾಳ-ಪೀರಾಪೂರ ಏತ ನೀರಾವರಿ ಯೋಜನೆಗೆ ಸಂಬಂಧಿಸಿದ ಪೀರಾಪೂರ ಏತ ನೀರಾವರಿ ಯೋಜನೆ ಬಾಕಿ ಉಳಿದ ಕಿರು ಕಾಲುವೆ (ಎಫ್‌ಐಸಿ) ಕಾಮಗಾರಿಗಾಗಿ ಫೆಬ್ರವರಿ 2025 ರಂದು ತಾಳಿಕೋಟಿ ತಾಲೂಕಿನ ಕೊಡಗಾನೂರ ಕ್ರಾಸ್ ಬಳಿ 38 ಹಳ್ಳಿಗಳ ರೈತರೊಂದಿಗೆ 12 ದಿನಗಳವರೆಗೆ ಧರಣಿ ಹಮ್ಮಿಕೊಳ್ಳಲಾಗಿತ್ತು. ಧರಣಿ ಸ್ಥಳಕ್ಕೆ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲರು ಆಗಮಿಸಿ ಬೂದಿಹಾಳ-ಪೀರಾಪೂರ ಏತ ನೀರಾವರಿ ಯೋಜನೆ ಶೀಘ್ರದಲ್ಲಿ ಮುಕ್ತಾಯಗೊಳಿಸಲಾಗುವುದೆಂದು ಧರಣಿ ನಿರತ ರೈತರಿಗೆ ಮಾತು ಕೊಟ್ಟಿದ್ದರು. ಕೊಟ್ಟ ಮಾತಿನಂತೆ ನಡೆದುಕೊಳ್ಳದೆ ಮೌನವಾಗಿದ್ದಾರೆ. ಧರಣಿ ಸ್ಥಳಕ್ಕೆ ಬಂದ ಸಂದರ್ಭದಲ್ಲಿ ಸತ್ಯವಂತರಂತೆ ಆವೇಶದಿಂದ ಮಾತನಾಡಿ, ಜಿಲ್ಲೆಯ ನೀರಾವರಿಗೆ 14 ಸಾವಿರ ಕೋಟಿ ತಂದವನಿಗೆ 200 ಕೋಟಿ ಹಣ ಏನು? ಇದು ಜುಜಬಿ ಹಣ ನಾನು ಬಂದ ಮೇಲೆ ಕೆಲಸ ಆಯಿತು ಎಂದು ತಿಳಿದುಕೊಳ್ಳಿರಿ ಎಂದು ಸತ್ಯ ಹರಿಶ್ಚಂದ್ರರಂತೆ ಮಾತು ಕೊಟ್ಟು ರೈತರನ್ನು ವಂಚಿಸಿದ್ದಾರೆ ಎಂದು ಆರೋಪಿಸಿದರು.



> **ತಾಳಿಕೋಟಿ ಭಾಗದಲ್ಲಿ ಜನ ಹಾಗೂ ಜಾನುವಾರುಗಳಿಗೆ ಕುಡಿಯಲು ನೀರು ಇಲ್ಲದಂತಾಗಿವೆ. ಕೃಷಿಗೂ ಕೂಡ ನೀರಿಲ್ಲ. ಅಂದಾಜು ನಾಲ್ಕೈದು ಕಿಲೋ ಮೀಟರ್ ವರೆಗೆ ನೀರು ಇದ್ದಲ್ಲಿ ಹುಡುಕಿಕೊಂಡು ಹೋಗಿ ನೀರು ತರುವ ಪರಿಸ್ಥಿತಿ ನಿರ್ಮಾಣವಾಗಿದೆ.**
>
> ■ **ಅರವಿಂದ ಕುಲಕರ್ಣಿ, ರಾಜ್ಯ ಪ್ರದಾನ ಕಾರ್ಯದರ್ಶಿ, ಅಖಂಡ ಕರ್ನಾಟಕ ರೈತ ಸಂಘ**

ತಾಳಿಕೋಟಿ ಭಾಗದ ಅಸ್ಕಿ, ನೀರಲಗಿ, ಬೆಕಿನಾಳ, ಜಲಪೂರ, ಬೆನ್ನಟ್ಟಿ, ಬೂದಿಹಾಳ, ಹಾಳಗುಂಡಕನಾಳ, ರಾಂಪೂರ, ವಣಕಿಹಾಳ, ತುರಕನಕೇರಿ ಸೇರಿ 38 ಗ್ರಾಮಗಳಲ್ಲಿ ನೀರಿನ ಬವಣೆ ಗಂಭೀರವಾಗಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಸವರಾಜ ಸಿದ್ದಾಪುರ, ರೈತ ಮುಖಂಡ ಎಂ.ಜಿ.ಯಂಕಂಚಿ ಮಾತನಾಡಿ, ಈ ಯೋಜನೆ ಪೂರ್ಣಗೊಂಡರೆ 50,657 ಎಕರೆ ಜಮೀನು ನೀರಾವರಿಗೆ ಒಳಪಡುತ್ತದೆ. ಹಿಂದಿನ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಈ ಯೋಜನೆಯ 1ನೇ ಹಂತದ ಉದ್ಘಾಟನೆ ಮಾಡಿ 2ನೇ ಹಂತದ ಶಂಕುಸ್ಥಾಪನೆ ನೆರವೇರಿಸಿದ್ದರು. ಆದರೆ ಇಲ್ಲಿಯವರೆಗೂ ಕಾಮಗಾರಿ ಪೂರ್ಣಗೊಂಡಿಲ್ಲ, ಕೂಡಲೇ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಜಿಲ್ಲಾ ಸಂಚಾಲಕ ಪಾಂಡು ಹ್ಯಾಟಿ, ಹೊನಕೇರೆಪ್ಪ ತೆಲಗಿ, ಮಹಾದೇವಪ್ಪ ತೇಲಿ, ಶ್ರೀಶೈಲ ತಾಳಿಕೋಟಿ, ದತ್ತಾತ್ರೇಯ ಕುಲಕರ್ಣಿ, ಅರವಿಂದ ತೇಲಿ, ಗುರುನಾಥ ಬಾಗೇವಾಡಿ ಇದ್ದರು.

ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ

ಝಳಕಿ: ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಮೇಲೆ ತಾರತಮ್ಯ ಧೋರಣೆ ನೀಡುತ್ತದೆ. ಜಲಧಾರೆ ಹಾಗೂ ಜೆಜೆಎಂ ಯೋಜನೆ ಹಣ ಇನ್ನೂ ಬಾಕಿ ಇದೆ ಅವುಗಳ ಅನುಧಾನ ನೀಡಿದರೆ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ಸಮಿಪದ ಭತಗುಣಕಿ ಗ್ರಾಮದಲ್ಲಿ ನಡೆದ ಭತಗುಣಕಿ ಹಾಗೂ ಬೂದಿಹಾಳ ಗ್ರಾಮದ ವಿವಿಧ ಕಾಮಗಾರಿಗಳಿಗೆ ಭೂಮಿಪೂಜೆ ನೇರವರಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯಯ ಸರ್ಕಾರ 7 ಕೋಟಿ ಜನರಿಗೆ ಗ್ಯಾರಂಟಿ ಯೋಜನೆ ಮೂಲಕ ಬಡವರಿಗೆ ನೇರವಾಗಿ ಅವರ ಖಾತೆ ಜಮಾ ಮಾಡುತ್ತಾದೆ ಈ ಗ್ಯಾರಂಟಿ ಯೋಜನೆಯಿಂದ ಪ್ರತಿ ಕುಟುಂಬಕ್ಕೂ ತಲಪುತ್ತದೆ ಎಂದರು.

ಎಲ್ಲಾ ಗ್ರಾಮಗಳ ರಸ್ತೆಗಳಿಗೆ ಕಾಮಗಾರಿ ಸುಧಾರಣೆ ಮಾಡುತ್ತೇವೆ. ಗ್ರಾಮಗಳ ಇಡೀ ರಸ್ತೆಗಳು ಅಗಲೀಕರಣ ಹಾಗೂ ಡಾಂಬರೀಕರಣ ಮಾಡಿದ್ದೇನೆ. ಅನೇಕ ಗ್ರಾಮಗಳಿಗೆ ರಸ್ತೆ ಕಾಮಗಾರಿ ಚಾಲನೆ ನೀಡುತ್ತಾ ಇದ್ದೇವೆ ಒಟ್ಟು ನಮ್ಮ ಕ್ಷೇತ್ರದಲ್ಲಿ ಎಲ್ಲಾ ಗ್ರಾಮಗಳಿಗೆ ರಸ್ತೆ ಕಾಮಗಾರಿಗಳಿಗೆ ಚಾಲನೆ ನೀಡುತ್ತೇನೆ. ನಮ್ಮ ಕ್ಷೇತ್ರಕ್ಕೆ ರೇವಣಸಿದ್ದೇಶ್ವರ ನೀರಾವರಿ ಯೋಜನೆಯಿಂದ ಸಮಗ್ರ ನೀರಾವರಿ ಯೋಜನೆ ಆಗುತ್ತದೆ ಎಂದರು.

ಕಾಂಗ್ರೆಸ್ ಮುಖಂಡ ಎಂ.ಆರ್.ಪಾಟೀಲ್ ಮಾತನಾಡಿ, ಗ್ಯಾರಂಟಿ ಯೋಜನೆಗಳಿಂದ ಹಲವು ಕಾಮಗಾರಿಗಳಿಗೆ ವಿಳಂಬವಾಗಿದೆ.

ರಸ್ತೆಗಳು ಬಹಳಷ್ಟು ಹದಗೆಟ್ಟಿವಿ ಇನ್ನೂ ಅನುದಾನ ಅಲ್ಪಮಟ್ಟಿಗೆವಿರುದರಿಂದ

ಮೈಲಾರ ಗ್ರಾಮದ ರಸ್ತೆ ಹದಗೆಟ್ಟಿದೆ ಅದನ್ನು ಮುಂದೆ ರಸ್ತೆ ಕಾಮಗಾರಿ ಚಾಲನೆ ನೀಡುತ್ತಾರೆ ಎಂದು ಬರುವಸೆ ಮಾತು ಹೇಳಿದರು.

ನಿಂಬೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಭೀಮಣ್ಣ ಕೌಲಗಿ, ಬಿ.ಎಂ.ಕೋರೆ, ಮಹೇಶ ಬಿದಿರಿ, ಶಾಹಾಜಿ ಮಿಸಾಳೆ, ನೀಲಕಂಠ ರೂಗಿ, ಸಣ್ಣಪ್ಪ ತಳವಾರ, ಬಿ.ಸಿ.ಸಾಹುಕಾರ, ಧನರಾಜ ಮುಜಗೊಂಡ, ಶಾಹು ಸಿಂದೆ, ಜಾವೀದ ಮೋಮಿನ್, ಗಂಗಾಧರ ಸಾಹುಕಾರ ತೆಲಸಂಗ, ಎಸ್.ಬಿ.ಗೌರಿ, ಶಿವಗೊಂಡ ಬಿರಾದಾರ, ಎಇಇ ರಾಜೇಶ ಹೂಗಾರ, ರುಕ್ಕುದ್ದೀನ್ ತದ್ದೇವಾಡಿ, ಸದಾಶಿವ ಪ್ಯಾಟಿ, ಬಸೀರ ತಾಷೆವಾಲೆ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.



ನವಜಾತ ಶಿಶು ಪುನರುಜ್ಜೀವನ ತರಬೇತಿ ಅಗತ್ಯ

ವಿಜಯಪುರ: ನವಜಾತ ಶಿಶುಗಳ ಜೀವಿತಾವಧಿ ಹೆಚ್ಚಿಸಲು ಮತ್ತು ಗುಣಮಟ್ಟದ ಆರೋಗ್ಯ ಸೇವೆಯನ್ನು ಮತ್ತಷ್ಟು ಬಲಪಡಿಸಲು ಸಂರಚಿತ ನವಜಾತ ಶಿಶು ಪುನರುಜ್ಜೀವನ ತರಬೇತಿ ಅತ್ಯಂತ ಅಗತ್ಯವಾಗಿದೆ ಎಂದು ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯ ಕುಲಪತಿ ಡಾ.ಅರುಣ ಇನಾಮದಾರ ಹೇಳಿದರು.


ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡ ರಾಷ್ಟ್ರವ್ಯಾಪಿ ನವಜಾತ ಶಿಶು ಪುನರುಜ್ಜೀವನ ತರಬೇತಿ ದಿನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬಿಎಲ್‌ಡಿಇ ಡೀಮ್ಡ್ ವಿವಿಯ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಮಕ್ಕಳ ಶಾಸ್ತ್ರ ವಿಭಾಗ, ಭಾರತೀಯ ಮಕ್ಕಳವೈದ್ಯರ ಅಕಾಡೆಮಿ (ಐಎಪಿ) ವಿಜಯಪುರ ಶಾಖೆ ಹಾಗೂ ರಾಷ್ಟ್ರೀಯ ನವಜಾತ ಶಿಶು ತಜ್ಞರ ವೇದಿಕೆ (ಎನ್‌ಎನ್‌ಎಫ್) ಆಶ್ರಯದಲ್ಲಿ, ತರಬೇತಿ ಸಂಖ್ಯೆ 234 ಅಡಿಯಲ್ಲಿ ರಾಷ್ಟ್ರವ್ಯಾಪಿ ಈ ನವಜಾತ ಶಿಶು ಪುನರುಜ್ಜೀವನ ತರಬೇತಿ ದಿನಾಚರಣೆ ನಡೆಯಿತು.

ಎನ್‌ಎನ್‌ಎಫ್ ಭಾರತದ ಐತಿಹಾಸಿಕ ರಾಷ್ಟ್ರವ್ಯಾಪಿ ಉಪಕ್ರಮದ ಭಾಗವಾಗಿದ್ದು, ದೇಶದಲ್ಲಿ ಒಂದೇ ದಿನದಲ್ಲಿ 1,100ಕ್ಕೂ ಅಧಿಕ ನವಜಾತ ಶಿಶು ಪುನರುಜ್ಜೀವನ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸುವ ಮೂಲಕ, 35 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವ್ಯಾಪ್ತಿಯಲ್ಲಿ 23,000ಕ್ಕೂ ಹೆಚ್ಚು ವೈದ್ಯರು ಹಾಗೂ ದಾದಿಯರಿಗೆ ತರಬೇತಿ ನೀಡಲಾಯಿತು.

ಪ್ರತಿಯೊಂದು ಉಸಿರಿನೊಂದಿಗೆ ನವಜಾತ ಶಿಶುಗಳ ಜೀವ ರಕ್ಷಣೆ ಎಂಬ ಧ್ಯೇಯವಾಕ್ಯದಡಿ ಈ ಕಾರ್ಯಕ್ರಮ ನಡೆಯಿತು. ಜನನದ ತಕ್ಷಣ ಉಸಿರಾಟದ ನೆರವು ಅಗತ್ಯವಿರುವ ನವಜಾತ ಶಿಶುಗಳಿಗೆ ತ್ವರಿತ ಮತ್ತು ಪರಿಣತ ಆರೈಕೆ ಒದಗಿಸುವ ಅಗತ್ಯತೆ ಅರಿವು ಮೂಡಿಸಲಾಯಿತು.

ಈ ಸಂದರ್ಭದಲ್ಲಿ ವೈದ್ಯಕೀಯ ವಿಭಾಗದ ಡೀನ್ ಮತ್ತು ಪ್ರಾಚಾರ್ಯೆ ಡಾ.ತೇಜಸ್ವಿನಿ ವಲ್ಲಭ, ಅಲೈಡ್ ಹೆಲ್ತ್ ಸೈನ್ಸಸ್ ವಿಭಾಗದ ಡೀನ್ ಡಾ.ಎಸ್.ವಿ. ಪಾಟೀಲ, ಮಕ್ಕಳ ವಿಭಾಗದ ಮುಖ್ಯಸ್ಥ ಪ್ರೊ.ಎಂ.ಎಂ.ಪಾಟೀಲ, ನವಜಾತ ಶಿಶು ತಜ್ಞರು ಹಾಗೂ ಮಕ್ಕಳ ಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ.ಸಿದ್ದು ಚರ್ಕಿ, ಐಎಪಿ ವಿಜಯಪುರ ಘಟಕದ ಅಧ್ಯಕ್ಷ ಡಾ.ಎಸ್. ಎಸ್.ಕಲ್ಯಾಣಶೆಟ್ಟರ, ಡಾ.ಸುಧೀರ್ ಚವ್ಹಾಣ, ಡಾ.ರವಿಕುಮಾರ ಬರಡೋಲ, ಡಾ.ಆರ್.ಎಚ್. ಗೊಬ್ಬೂರು, ಡಾ.ವಿಜಯಕುಮಾರ ಬಿರಾದಾರ, ಡಾ.ಅತುಲ ಥೊಬ್ಬಿ ಇತರರು ಇದ್ದರು.



ನಾಡು-ನುಡಿ, ಸಾಹಿತ್ಯ ಸಂಸ್ಕೃತಿಗೆ ಜನ್ಮತಾಳಿದ ಕಸಾಪ: ಪಾಟೀಲ

ಆಲಮೇಲ: ಕನ್ನಡ ನಾಡು-ನುಡಿ, ಸಾಹಿತ್ಯ ಮತ್ತು ಸಂಸ್ಕೃತಿಗಾಗಿ ಜನ್ಮತಾಳಿದ ಏಕೈಕ ಪ್ರಾತಿನಿಧಿಕ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ಎಂದು ಕಸಾಪ ಗೌರವ ಅಧ್ಯಕ್ಷ ಡಾ.ಸಂದೀಪ ಪಾಟೀಲ ಹೇಳಿದರು.

ಪಟ್ಟಣದ ಅಳ್ಳೊಳ್ಳಿಮಠದಲ್ಲಿ ಸೋಮವಾರ ಆಲಮೇಲ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಘಟಕದ ವತಿಯಿಂದ 112ನೇ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚಾರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸುಮಾರು ಒಂದು ಶತಮಾನಕ್ಕೂ ಅಧಿಕ ಇತಿಹಾಸವಿರುವ ಈ ಸಂಸ್ಥೆಯು ಕೇವಲ ಒಂದು ಪರಿಷತ್ತವಲ್ಲ, ಇದು ಏಳುಕೋಟಿ ಕನ್ನಡಿಗರ ಭಾವನಾತ್ಮಕ ಕೇಂದ್ರವಾಗಿದೆ. 1915ರ ಮೇ 5ರಂದು ಸ್ಥಾಪನೆಯಾದ ಈ ಪರಿಷತ್ತು ಅಂದು ಹಾಕಿದ ಅಡಿಪಾಯ ಇಂದು ಮಹಾವೃಕ್ಷವಾಗಿ ಬೆಳೆದು ನಿಂತಿದೆ ಎಂದರು.

ತಾಲೂಕು ಕಸಾಪ ಅಧ್ಯಕ್ಷ ಶಿವಶರಣ ಗುಂದಗಿ ಮಾತನಾಡಿ, ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಉಳಿಸಿ ಬೆಳೆಸುವುದು ಈ ಸಂಸ್ಥೆಯ ಮುಖ್ಯ ಗುರಿಯಾಗಿದೆ. ಸದ್ಯ ಆಲಮೇಲ ತಾಲೂಕು ಘಟಕದಲ್ಲಿ 900ಕ್ಕೂ ಅಧಿಕ ಸದಸ್ಯರನ್ನು ಹೊಂದಿರುವ ಈ ಪರಿಷತ್ತು ತನ್ನದೇ ಆದ ಸ್ವಂತ ಭವನ ನಿರ್ಮಾಣ ಮಾಡುತ್ತಿದೆ. ಶಾಸಕ ಅಶೋಕ ಮನಗೂಳಿ ಅವರ ನೇತೃತ್ವದಲ್ಲಿ ಸಮಸ್ಯೆ ಬಗೆ ಹರೆದಿದೆ. ಇನ್ನೂ ಒಂದು ತಿಂಗಳಲ್ಲಿ ಶಾಸಕರ ಮುಂದಾಳತ್ವದಲ್ಲಿ ಕಸಾಪ ಭವನ ಉದ್ಘಾಟನೆಗೊಳ್ಳಲಿದೆ ಎಂದರು.



ಅಳ್ಳೊಳ್ಳಿಮಠದ ಶ್ರೀಶೈಲಯ್ಯಾ ಸ್ವಾಮಿಜಿ ಸಾನ್ನಿಧ್ಯ ವಹಿಸಿದ್ದರು. ಕಸಾಪ ಕಾರ್ಯದರ್ಶಿ ರಮೇಶ ಬಂಟನೂರ, ತಾಲೂಕು ಗ್ಯಾರಂಟಿ ಸಮೀತಿಯ ಅಧ್ಯಕ್ಷ ಅಶೋಕ ಕೊಳಾರಿ, ಮಾಜಿ ಗ್ರಾಪಂ ಅಧ್ಯಕ್ಷ ಅಯೂಬ ದೇವರಮನಿ, ಅಶೋಕ ವಾರದ ಶ್ರೀಶೈಲ ಮಠಪತಿ, ಶಶಿಧರ ನಾಯ್ಕೋಡಿ, ಕುದುರತಲ್ಲಿ ಭೂಸನೂ, ಶಂಕರ ಕಲಬುರ್ಗಿ, ರವಿ ಬಡದಾಳ,ಗಂಗಾಧರ ಪತ್ತಾರ, ಪ್ರಕಾಶ ಜಿಂಗಾಡೇ, ಅಮ್ಮರ ನಾರಾಯಣಕರ, ರಾಜು ಮೇತ್ರಿ, ಶಿವಕುಮಾರ ಮೇಲಿನಮನಿ, ಪವನ ಕಾಳೆ, ಬಶೀರ ನದಾಫ ಇದ್ದರು.

ಹೋರಾಟಕ್ಕೆ ತಾತ್ಕಾಲಿಕ ವಿರಾಮ: ಸ್ಥಳ ಬದಲಾವಣೆಗೆ ಪ್ರಸ್ತಾವನೆ

ತಾಳಿಕೋಟೆ: ಪಟ್ಟಣದ ವ್ಯಾಪ್ತಿಯಲ್ಲಿಯೇ ಸರ್ಕಾರಿ ಜಮೀನಿನಲ್ಲಿ 'ಪ್ರಜಾಸೌಧ' ನಿರ್ಮಿಸಬೇಕೆಂದು ಆಗ್ರಹಿಸಿ ಕಳೆದ 76 ದಿನಗಳಿಂದ ನಡೆಯುತ್ತಿದ್ದ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹಕ್ಕೆ ಸೋಮವಾರ ತಾತ್ಕಾಲಿಕ ವಿರಾಮ ಘೋಷಿಸಲಾಗಿದೆ. ಹೋರಾಟಗಾರರ ಮನವಿಗೆ ಸ್ಪಂದಿಸಿರುವ ಜಿಲ್ಲಾಧಿಕಾರಿಗಳು ಪರ್ಯಾಯ ಸ್ಥಳದ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ಈ ಬೆಳವಣಿಗೆಗೆ ಕಾರಣವಾಗಿದೆ.

ಹೋರಾಟದ ತೀವ್ರತೆ ಪರಿಗಣಿಸಿ ಜಿಲ್ಲಾಧಿಕಾರಿ ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿಗಳಿಗೆ ಪತ್ರ ಬರೆದು, ಪರ್ಯಾಯ ಸ್ಥಳ ನೀಡಿಕೆಯ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಈ ಪತ್ರದ ನಕಲು ಪ್ರತಿಗಳನ್ನು ಉಪವಿಭಾಗಾಧಿಕಾರಿ ಗುರುನಾಥ ದಡ್ಡೆ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಹೋರಾಟಗಾರರಿಗೆ ಹಸ್ತಾಂತರಿಸಿ ಸತ್ಯಾಗ್ರಹ ಕೈಬಿಡಲು ಕೋರಿದರು.

ಪತ್ರ ಸ್ವೀಕರಿಸಿ ಮಾತನಾಡಿದ ಹೋರಾಟ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಶಿನಾಥ ಮುರಾಳ, ಜಿಲ್ಲಾಧಿಕಾರಿಗಳ ಸ್ಪಂದನೆ ಗೌರವಿಸಿ ಸದ್ಯಕ್ಕೆ ಹೋರಾಟ ನಿಲ್ಲಿಸುತ್ತಿದ್ದೇವೆ ಎಂದರು.



ಡಿವೈಎಸ್ಪಿ ನಂದಗಾವಿ, ತಹಶೀಲ್ದಾರ್ ಡಾ.ವಿನಯಾ ಹೂಗಾರ, ಹೋರಾಟ ಸಮಿತಿಯ ಅಧ್ಯಕ್ಷ ದಶರಥಸಿಂಗ್ ಮನಗೂಳಿ, ಮುತ್ತಪ್ಪ ಚಮಲಾಪುರ, ಕಾಶೀನಾಥ ಸಜ್ಜನ, ಸುರೇಶ ಹಜೇರಿ, ಮಹೇಶ ಚಲವಾದಿ ಸಂಜು ಬರದೇನಾಳ, ಪ್ರಕಾಶ ಹಜೇರಿ, ನಾಗೇಶ ಕಟ್ಟಿಮನಿ, ಮುದಕಪ್ಪ ಬಡಿಗೇರ, ಮಂಜು ಶೆಟ್ಟಿ ಗಂಗಾಧರ ಕಸ್ತೂರಿ ಸುರೇಶ ಪುಲುಸ್ ಮಯೂರ ಪಾಟೀಲ, ಅಮಿತ್ ಮನಗೂಳಿ, ಪ್ರಭುಗೌಡ ಪಾಟೀಲ ಬಳಗನೂರ, ರಾಮಣ್ಣ ಕಟ್ಟಿಮನಿ, ಪರಶುರಾಮ ತಂಗಡಗಿ, ಕಳಕುಸಾ ರಂಗರೇಜ್, ನಿಂಗನಗೌಡ ದೇಸಾಯಿ, ಸದ್ದಾಂ ಹುಸೇನ್ ಬೀಳಗಿ, ರವಿ ಕಟ್ಟಿಮನಿ ಸೇರಿದಂತೆ ಸಿಪಿಐ, ಪಿಎಸ್ಐ ಹಾಜರಿದ್ದರು.

ಸಮಾಜ ಸೇವೆ ವಿದ್ಯಾರ್ಥಿಗಳ ಗುರಿಯಾಗಿರಲಿ



ಮುದ್ದೇಬಿಹಾಳ: ಸಮರ್ಪಣೆ ಭಾವ ಹಾಗೂ ನಿರಂತರ ಶ್ರಮ ಉನ್ನತವಾದದ್ದನ್ನು ಬಯಸುತ್ತದೆ. ಉತ್ಸಾಹಗೊಂಡ ಮನಸ್ಸು ಅಸಾಧ್ಯವಾಗಿರುವುದನ್ನು ಸಾಧಿಸುತ್ತದೆ ಎಂದು ದೇವಿಕಾ ಸುಬ್ಬರಾವ್ ಫೌಂಡೇಶನ್ ಅಧ್ಯಕ್ಷೆ ಪಲ್ಲವಿ ನಾಡಗೌಡ ಹೇಳಿದರು.

ಶಾ ಸೋಗಮಲ್ ಪೀರಾಜಿ ಓಸ್ವಾಲ್ ಸರ್ಕಾರಿ ಪದವಿ ಕಾಲೇಜಿನಲ್ಲಿ ಇತ್ತೀಚಿಗೆ ನಡೆದ ಕ್ರೀಡಾ ಹಾಗೂ ಸಾಂಸ್ಕೃತಿಕ ಚಟುವಟಿಕೆ ಸಮಾರಂಭದಲ್ಲಿ ಮಾತನಾಡಿ, ಮನುಷ್ಯ ಯಾವಾಗಲೂ ಪರಿಪೂರ್ಣನಲ್ಲ, ಪರಿಪೂರ್ಣತೆ ಎಡೆಗೆ ಆಗಬೇಕಾದರೆ ದೃಢ ನಿರ್ಧಾರ ಹಾಗೂ ನಿರಂತರ ಅಭ್ಯಾಸ ವಿದ್ಯಾರ್ಥಿಗಳಲ್ಲಿ ಅವಶ್ಯ ಎಂದರು.

ಹುನ್ನೂರು ಸರಕಾರಿ ಪದವಿ ಕಾಲೇಜಿನ ಪ್ರಾಂಶುಪಾಲ ಡಾ.ಕಾಳಿಂಗ ಗೊಳಸಂಗಿ ಮಾತನಾಡಿ, ಹೊಸ ಜಾಗತಿಕ ಪರಿಸರದಲ್ಲಿ ವಿದ್ಯಾರ್ಥಿಗಳು ಸಂಶೋಧನೆ ಸಂವಾದ, ಸಹಯೋಗ ಹಾಗೂ ಸಮಾಜ ಸೇವೆಯಲ್ಲಿ ತೊಡಗಿಕೊಳ್ಳುವ ಮೂಲಕ ದೇಶ ಕಟ್ಟಲು ಮುನ್ನುಗ್ಗಬೇಕು ಎಂದರು. ಭೂ ದಾನಿಗಳಾದ ಗುಲಾಬಚಂದ್ ಓಸ್ವಾಲ್, ಪ್ರಾಚಾರ್ಯ ಡಾ.ಎಚ್.ಎ.ಕಟಗೂರ, ಹಿರಿಯ ಪ್ರಾಧ್ಯಾಪಕ ಎಲ್. ಎಚ್.ಮಮದಾಪುರ, ಐಕ್ಯೂ ಎಸಿ ಸಂಯೋಜಕ ಪ್ರದೀಪ, ಪರಶುರಾಮ ದೇವಿ, ಹಂಪಣ್ಣವರ, ಉಪನ್ಯಾಸಕ ಗಿರೀಶ ವಾಗಣಗೇರಿ, ಮೌನೇಶ, ಡಾ.ಬಸವರಾಜ ಹಡಪದ ಸೇರಿದಂತೆ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಹೇಮರೆಡ್ಡಿ ಮಲ್ಲಮ್ಮ ಮಹಿಳೆಯರಿಗೆ ಆದರ್ಶ

ದೇವರಹಿಪ್ಪರಗಿ: ಭಕ್ತಿಯಿಂದ ಭಜಿಸಿದರೆ ಭಗವಂತನ ಸಾಕ್ಷಾತ್ಕಾರ ಸಾಧ್ಯ ಎಂಬ ನಿದರ್ಶನಕ್ಕೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನ ಚರಿತಾರ್ಥವೆ ಸಾಕ್ಷಿ ಎಂದು ದೇವರಹಿಪ್ಪರಗಿ ಪಟ್ಟಣದ ಜಡಿ ಮಠದ ಜಡಿ ಸಿದ್ದೇಶ್ವರ ಶಿವಾಚಾರ್ಯರು ಹೇಳಿದರು.

ತಾಲೂಕಿನ ಡೋಣಿ ಕಡಕೋಳ ಗ್ರಾಮದ ಮಡಿವಾಳೇಶ್ವರ ಗದ್ದುಗೆ ಹಿರೇಮಠದಲ್ಲಿ ನಡೆದ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನ ಮಹಾಪುರಾಣ ಕಾರ್ಯಕ್ರಮದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ಜಯಂತ್ಯುತ್ಸವದಲ್ಲಿ ಮಾತನಾಡಿದ ಅವರು, ಮನುಕುಲದ ಒಳಿತಿಗಾಗಿ ಜನಿಸಿ ಬಂದ ಜಗನ್ಮಾತೆ ಪಾರ್ವತಿ ದೇವಿಯ ಪ್ರತಿರೂಪ ಮಲ್ಲಮ್ಮ. ಧರ್ಮ, ದೇವರು, ಭಕ್ತಿ, ನೀತಿ, ಸಂಸ್ಕಾರ, ಸಂಸ್ಕೃತಿ, ಆಚಾರ, ವಿಚಾರ, ಶ್ರದ್ಧೆ ಮತ್ತು ಸಂಪ್ರದಾಯಗಳ ಶ್ರೇಷ್ಠತೆಯ ಮಹಾತಾಯಿ ಮಲ್ಲಮ್ಮ, ಬದುಕಿನ ಬವಣೆಗಳನ್ನು ಮೆಟ್ಟಿ ನಿಲ್ಲುವ ಮೂಲಕ ಭಕ್ತಿಯ ಮುಕ್ತಿಗೆ ಮುನ್ನುಡಿ ಬರೆದು ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಂಡ ಹೇಮರೆಡ್ಡಿ ಮಲ್ಲಮ್ಮಳ ಬದುಕು ಪ್ರತಿಯೊಬ್ಬ ಮಹಿಳೆಯರಿಗೆ ಆದರ್ಶ ಅನುಕರಣೆಯಾಗಲಿ ಎಂದರು.

ಗುರು ಮಠದ ಮಡಿವಾಳೇಶ್ವರ ಶ್ರೀಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಗ್ರಾಮದ ಪ್ರಮುಖರು, ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿದ್ದರು.



ಕನ್ನಡ ನಮ್ಮೆಲ್ಲರ ಉಸಿರಾಗಲಿ



ಇಂಡಿ: ಕನ್ನಡ ನಮ್ಮೆಲ್ಲರ ಉಸಿರಾಗಲಿ. ಕನ್ನಡ ಸಾಹಿತ್ಯ ಪರಿಷತ್ ಪ್ರಾತಿನಿಕ ಸಂಸ್ಥೆಯಾಗಿದೆ. ನಾಡು-ನುಡಿಗಾಗಿ ಹಗಲಿರಳು ಕನ್ನಡ ಭಾಷೆ ಅಭಿಮಾನ ಮೂಡಿಸುವಂತಹ ಕಾರ್ಯ ಶ್ಲಾಘನೀಯವಾಗಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲಿಕಾರ ಹೇಳಿದರು.

ಪಟ್ಟಣದ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ 112ನೇ ಕಸಾಪ ಸಂಸ್ಥಾಪನಾ ದಿನಾಚರಣೆಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿ ಮಾತನಾಡಿದ ಅವರು, ಎಂಟು ಜ್ಞಾನಪೀಠ ಪ್ರಶಸ್ತಿ ಪಡೆದ ಹೆಮ್ಮೆಯ ರಾಜ್ಯ ನಮ್ಮದಾಗಿದೆ. ಕಸಾಪಗೆ ಸದಸ್ಯರಾಗುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ ಬೆಳೆಸಬೇಕು ಎಂದರು.

ಕವಿಯಿತ್ರಿ ಹಾಗೂ ಗೌರವಕಾರ್ಯದರ್ಶಿ ಪಾರ್ವತಿಸೊನ್ನದ ಮಾತನಾಡಿ, ವಚನ ಸಾಹಿತ್ಯ ಹಾಗೂ ಜಾನಪದ ಸಾಹಿತ್ಯ ಕನ್ನಡ ಸಾಹಿತ್ಯ ಪರಿಷತ್‌ಗೆ ಆಧಾರ. ಕನ್ನಡ ನೆಲ-ಜಲ ಕಾಪಾಡುವ ನಮ್ಮೆಲ್ಲರ ಹೊಣೆಯಾಗಿದೆ ಎಂದರು. ಇಂಡಿ ಶಿಕ್ಷಕ ಸಂಘ ಅಧ್ಯಕ್ಷ ವೈ.ಟಿ.ಪಾಟೀಲ ಮಾತನಾಡಿದರು. ಪದಾಕಾರಿಗಳಾದ ಅಹಮ್ಮದ ವಾಲಿಕಾರ, ಆನಂದ ಕೆಂಭಾವಿ, ಜಯಶ್ರೀ ತೆಲಗಿ. ಎಸ್ಸಿ, ಎಸ್ಟಿ ನೌಕರರ ಸಂಘ ಅಧ್ಯಕ್ಷ ಬಿ.ಎಂ.ವಠಾರ, ಬಿ.ಬಿ.ಸುತಾರ, ಖಲೀಲ ಅತ್ತಾರ, ಅರವಿಂದ ಮೇತ್ರಿ, ಕಲ್ಲನಗೌಡ ಬಿರಾದಾರ, ಗೀತಾ ಹೀರೇಮಾಳ, ಶಾಕೀರ ಪಠಾಣ, ಮಹಮ್ಮದರಫೀಕ ಬಗಲಿ ಇದ್ದರು.

ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ: ಪಾಟೀಲ

ಇಂಡಿ: ಶಿಕ್ಷಣದಿಂದ ಪ್ರಗತಿ ಹೊಂದಲು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು. ಮದ್ಯ ವ್ಯಸನದಿಂದ ದೂರ ಇರಬೇಕು. ಕಾರ್ಮಿಕ ಮಕ್ಕಳಿಗಾಗಿಯೇ ಇಂಡಿಗೆ ವಸತಿ ಶಾಲೆ ತಂದಿರುವೆ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಕೆಲಸ ಪಾಲಕರದ್ದಾಗಿದೆ ಎಂದು ಶಾಸಕ ಯಶವಂತರಾಯಗೌಡ ಪಾಟೀಲ ಹೇಳಿದರು.

ತಾಲೂಕಿನ ನಿಂಬಾಳ ತಾಂಡಾದಲ್ಲಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಭೂಮಿಪೂಜೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ರೇವಣಸಿದ್ದೇಶ್ವರ ಏತ ನೀರಾವರಿ ಯೋಜನೆ 3 ಸಾವಿರ ಕೋಟಿ ಅನುಧಾನದಲ್ಲಿ ಕಾಮಗಾರಿ ನಡೆದಿದ್ದು ರಾಜ್ಯದಲ್ಲಿ ಇಂಡಿ ಎಂಬುದು ಸಂತಸದ ಸಂಗತಿ ಸರ್ಕಾರಿ ಸಂಸ್ಥೆಗಳು ಬಡವರಿಗೆ ಅನುಕೂಲವಾಗಲಿದೆ ಎಂದು ಹೇಳಿದರು. ಸ್ವತಂತ್ರ್ಯ ಭಾರತದ ನಂತರ ಇಂಡಿ ಕ್ಷೇತ್ರದ ಅಭಿವೃದ್ಧಿಗೆ 8 ಸಾವಿರ ಕೋಟಿ ಅನುದಾನ ತಾರ ತಂದಿರುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಂಡಿ ಕ್ಷೇತ್ರದ ಅಭಿವೃದ್ಧಿಗೆ 2013 ಹಾಗೂ ಪ್ರಸಕ್ತ ಅಧಿಕಾರವಧಿಯಲ್ಲಿ ಸೇರಿ 8 ಸಾವಿರ ಕೋಟಿ ರೂ.ಅನುದಾನ ನೀಡಿದ್ದು ಇತಿಹಾಸ ಎಂದರು. ತಹಶೀಲ್ದಾರ್ ಬಿ.ಎಸ್.ಕಡಕಭಾವಿ, ತಾಪಂ ಇಒ ಮಹಾದೇವಪ್ಪ ಏವೂರ, ಎಇಇ ದಯಾನಂದ ಮಠ, ಶಿವಾಜಿ ಬನಸೋಡೆ ರಾಜೇಶ ಹೂಗಾರ, ಭೀಮಣ್ಣ ಕವಲಗಿ ಪ್ರಶಾಂತ ಕಾಳೆ, ಸದಾಶಿವ ಪ್ಯಾಟಿ, ಜಾವೀದ ಮೋಮಿನ, ಮುಸ್ತಾಕ ಇಂಡಿಕರ, ಧರ್ಮು ವಾಲಿಕಾರ ಇದ್ದರು.





ಸಿಂಧನೂರು: ನಗರದ ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತದ ವತಿಯಿಂದ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪುಷ್ಪಾರ್ಚನೆ ಮಾಡುವುದರ ಮೂಲಕ ಹೇಮರೆಡ್ಡಿ ಮಲ್ಲಮ್ಮನವರ 604 ನೇಯ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಎಲ್ಲರ ಸಹಕಾರದಿಂದ ಸೇವಾ ಪ್ರಶಸ್ತಿ ಲಭಿಸಿದೆ

ಯಲಬುರ್ಗಾ: ಕುಕನೂರು ಮತ್ತು ಯಲಬುರ್ಗಾ ಪಪಂ ಮುಖ್ಯಾಧಿಕಾರಿಯಾಗಿ ಉತ್ತಮ ಸೇವೆ ಮಾಡಲು ಕ್ಷೇತ್ರದ ಶಾಸಕರ ಸಹಕಾರವೇ ನನಗೆ ಜಿಲ್ಲಾ ಮಟ್ಟದ ಸರ್ವೋತ್ತಮ ಸೇವಾ ಪ್ರಶಸ್ತಿ ದೊರೆಯಲು ಕಾರಣವಾಗಿದೆ ಎಂದು ಪ್ರಶಸ್ತಿ ವಿಜೇತ ಹಾಗೂ ಪಪಂ ಮುಖ್ಯಾಧಿಕಾರಿ ನಾಗೇಶ ಹೇಳಿದರು.

ಪಟ್ಟಣದ ಸ್ಥಳೀಯ ಪಪಂ ಕಚೇರಿಯಲ್ಲಿ ಸೋಮವಾರ ತಾಲೂಕಾ ಛಲವಾದಿ ಮಹಾಸಭಾದವರು ಆಯೋಜಿಸಿದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಉಭಯ ತಾಲೂಕಿನ ಸಾರ್ವಜನಿಕರು,ಸಿಬ್ಬಂದಿಗಳು,ವಿವಿಧ ಇಲಾಖೆಗಳ ಅಧಿಕಾರಿಗಳ ಹೆಚ್ಚಿನ ಸಹಕಾರವೇ ಈ ಸರ್ವೋತ್ತಮ ಸೇವಾ ಪ್ರಶಸ್ತಿ ದೊರೆತಿರುವುದು ಸಂತಸ ತಂದಿದೆ ಎಂದರು.

ಅಧಿಕಾರಿಗಳಾದವರು ಪ್ರಶಸ್ತಿಗಾಗಿ ಬೆನ್ನತ್ತಿ ಹೋಗದೆ ನಮ್ಮ ಸೇವೆ ಹುಡುಕಿಕೊಂಡು ಪ್ರಶಸ್ತಿಗಳು ಬರಬೇಕೆನ್ನುವುದು ನನ್ನ ಅಚಲ ನಿರ್ಧಾರವಾಗಿದ್ದು ಎಲ್ಲರೂ ನಮ್ಮ ವೃತ್ತಿಯಲ್ಲಿ ನಾವು ಶ್ರದ್ದೆ,ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುವ ಮನೋಭಾವನೆ ಎಲ್ಲರಲ್ಲೂ ಮೂಡಿಬರಬೇಕು.ಈ ಪ್ರಶಸ್ತಿಯಿಂದ ಮತ್ತಷ್ಟು ಉತ್ತಮ ಸೇವೆ ಮಾಡುವ ಸದಾವಕಾಶ ದೊರೆತಿರುವುದು ನಿಮ್ಮೆಲ್ಲರ ಸಹಕಾರ ಸದಾ ಹೀಗೆರಲಿ ಎಂದರು.

ಛಲವಾದಿ ಮಹಾಸಭಾದ ತಾಲೂಕಾಧ್ಯಕ್ಷ ಅಂದಪ್ಪ ಹಾಳಕೇರಿ, ಮುಖಂಡರಾದ ಸಿದ್ದಪ್ಪ ಕಟ್ಟಿಮನಿ, ಛತ್ರೆಪ್ಪ ಛಲವಾದಿ, ಕನಕೇಶ ಪೇಂಟರ್, ಶಶಿಧರ ಹೊಸ್ಮನಿ, ಕಳಕೇಶ ಬೇವಿನಗಿಡದ ಸೇರಿದಂತೆ ಮತ್ತಿತರರು ಇದ್ದರು.



ಯಲಬುರ್ಗಾ: ಪಟ್ಟಣದ ಸ್ಥಳೀಯ ಪಪಂ ಕಚೇರಿಯಲ್ಲಿ ಸೋಮವಾರ ತಾಲೂಕಾ ಛಲವಾದಿ ಮಹಾಸಭಾದ ವತಿಯಿಂದ ಪ್ರಶಸ್ತಿ ವಿಜೇತ ಹಾಗೂ ಪಪಂ ಮುಖ್ಯಾಧಿಕಾರಿ ನಾಗೇಶ ಅವರನ್ನು ಸನ್ಮಾನಿಸಲಾಯಿತು.ಛಲವಾದಿ ಮಹಾಸಭಾದ ತಾಲೂಕಾಧ್ಯಕ್ಷ ಅಂದಪ್ಪ ಹಾಳಕೇರಿ, ಮುಖಂಡರಾದ ಸಿದ್ದಪ್ಪ ಕಟ್ಟಿಮನಿ ಇದ್ದರು.

ಕಿರುಸುದ್ದಿ

ಹೆದ್ದಾರಿಗೆ ಉರುಳಿದ ಬಸ್: ಗಾಯಾಳುಗಳು ಆಸ್ಪತ್ರೆಗೆ

ಹಟ್ಟಿಚಿನ್ನದಗಣಿ: ಕಲಬುರ್ಗಿಯಿಂದ ಬಳ್ಳಾರಿ ಕಡೆಗೆ ಹೊರಟಿರುವ ಸಾರಿಗೆ ಸಂಸ್ಥೆ ಬಸ್ಸೊಂದು ಹಟ್ಟಿಚಿನ್ನದಗಣಿಗೆ ಸಮೀಪದ ಜೇವರ್ಗಿ-ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿಯ (150ಎ) ಗುರುಗುಂಟಾ ಹೊರವಲಯದ ಡಾಬಾ ಕ್ರಾಸಿನ ಬಳಿ ಭಾನುವಾರ ಸಾಯಂಕಾಲ ಪಲ್ಟಿಯಾಗಿದೆ. ಕಲಬುರ್ಗಿ-1 ಡಿಪೋ ಕೆಎ32, ಎಫ್-2049 ನಾನ್ ಎಸಿ ಸ್ಲಿಪರ್ ಕೋಚ್ ಬಸ್ಸು ಬಳ್ಳಾರಿ ಮಾರ್ಗದಲ್ಲಿ ಹೊರಟಿರುವಾಗ ತಿರುವಿನಲ್ಲಿ ಆಯತಪ್ಪಿ ಕಂದಕಕ್ಕೆ ಪಲ್ಟಿಯಾಗಿದೆ ಎನ್ನಲಾಗಿದ್ದು, 26 ಜನ ಪ್ರಯಾಣಿಕರು ಇದ್ದು ಓರ್ವ ಮಹಿಳೆಗೆ ಗಂಭೀರ ಗಾಯಗಳು ಹಾಗೂ ಚಾಲಕನ ಎದೆಗೆ ಬಲವಾಗಿ ಪೆಟ್ಟು ಬಿದ್ದಿದೆ. ಇನ್ನುಳಿದಂತೆ ಸಣ್ಣಪುಟ್ಟ ಗಾಯಗಳಾಗಿದ್ದು ಲಿಂಗಸುಗೂರು ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗೆ ರವಾನಿಸಲಾಗಿದ್ದು, ಪ್ರಕರಣ ಹಟ್ಟಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ರಾಷ್ಟ್ರ ಮಟ್ಟದ ಪ್ರೇರಣಾ ಉತ್ಸವಕ್ಕೆ ಆಯ್ಕೆ

ಮುನಿರಾಬಾದ್: ಸಮೀಪದ ಗಬ್ಬೂರು ಗ್ರಾಮದ ಬಾಲಕಿ ಅರ್ಪಿತಾ ನಿಂಗಪ್ಪ ಕಂಬಳಿ ಅವರು ಗುಜರಾತ್‌ನ ವಡ್‌ನಗರದಲ್ಲಿ ನಡೆಯಲಿರುವ ರಾಷ್ಟ್ರ ಮಟ್ಟದ 'ಪ್ರೇರಣಾ' ಶಿಬಿರಕ್ಕೆ ಆಯ್ಕೆಯಾಗಿದ್ದಾರೆ.



ಕೇಂದ್ರೀಯ ವಿದ್ಯಾಲಯದಲ್ಲಿ ಹತ್ತನೇ ತರಗತಿ ಪೂರೈಸಿದ ವಿದ್ಯಾರ್ಥಿನಿ ಅರ್ಪಿತಾ ಕಂಬಳಿ, ಇತ್ತೀಚೆಗೆ ಕುಕನೂರಿನ ಜವಾಹರ್ ನವೋದಯ ವಿದ್ಯಾಲಯದಲ್ಲಿ ನಡೆದ ಪ್ರಾದೇಶಿಕ ಹಂತದ ಕಥೆ ಬರೆಯುವ ಸ್ಪರ್ಧೆ ಹಾಗೂ ಸಂದರ್ಶನದಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಮೂಲಕ ಅರ್ಪಿತಾ ಕಂಬಳಿ ಈ ಸಾಧನೆ ಮಾಡಿದ್ದಾರೆ. ಭಾರತ ಸರ್ಕಾರದ ಶಿಕ್ಷಣ ಸಚಿವಾಲಯ ಆಯೋಜಿಸಿರುವ ಈ ಏಳು ದಿನಗಳ ವಸತಿ ಶಿಬಿರವು ವಿದ್ಯಾರ್ಥಿಗಳಲ್ಲಿ ನಾಯಕತ್ವ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುವ ಗುರಿ ಹೊಂದಿದೆ. ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ಅರ್ಪಿತಾ ಕಂಬಳಿ ಅವರಿಗೆ ಶಾಲೆಯ ಪ್ರಾಚಾರ್ಯರು ಹಾಗೂ ಶಿಕ್ಷಕ ವೃಂದದವರು ಅಭಿನಂದನೆ ಸಲ್ಲಿಸಿದ್ದಾರೆ.

ಜೋಳ ಖರೀದಿ ಕೇಂದ್ರ ಆರಂಭ

ರಾಯಚೂರು: ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ವತಿಯಿಂದ 2025-26ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಹಿಂಗಾರು ಋತುವಿನಲ್ಲಿ ನೋಂದಣಿ ಮಾಡಿಕೊಂಡಿರುವ ರೈತರಿಂದ ಬಿಳಿಜೋಳವನ್ನು ಖರೀದಿಸುವ ಪ್ರಕ್ರಿಯೆಯನ್ನು ಆರಂಭಿಸಲಾಗಿದ್ದು, ಖರೀದಿ ಕೇಂದ್ರಗಳಲ್ಲಿ ನೋಂದಾಯಿಸಲಾದ ರೈತರಿಂದ ಖರೀದಿಯನ್ನು ಮಾಡಲಾಗುವುದು ಎಂದು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸದಸ್ಯ ಕಾರ್ಯದರ್ಶಿ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕ ನಜೀರ್ ಅಹ್ಮದ್ ತಿಳಿಸಿದ್ದಾರೆ. ರೈತರು ಈಗಾಗಲೇ ತಮ್ಮ ಎಫ್ ಐಡಿಯೊಂದಿಗೆ ನೋಂದಣಿ ಮಾಡಿಕೊಂಡಿದ್ದು, ಮೇ 11ರಿಂದ ಜಿಲ್ಲೆಯಲ್ಲಿರುವ ಎಲ್ಲಾ ಖರೀದಿ ಕೇಂದ್ರಗಳಲ್ಲಿ ಖರೀದಿ ಪ್ರಕ್ರಿಯೆಯನ್ನು ಆರಂಭಿಸಲಾಗುತ್ತಿದೆ. ಖರೀದಿ ಕೇಂದ್ರಗಳಲ್ಲಿ ನೋಂದಾಯಿಸಲಾದ ಅನುಕ್ರಮವಾರು ರೈತರಿಂದ ಖರೀದಿಯನ್ನು ಮಾಡಲಾಗುವುದು. ರೈತರು ಆತುರ ಪಡದೇ ಅಥವಾ ನೂಕು ನುಗ್ಗಲು ಮಾಡದೇ ತಮಗೆ ಖರೀದಿ ಕೇಂದ್ರದಿಂದ ನೀಡಲಾಗುವ ದಿನಾಂಕವಾರು ತಾವು ಬೆಳೆದಿರುವ ಜೋಳವನ್ನು ಸರಬರಾಜು ಮಾಡುವುದು. ಅಲ್ಲದೇ ಖರೀದಿ ಕೇಂದ್ರಕ್ಕೆ ಬರುವ ಮುಂಚಿತವಾಗಿಯೇ ದಾಸ್ತಾನಿನ ಗುಣಮಟ್ಟ, ತೇವಾಂಶ ಹಾಗೂ ಸ್ವಚ್ಛತೆಯ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಕುಕನೂರು ಚುಸಾಪದಿಂದ ಕವಿಗೋಷ್ಠಿ

ಕುಕುನೂರು: ತಾಲೂಕು ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ದಿನಾಂಕ ಮೇ 12ರಂದು ಸಂಜೆ 4 ಗಂಟೆಗೆ ಕುಕನೂರಿನ ಬಸ್ ನಿಲ್ದಾಣದ ಹತ್ತಿರದ ಹಿರೇಮನಿ ಕಾಂಪ್ಲೆಕ್ಸ್ ಸಾಯಿ ಝರಾಕ್ಸ್ ಮತ್ತು ಕಂಪ್ಯೂಟರ್ ಸೆಂಟರ್ ಕಚೇರಿಯಲ್ಲಿ ಜರುಗಲಿದ್ದು 'ಬದುಕಿನ ದಾರಿದೀಪ ವಚನ ಸಾಹಿತ್ಯ' ಎಂಬ ವಿಷಯ ಕುರಿತು ಉಪನ್ಯಾಸ ಹಾಗೂ ವಿವಿಧ ಕವಿ ಮನಗಳಿಂದ ಕವಿಗೋಷ್ಠಿ ನೆರವೇರಲಿದ್ದು , ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳುವ ಕವಿಗಳು ಪ್ರಧಾನ ಕಾರ್ಯದರ್ಶಿಗಳಾದ ರವಿ ಹಿರೇಮನಿ ಮೊಬೈಲ್ ಸಂಖ್ಯೆ: 9449245271 ಸಂಪರ್ಕಿಸಿ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ಕುಕನೂರು ತಾಲೂಕು ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಬಸವರಾಜ ಉಪ್ಪಿನ ತಿಳಿಸಿದ್ದಾರೆ.

ಜಿಲ್ಲಾಡಳಿತಕ್ಕೆ ಸಿ.ವಿ.ಚಂದ್ರಶೇಖರ್ ಆಗ್ರಹ
ಕೃಷಿ ಚಟುವಟಿಕೆಗೆ ಪೂರ್ವ ಸಿದ್ಧತೆ ಕೈಗೊಳ್ಳಿ

ಕೊಪ್ಪಳ: ಪೂರ್ವ ಸಿದ್ದತೆ ಮಾಡಿಕೊಳ್ಳುವ ಮೂಲಕ ಪ್ರಸಕ್ತ ಮುಂಗಾರಿನಲ್ಲಿ ಜಿಲ್ಲೆಯಾದ್ಯಂತ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ್ ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.

ಪಕ್ಷದ ಮುಖಂಡರ ನಿಯೋಗದೊಂದಿಗೆ ಸೋಮವಾರ ಡಿಸಿ ಸುರೇಶ್ ಇಟ್ನಾಳ್ ಅವರನ್ನು ಜಿಲ್ಲಾಧಿಕಾರಿ ಕಚೇರಿಯಲ್ಲಿ ಭೇಟಿಯಾಗಿ ಈ ಕುರಿತು ಅವರು ಮನವಿ ಸಲ್ಲಿಸಿದರು.

ಪ್ರಸಕ್ತ ವರ್ಷ ಮುಂಗಾರು ಅವಧಿ ಮೇ ಮೂರನೇ ವಾರದಿಂದ ಆರಂಭವಾಗುವ ನಿರೀಕ್ಷೆಯಿದೆ. ಪೂರ್ವ ಸಿದ್ದತೆ ಮಾಡಿಕೊಳ್ಳುವ ಮೂಲಕ ಮುಂಗಾರಿನ ಆರಂಭದಲ್ಲಿ ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಕಳೆದ ವರ್ಷ ಕೊಪ್ಪಳ ನಗರದಲ್ಲಿ ಯೂರಿಯಾ ಗೊಬ್ಬರದ ಕೊರತೆಯ ಹಿನ್ನೆಲೆಯಲ್ಲಿ ಬಸವೇಶ್ವರ ವೃತ್ತದ ಬಳಿ ಇರುವ ತಾಲೂಕು ಒಕ್ಕಲುತನ ಹುಟ್ಟುವಳಿ ಸಹಕಾರಿ ಸಂಘದ (ಟಿಎಪಿಎಂಸಿ) ಮುಂಭಾಗ ರೈತರು ತೀವ್ರ ಪ್ರತಿಭಟನೆ ನಡೆಸಿದ್ದು ಹಾಗೂ ಕೊಪ್ಪಳ ತಾಲೂಕಿನ ಕುಣಿಕೇರಿ ಗ್ರಾಮದ ಚಂದ್ರಪ್ಪ ಬಡಿಗಿ ಮಣ್ಣು ತಿಂದು ಆಕ್ರೋಶ ವ್ಯಕ್ತಪಡಿಸಿದ್ದು ರಾಜ್ಯಾದ್ಯಂತ ಸುದ್ದಿಯಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರಕಾರಗಳು ಪ್ರತಿಕ್ರಿಯೆ ನೀಡಬೇಕಾಯಿತು. ಇಂತಹ ಘಟನೆಗಳು ಮರುಕಳಿಸಿರಂತೆ ನೋಡಿಕೊಳ್ಳುವ ಜವಾಬ್ದಾರಿ ಜಿಲ್ಲಾಡಳಿತದ್ದು ಎಂದು ಮನವಿ ಪತ್ರದಲ್ಲಿ ಹೇಳಿದ್ದಾರೆ.

ನಿಯೋಗದಲ್ಲಿ ರಾಜ್ಯ ಯುವ ಘಟಕದ ಕಾರ್ಯಾಧ್ಯಕ್ಷ ರಾಜು ನಾಯಕ, ಜಿಲ್ಲಾಧ್ಯಕ್ಷ ಸುರೇಶ್ ಭೂಮರಡ್ಡಿ, ಜಿಲ್ಲಾ ರೈತ ವಿಭಾಗದ ಅಧ್ಯಕ್ಷ ವೆಂಕಟೇಶರಾವ, ತಾಲೂಕ ಗೌರವಾಧ್ಯಕ್ಷ ಈಶಪ್ಪ ಮಾದಿನೂರು, ಜಿಲ್ಲಾ ವಕ್ತಾರ ಮಲ್ಲನಗೌಡ ಕೋನನಗೌಡ್ರು, ಜಿಲ್ಲಾ ಉಪಾಧ್ಯಕ್ಷ ಮೂರ್ತ್ಯಪ್ಪ ಹಿಟ್ನಾಳ್, ಜಿಲ್ಲಾ ಓಬಿಸಿ ಅಧ್ಯಕ್ಷ ಕರಿಯಪ್ಪ ಹಾಲವರ್ತಿ, ಜಿಲ್ಲಾ ಸಂಸ್ಕೃತಿ ವಿಭಾಗದ ಅಧ್ಯಕ್ಷ ಮಂಜುನಾಥ್ ಸೊರಟೂರ, ಜಿಲ್ಲಾ ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ರಮೇಶ್ ಡಂಬ್ರಳ್ಳಿ, ಜಿಲ್ಲಾ ಕೈಗಾರಿಕಾ ಅಧ್ಯಕ್ಷ ಮಾರುತಿಗೌಡ್ರು, ಹಿರೇಬಗನಾಳ, ಜಿಲ್ಲಾ ಅಲ್ಪಸಂಖ್ಯಾತ ಅಧ್ಯಕ್ಷ ಸಿರಾಜ್ ಅಹಮದ್, ಜಿಲ್ಲಾ ಎಸ್ಸಿ ಘಟಕದ ಅಧ್ಯಕ್ಷ ಶಾಂತಕುಮಾರ್ ದೊಡ್ಡಮನಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶರಣಪ್ಪ ಜಡಿ, ನಗರ ಘಟಕದ ಅಧ್ಯಕ್ಷ ಸೋಮನಗೌಡ ಹೊಗರನಾಳ, ನಗರ ಘಟಕ ಅಲ್ಪಸಂಖ್ಯಾತ ಅಧ್ಯಕ್ಷ ಸಿರಾಜ್ ಕೋಲ್ಕಾರ್, ತಾಲೂಕು ಎಸ್ಸಿ ಘಟಕದ ಅಧ್ಯಕ್ಷ ಸುರೇಶ ದದೇಗಲ್, ಜಿಲ್ಲಾ ಸಹ ಕಾರ್ಯದರ್ಶಿ ರವಿ ಮೇದಾರ, ತಾಲೂಕು ಎಸ್ಟಿ ಘಟಕದ ಅಧ್ಯಕ್ಷ ಮಲ್ಲಪ್ಪ ಹಂದ್ರಾಳ, ನಗರ ಘಟಕದ ಗೌರವಾಧ್ಯಕ್ಷೆ ರತ್ನಮ್ಮ ಹಿರೇಮಠ, ನಗರ ಕೋಶಾಧ್ಯಕ್ಷ ಶಿವರಾಜ್ ಮಠಪತಿ, ಜಿಲ್ಲಾ ಖಜಾಂಚಿ ಮೌನೇಶ್ ಕಿನ್ನಾಳ, ನಗರ ಎಸ್ಸಿ ಘಟಕದ ಅಧ್ಯಕ್ಷ ಮಾರುತಿ ಎಚ್., ಮುಖಂಡರಾದ ಸಿದ್ದರಡ್ಡಿ ಸಿಂದೋಗಿ, ಮಂಜುನಾಥ್ ವದಗನಾಳ, ಖಾಜಾಹುಸೇನ್ ಹೊಸಳ್ಳಿ ಹಾಗೂ ಇತರರು ಇದ್ದರು.



> **ಜಿಲ್ಲಾದ್ಯಂತ ಕೃಷಿ ಭೂಮಿಯ ವಿಸ್ತೀರ್ಣ, ಅಗತ್ಯವಿರುವ ಬಿತ್ತನೆ ಬೀಜಗಳು, ರಸಗೊಬ್ಬರ ಹಾಗೂ ಕೀಟನಾಶಕಗಳ ಪ್ರಮಾಣಕ್ಕೆ ಅನುಗುಣವಾಗಿ ರಸಗೊಬ್ಬರ, ಕೀಟನಾಶಕ ಔಷಧಿಗಳ ಹಾಗೂ ಯೂರಿಯಾ ದಾಸ್ತಾನು ಮಾಡಿಕೊಳ್ಳಬೇಕು. ಯೂರಿಯಾ ಪಡೆಯಲು ರೈತರಿಗೆ ಯಾವುದೇ ರೀತಿಯ ನಿಬಂಧನೆ ಹೇರಬಾರದು. ರಸಗೊಬ್ಬರದ ಕಾಳದಂಧೆ ನಡೆಯದಂತೆ, ಅದರ ಬೆಲೆ ಹೆಚ್ಚದಂತೆ ಹಾಗೂ ಕಳಪೆ ಬಿತ್ತನೆ ಬೀಜ ಪೂರೈಕೆಯಾಗದಂತೆ ಕ್ರಮ ಕೈಗೊಳ್ಳಬೇಕು.**
>
> ■ ಸಿ.ವಿ.ಚಂದ್ರಶೇಖರ್, ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ

ಕಲಬುರಗಿ ನೂತನ ಜಿಲ್ಲಾಧಿಕಾರಿ ಆಗಿ ಇಕ್ರಮ್ ಶರೀಫ್ ಅಧಿಕಾರ ಸ್ವೀಕಾರ

ಕಲಬುರಗಿ: ಜಿಲ್ಲೆಯ ನೂತನ ಜಿಲ್ಲಾಧಿಕಾರಿಯಾಗಿ ಕರ್ನಾಟಕ ಕೇಡರಿನ 2016ನೇ ಬ್ಯಾಚಿನ ಐಎಎಸ್ ಅಧಿಕಾರಿ ಇಕ್ರಮ ಶರೀಫ್ ಅವರು ಸೋಮವಾರ ನಿರ್ಗಮಿತ ಡಿಸಿ ಬಿ.ಫೌಜಿಯಾ ತರನ್ನುಮ್ ಅವರಿಂದ ಅಧಿಕಾರ ವಹಿಸಿಕೊಂಡರು.

ನಿರ್ಗಮಿತ ಡಿಸಿ ಬಿ.ಫೌಜಿಯಾ ತರನ್ನುಮ್ ಅವರು ನೂತನ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಹಸ್ತಾಂತರಿಸಿ ಹೂಗುಚ್ಛ ನೀಡಿ ಶುಭ ಕೋರಿದರು.

ಸರ್ಕಾರ ಇತ್ತೀಚೆಗೆ ಕಲಬುರಗಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರನ್ನು ಗ್ರಾಮೀಣ ಕುಡಿಯುವ ನೀರು ಮತ್ತು ಸರಬರಾಜು ಇಲಾಖೆಯ ಆಯುಕ್ತರಾಗಿ ವರ್ಗಾಯಿಸಿ ಅವರ ಸ್ಥಾನಕ್ಕೆ ಹಣಕಾಸು ಇಲಾಖೆಯ ಜಂಟಿ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇಕ್ರಮ್ ಶರೀಫ್ ಅವರನ್ನು ನಿಯೋಜಿಸಿತ್ತು.

ಕರ್ನಾಟಕ ಮೂಲದವರಾದ ಇಕ್ರಮ್ ಶರೀಫ್ ಅವರುಬಿ.ಎ.(ಅರ್ಥಶಾಸ್ತ್ರ) ಪದವಿ ಪಡೆದಿದ್ದಾರೆ. ಈ ಹಿಂದೆ ರಾಮನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದ ಸಂದರ್ಭದಲ್ಲಿ ಎಸ್ಎಸ್ಎಲ್‌ಸಿ ಫಲಿತಾಂಶ ಸುಧಾರಣೆಗೆ ಕೈಗೊಂಡ ಕ್ರಮಗಳು ಶ್ಲಾಘನೆಗೆ ಪಾತ್ರವಾಗಿತ್ತು. ಇವರು ಕಳೆದ 2024ರ ಜುಲೈ ನಿಂದ ಇಲ್ಲಿಯವರೆಗೆ ಹಣಕಾಸು ಇಲಾಖೆಯಲ್ಲಿ ಆಯವ್ಯಯ ಸಿದ್ದಪಡಿಸುವ ಮಹತ್ವದ ಜವಾಬ್ದಾರಿಯಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ.



ಅಧಿಕಾರ ವಹಸಿಕೊಂಡ ನಂತರ ಮಾತನಾಡಿದ ಜಿಲ್ಲಾಧಿಕಾರಿ ಇಕ್ರಮ್ ಶರೀಫ್, ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸುವ ಮೂಲಕ ಜನಸ್ನೇಹಿ ಆಡಳಿತಕ್ಕೆ ಒತ್ತು ನೀಡಲಾಗುವುದು. ಕಲ್ಯಾಣ ಕರ್ನಾಟಕ ಭಾಗದಲ್ಲಿ ಸೇವೆ ಸಲ್ಲಿಸಲು ಅವಕಾಶ ದೊರೆತಿದ್ದು, ಜಿಲ್ಲೆಯಲ್ಲಿ ಆರೋಗ್ಯ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು. ಜಿಲ್ಲೆಯಲ್ಲಿ ಅನೇಕ ಬೃಹತ್ ಯೋಜನೆಗಳು ಜಾರಿಯಲ್ಲಿದ್ದು, ಅದೆಲ್ಲವನ್ನು ಚುರುಕುಗೊಳಿಸಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು ಎಂದರು.

ಜಿಪಂ ಸಿಇಒ ಭಂವರ್ ಸಿಂಗ್ ಮೀನಾ, ಎಸ್.ಪಿ. ಅಡ್ಡೂರು ಶ್ರೀನಿವಾಸುಲು, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ಎಡಿಸಿ ರಾಯಪ್ಪ ಹುಣಸಗಿ, ಸಹಾಯಕ ಆಯುಕ್ತರಾದ ಸಾಹಿತ್ಯ ಆಲದಕಟ್ಟಿ, ಪ್ರಭುರೆಡ್ಡಿ ಸೇರಿದಂತೆ ತಾಲೂಕಿನ ತಹಶೀಲ್ದಾರರು, ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದು ನೂತನ ಜಿಲ್ಲಾಧಿಕಾರಿಗಳಿಗೆ ಶುಭಕೋರಿದರು.

ಮಲ್ಲಮ್ಮರ ಆದರ್ಶಗಳು ಸಾರ್ವಕಾಲಿಕ

ಯಲಬುರ್ಗಾ: ಶಿವಶರಣೆ ಮಹಾತಾಯಿ ಹೇಮರೆಡ್ಡಿ ಮಲ್ಲಮ್ಮನವರ ಆದರ್ಶಗಳು, ವಚನಗಳು,ತತ್ವಗಳು ಇಂದಿಗೂ ನಮಗೆಲ್ಲ ಸರ್ವಕಾಲಿಕವಾಗಿವೆ ಎಂದು ತಾಲೂಕಾ ರೆಡ್ಡಿ ಸಮಾಜದ ಅಧ್ಯಕ್ಷ ಸಂಗಪ್ಪ ಹೊಕ್ಕಳದ ಹೇಳಿದರು.

ಪಟ್ಟಣದ ತಹಶೀಲ್ ಸಭಾಂಗಣದಲ್ಲಿ ತಾಲೂಕಾಡಳಿತದಿಂದ ಹಮ್ಮಿಕೊಂಡಿದ್ದ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಜಯಂತಿ ಕಾರ್ಯಕ್ರಮದಲ್ಲಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪುಷ್ಪಚರಣೆ ಮಾಡಿ ಮಾತನಾಡಿದ ಅವರು ಹೇಮರೆಡ್ಡಿ ಮಲ್ಲನವರ ಆದರ್ಶ ಅವರ ವ್ಯಕಿತ್ವ ಇಂದಿಗೂ ಭಾರತೀಯ ಮಹಿಳೆಯರಿಗೆ ಆದರ್ಶವಾಗಿವೆ ಎಂದರು.

ಸಮಾಜದ ಹಿರಿಯ ಮುಖಂಡ ಶಿವಣ್ಣ ರಾಯರಡ್ಡಿ ಹಾಗೂ ಆರೋಗ್ಯ ರಕ್ಷ ಸಮಿತಿ ಉಪಾಧ್ಯಕ್ಷ ಡಾ,ಶಿವನಗೌಡ ದಾನರಡ್ಡಿ ಮಾತನಾಡಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರು ತಮ್ಮ ಜೀವನದಲ್ಲಿ ಹಲವು ಕಷ್ಟ-ನಷ್ಟ ಅನುಭವಿಸಿದ ಶಿವಶರಣೆ ಮಲ್ಲಮ್ಮ ಇಂದಿನ ಯುವ ಪೀಳಿಗೆಗೆ ನಿಜಕ್ಕೂ ಆದರ್ಶವಾಗಿದ್ದು ಅವರು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಾವೆಲ್ಲರೂ ಮುನ್ನಡೆಯಬೇಕು ಜತೆಗೆ ಪ್ರತಿಯೊಬ್ಬರು ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಇಂತಹ ಜಯಂತಿಗಳಿಗೆ ಹೆಚ್ಚು ಅರ್ಥ ಬರುತ್ತದೆ ಎಂದರು.

ಸಮಾಜದ ತಾಲೂಕಾ ಯುವ ಘಟಕದ ಅಧ್ಯಕ್ಷ ರವಿ ಗುರಡ್ಡಿ,ಮುಖಂಡ ಹೇಮರಡ್ಡಿ ರಡ್ಡೇರ, ಬಸವರಾಜ ಮೇಟಿ ಮಾತನಾಡಿದರು. ಈ ವೇಳೆಯಲ್ಲಿ ಸಮಾಜದ ಮಹೇಶ ಯರಾಶಿ, ಬಸವರೆಡ್ಡಿ ರಡ್ಡೇರ, ಅಂದಪ್ಪ ದೇವರ ಸೇರಿದಂತೆ ತಹಶೀಲ್ ಇಲಾಖೆಯ ಸರ್ವ ಸಿಬ್ಬಂದಿ ವರ್ಗದವರು ಇದ್ದರು.



ಹೇಮರೆಡ್ಡಿ ಮಲ್ಲಮ್ಮರ ಜೀವನಾದರ್ಶ ಅನುಸರಿಸಿ: ಬಸವರಾಜ್

ಕುಕನೂರು: ಹೇಮರೆಡ್ಡಿ ಮಲ್ಲಮ್ಮನ ವರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರೂ ಅನುಸರಿಸಬೇಕು ಎಂದು ಕವಿ ಬಸವರಾಜ್ ಬಿನ್ನಾಳ ಹೇಳಿದರು.

ತಾಲೂಕಿನ ಮಂಡಲಗಿರಿ ಗ್ರಾಮದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಜಯಂತಿಯ ನಿಮಿತ್ತ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರ ಮೆರವಣಿಗೆ ಕಾರ್ಯಕ್ರಮ ಭಾನುವಾರ ಜರುಗಿತು. ನಂತರ ಮೆರವಣಿಗೆಯನ್ನು ಉದ್ದೇಶಿಸಿ ಮಾತನಾಡಿದವರು, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ ವರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರೂ ಅನುಸರಿಸಬೇಕು, ಮಲ್ಲಮ್ಮನವರ ಪವಾಡ ಶಕ್ತಿ ಸಾಕಷ್ಟು ಪ್ರಮಾಣದಲ್ಲಿ ನಡೆದಿವೆ. ಒಬ್ಬ ಯೋಗಿಯನ್ನಾಗಿಸಿದವರು ಹೇಮರೆಡ್ಡಿ ಮಲ್ಲಮ್ಮ ಅವರಾಗಿದ್ದಾರೆ ಎಂದು ಹೇಳಿದರು. ನಂತರ ವಿಶ್ವನಾಥ್ ಹೊರಪೇಟೆ ಜಯಂತಿಯ ಕುರಿತು ವಿಷಯ ಹಂಚಿಕೊಂಡವರು ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರು ಭಕ್ತಿ ಸಾತ್ವಿಕ ಶಕ್ತಿಯಿಂದ ಇಡೀ ಮನುಕುಲದ ಒಳಿತಿಗಾಗಿ ಸದಾ ಪ್ರಾರ್ಥಿಸಿದ ಮಹಾನ್ ತಾಯಿ ಆಗಿದ್ದಾರೆ. ಅಂತವರ ಆದರ್ಶ ಚಿಂತನೆಗಳು ಇಡೀ ಮನುಕುಲಕ್ಕೆ ಮಾದರಿ ಮಂಡಲಗಿರಿಯಲ್ಲಿ ಯುವಕರು, ಊರಿನ ಜನತೆ ಒಂದು ಗೂಡಿ ಜಯಂತ್ಯುತ್ಸವ ಆಚರಿಸಿ ತಾಯಿಯ ಮಹಿಮೆಯನ್ನು ಕೊಂಡಾಡಲಾಗುತ್ತದೆ ಎಂದು ತಿಳಿಸಿದರು. ಹೇಮರೆಡ್ಡಿ ಮಲ್ಲಮ್ಮ



ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಂಕರಗೌಡ ತೋಟಗಂಟಿ, ಪ್ರಕಾಶಗೌಡ್ ಹೊರಪೇಟೆ, ಶಿವರೆಡ್ಡಿ ಮಾದಿನೂರ, ಸುರೇಶ್ ಮಾದಿನೂರ, ಕಳಕಪ್ಪ ಬಿನ್ನಳ, ಚೈತನ್ಯ ಬಿಸರೆಡ್ಡಿ, ಬಸವರಾಜ್ ಹಲ್ಯಾಳ, ಅಂದಪ್ಪ, ಮಾದಿನೂರ ಗ್ರಾಮದ ಹಿರಿಯರಾದ ಶರಣಬಸವಬಗೌಡ ಹೊರಪೇಟಿ, ಹಂಚ್ಯಾಳಪ್ಪ ತಳವಾರ್, ಹನುಮಂತಪ್ಪ ಉಪ್ಪಾರ, ಹನುಮಂತಗೌಡ ನಾಗನಗೌಡ, ಡಾ.ಜಂಬಣ್ಣ ಅಂಗಡಿ, ಅಂದಪ್ಪ ಮಾದಿನೂರು, ಮಲಯ್ಯ ಗದಗಿನ್, ವೀರನಗೌಡ ತೋಟಗಟ್ಟಿ, ಸಿದ್ದಪ್ಪ ಗಿಡ್ಡರ್, ಮಹಮದ್ ರಫಿ, ಶ್ರೀಧರ್ ಮಾಲಿಗೌಡ್ರು, ವೆಂಕಟೇಶ್ ಇಳಿಗೇರ್ ಇದ್ದರು.

ಸ್ತ್ರೀಕುಲಕ್ಕೆ ಮಲ್ಲಮ್ಮನ ಕೊಡುಗೆ ಅಪಾರ: ಶಾಸಕ ಪಾಟೀಲ

ಕುಷ್ಟಗಿ: ಸ್ತ್ರೀಯರ ಕುಲಕ್ಕೆ ಹೇಮರಡ್ಡಿ ಮಲ್ಲಮ್ಮ ನೀಡಿದ ಕೊಡುಗೆ ಇಂದಿಗೂ ಆದರ್ಶವಾಗಿದೆ ಎಂದು ವಿಪ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು. ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಆಯೋಜಿಸಿದ್ದ ತಾಲೂಕಾಡಳಿತ ವತಿಯಿಂದ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮನವರ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಸೋಮವಾರ ಮಾತನಾಡಿದರು. ಮನುಕುಲಕ್ಕೆ ಶಿವಶರಣೆ ಮಲ್ಲಮ್ಮರ ಮೌಲ್ಯಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕಿದೆ. ನಾಡಿನಲ್ಲಿ ಆದರ್ಶ ಮಹಿಳೆಯಾಗಿ ಹೊರ ಹೊಮ್ಮಿದ್ದು, ಭಕ್ತಿಗೆ ಹೆಸರಾಗಿದ್ದಾರೆ. ಮಲ್ಲಮ್ಮರ ಜೀವನ ಚರಿತ್ರೆಯಲ್ಲಿ ಉಳಿದಿದೆ ಎಂದರು. ಕಾಂಗ್ರೆಸ್ ಧುರೀಣ ದೊಡ್ಡಬಸವನಗೌಡ ಪಾಟೀಲ ಮಾತನಾಡಿ, ಹೇಮರಡ್ಡಿ ಮಲ್ಲಮ್ಮ ನವರು ಶತಮಾನದಲ್ಲಿ ಮಾದರಿ ಮಹಿಳೆಯಾಗಿದ್ದು, ನಾಡಿಗೆ ಅಪಾರವಾದ ಕೊಡುಗೆ ನೀಡಿದ್ದಾರೆ. ಸಂಸಾರದ ಜಂಜಾಟದ ನಡುವೆ ಭಕ್ತಿಯ ಅಧ್ಯಾತ್ಮಿಕ ಚಿಂತನೆ ಮೂಲಕ ಹೊರ ಹೊಮ್ಮಿದ ಕೀರ್ತಿ ಮಲ್ಲಮ್ಮರಿಗೆ ಸಲ್ಲಿಸುತ್ತದೆ ಎಂದು ಹೇಳಿದರು.



ತಹಶೀಲ್ದಾರ್ ಅಶೋಕ್ ಶಿಗ್ಗಾವಿ ಮಾತನಾಡಿದರು. ಶಿಕ್ಷಕ ಶರಣಪ್ಪ ತಮ್ಮಿನಾಳ ಉಪನ್ಯಾಸ ನೀಡಿದರು. ರೆಡ್ಡಿ ಸಮಾಜದ ಮುಖಂಡರಾದ ಪಂಪಾಪತಿ ಗುಮಗೇರಾ, ರಾಮನಗೌಡ, ರೆಡ್ಡಿ ಸಮಾಜದ ಮಹಿಳಾ ಅಧ್ಯಕ್ಷೆ ಅಕ್ಕಮಹಾದೇವಿ ತಾವರಗೇರಾ, ನಿರ್ದೇಶಕಿ ದ್ರಾಕ್ಷಯಣಿ ರುದ್ರಗೌಡ, ಸೂರ್ಯಕಾಂತ ದೇಸಾಯಿ, ಶಂಕ್ರಪ್ಪ ಟೆಂಗುಂಟಿ, ಕಳಕಪ್ಪ ರಡ್ಡೇರ್, ಎಸ್.ಸಿ.ಪಾಟೀಲ, ಸೋಮನಗೌಡ, ಶಿವನಗುತ್ತಿ, ಗ್ರೇಡ್-2 ತಹಶೀಲ್ದಾರ್ ರಜನಿಕಾಂತ್ ಕೆಂಗೇರಿ, ಸಿಬ್ಬಂದಿ ಸುಂದರಾಜ್ ವಜ್ರಬಂಡಿ, ಚಂದ್ರು ಪೂಜಾರ್ ಇದ್ದರು.

ಅಕ್ರಮ ಗೋಸಾಗಾಟ ತಡೆಗೆ ಕಠಿಣ ಕ್ರಮ ಕೈಗೊಳ್ಳಿ

ಕಲಬುರಗಿ: ಮುಂಬರುವ ಮೇ 28ಕ್ಕೆ ಬಕ್ರೀದ್ ಹಿನ್ನೆಲೆ ಸಾವಿರಾರು ಗೋವುಗಳನ್ನು ಅಕ್ರಮವಾಗಿ ಸಾಗಾಟ ಮಾಡಿ ಕುರ್ಬಾನಿ ಹೆಸರಿನಲ್ಲಿ ಹತ್ಯೆ ಮಾಡಲಾಗುತ್ತಿದೆ ಎಂದು ಆರೋಪಿಸಿ ಅದನ್ನು ಖಂಡಿಸಿ ಶ್ರೀರಾಮ್ ಸೇನೆ ಜಿಲ್ಲಾ ಘಟಕದ ವತಿಯಿಂದ ಸೋಮವಾರ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಡಿಸಿಗೆ ಮನವಿ ಸಲ್ಲಿಸಿ ಮಾತನಾಡಿದ ಶ್ರೀರಾಮ ಸೇನೆಯ ಜಿಲ್ಲಾಧ್ಯಕ್ಷ ಲಕ್ಷ್ಮೀಕಾಂತ ಸ್ವಾದಿ, ರಾಜ್ಯದಲ್ಲಿ ಗೋಹತ್ಯೆ ಕಾನೂನು ಜಾರಿಗೆ ಇದ್ದರು. ಕೂಡ ಕಲಬುರ್ಗಿಯಲ್ಲಿ ಅಕ್ರಮವಾಗಿ ಗೋಹತ್ಯೆ ಹಾಗೂ ಗೋಮಾಂಸ ಮಾರಾಟ ಎಗ್ಗಿಲ್ಲದೆ ನಡೆಯುತ್ತಿದೆ ಇದನ್ನು ನಾವು ಉಗ್ರವಾಗಿ ಖಂಡಿಸುತ್ತೇವೆ. ಗೋರಕ್ಷಣೆ ಹಾಗೂ ಅಕ್ರಮ ಗೋಸಾಗಾಟ ತಡೆಗೆ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಹಿಂದುಗಳು ಪೂಜಿಸುವ ಗೋವಿನ ಹತ್ಯೆ ಆಗಬಾರದು ಹಾಗೂ ಹಿಂದುಗಳ ಭಾವನೆಗಳಿಗೆ ದಕ್ಕೆ ತರುವ ಘಟನೆಗಳು ನಡೆಯಬಾರದು ಎಂದರೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಆಳಂದ ರಿಂಗ್ ರಸ್ತೆ, ಹುಮನಾಬಾದ್ ರಿಂಗ್ ರಸ್ತೆ, ಸೇಡಂ ರಿಂಗ್ ರಸ್ತೆ, ಶಾಬಾದ ರಿಂಗ್ ರಸ್ತೆ, ಜೇವರ್ಗಿ ರಿಂಗ್ ರಸ್ತೆಗಳಲ್ಲಿ 24 ಗಂಟೆ ಚೆಕ್‌ಪೋಸ್ಟ್ ನಿರ್ಮಾಣ ಮಾಡಿ ಅಕ್ರಮ ಗೋಸಾಗಾಟ ಹಾಗೂ ಗೋಹತ್ಯೆ ತಡೆಯಬೇಕು ಎಂದು ಹೇಳಿದರು.

ಬಕ್ರಿದ್ ಸಮಯದಲ್ಲಿ ಇತರೆ ಬೇರೆ ರಾಜ್ಯಗಳಿಂದ ಬರುವ ಅಕ್ರಮ ಗೋವುಗಳ ಹಾಗೂ ಜಾನುವಾರುಗಳ ರಕ್ಷಣೆ ಮಾಡಿ ಅಕ್ರಮವಾಗಿ ಸಾಗಿಸುವ ವಾಹನ ಮತ್ತು ವಾಹನ ಮಾಲೀಕರ ಮೇಲೆ ಕಾನೂನು ಪ್ರಕಾರ ಕಠಿಣ ಕ್ರಮಕೈಗೊಳ್ಳಬೇಕು ಎಂದರು.

ವಿರೇಶ್ ಗಣಮುಖಿ, ವಿರೇಶ್ ಕೊರಳ್ಳಿ, ರಾಮು ಸೇವಕ ಶಿವು, ಚನ್ನವೀರ ಸಿಂಗಿ,ಉದಯ ಸುಲ್ತಾನಪುರ್, ವಿರೇಶ್ ಬಿಂಗೆ, ಪ್ರಶಾಂತ ಶಿರೂರ್, ಶರಣು ಶಿರೂರ್, ಸಾಯಿನಾಥ್ ಸಾಸಟ್ಟಿ, ಗಣೇಶ್ ರಾಠೋಡ ಉಪಸ್ಥಿತರಿದ್ದರು.



> **ನಗರದಲ್ಲಿ ಅಕ್ರಮವಾಗಿ ಕಸಾಯಿ ಖಾನೆಗಳು ನಡೆಸುತ್ತಿದ್ದರೂ ಅಂತವುಗಳ ವಿರುದ್ಧ ಕ್ರಮಕೈಗೊಳ್ಳಬೇಕು. ಒಂದು ವೇಳೆ ಎಲ್ಲಿಯಾದರೂ ಅಕ್ರಮ ಗೋಸಾಗಾಟ ಗೋ ಹತ್ಯೆ ಮಾಡುವುದು ಕಂಡು ಬಂದಲ್ಲಿ ಶ್ರೀರಾಮ ಸೇನೆ ಸ್ಥಳಗಳಲ್ಲಿ ಖುದ್ದು ಹುಡುಕಿ ಪೋಲಿಸ್ ಇಲಾಖೆಗೆ ದೂರು ಸಲ್ಲಿಸುತ್ತೇವೆ.**
>
> ■ ಲಕ್ಷ್ಮೀಕಾಂತ ಸ್ವಾದಿ, ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ

ಹೇಮರೆಡ್ಡಿ ಮಲ್ಲಮ್ಮ ಜಯಂತಿ ಅದ್ದೂರಿ ಆಚರಣೆ

ಸಿಂಧನೂರು: ನಗರದ ತಹಶೀಲ್ದಾರ್ ಕಚೇರಿಯಲ್ಲಿ ತಾಲೂಕು ಆಡಳಿತದ ವತಿಯಿಂದ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ನವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪುಷ್ಪಾರ್ಚನೆ ಮಾಡುವುದರ ಮೂಲಕ ಹೇಮರೆಡ್ಡಿ ಮಲ್ಲಮ್ಮನವರ 604 ನೇಯ ಜಯಂತಿಯನ್ನು ಅತ್ಯಂತ ವಿಜೃಂಭಣೆಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.

ನಂತರ ಜಯಂತಿ ಆಚರಣೆಯ ಕುರಿತು ಶಾಸಕ ಹಂಪನಗೌಡ ಬಾದರ್ಲಿ ಮಾತನಾಡಿ, ತಂತ್ರಜ್ಞಾನ ಮತ್ತು ಆಧುನಿಕತೆಯ ನಡುವೆ ಮಾನವೀಯ ಮೌಲ್ಯಗಳು ಕಡಿಮೆಯಾಗುತ್ತಿರುವ ಈ ಕಾಲದಲ್ಲಿ ಹೇಮರೆಡ್ಡಿ ಮಲ್ಲಮ್ಮನ ಆದರ್ಶಗಳನ್ನು ನಮ್ಮ ನಿಜ ಜೀವನದಲ್ಲಿ ಅಳವಡಿಸಿಕೊಂಡು ಈ ಸಮಾಜಕ್ಕೆ ಮಾದರಿಯಾಗಬೇಕು ಎಂದು ಹೇಳಿದರು.

ಪ್ರತಿಯೊಬ್ಬ ಮಹಿಳೆಯರು ಕುಟುಂಬದ ಬೆನ್ನೆಲುಬು ಆಗಬಹುದು ಎಂಬುದನ್ನು ತಮ್ಮ ಆದರ್ಶ ಜೀವನದಿಂದ ಸಾಬೀತುಪಡಿಸಿದ್ದವರು ಹಾಗೂ ಸಂಕಷ್ಟಗಳ ನಡುವೆಯೂ ಧೈರ್ಯ ಕಳೆದುಕೊಳ್ಳದೆ ಬದುಕಿದ ಮಲ್ಲಮ್ಮನವರು ಹಿಂದಿನ ಮಹಿಳೆಯರಿಗೆ ಪ್ರೇರಣೆಯಾಗಿದ್ದಾರೆಂದು ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದರು.

ಕೆಓಎಫ್ ಅಧ್ಯಕ್ಷ ಹಾಗೂ ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಪಂಪನಗೌಡ ಬಾದರ್ಲಿ ಅವರು ಸಹ ಹೇಮರೆಡ್ಡಿ ಮಲ್ಲಮ್ಮ ನವರ ಬದುಕಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿಸಿದರು.

ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಕಾರ್ಯಕರ್ತರು ಹಾಗೂ ಸಂಘ, ಸಂಸ್ಥೆಗಳ ಮುಖಂಡರು, ಸಮಾಜದ ಮುಖಂಡರು ಸೇರಿದಂತೆ ತಾಲೂಕು ಆಡಳಿತದ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಅಂಗನವಾಡಿ ಆರಂಭ: ಮಕ್ಕಳಿಗೆ ಸ್ವಾಗತ

ಕುಷ್ಟಗಿ: ತಾಲೂಕಿನ ವಿವಿಧ ಗ್ರಾಮಗಳಲ್ಲಿ ಅಂಗನವಾಡಿ ಕೇಂದ್ರಗಳು ಬೇಸಿಗೆ ರಜಾ ಹಿನ್ನೆಲೆ ಸೋಮವಾರ ಪುನಾರಂಭಗೊಂಡ ಹಿನ್ನೆಲೆ ಮಕ್ಕಳಿಗೆ ಗುಲಾಬಿ ನೀಡಿ ಸ್ವಾಗತಿಸಿಕೊಂಡರು.

ಮುಂಜಾನೆ ಅಂಗನವಾಡಿ ಕೇಂದ್ರಗಳು ನಿಗದಿತ ಸಮಯಕ್ಕೆ ತೆರೆಯಲಾಗಿದ್ದು, ಕೇಂದ್ರಗಳಿಗೆ ಅಲಂಕಾರಗೊಳಿಸಿ ರಂಗೋಲಿ ಚಿತ್ತಾರ್ ಬಿಡಿಸಿ ಸ್ವಾಗತಿಸುವ ಮೂಲಕ ಮಕ್ಕಳಿಗೆ ಹುಮ್ಮಸು ತೋರಲಾಯಿತು. ನಂತರ ಮುದ್ದು ಮಕ್ಕಳಿಗೆ ಸಿಹಿ ವಿತರಿಸಲಾಯಿತು. ಸಡಗರದಿಂದ ಸಂಭ್ರಮಿಸಲಾಯಿತು. ತಾಲೂಕಿನ ಕಂದಕೂರು, ನಾಗರಾಳ, ತಾವರಗೇರಾ, ವಲಯ ಮೆಣೇದಾಳ, ಮುದೇನೂರು, ನಿಲೋಗಲ್, ತುಗ್ಗಲಡೋಣಿ,ಕ್ಯಾದಗುಪ್ಪಿ, ನೆರಬೆಂಚಿ, ಮುದ್ದಲಗುಂದಿ, ಕಿಲ್ಲಾರಹಟ್ಟಿ, ಹಿರೇಮನ್ನಾಪೂರು, ಗುಮಗೇರಾ, ಶಿರಗುಂಪಿ, ಗಂಗನಾಳ, ಹಂಚಿನಾಳ, ಸೇರಿದಂತೆ ಇನ್ನಿತರ ತಾಲೂಕಿನ ಎಲ್ಲ ಗ್ರಾಮೀಣ ಭಾಗದ ಅಂಗನವಾಡಿ ಕೇಂದ್ರಗಳು ತೆರೆದು ಕಾರ್ಯನಿರ್ವಹಿಸವುದು ಕಂಡುಬಂದಿತು. ಈ ವೇಳೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು,ಸಹಾಯಕಿಯರು ಹಾಜರಿದ್ದರು.



ಕಿರುಸುದ್ದಿ

ಹುಲಿಗೆಮ್ಮ ದೇವಿ ಜಾತ್ರೆ ಅದ್ಧೂರಿ

ಗಾದಿಗನೂರು: ಶ್ರೀಹುಲಿಗೆಮ್ಮ ದೇವಿ ಜಾತ್ರೆ ಅದ್ದೂರಿಯಾಗಿ ಜರುಗಿತು. ಅಸಂಖ್ಯಾ ಭಕ್ತರನ್ನು ಹೊಂದಿರುವ ಶ್ರೀಹುಲಿಗೆಮ್ಮ ದೇವಿಯು ಗಾದಿಗನೂರು ಗ್ರಾಮದಲ್ಲಿ ಪ್ರಪ್ರಥಮವಾಗಿ ಜಾತ್ರಾ ಮಹೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಿಂದ ಭಕ್ತಾದಿಗಳು ಸೇರಿಕೊಂಡು ಶ್ರೀಹುಲಿಗೆಮ್ಮ ದೇವಿಯ ರಥೋತ್ಸವ ಬಹಳ ವಿಜೃಂಭಣೆಯಿಂದ ನೆರವೇರಿಸಿದರು. ರಥೋತ್ಸವದ ಸಂದರ್ಭದಲ್ಲಿ ಡೊಳ್ಳು ತಾಸಿ, ಬಾರಿಸುವುದರ ಮೂಲಕ ಜಾತ್ರೆಯ ಮೆರಗನ್ನು ಹೆಚ್ಚಿಸಿದರು. ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿ ದೇವಿಗೆ ವಿಶೇಷವಾಗಿ ಅಲಂಕಾರ ನಂತರ ಹೋಮ ಹವನ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಊರಿನ ಹೆಣ್ಣು ಮಕ್ಕಳಿಗೆ ಹುಡಿ ತುಂಬಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಜಾತ್ರೆಯ ಸಂದರ್ಭದಲ್ಲಿ ಯಾವುದೇ ಐತಕರ ಘಟನೆಯನ್ನು ನಡೆಯದಂತೆ ಮುಂಜಾಗ್ರತ ಕ್ರಮವಾಗಿ ಹೊಸಪೇಟೆ ಗ್ರಾಮಂತರ ಪೊಲೀಸ್ ಠಾಣೆ ಸಿಬ್ಬಂದಿಯಿಂದ ಭದ್ರತೆ ಒದಗಿಸಲಾಗಿತ್ತು.



ಮೇ 15ರಂದು 'ಪಿಂಚಣಿ ಅದಾಲತ್'

ಬಳ್ಳಾರಿ: ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳ ಪಿಂಚಣಿದಾರರ ಮತ್ತು ಜಿಪಿಎಫ್ ಚಂದಾದಾರರ ಕುಂದುಕೊರತೆಗಳನ್ನು ಆಲಿಸಿ, ಅವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಮೇ 15ರಂದು ವಿಶೇಷ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಖಜಾನೆ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.ಮೇ 15ರಂದು ಜಿಲ್ಲಾಡಳಿತ ಕಚೇರಿಯ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಬೆಳಿಗ್ಗೆ 11ಕ್ಕೆ ಪಿಂಚಣಿ ಅದಾಲತ್ ಹಾಗೂ ಮಧ್ಯಾಹ್ನ 02.30ಕ್ಕೆ ಜಿಪಿಎಫ್ ಅದಾಲತ್ ಒಳಗೊಂಡು ಎರಡು ಪ್ರತ್ಯೇಕ ಅವಧಿಗಳಲ್ಲಿ ಈ ಅದಾಲತ್ ಆಯೋಜಿಸಲಾಗಿದೆ.

ಅರ್ಜಿ ಆಹ್ವಾನ

ಸಿರುಗುಪ್ಪ: ತಾಲೂಕಿನ ಗಂಗಾಮತ ನೌಕರರ ಸೇವಾ ಸಂಘದಿಂದ ನೀಡುವ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2025-26 ನೇ ಸಾಲಿನ ಎಸ್ ಎಸ್‌ಎಲ್‌ಸಿ ಮತ್ತು ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ಗಂಗಾಮತ ಸಮುದಾಯದ ವಿದ್ಯಾರ್ಥಿಗಳಿಗೆ ತಾಲೂಕು ಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಮೇ 31ರಂದು ಆಯೋಜಿಸಲಾಗಿದೆ. ವಿದ್ಯಾರ್ಥಿಗಳು ಅಂಕಪಟ್ಟಿ, ಆಧಾರ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಭಾವಚಿತ್ರವನ್ನು ಅರ್ಜಿಯೊಂದಿಗೆ ಮೇ.17ರ ಒಳಗೆ ಸಂಘದ ಸದಸ್ಯರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಸಂಘದ ಸದಸ್ಯರಾದ ಆರ್.ಷಣ್ಮುಖಪ್ಪ-9980604544 ಅವರನ್ನು ಸಂಪರ್ಕಿಸಬಹುದು ಎಂದು ಗಂಗಾಮತ ನೌಕರರ ಸೇವಾ ಸಂಘದ ತಾಲೂಕು ಅಧ್ಯಕ್ಷ ಮಹಾದೇವಪ್ಪ ಅವರು ತಿಳಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಕೊಟ್ಟೂರು: ರಾಜ್ಯ ಸರ್ಕಾರಿ ನೌಕರರ ಕೇಂದ್ರ ಸಂಘ, ಬೆಂಗಳೂರು ಇವರು ಪ್ರಸಕ್ತ ಸಾಲಿನ ಎಸ್‌ಎಸ್ ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕೂ ಹೆಚ್ಚಿನ ಅಂಕದೊಂದಿಗೆ ಉತ್ತೀರ್ಣರಾದ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವ ಕುರಿತು ಆನ್‌ಲೈನ್ ಅಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯ ತಂದೆ ಅಥವಾ ತಾಯಿ ರಾಜ್ಯ ಸರಕಾರದ ಯಾವುದಾದರೊಂದು ಇಲಾಖೆಯಲ್ಲಿ ಖಾಯಂ ನೌಕರರಾಗಿರಬೇಕು (ಕೆ.ಜಿ.ಐ.ಡಿ ಸಂಖ್ಯೆ ಹೊಂದಿರಬೇಕು). ನಿಗಮ, ಮಂಡಳಿ, ಪ್ರಾಧಿಕಾರ, ಸ್ಥಳೀಯ ಸಂಸ್ಥೆ, ವಿಶ್ವವಿದ್ಯಾಲಯ, ಖಾಸಗಿ ಹಾಗೂ ಅನುದಾನಿತ ವಿದ್ಯಾಸಂಸ್ಥೆಗಳಲ್ಲಿ ನೇಮಕಗೊಂಡ ನೌಕರರ ಮಕ್ಕಳು ಅರ್ಜಿ ಸಲ್ಲಿಸುವಂತಿಲ್ಲ. ವಿದ್ಯಾರ್ಥಿ ಪ್ರಥಮ ಪ್ರಯತ್ನದಲ್ಲೇ ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿ.ಯು.ಸಿ. ಪರಿಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಮೇ-31 ರೊಳಗೆ http://powermedia.info ಆನ್‌ಲೈನ್ ಲಿಂಕ್ ಮುಖಾಂತರ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕು ಶಾಖೆಯ ಅಧ್ಯಕ್ಷರಾದ ಯೋಗೀಶ್ವರ ದಿನ್ನೆ(78999 61616) ಅವರನ್ನು ಸಂಪರ್ಕಿಸಬಹುದು ಎಂದು ಈ ಮೂಲಕ ಕೊಟ್ಟೂರು ತಾಲೂಕಿನ ನೌಕರ ಭಾಂಧವರಿಗೆ ಮಾಹಿತಿಯನ್ನು ನೀಡುತ್ತಾ, ಕೋರಿರುತ್ತಾರೆ.



ಬಳ್ಳಾರಿ: ನಗರದ ಬಸವ ಭವನದಲ್ಲಿ ಭಾನುವಾರ ಸಂಜೆ ವೀರಶೈವ ಲಿಂಗಾಯತ ರೆಡ್ಡಿ ಸಮಾಜದಿಂದ ಹಮ್ಮಿಕೊಂಡಿದ್ದ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ 604 ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ವಿವಿಧ ಗಣ್ಯರನ್ನು ಸನ್ಮಾನಿಸಲಾಯಿತು.

ರಾಯಚೂರಿನಲ್ಲಿ ಮೇ 24ರಂದು ಸಮಾವೇಶ

ಬಳ್ಳಾರಿ: ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಅನುಕೂಲವಾಗಲು ಕೇಂದ್ರ ಸರ್ಕಾರದಿಂದ 371(ಜೆ) ಜಾರಿಯಾಗಿ 14 ವರ್ಷಗಳೇ ಕಳೆದರು, ಇಲ್ಲಿವರೆಗೂ ಈ ಭಾಗದಲ್ಲಿ ಆರೋಗ್ಯ, ಶಿಕ್ಷಣ, ನಿರುದ್ಯೋಗ, ಸಾಮಾಜಿಕ ಸಂಪನ್ಮೂಲದಲ್ಲಿ ಯಾವುದೇ ಪ್ರಗತಿ ಕಂಡಿಲ್ಲ, ಈ ಭಾಗದ ಎಲ್ಲ ಜಿಲ್ಲೆಗಳು ಹಿಂದುಳಿದಿವೆ ಎಂದು ಕಲ್ಯಾಣ ಕರ್ನಾಟಕ ಭಾಗದ ಹಿರಿಯ ಹೋರಾಟಗಾರ ರಾಘವೇಂದ್ರ ಕುಷ್ಟಗಿ ಅಸಮಾಧಾನ ವ್ಯಕ್ತಪಡಿಸಿದರು.ನಗರದಲ್ಲಿ ಇತ್ತೀಚಿಗೆ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ವಿದ್ಯಾವಂತ ಯುವ ಸಮುದಾಯಕ್ಕೆ ಉದ್ಯೋಗ, ಶಿಕ್ಷಣ ಕ್ಷೇತ್ರಗಳಿಗೆ ವಿಶೇಷ ಪ್ರಾತಿನಿಧ್ಯ ನೀಡಬೇಕು ಎಂದು ಆಗ್ರಹಿಸಿ ನಿರಂತರ ಹೋರಾಟ ಮಾಡುವ ಮೂಲಕ ಸರ್ಕಾರದ ಗಮನಸೆಳೆದ ಬಳಿಕ 371ಜೆ ವಿಶೇಷ ಸ್ಥಾನ ಮಾನವನ್ನು ಕೇಂದ್ರ ಸರ್ಕಾರ ಕಲ್ಪಿಸಿತು. ಆದರೆ, ಇಲ್ಲಿವರೆಗೂ ಅದು ದಾಖಲೆಗೆ ಮಾತ್ರ ಸೀಮಿತವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಹಿರಿಯ ಹೋರಾಟಗಾರ ಸಿರಿಗೆರೆ ಪನ್ನರಾಜ ಮಾತನಾಡಿ, ಹೆಸರಿಗೆ ಮಾತ್ರ ಕಲ್ಯಾಣ ಕರ್ನಾಟಕ, ವಾಸ್ತವವಾಗಿ ಇಲ್ಲಿ ಕಲ್ಯಾಣವೇ ಆಗಿಲ್ಲ. ಅಧಿಕಾರಿಗಳಿಗೆ ಕಾಳಜಿ ಇಲ್ಲ, ಇದ್ದರೂ ಸರ್ಕಾರದ ಯೋಜನೆ ಅನುಷ್ಠಾನಕ್ಕೆ ತರಲು ವಿಶೇಷ ಕಾಳಜಿ ವಹಿಸುತ್ತಿಲ್ಲ. ಕಲ್ಯಾಣ ಕರ್ನಾಟಕ ಭಾಗಕ್ಕೆ 371(ಜೆ) ಸೇರಿದಂತೆ ಹಲವು ವಿಷಯಗಳ ಕುರಿತು ಹೈದ್ರಾಬಾದ ಕರ್ನಾಟಕ ಜನಾಂದೋಲನ ಕೇಂದ್ರದಿಂದ ರಾಯಚೂರಿನ ಕೊಠಾರಿ ಹಾಲ್‌ನಲ್ಲಿ ಮೇ 24ರಂದು ಸಮಾವೇಶ, ದುಂಡು ಮೇಜಿನ ಸಭೆ ಆಯೋಜಿಸಲಾಗಿದೆ.



ಹೂವಿನಹಡಗಲಿ: ಹೊಳಗುಂದಿ, ಹಡಗಲಿ, ಬೀರಬ್ಬಿ, ರಾಜವಾಳ ರೈತರ ಎತ್ತುಗಳು ಕಳೆದ 15-20 ದಿನಗಳಿಂದ ತಾಲೂಕಿನಲ್ಲಿ ಕಳುವು ನಡೆದಿರುತ್ತದೆ. ಇದನ್ನು ಗಮನಿಸಿದ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ವೃತ್ತ ನಿರೀಕ್ಷ ಮಲ್ಲಪ್ಪ ಹೂಗಾರಗೆ ಶೀಘ್ರ ರೈತರಿಗೆ ಎತ್ತುಗಳನ್ನು ದೊರಕಿಸಿಕೊಡುವಂತೆ ಮನವಿ ಸಲ್ಲಿಸಲಾಯಿತು. ಸಿದ್ದಪ್ಪ ಹೊಸಮನಿ, ರೈತ ಕೆ.ಎಂ.ಶಿವಕುಮಾರ, ಕೆ.ಮಂಜುನಾಥ್, ಗಿರೀಶ್ ಡಿ., ಶಿವರಾಜ ಎಂ.ಹೊಳಗುಂದಿ, ಮೆಹಬೂಸಾಬ್, ಅಂಚಿ ದಡರಪ್ಪ, ಸೋವೇನಹಳ್ಳಿ ಜಯಪ್ಪ, ಕೆ.ಹುಲುಗಪ್ಪ ಇತರರಿದ್ದರು.

ಗುರುವಂದನಾ ಕಾರ್ಯಕ್ರಮ, ಸ್ನೇಹ ಸಮ್ಮಿಲನ | ಶ್ರೀಗಳು ಸಲಹೆ

ಮಕ್ಕಳಿಗೆ ಮಾನವೀಯ ಮೌಲ್ಯ ಕಲಿಸಿ

ಹಗರಿಬೊಮ್ಮನಹಳ್ಳಿ: ಮಕ್ಕಳನ್ನು ಕೇವಲ ಬುದ್ಧಿವಂತರನ್ನಾಗಿ ಮಾಡುವುದರ ಜೊತೆಗೆ ಹೃದಯವಂತರನ್ನಾಗಿ ಮಾಡಿದರೆ ಶಿಕ್ಷಣ ಕಲಿತದ್ದಕ್ಕೂ ಸಾರ್ಥಕತೆ ದೊರೆಯುತ್ತದೆ ಎಂದು ಶ್ರೀಮನ್ನಿರಂಜನ ಪ್ರಣವ ಸ್ವರೂಪಿ ಗವಿಮಠ ಕಡಲಾಬಾಳು ಶಾಖಾ ಮಠದ ಮರಿ ಶಾಂತವೀರ ಮಹಾಸ್ವಾಮೀಜಿ ಹೇಳಿದರು.

ಪಟ್ಟಣದ ರೇಣಿಕಾ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಭಾನುವಾರ 1999-2002ನೇಸಾಲಿನಹಳೆಯವಿದ್ಯಾರ್ಥಿಗಳಿಂದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿ ಅವರು ಆಶೀರ್ವಚನ ನೀಡಿ ಮಾತನಾಡಿದರು.

ರಸ್ತೆಯಲ್ಲಿ ಸಂಚರಿಸುವಾಗ ದಾರಿಯಲ್ಲಿ ಬಿದ್ದ ಮುಳ್ಳು ಚುಚ್ಚದಂತೆ ಪಕ್ಕಕ್ಕೆ ಸರಿದು ಸಾಗುತ್ತೇವೆ ಇದು ಸಾಮಾನ್ಯ. ಆದರೆ ಆ ಮುಳ್ಳು ನನಗೂ ಸೇರಿದಂತೆ ಮತ್ತೊಬ್ಬರಿಗೂ ಚುಚ್ಚಬಾರದು ಎಂಬ ಮನೋಭಾವನೆಯನ್ನು ಹೊಂದಿ ಅದನ್ನೆ ತೆಗೆದು ಬೆರೆಡೆ ಹಾಕುವ ಮನೋಭಾವನೆ ನಮ್ಮಲ್ಲಿ ಬರಬೇಕು, ಅದು ಹೃದಯವಂತಿಕೆ ಕೆಲಸವಾಗಿದೆ ಎಂದರು.

ಶಿಕ್ಷಕಪದ್ಮಣ್ಣ ಮಾತನಾಡಿ, ಕಲಿಕೆನಿರಂತರವಾಗಿದೆ. ಇಂದು ಕಳೆದ 25 ವರ್ಷಗಳ ಹಿಂದೆ ನಮ್ಮಿಂದ ಶಿಕ್ಷಣ ಪಡೆದು ಇಂದು ಒಂದೆಡೆ ಸೇರಿಸುವುದು ನಿಜಕ್ಕೂ ಸಹಾಸದ ಕೆಲಸವಾಗಿದೆ. ಕಳೆದ 25 ವರ್ಷಗಳಲ್ಲಿ ವಿಒದ್ಯಾರ್ಥಿಗಳು ಸೇರಿದಂತೆ ಶಿಕ್ಷಕರು ತಮ್ಮ ಜೀವನದಲ್ಲಿ ಅನೇಕ ತಿರುವುಗಳನ್ನು ಪಡೆದು ಬೇರೆಡೆ ಹೋಗಿರುತ್ತೇವೆ. ಅವರನ್ನೆಲ್ಲ ಒಂದೆಡೆ ಸೇರಿಸಿ ಶಿಕ್ಷಕರಿಗೆ ಗೌರ ಸನ್ಮಾನ ಹಾಗೂ ನಿಮ್ಮ ಸ್ನೇಹ ಸಮ್ಮಿಲನಕ್ಕೆ ನಾಂದಿ ಹರಡುವ ಕೆಲಸ ಮಡಿರುವುದು ನಿಜಕ್ಕೂ ಗೌರಯುತವಾಗಿದೆ ಎಂದರು.



ರಹೆಮಾನ್ ಶಿಕ್ಷಕರು ಮಾತನಾಡಿ, ಕಳೆದ ಕೆಲ ವರ್ಷಗಳ ಹಿಂದೆ ಇದ್ದ ಗುರು ಶಿಷ್ಯರ ಸಂಭಂಧ ಪ್ರಸ್ತುತ ದಿನಗಳಲ್ಲಿ ಮಾಯವಾಗುತ್ತಿದೆ, ಗುರುಕುಲದಲ್ಲಿ ನೀಡುತ್ತಿದ್ದ ಶಿಕ್ಷಣ, ಗುರುಗಳಿಗೆ ದೊರಕುತ್ತಿದ್ದ ಗೌರವ ಸುಸಂಕೃತದಿಂದ ಕಲಿಸಲಾಗುತ್ತಿದ್ದು, ನಾವುಗಳು ಕಳೆದ 25 ವರ್ಷಗಳ ಹಿಂದೆ ಈ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ನೀಡಿದ ಶೈಕ್ಷಣಿಕ ಚಟುವಟಿಕೆಗಳು ನಮಗೆ ಮುಂದಿನ ಕಲಿಕೆಗೆ ದಾರಿಯಾಗಿದೆ , ಇಮದು ವಿದ್ಯೆ, ವಿನಯ,ಕಲಿಕೆಗೆ ಮನ್ನಣೆ ದೊರೆಯದ ಪರಿಸ್ಥಿತಿ ಎದುರಾಗಿದೆ ಎಂದು ಪ್ರಸ್ತುತ ಶಿಕ್ಷಣದಲ್ಲಿನ ಗುರುಶಿಷ್ಯರ ಬಗ್ಗೆ ಖೇದ ವ್ಯಕ್ತಪಡಿಸಿದರು.

ಶಿಕ್ಷಕ ಜಾತಪ್ಪ, ರೇಣುಕಾ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಮುಖ್ಯಸ್ಥ ಕೆ.ಎಂ.ಟಿ.ಸಿದ್ದೇಶ, ಶಿಕ್ಷಕ ಶಿವ ಪ್ರಕಾಶ, ಅಕ್ಕಿ ಪ್ರಕಾಶ, ಬಣಕಾರ, ಹರ್ಷವರ್ಧನ , ಶಂಭುಲಿಂಗಯ್ಯ, ಶಿವಮೂರ್ತಿ, ಶಂಕ್ರಪ್ಪ ಮಾತನಾಡಿದರು. ಬೆಟ್ಟಪ್ಪ, ಆಶೋಕ, ವಿದ್ಯಾರ್ಥಿಗಳಾದ ಹೆಚ್.ಎಂ.ರವಿ, ಚೇತನ,

> ಗುರು, ಶಿಷ್ಯರ ಸಂಭಂಧ ಅನೂನ್ಯವಾಗಿದೆ ಎನ್ನುವುದಕ್ಕೆ ಇಂತಹ ಗುರುವಂದನಾ ಕರ್ಯಕ್ರಮಗಳು ಜೀವ ತುಂಬಿವೆ. ವಿದ್ಯಾರ್ಥಿ ಜೀವನದಲ್ಲಿ ಹುಡುಗಾಟ ಸಾಮಾನ್ಯವಾಗಿದೆ. ನೀವುಗಳು ಈ ಶಾಲೆಯಲ್ಲಿ ಒದುತ್ತಿರುವಾಗ ಅನೇಕ ತುಂಟಾಟಗಳು ಇಂದು ನೆನೆದು ಕಳೆದ ಸಂತೋಷದ ದಿನಗಳು ಮರುಕಳಿಸಿದ್ದು ಕಾಣಬಹುದು.
>
> ■ ಎಚ್.ಎಂ.ಕೊಟ್ರಯ್ಯ, ನಿವೃತ್ತ ಮುಖ್ಯ ಶಿಕ್ಷಕ

ಹರೀಷ ರೆಡ್ಡಿ, ಗುಡದಯ್ಯ, ಲೋಕೇಶ, ಖಾಜಾ, ಕೊಟ್ರೇಶ, ಪಂಪಾಪತಿ, ಗಂಗಾಧರ, ಜಗದೀಶ ಗೌಡ, ಬೆಣ್ಣೆಗೌಡ್ರ ಆನಂದ, ರಾಜಾವಲಿ ಗಡ್ಡದ್, ಪ್ರಮೋದಿನಿ, ಹರಿಣಾಕ್ಷಿ, ಕುಸುಮಾ, ನಂದಿನಿ, ಸುಮಿತ್ರ, ವೀಣಾ, ಮಮತಾ, ಜಾನ್ಹವಿ ಸೇರಿದಂತೆ ಇನ್ನು ಮುಂತಾದವರು ಉಪಸ್ಥಿತರಿದ್ದರು. ಆಯೇಷಾ ಗಡ್ಡದ್, ಸನಾ ಫರ್ಹಿನ್ ಗಡ್ಡದ್ ಪ್ರಾರ್ಥಿಸಿದರು. ಅಶ್ವಿನಿ ನಿರೂಪಿಸಿದರು, ಸುಮಿತ್ರಾ ಸ್ವಾಗತಿಸಿದರು.

ಗರ್ಭಕಂಠ ಕ್ಯಾನ್ಸರ್ ತಡೆಗೆ ಲಸಿಕಾ ಅಭಿಯಾನ

ಬಳ್ಳಾರಿ: ಹೆಣ್ಣು ಮಕ್ಕಳ ಆರೋಗ್ಯದ ದೃಷ್ಟಿಯಿಂದ ಅತ್ಯಂತ ಮಾರಕವಾಗಿರುವ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಜಿಲ್ಲೆಯಾದ್ಯಂತ 14 ವರ್ಷದ ಹೆಣ್ಣು ಮಕ್ಕಳಿಗೆ ಉಚಿತವಾಗಿ ಹೆಚ್.ಪಿ.ವಿ (ಹ್ಯೂಮನ್ ಪ್ಯಾಪಿಲೋಮ ವೈರಸ್) ಲಸಿಕೆಯನ್ನು ನೀಡಲಾಗುತ್ತಿದೆ. ಪೋಷಕರು ಯಾವುದೇ ವದಂತಿಗಳಿಗೆ ಕಿವಿಗೊಡದೆ ತಮ್ಮ ಮಕ್ಕಳಿಗೆ ಈ ಸುರಕ್ಷಿತ ಲಸಿಕೆಯನ್ನು ಹಾಕಿಸಲು ಮುಂದಾಗಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಮನವಿ ಮಾಡಿದ್ದಾರೆ.



ವೈಯಕ್ತಿಕ ಶುಚಿತ್ವದ ಕೊರತೆ ಹಾಗೂ ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಹರಡುವ ಹೆಚ್.ಪಿ.ವಿ ಸೋಂಕು ಕಾಲಕ್ರಮೇಣ ಕ್ಯಾನ್ಸರ್ ಆಗಿ ಮಾರ್ಪಡುತ್ತದೆ. ಇದನ್ನು ತಡೆಯಲು 14 ವರ್ಷದ ಹರೆಯದಲ್ಲೇ ಲಸಿಕೆ ನೀಡುವುದು ಅತ್ಯಂತ ಪರಿಣಾಮಕಾರಿ ಕ್ರಮವಾಗಿದೆ. ಈ ಲಸಿಕೆಯನ್ನು ಪಡೆಯುವುದರಿಂದ ಗರ್ಭಕಂಠದ ಕ್ಯಾನ್ಸರ್ ಅನ್ನು ಶೇ.99 ರಷ್ಟು ತಡೆಯಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

ಈ ಅಭಿಯಾನವು ಮಾ.11ರಿಂದ ಪ್ರಾರಂಭವಾಗಿದ್ದು, ಒಟ್ಟು 90 ದಿನಗಳ ಕಾಲ ನಡೆಯಲಿದೆ. 14 ವರ್ಷದ ಎಲ್ಲಾ ಹೆಣ್ಣು ಮಕ್ಕಳು ಈ ಲಸಿಕೆಯನ್ನು ಪಡೆಯಲು ಅರ್ಹರಾಗಿದ್ದು, ಲಸಿಕೆ ಪಡೆಯಲು ಬರುವಾಗ ಪೋಷಕರು ಜೊತೆಯಲ್ಲಿರಬೇಕು ಮತ್ತು ಮಗುವಿನ ಜನನ ಪ್ರಮಾಣ ಪತ್ರವನ್ನು ತರುವುದು ಕಡ್ಡಾಯವಾಗಿದೆ. ಇದುವರೆಗೆಲಸಿಕೆ ಪಡೆದ ಮಕ್ಕಳಲ್ಲಿ ಯಾವುದೇ ಅಡ್ಡಪರಿಣಾಮಗಳು ಕಂಡುಬಂದಿಲ್ಲ ಎಂದು ಜಿಲ್ಲಾ ಆರ್ .ಸಿ.ಹೆಚ್ ಅಧಿಕಾರಿ ಡಾ.ಹನುಮಂತಪ್ಪ ಅವರು ಸ್ಪಷ್ಟಪಡಿಸಿದ್ದಾರೆ.

ಗುರಿ: ಜಿಲ್ಲೆಯಲ್ಲಿ ಒಟ್ಟು 16,495 ಹೆಣ್ಣು ಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದ್ದು, ಈವರೆಗೆ 5,658 ಮಕ್ಕಳಿಗೆ ಲಸಿಕೆ ನೀಡಲಾಗಿದೆ.

ತಾಲೂಕುವಾರು ಪ್ರಗತಿ ವಿವರ: ಬಳ್ಳಾರಿ ತಾಲೂಕಿನಲ್ಲಿ 7,578 ಹೆಣ್ಣು ಮಕ್ಕಳ ಗುರಿ ಹೊಂದಲಾಗಿದ್ದು, ಇದುವರೆಗೆ 2,324 ಮಕ್ಕಳಿಗೆ ಲಸಿಕೆ ನೀಡಲಾಗಿದೆ. ಅದರಂತೆ, ಸಂಡೂರು ತಾಲೂಕಿನಲ್ಲಿ 2,840 ಮಕ್ಕಳಲ್ಲಿ 881 ಮಕ್ಕಳಿಗೆ ಹಾಕಲಾಗಿದೆ. ಸಿರುಗುಪ್ಪ ತಾಲೂಕಿನಲ್ಲಿ 3,054 ಮಕ್ಕಳಲ್ಲಿ 1,453 ಹೆಣ್ಣು ಮಕ್ಕಳಿಗೆ ಲಸಿಕೆ ನೀಡಲಾಗಿದೆ. ಕುರುಗೋಡು ತಾಲ್ಲೂಕು ವ್ಯಾಪ್ತಿಯಲ್ಲಿ 1,543 ಮಕ್ಕಳಲ್ಲಿ 630 ಮಂದಿಗೆ ಲಸಿಕೆ ನೀಡಲಾಗಿದೆ ಹಾಗೂ ಕಂಪ್ಲಿ ತಾಲ್ಲೂಕಿನ 1,480 ಹೆಣ್ಣು ಮಕ್ಕಳಲ್ಲಿ 370 ಹೆಣ್ಣು ಲಸಿಕೆ ನೀಡಲಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಲಸಿಕೆಯ ಬಗ್ಗೆ ಹರಡುತ್ತಿರುವ ತಪ್ಪು ಮಾಹಿತಿಯನ್ನು ನಂಬಬೇಡಿ. ಕ್ಯಾನ್ಸರ್ ಮುಕ್ತ ನಾಳೆಗಾಗಿ ಇಂದು ನಿಮ್ಮ ಮಕ್ಕಳಿಗೆ ಲಸಿಕೆಯ ಸುರಕ್ಷಾ ಕವಚವನ್ನು ನೀಡಿ. ಹೆಚ್ಚಿನ ಮಾಹಿತಿಗಾಗಿ ಅಥವಾ ಲಸಿಕೆ ಪಡೆಯಲು ಪೋಷಕರು ತಮ್ಮ ಹತ್ತಿರದ ಸರ್ಕಾರಿ ಆಸ್ಪತ್ರೆ ಅಥವಾ ಆರೋಗ್ಯ ಕೇಂದ್ರಗಳನ್ನು ಸಂಪರ್ಕಿಸಬಹುದಾಗಿದೆ ಎಂದು ಡಿಎಚ್‌ಒ ಡಾ.ಯಲ್ಲಾ ರಮೇಶ್ ಬಾಬು ಅವರು ತಿಳಿಸಿದ್ದಾರೆ.

ಮಕ್ಕಳ ಕೈಯಲ್ಲಿ ಮೊಬೈಲ್ ಕೊಡಬೇಡಿ

ಹೂವಿನಹಡಗಲಿ: ತಂದೆ, ತಾಯಿಗಳು ಮಕ್ಕಳಿಗೆ ವಿದ್ಯಾಭ್ಯಾಸದ ಜೊತೆಗೆ ಆಚಾರ, ವಿಚಾರ, ಸಂಸ್ಕಾರ ಕಲಿಸಬೇಕು. ಎಸ್ಸಿ, ಎಸ್ಟಿ ಮಕ್ಕಳಿಗೆ ಸರ್ಕಾರದಿಂದ ಬರುವ ಸೌಲಭ್ಯಗಳಿಂದ ಮಕ್ಕಳನ್ನು ಚೆನ್ನಾಗಿ ಓದಿಸಬೇಕು

ಎಂದು ಹರಪನಹಳ್ಳಿ ಉಪವಿಭಾಗದ ಡಿವೈಎಸ್ಪಿ ಸಂತೋಷ್ ಚವ್ಹಾಣ್ ಹೇಳಿದರು.

ಪೊಲೀಸ್ ಠಾಣೆ ಆವರಣದಲ್ಲಿ ದಲಿತ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಕ್ಕಳ ಕೈಯಲ್ಲಿ ಮೊಬೈಲ್ ಮತ್ತು ಬೈಕ್ ಕೊಡಬೇಡಿ. ಅಕ್ರಮ ಮಧ್ಯ ಮಾರಾಟ ಆಗದಂತೆ ಎಲ್ಲ ರೀತಿಯಲ್ಲಿ ಸೋಶಿಯಲ್ ಮೀಡಿಯಾದಲ್ಲಿ ಜನಸಾಮಾನ್ಯರಿಗೆ ಜಾಗೃತಿ ಮೂಡಿಸುವಂತಹ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು.

ಹಿರೇಹಡಗಲಿ ದಲಿತ ಮುಖಂಡ ಹುಚ್ಚೆಂಗೆಪ್ಪ ಮಾತನಾಡಿ, ದಲಿತ ಕಾಲೋನಿಗಳಲ್ಲಿ ಚರಂಡಿಗಳ ಸಮಸ್ಯೆ ಬಹಳ ಇದೆ ಎಂದು ಹೇಳಿದರು.

ದಲಿತ ಮುಖಂಡ ಪಿ.ನಿಂಗಪ್ಪ ಮಾತನಾಡಿ, ಮಸಾಲವಾಡ ಗ್ರಾಮದಲ್ಲಿ ದೇವಸ್ಥಾನದ ಒಳಗಡೆಗೆ ದಲಿತ ಜನಾಂಗಕ್ಕೆ ಒಳಗಡೆಗೆ ಪ್ರವೇಶ ಇಲ್ಲ ಎಂದು ಹೇಳುತ್ತಾರೆ ಇನ್ನೂ ಕೆಲವೊಂದು ಹಳ್ಳಿಗಳಲ್ಲಿ ಅಸ್ಪೃಶ್ಯತೆ ಇದೆ ಎಂದು ಹೇಳಿದರು.

ನ್ಯಾಯವಾದಿ ಪೂಜಪ್ಪ ಹಾಗೂ ಜೆ.ಶಿವರಾಜ್, ಹೊಳಗುಂದಿ ದುರಗೇಶ್ ಮಾತನಾಡಿ, ಪ್ರತಿಯೊಂದು ಹಳ್ಳಿಗಳಲ್ಲಿ ದಲಿತರ ಕಾಲೋನಿಗಳಲ್ಲಿ ಪ್ರತಿಯೊಂದು ಬೀಡಿ ಅಂಗಡಿಗಳಲ್ಲಿ ಮಧ್ಯ ಮಾರಾಟ ಮಾಡುತ್ತಾರೆ ಇದರಿಂದ ದಲಿತ ಜನಾಂಗಕ್ಕೆ ತೊಂದರೆ ಆಗುತ್ತದೆ. ನಮ್ಮ ತಾಲೂಕಿನ ಕೆಲವೊಂದು ಹಳ್ಳಿಗಳಲ್ಲಿ ಅಕ್ಕಂಡಿ, ಸೊವೆನಹಳ್ಳಿ, ಹಿರೇಮಲ್ಲಿನಕೆರೆ, ನಂದಿಹಳ್ಳಿ, ಕಾಲ್ವಿ, ಅಂತ ಗ್ರಾಮಗಳಲ್ಲಿ ದಲಿತರಿಗೆ

ದೇವಸ್ಥಾನ ಮತ್ತು ಹೋಟೆಲ್‌ಗಳಲ್ಲಿ ಬಹಳ ಕೀಳಾಗಿ ನೋಡುತ್ತಾರೆ ಎಂದು ಹೇಳಿದರು. ವೃತ್ತ ನಿರೀಕ್ಷಕ ಮಲ್ಲಪ್ಪ ಹೂಗಾರ್, ಪಿಎಸ್‌ಐ ಮಣಿಕಂಠ, ಹಿರೇಹಡಗಲಿ ಪಿಎಸ್‌ಐ ಅಶೋಕ್ ಮತ್ತು ಶ್ರೀನಿವಾಸ್, ಎಎಸ್‌ಐ ರಾಜೇಂದ್ರ ನಾಯ್ಕ್, ಪೊಲೀಸ್ ಸಿಬ್ಬಂದಿ ಹಾಗೂ ಎಲ್ಲಾ ದಲಿತ ಮುಖಂಡರು ಯುವಕರು ಇದ್ದರು.



ಹಂಪಿಯಲ್ಲಿ ಮಹಿಳಾ ಸುರಕ್ಷತೆ, ಭದ್ರತೆ ಕುರಿತು ಜಾಗೃತಿ

ವಿಜಯನಗರ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಹಿಳಾ ಸಬಲೀಕರಣ ಘಟಕ, ಅಕ್ಕ ಪಡೆ ಹಾಗೂ ವಿಜಯ ಮಹಿಳಾ ಸುರಕ್ಷಾ ಪಡೆ ತಂಡಗಳ ಸಂಯುಕ್ತ ಆಶ್ರಯದಲ್ಲಿ ಹಂಪಿ ಗ್ರಾಮದ ಪ್ರಮುಖ ಸ್ಥಳಗಳಲ್ಲಿ ಮಹಿಳಾ ಸುರಕ್ಷತೆ ಮತ್ತು ಭದ್ರತೆ ಕುರಿತು ಸೋಮವಾರ ವಿಶೇಷ ಜಾಗೃತಿ ಕಾರ್ಯಕ್ರಮ ನಡೆಯಿತು.

ವಿಶ್ವ ಪಾರಂಪರಿಕ ತಾಣವಾದ ಹಂಪಿಯ ವಿರೂಪಾಕ್ಷ ದೇವಾಲಯ, ರಥ ಬೀದಿ ಹಾಗೂ ಬಸ್ ನಿಲ್ದಾಣದ ಸುತ್ತಮುತ್ತ ಸಾರ್ವಜನಿಕರು ಮತ್ತು ಪ್ರವಾಸಿ ಮಹಿಳೆಯರಿಗೆ ಸುರಕ್ಷತಾ ಕ್ರಮಗಳ ಬಗ್ಗೆ ಅರಿವು ಮೂಡಿಸಲಾಯಿತು.

ಜಿಲ್ಲಾ ಮಿಷನ್ ಸಂಯೋಜಕಿ ವಿದ್ಯಾ, ಜೆಂಡರ್ ಸ್ಪೆಷಲಿಸ್ಟ್ ಅನ್ನಪೂರ್ಣ ಅವರು ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳಾದ 'ಮಿಷನ್ ಶಕ್ತಿ', 'ಬೇಟಿ ಬಚಾವೋ, ಬೇಟಿ ಪಡವೋ' ಮತ್ತು 'ಸಖಿ ಒನ್ ಸ್ಟಾಪ್ ಸೆಂಟರ್'ಗಳ ಸೌಲಭ್ಯಗಳನ್ನು ಮಹಿಳೆಯರು ಹೇಗೆ ಪಡೆದುಕೊಳ್ಳಬಹುದು ಎಂಬುದನ್ನು ವಿವರಿಸಿದರು. ಸಖಿ ಕೇಂದ್ರದ ನಿರ್ವಾಹಕಿ ಬಶೀರಾ ಬಿ ಅವರು ಸಂಕಷ್ಟದಲ್ಲಿರುವ ಮಹಿಳೆಯರಿಗೆ ಕೇಂದ್ರವು ನೀಡುವ ಆಸರೆಯ ಬಗ್ಗೆ ಮಾಹಿತಿ ನೀಡಿದ ಅವರು, ಯಾವುದೇ ಅಹಿತಕರ ಘಟನೆಗಳು ನಡೆದಾಗ ಅಥವಾ ತುರ್ತು ಸಂದರ್ಭದಲ್ಲಿ ಮಹಿಳಾ ಸಹಾಯವಾಣಿ 181 ಪೊಲೀಸ್ ತುರ್ತು ಸೇವೆ 112, ಮಕ್ಕಳ ಸಹಾಯವಾಣಿ 1098, ಸೈಬರ್ ಕ್ರೈಂ ಸಹಾಯವಾಣಿ: 1930ಗೆ ಸಂಪರ್ಕಿಸಬಹುದು. ಇಲಾಖೆಯ ಸಿಬ್ಬಂದಿ, ಅಕ್ಕ ಪಡೆ ಹಾಗೂ ವಿಜಯ ಮಹಿಳಾ ಸುರಕ್ಷಾ ಪಡೆಯ ಸದಸ್ಯರು ಉಪಸ್ಥಿತರಿದ್ದರು.



ಖಾಸಗಿ ಶಾಲೆಯ ಹಿತ ಕಾಪಾಡಲು ಪ್ರಾಮಾಣಿಕ ಪ್ರಯತ್ನ

ಕುರುಗೋಡು: ತಾಲೂಕಿನ ಖಾಸಗಿ ಶಾಲೆಯ ಹಿತ ಕಾಪಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಕುರುಗೋಡು ಗ್ರಾಮಾಂತರ ಅನುದಾನ ರಹಿತ ಶಾಲಾ ಆಡಳಿತ ಮಂಡಳಿ ಒಕ್ಕೂಟದ (ಕುಸ್ಮಾ) ನೂತನ ತಾಲೂಕು ಅಧ್ಯಕ್ಷ ಎಮ್ಮಿಗನೂರು ತಾಂಡವ ಕೃಷ್ಣ ತಿಳಿಸಿದರು.

ಸಮೀಪದ ಕುಡಿತಿನಿ ಮದರ್ ತೆರೇಸಾ ಶಾಲೆಯಲ್ಲಿ ಹಮ್ಮಿಕೊಂಡಿದ್ದ ನೂತನ ಪದಾಧಿಕಾರಿಗಳು ಆಯ್ಕೆ ಕಾರ್ಯಕ್ರಮದಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಮಾತನಾಡಿ, ಸರ್ಕಾರಗಳು ಖಾಸಗಿ ಶಾಲೆಗಳ ಮೇಲೆ ದಿನಕ್ಕೊಂದು ಹೊಸ ಕಾನೂನುಗಳನ್ನು ಜಾರಿಗೆತಂದು, ಖಾಸಗಿ ಶಾಲೆಗಳ ಮೇಲೆ ದೌರ್ಜನ್ಯ ಎಸಗುತ್ತಿದ್ದು, ಸರ್ಕಾರಿ ಶಾಲೆಗಳಂತೆ ನಮಗೂ ವಿನಾಯತಿ ನೀಡಬೇಕು. ದೇಶದ ಸಮರ್ಥ, ದಕ್ಷ ಪ್ರಜೆಗಳನ್ನು ಸೃಷ್ಟಿಸುವುದರಲ್ಲಿ ಖಾಸಗಿ ಶಾಲೆಗಳ ಪಾತ್ರ ಮಹತ್ವದ್ದಾಗಿದೆ. ಮುಂದಿನ ದಿನಗಳಲ್ಲಿ ಕುರುಗೋಡು ತಾಲೂಕಿನಾದ್ಯಂತ ಸಂಘಟನೆಯನ್ನು ಮತ್ತಷ್ಟು ಬಲಪಡಿಸುತ್ತೇನೆ ಎಂದರು.

ನಂತರ ಗೌರವಾಧ್ಯಕ್ಷರಾಗಿ ಆಯ್ಕೆಯಾದ ರವಿರೆಡ್ಡಿಮಾತನಾಡಿ, ದೇಶದ ಪ್ರಗತಿಗೆ ಶಿಕ್ಷಣವಂತ ಸಮಾಜದ ಕೊಡುಗೆ ಅಪಾರವಾಗಿದ್ದು, ಖಾಸಗಿ ಶಾಲೆಗಳು ನಿರಂತರವಾಗಿ ಉತ್ತಮ ಶಿಕ್ಷಣ ನೀಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ. ಸರ್ಕಾರ ಕಠಿಣ ಕ್ರಮಗಳನ್ನು ಕೈಬಿಟ್ಟು ನಮ್ಮ ಸಂಸ್ಥೆಗಳ ಪರ ನಿಲ್ಲಬೇಕಿದೆ ಎಂದರು.



ಈ ವೇಳೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಗೌರವ ಅಧ್ಯಕ್ಷರಾಗಿ ರವಿರೆಡ್ಡಿ, ಅಧ್ಯಕ್ಷರಾಗಿ ತಾಂಡವ ಕೃಷ್ಣ ಉಪಾಧ್ಯಕ್ಷರಾಗಿ ಎಸ್. ಬಸವರಾಜ್, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಶಂಕರ್, ಖಜಾಂಚಿಯಾಗಿ ಕರೆಗೌಡ, ಕ್ರೀಡಾ ಕಾರ್ಯದರ್ಶಿಯಾಗಿ ಬಿ.ಸಿದ್ದಯ್ಯ, ಸಹ ಕಾರ್ಯದರ್ಶಿಯಾಗಿ ಜಡೇಶ್ ಸ್ವಾಮಿ, ಸಾಂಸ್ಕೃತಿಕ ಕಾರ್ಯದರ್ಶಿಯಾಗಿ ಭೀಮಲಿಂಗಾರೆಡ್ಡಿ, ಸಂಘಟನಾ ಕಾರ್ಯದರ್ಶಿಯಾಗಿ ವಿರುಪಾಕ್ಷಿ ಆಯ್ಕೆಯಾದರು. ಆಯ್ಕೆಯಾದ ಪದಾಧಿಕಾರಿಗಳಿಗೆ ಶಾಲು, ಹಾರ ಹಾಕಿ ಸನ್ಮಾನಿಸಲಾಯಿತು.

ಕಾಂಗ್ರೆಸ್ ತೊರೆದು ನೂರಾರು ಯುವಕರು ಜೆಡಿಎಸ್ ಸೇರ್ಪಡೆ

ದೇಶಕ್ಕೆ ಮೋದಿ, ರಾಜ್ಯಕ್ಕೆ ಕುಮಾರಣ್ಣನ ಅಗತ್ಯ: ಕಂದಕೂರ

ಗುರಮಠಕಲ್ (ಯಾದಗಿರಿ): ಗುರಮಠಕಲ್ ಕ್ಷೇತ್ರದಲ್ಲಿ ಜೆಡಿಎಸ್ ಪಕ್ಷ ಸೇರ್ಪಡೆಯ ಪ್ರಕ್ರಿಯೆ ಟ್ರೈಲರ್ ಇದ್ದು ಮುಂದೆ ಪಿಕ್ಚರ್ ಅಭಿ ಬಾಕಿ ಹೈ ಎಂದು ಶಾಸಕ ಶರಣಗೌಡ ಕಂದಕೂರ ತಿಳಿಸಿದರು.

ಗುರಮಠಕಲ್ ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಭಾನುವಾರ ಸಂಜೆ ಕಾಂಗ್ರೆಸ್ ತೊರೆದು ಜೆಡಿಎಸ್ ಗೆ ಸೇರ್ಪಡೆಯಾದ ಮುಖಂಡರನ್ನು ಪಕ್ಷಕ್ಕೆ ಸ್ವಾಗತಿಸಿ ಮಾತನಾಡಿ, ಹತ್ತಿಕುಣಿ ನಾಲಾ ಆಧುನೀಕರಣಕ್ಕೆ ರಾಜ್ಯ ಸರ್ಕಾರ ಅನುದಾನ ನೀಡಿದೆ ಎಂದು ಸ್ಥಳೀಯ ಕಾಂಗ್ರೆಸ್ ನಾಯಕರು ಹೇಳಿಕೆ ನೀಡುತ್ತಿದ್ದಾರೆ. ಆದರೆ, ರಾಜ್ಯದಲ್ಲಿನ ಸರ್ಕಾರ ಗುರಮಠಕಲ್ ಕ್ಷೇತ್ರಕ್ಕೆ ಮೂರು ವರ್ಷಗಳಿಂದ ಕುಡಿಯುವ ನೀರು ಕೊಟ್ಟಿಲ್ಲ ಇನ್ನೂ ಕೋಟಿಗಟ್ಟಲೇ ಅನುದಾನ ಕೊಡುತ್ತಾರಾ? ಎಂದು ಪ್ರಶ್ನಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಭೀಮಶಪ್ಪ ಗುಡಸೆ ಮಾತನಾಡಿ, ಮತಕ್ಷೇತ್ರದಲ್ಲಿ ಹೊಸ ಬದಲಾವಣೆ ತರಲು ನಮ್ಮ ಶಾಸಕ ಶರಣಗೌಡ ನಿರಂತರವಾಗಿ ಶ್ರಮಿಸುತ್ತಿದ್ದಾರೆ. ವಿಧಾನಸಭೆಯ ಪ್ರತಿ ಅಧಿವೇಶನದಲ್ಲಿ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿ ಅಭಿವೃದ್ಧಿಗೆ ಮುನ್ನಡೆ ಬರೆಯಲು ಹೋರಾಟ ನಡೆಸುತ್ತಿದ್ದಾರೆ. ಇಂಥ ನಾಯಕರ ಕೈ ಬಲಪಡಿಸಲು ಯುವಕರು ಮುಂದಾಗಬೇಕು ಎಂದರು.

ಮುಖಂಡ ನರಸಪ್ಪ ಕವಡೆ, ಪಕ್ಷದ ಜಿಲ್ಲಾಧ್ಯಕ್ಷ ಸುಭಾಶ್ಚಂದ್ರ ಕಟಕಟಿ ಪ್ರಾಸ್ತಾವಿಕ ಮಾತನಾಡಿದರು.ಕ್ಷೇತ್ರದ ಯರಗೋಳ, ಹೋರುಂಚಾ, ಬದ್ದೆಪಲ್ಲಿ, ತುರಕನದೊಡ್ಡಿ, ಹಿರೇನೂರ, ಸಾವೂರು, ಗ್ರಾಮ ಸೈದಾಪುರದ ಯುವಕರು ಜೆಡಿಎಸ್ ಸೇರ್ಪಡೆಗೊಂಡರು.

ಬ್ಲಾಕ್ ಅಧ್ಯಕ್ಷ ಶರಣು ಆವಂಟಿ, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ರಾಮಣ್ಣ ಯಡ್ಡಳ್ಳಿ, ಪಕ್ಷದ ಜಿಲ್ಲಾ ವಕ್ತಾರ ಮಲ್ಲನಗೌಡ ಹಳಿಮನಿ ಕೌಳೂರು, ಅಜಯರಡ್ಡಿ ಯಲ್ಹೇರಿ, ಬಸ್ಸಣ್ಣ ದೇವರಳ್ಳಿ, ಶರಣು ಆವಂಟಿ, ತಾಪಂ ಮಾಜಿ ಅಧ್ಯಕ್ಷ ಈಶ್ವರ ನಾಯಕ್ , ನರಸಪ್ಪ ಕವಡೆ, ವೆಂಕಟೇಶ ಕಡದ್, ಗುರುನಾಥರಡ್ಡಿ ಸೈದಾಪುರ, ಶರಣಯ್ಯಾ ಸ್ವಾಮಿ ಅರಿಕೇರಾ, ಚಂದ್ರುಗೌಡ ಸೈದಾಪುರ, ಬಸವರಾಜ ಕಣೇಕಲ್,ಜಯೇಂದ್ರ ಚೌವ್ಹಾಣ್ ಇದ್ದರು.



> ಕ್ಷೇತ್ರದ ಯುವಕರು ಮತ್ತೊಬ್ಬರ ಮಾತು ಕೇಳಿ ನಿಮ್ಮ ಭವಿಷ್ಯ ಹಾಳು ಮಾಡಿಕೊಳ್ಳಬೇಡಿ. ನಾನು ಶಾಸಕನಾಗಿ ಕ್ಷೇತ್ರದ ಜನ ತಲೆ ತಗ್ಗಿಸುವ ಕೆಲಸ ನಮ್ಮ ದೊಡ್ಡಪ್ಪ ಆಗಲಿ, ನಮ್ಮ ತಂದೆಯವರಾಗಲಿ ಮತ್ತು ನಾನಾಗಲಿ ಯಾವತ್ತೂ ಮಾಡುವುದಿಲ್ಲ.
>
> ■ ಶರಣಗೌಡ ಕಂದಕೂರ, ಶಾಸಕ

ಅಂತಾರಾಷ್ಟ್ರೀಯ ಕರಾಟೆ ಸ್ಪರ್ಧೆ: ಒಂದು ಚಿನ್ನ

ಬಳ್ಳಾರಿ: ಮಲೇಶಿಯಾ ದೇಶದಲ್ಲಿ ನಡೆದ 22ನೇ ಒಕಿನವ್ ಗೋಜು ರಾಯ್ ಇಪಾನ್ ಸಿಟಿ ಮುಕ್ತ ಕರಾಟೆ ಸ್ಪರ್ಧೆ 2026ರಲ್ಲಿ ಇಲ್ಲಿನ ಶ್ರೀ ಪಂಚಾಕ್ಷರಿ ಮಾರ್ಷಲ್ ಆರ್ಟ್ಸ್ ಟ್ರಸ್ಟ್‌ನ ವಿದ್ಯಾರ್ಥಿಗಳು, ಕರಾಟೆ ಪಟುಗಳು

ಭಾಗವಹಿಸಿ ವಿವಿಧ ಪ್ರಶಸ್ತಿಗಳನ್ನು ಪಡೆಯುವ ಮೂಲಕ ಜಿಲ್ಲೆ, ರಾಜ್ಯದ ಕೀರ್ತಿ ಹೆಚ್ಚಿಸಿದ್ದಾರೆ. ಮಲೇಶಿಯಾದಲ್ಲಿ ನಡೆದ ಅಂತಾರಾಷ್ಟ್ರೀಯ ಕರಾಟೆ ಸ್ಪರ್ಧೆಯಲ್ಲಿ ಬಳ್ಳಾರಿಯ ಕರಾಟೆ ವಿದ್ಯಾರ್ಥಿಗಳಿಗೆ ಒಂದು ಚಿನ್ನ, ಎರಡು ಬೆಳ್ಳಿ, ಮೂರು ಕಂಚಿನ ಪದಕಗಳು ದೊರೆತಿವೆ.

ತರಬೇತಿದಾರರು ಹಾಗೂ ಪಂಚಾಕ್ಷರಿ ಮಾರ್ಷಿಯಲ್ ಆರ್ಟ್ಸ್ ಟ್ರಸ್ಟ್ ಅಧ್ಯಕ್ಷ ಬಂಡ್ರಾಳ್ ಎಂ.ಮೃತ್ಯುಂಜಯ ಸ್ವಾಮಿ ಮಾತನಾಡಿ, ಕಳೆದ ಮೇ 8ರಿಂದ 10ರವರೆಗೆ ನಡೆದ ಕರಾಟೆ ಸ್ಪರ್ಧೆಯಲ್ಲಿ 5 ಮಲೇಶಿಯಾ ದೇಶದ ಸುಲ್ತಾನ್ ಅಜಿಯಾನ್ ಶಾ ಸಂಸ್ಥೆ, ಮಲೇಶಿಯಾ ಆರೋಗ್ಯ ಸಚಿವಾಲಯ, ತನಜುಂಗ ರಮಭೂತಾನ್ ಸಿಟಿ ಮಲೇಷಿಯಾದಲ್ಲಿ ನಡೆದ 22ನೇ ಅಂತಾರಾಷ್ಟ್ರೀಯ ಒಕಿನವ್ ಗುಜುರಾಯ್ ಇಪಾನ್ ಸಿಟಿ ಮುಕ್ತ ಕರಾಟೆ ಸ್ಪರ್ಧೆಯಲ್ಲಿ ನಮ್ಮ ವಿದ್ಯಾರ್ಥಿಗಳು ಭಾಗವಹಿಸಿ ವಿವಿಧ ಪದಕಗಳನ್ನು ಪಡೆದು ಕೀರ್ತಿ ಹೆಚ್ಚಿಸಿದ್ದಾರೆ.

ಮಲೇಶಿಯ ದೇಶದ ಕ್ರೀಡಾ ಸಚಿವ ಡಾ. ಮಹಮದ್ ತೌಫಿಕ್ ಜೋಹಾರಿ ಕಾರ್ಯಕ್ರಮ ಉದ್ಘಾಟಿಸಿದರು. ಮಲೇಶಿಯಾ ದೇಶದದ ಒಕಿನ ಗೋಜುರಾಯ್ ಕರಾಟೆ ಅಕಾಡಮಿಯ ಕರಾಟೆ ಸಂಸ್ಥಾಪಕ ಅಧ್ಯಕ್ಷ ಗ್ರಾಂಡ್ ಮಾಸ್ಟರ್ ಅನಂತನ್ ಸ್ಪರ್ಧೆಯ ಮುಖ್ಯಸ್ಥರಾಗಿದ್ದರು.

ಸ್ಪರ್ಧೆಯಲ್ಲಿ ಮಲೇಶಿಯಾ ದೇಶ ಸೇರಿದಂತೆ, ಭಾರತ, ಇಂಡೋನೇಶಿಯಾ,ತಜಕಿಸ್ಥಾನ್, ಶ್ರೀಲಂಕಾ, ಬಂಗ್ಲಾದೇಶದ ಸುಮಾರು 1000 ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. 15 ವರ್ಷದ ಒಳಗಿನ ವಯಸ್ಸಿನ ವಿಭಾಗದಲ್ಲಿ, ನಯೋನಿಕ ಮಂಗಳಂ ಕುಮುಟೆ ವಿಭಾಗದಲ್ಲಿ ಬಂಗಾರದ ಪದಕ ಮತ್ತು ಕುಮುಟೆ ವಿಭಾಗದಲ್ಲಿ ಬೆಳ್ಳಿ ಪದಕ, ನಕ್ಷತ್ರ ವರ್ಣ ಮಂಗಳಂ ಕುಮಿಟೆ ವಿಭಾಗದಲ್ಲಿ ಕಂಚು ಮತ್ತು ಕಟಾ ವಿಭಾಗದಲ್ಲಿ ಕಂಚಿನ ಪದಕವನ್ನು ಪಡೆದಿದ್ದಾರೆ.



15ವರ್ಷ ಮೇಲ್ಪಟ್ಟ ವಿಭಾಗದಲ್ಲಿ ಪ್ರಜ್ವಲ್ ಗಣೇಶ ಕಟಾ ವಿಭಾಗದಲ್ಲಿ ಬೆಳ್ಳಿ ಪದಕ ಮತ್ತು ಮುದಿಯಮಂ ದೇವಗನ್ ಶ್ರೀವತ್ಸ, ಕುಮುಟೆ ವಿಭಾಗದಲ್ಲಿ ಕಂಚಿನ ಪದಕವನ್ನು ಪಡೆದಿದ್ದಾನೆ.

ಮಕ್ಕಳ ಸಾಧನೆಗೆ ಟ್ರಸ್ಟಿನ ಗೌರವಾಧ್ಯಕ್ಷ ವಿಕ್ರಮ ಮಹಿಪಾಲ್, ಸದಸ್ಯರಾದ ಶಬರಿ ರವಿಚಂದ್ರ, ಆರ್.ಎಂ.ಬಸವರಾಜ, ಎಚ್.ಕೆ.ಗೌರಿಶಂಕರ ಎಚ್. ಎಂ.ಅಂಬರೀಶ್ ಮತ್ತು ಟ್ರಸ್ಟಿನ ಅಧ್ಯಕ್ಷರು ಮತ್ತು ತರಬೇತುದಾರ ಬಂಡ್ರಾಳ್ ಮೃತ್ಯುಂಜಯಸ್ವಾಮಿ ಹರ್ಷ ವ್ಯಕ್ತಪಡಿಸಿದ್ದಾರೆ.